ವಿಶ್ವವಾಣಿ

ವಿಶ್ವಾಸವೇ ವಿಶ್ವ

ಪಡಿಕ್ಕಲ್ ಶತಕ: ಕರ್ನಾಟಕಕ್ಕೆ 145 ರನ್ ಜಯ

ಅಹಮದಾಬಾದ್‌ನಲ್ಲಿ ಮಂಗಳವಾರ ಕರ್ನಾಟಕ, ತಮಿಳುನಾಡು ಮಧ್ಯೆ ನಡೆದ ಸೈಯದ್ ಮುಷ್ತಾಕ್ ಅಲಿ ಟಿ20 ಪಂದ್ಯದಲ್ಲಿ ರಾಜ್ಯದ ದೇವದತ್ತ ಪಡಿಕ್ಕಲ್ ಅಮೋಘ ಶತಕ ಬಾರಿಸಿದರು. ಇದರ ನೆರವಿನಿಂದ ಕರ್ನಾಟಕ 145 ರನ್‌ಗಳ ಬೃಹತ್ ಗೆಲುವು ದಾಖಲಿಸಿದೆ. ಪಡಿಕ್ಕಲ್ ಕೇವಲ 46 ಎಸೆತಗಳಲ್ಲಿ ಅಜೇಯ 102 ರನ್ ಬಾರಿಸಿದರು.

ಸೊಂಪಾದ ಪುಟಗಳು

ವಾಗ್ದಾನ ನೀಡಿದ್ದಲ್ಲಿ ಅದನ್ನು ಈಡೇರಿಸುವುದು ಕರ್ತವ್ಯವಲ್ಲವೇ?

ಜನಪಥ

ರಾಘವ ಶರ್ಮ ನಿಡ್ಲೆ 6

ಸರಕಾರದ ಸರ್ವರ್ ಸ್ಲೋ ಸಾರ್ವಕಾಲಿಕ!

ಲೋಕಮತ

ಲೋಕೇಶ್ ಕಾಯರ್ಗ 7

ದಾರಿದೀಪೋಕ್ತಿ

ಕೆಲವರು ತಾವು ಸದಾ ಬ್ಯುಸಿ ಎಂದು ಹೇಳುತ್ತಾರೆ ಮತ್ತು ಹಾಗೆ ಹೇಳುವುದರಲ್ಲಿ ಆನಂದವನ್ನು ಕಾಣುತ್ತಾರೆ. ನಾವು ಎಷ್ಟು ಬ್ಯುಸಿ ಎಂಬುದು ಮುಖ್ಯ ಅಲ್ಲ, ಆದರೆ ಎಷ್ಟು ಉತ್ಪಾದಕ(ಪ್ರೊಡಕ್ಟಿವ್)ರಾಗಿದ್ದೇವೆ ಎಂಬುದಷ್ಟೇ ಮುಖ್ಯ.

ವಕ್ರತುಂಡೋಕ್ತಿ

ನಮ್ಮ ಹೆಂಡ್ತಿಗಿಂತ ಮುಂಚೆ ನಮ್ಮ ಬಾಯಿ ಮುಚ್ಚಿಸೋದು ಮತ್ತು ನಾವೇನು ಹೇಳ್ತೀವಿ ಅಂತ ಊಹಿಸೋದು ಗೂಗಲ್ ಮಾತ್ರ.

ಕೇಂದ್ರ ಸರಕಾರದಿಂದ ಭಾರತ್ ಟ್ಯಾಕ್ಸಿ ಆ್ಯಪ್!

ದೆಹಲಿ: ಸಹಕಾರ ವ್ಯವಸ್ಥೆಯ ಅಡಿ ಯಲ್ಲಿ ಕೆಲಸ ನಿರ್ವಹಿಸುವ ಭಾರತ್ ಟ್ಯಾಕ್ಸಿ ಆ್ಯಪ್ ಆರಂಭಿಸುವ ಚಿಂತನೆ ಕೇಂದ್ರ ಸರಕಾರಕ್ಕಿದೆ ಎಂದು ಕೇಂದ್ರ ಸಹಕಾರ ಸಚಿವ ಅಮಿತ್ ಶಾ ತಿಳಿಸಿದ್ದಾರೆ. ಈ ಆ್ಯಪ್ ಕಾರ್ಯ ರೂಪಕ್ಕೆ ಬಂದ ನಂತರದಲ್ಲಿ ವಾಣಿಜ್ಯ ಬಳಕೆಯ ವಾಹನಗಳ ಚಾಲಕರು ಖಾಸಗಿ ಕಂಪನಿಗಳ ಮೇಲೆ ಅವಲಂಬಿತ ರಾಗುವುದು ತಪ್ಪಲಿದೆ ಎಂಬುದು ಸರಕಾರದ ಲೆಕ್ಕಾಚಾರ. ಭಾರತ್ ಟ್ಯಾಕ್ಸಿ ಆ್ಯಪ್ ಅನ್ನು ಸಹಕಾರ ಟ್ಯಾಕ್ಸಿ ಕೋ-ಆಪರೇಟಿವ್ ಲಿಮಿಟೆಡ್ ನಿರ್ವಹಿಸಲಿದೆ. ಇದು ಬಹುರಾಜ್ಯ ಸಹಕಾರ ಸಂಸ್ಥೆಯಾಗಿದೆ ಎಂದು ಅಮಿತ್ ಶಾ ಲೋಕಸಭೆಗೆ ತಿಳಿಸಿದ್ದಾರೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಡಿಸಿಎಂ ಮನೆಯಲ್ಲಿ ಸಿಎಂಗೆ ನಾಟಿ ಕೋಳಿ ಸಾರಿನ ಉಪಹಾರ

ಸುದ್ದಿ

ಬುರುಡೆ ಪತ್ತೆ ಪ್ರಕರಣದಲ್ಲಿ ಸುಳ್ಳು ಮಾಹಿತಿ: ಮಟ್ಟಣ್ಣವರ್, ತಿಮರೋಡಿ ವಿಚಾರಣೆ ಸ್ಥಗಿತ

ಬುರುಡೆ ಷಡ್ಯಂತ್ರ ಆರೋಪಿಗಳ ವಿಚಾರಣೆಯೇ ಇಲ್ಲ!

ಜಿತೇಂದ್ರ ಕುಂದೇಶ್ವರ, ಮಂಗಳೂರು

ಧರ್ಮಸ್ಥಳ ಪರಿಸರದಲ್ಲಿ ಯುವತಿಯರ ಅತ್ಯಾಚಾರಗೈದು ಸಾಮೂಹಿಕ ಸಮಾಧಿ ಮಾಡಲಾಗಿದೆ ಎಂದು ದೂರು ನೀಡಿದ್ದ ಪ್ರಕರಣದಲ್ಲಿ, ದೂರುದಾರರೇ ಸುಳ್ಳು ಮಾಹಿತಿ ನೀಡಿದ್ದು ಸ್ಪಷ್ಟವಾಗಿತ್ತು. ಈ ಹಿನ್ನೆಲೆಯಲ್ಲಿ ಅವರ ವಿರುದ್ಧವೇ ದೂರು ದಾಖಲಾಗಿದ್ದರೂ, ಆರೋಪಿಗಳ ವಿಚಾರಣೆ ಮಾತ್ರ ನಡೆಯುತ್ತಿಲ್ಲ. ಆರೋಪಿಗಳ ಕಡೆಯಲ್ಲಿ ಅಲ್ಲೊಮ್ಮೆ ಇಲ್ಲೊಮ್ಮೆ ಜಾಲತಾಣಗಳಲ್ಲಿ ವಿಶ್ಲೇಷಣೆಗಳು ನಡೆಯುತ್ತಿವೆ. ಆದರೆ ವಿಚಾರಣೆ ನಡೆಸಿ ಆರೋಪಿಗಳನ್ನು



ಬುರುಡೆ ರಹಸ್ಯ

ಬಂಧಿಸಬೇಕಾದ ಎಸ್‌ಐಟಿ ನಿಶ್ಶಬ್ದವಾಗಿರುವುದು ಹಲವಾರು ಚರ್ಚೆಗಳಿಗೆ ಕಾರಣವಾಗಿದೆ.

ಬುರುಡೆ ಪ್ರಕರಣದಲ್ಲಿ ಷಡ್ಯಂತ್ರ ಇರುವುದು ದೂರುದಾರ ಚಿನ್ನಯ್ಯನ ಬಂಧನದಿಂದ ಬಯಲಾಗಿತ್ತು. ಬುರುಡೆಯನ್ನು ಎಲ್ಲಿಂದಲೋ ತಂದು, 'ಕ್ಷೇತ್ರದ ವಿರುದ್ಧ' ವಿರುದ್ಧ ಆರೋಪ ಮಾಡಿದ್ದ ವ್ಯಕ್ತಿಗಳು ಷಡ್ಯಂತ್ರ ಮಾಡಿರುವುದು ತನಿಖೆ ವೇಳೆ ಸ್ಪಷ್ಟವಾಗಿತ್ತು. ಈ ಹಿನ್ನೆಲೆಯಲ್ಲಿ ಆರೋಪಿಗಳ ವಿಚಾರಣೆಗೆ ಎಸ್‌ಐಟಿ ನೋಟಿಸ್ ಕಳುಹಿಸಿತು. ಹಲವು ಬಾರಿ ನೋಟಿಸ್ ಬಂದರೂ ಆರೋಪಿಗಳು ವಿಚಾರಣೆಗೆ ಹಾಜರಾಗಿಲ್ಲ.

ಆರೋಪಿಗಳು ಕಾನೂನು ತಜ್ಞರ ನೆರವು ಪಡೆದು ಪ್ರಕರಣವನ್ನೇ ರದ್ದುಗೊಳಿಸಬೇಕು ಎಂದು ಹೈಕೋರ್ಟ್‌ಗೆ ಮೊರೆ ಹೋಗಿದ್ದರು. ಮಹೇಶ್ ಶೆಟ್ಟಿ ತಿಮರೋಡಿ, ಗಿರೀಶ್ ಮಟ್ಟಣ್ಣವರ್, ಟಿ.ಜಯಂತ್ ಮತ್ತು ವಿಠಲ ಗೌಡ ಅವರು ತಮ್ಮ ವಿರುದ್ಧ ದಾಖಲಾಗಿದ್ದ ಎಫ್‌ಐಆರ್ ರದ್ದುಗೊಳಿಸಬೇಕು ಮತ್ತು ತನಿಖೆಯ ಹೆಸರಿನಲ್ಲಿ ಕಿರುಕುಳ ನೀಡದಂತೆ ರಕ್ಷಣೆ ನೀಡಬೇಕು ಎಂದು ಕೋರಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯ ವಿಚಾರಣೆ ನಡೆಸಿದ್ದ ಹೈಕೋರ್ಟ್, ಅಕ್ಟೋಬರ್ 30ರಂದು ಎಸ್‌ಐಟಿ ತನಿಖೆಗೆ ಮಧ್ಯಂತರ ತಡೆಯಾಜ್ಞೆ ನೀಡಿತ್ತು.

ನ.12ರಂದು ಹೈಕೋರ್ಟ್ ತನಿಖೆಗೆ ನೀಡಿದ್ದ ಮಧ್ಯಂತರ ತಡೆಯಾಜ್ಞೆ ತೆರವುಗೊಳಿಸಿತ್ತು. ಆದರೆ ಆರೋಪಿಗಳಿಗೆ ಕಿರುಕುಳ ನೀಡದಂತೆ ಸೂಚಿಸಿತು. ತಡೆಯಾಜ್ಞೆ ತೆರವುಗೊಳಿಸಿ ಬಹುತೇಕ 20 ದಿನಗಳೇ ಸಂದಿವೆ. ಹೈಕೋರ್ಟ್ ವಿಚಾರಣೆ ನಡೆಸುವಂತೆ ಸೂಚಿಸಿದ್ದರೂ ತನಿಖಾಧಿಕಾರಿ ಪ್ರಣಬ್ ಮೊಹಾಂತಿ ಮತ್ತು ಅವರ ಎಸ್‌ಐಟಿ ತಂಡ ವಿಳಂಬ ನೀತಿ ಅನುಸರಿಸುತ್ತಿರುವುದೇಕೆ ಎಂಬ ಪ್ರಶ್ನೆ ಉದ್ಭವವಾಗಿದೆ. ಇತ್ತ ಕಡೆ ಆರೋಪಿಗಳ ಪರವಾಗಿ ದೇಶದಲ್ಲಿನ ದುಬಾರಿ ವಕೀಲರೇ ಸಮರ್ಥವಾಗಿ ವಾದ ಮಾಡುತ್ತಿದ್ದಾರೆ.

ಇದಕ್ಕೆ ಹಣಕಾಸು ನೆರವು ಒದಗಿಸಿರುವುದು ಯಾರು ಎಂಬ ಪ್ರಶ್ನೆಗಳೂ ಹುಟ್ಟಿಕೊಂಡಿವೆ. ಬುರುಡೆ ಚಿನ್ನಯ್ಯನಿಗೆ, ಆತನ ಪತ್ನಿಯ ಖಾತೆಗಳಿಗೆ ಷಡ್ಯಂತ್ರ ಆರೋಪಿಗಳ ಖಾತೆಯಿಂದ ಹಣ ಹೋಗಿರುವುದನ್ನು ಎಸ್‌ಐಟಿ ಪತ್ತೆ ಮಾಡಿದ್ದನ್ನು ಇಲ್ಲಿ ಗಮನಿಸಬಹುದು.

ಇನ್ನೂ ಬಿಡುಗಡೆಯಾಗಿಲ್ಲ ಚಿನ್ನಯ್ಯ: ಪ್ರಕರಣದ ಕೇಂದ್ರಬಿಂದುವಾಗಿದ್ದ ಸಿ.ಎನ್. ಚಿನ್ನಯ್ಯ ಕಳೆದ ಎರಡು ದಶಕಗಳಲ್ಲಿ ನೂರಾರು ಶವಗಳನ್ನು ಧರ್ಮಸ್ಥಳದಲ್ಲಿ ತಾನೇ ಹೂತಿರುವುದಾಗಿ ಹೇಳಿದ್ದ. ಆದರೆ ಆತ ಸುಳ್ಳು ಹೇಳಿದ್ದು ಖಚಿತವಾಗಿದ್ದರಿಂದ ಸುಳ್ಳು ಸಾಕ್ಷ್ಯ ನೀಡಿದ ಆರೋಪದ ಮೇಲೆ ಆ.23ರಂದು ಚಿನ್ನಯ್ಯನನ್ನು ಬಂಧಿಸಲಾಗಿತ್ತು. ನ.24ರಂದು ಇವರಿಗೆ ಜಾಮೀನು ನೀಡಿ, ಬಿಡುಗಡೆಗೆ ಆದೇಶವಾಗಿದೆ. ಆದರೆ ನ್ಯಾಯಾಲಯವು ವಿಧಿಸಿರುವ 12 ಕಠಿಣ ಷರತ್ತುಗಳನ್ನು ಪೂರೈಸಿದ ನಂತರವೇ ಅವರು ಜೈಲಿನಿಂದ ಬಿಡುಗಡೆಯಾಗುತ್ತಾರೆ.

ಮಂಗಳೂರು ವಿವಿ ಸಂವಾದ ಕಾರ್ಯಕ್ರಮದಲ್ಲಿ ವೇಣುಗೋಪಾಲ್ ಸಿದ್ದರಾಮಯ್ಯ ಭಾಗಿ, ಡಿಕೆಶಿ ಇರಲ್ಲ, ಮತ್ತೆ ರಾಜಕೀಯ ಕೌತುಕ

ಇಂದು ವೇಣು-ಸಿದ್ದು ಭೇಟಿ?

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕಳೆದ ಒಂದು ವಾರದ ಅಂತರದಲ್ಲಿ ಎರಡೆರಡು ಬಾರಿ ಉಪಾಹಾರ ಸಭೆಯ ಬಳಿಕ ರಾಜ್ಯ ಕಾಂಗ್ರೆಸ್‌ನಲ್ಲಿ ಉದ್ಭವಿಸಿದ್ದ ನಾಯಕತ್ವ ಗೊಂದಲ ತಾತ್ಕಾಲಿಕವಾಗಿ ಶಮನಗೊಂಡಿದೆ. ಈ ನಡುವೆ ಎರಡೂ ಉಪಾಹಾರ ಸಭೆಯ ಬಳಿಕ ಇದೇ ಮೊದಲ ಬಾರಿಗೆ ದಿಲ್ಲಿ ನಾಯಕರನ್ನು ಸಿದ್ದು ಭೇಟಿಯಾಗುತ್ತಿರುವುದು ಕುತೂಹಲಕ್ಕೆ ಕಾರಣವಾಗಿದೆ.

ಮಂಗಳೂರಿನಲ್ಲಿ ಆಯೋಜಿಸಿರುವ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಲು ಎಐಸಿಸಿ ಸಂಘಟನಾ ಕಾರ್ಯದರ್ಶಿ ಕೆ.ಸಿ.ವೇಣು ಗೋಪಾಲ್ ಬುಧವಾರ ಮಂಗಳೂರಿಗೆ ಆಗಮಿಸಲಿದ್ದಾರೆ. ಈ ಕಾರ್ಯಕ್ರಮದಲ್ಲಿ ಸಿಎಂ ಸಿದ್ದರಾಮಯ್ಯ ಅವರು ಮಾತ್ರ ಭಾಗವಹಿಸುತ್ತಿದ್ದು, ಈ ವೇಳೆ ವೇಣುಗೋಪಾಲ್ ಸೂಚನೆಯಂತೆ ನಡೆದ ಉಪಾಹಾರ ಸಭೆಯ ವರದಿಯನ್ನು ಸಲ್ಲಿಸುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ಶ್ರೀ ನಾರಾಯಣ ಗುರು ಅಧ್ಯಯನ ಪೀಠ, ಮಂಗಳೂರು ವಿವಿ ಆಶ್ರಯದಲ್ಲಿ ಆಯೋಜಿಸಿರುವ 'ಶತಮಾನದ ಪ್ರಸ್ಥಾನ ಶ್ರೀ ನಾರಾಯಣ ಗುರು- ಮಹಾತ್ಮಾ ಗಾಂಧಿ ಐತಿಹಾಸಿಕ ಸಂವಾದ' ಕಾರ್ಯಕ್ರಮದಲ್ಲಿ ವೇಣುಗೋಪಾಲ್ ಭಾಗವಹಿಸಲಿದ್ದಾರೆ. ಈ ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯ ಅವರು ಭಾಗವಹಿಸಲಿದ್ದು, ಡಿ.ಕೆ.ಶಿವಕುಮಾರ್ ಅವರಿಗೆ ಆಹ್ವಾನವಿಲ್ಲ. ಆದ್ದರಿಂದ ಈ ಕಾರ್ಯಕ್ರಮದ ಬಳಿಕ ಈ ಇಬ್ಬರು ನಾಯಕರು ಪ್ರತ್ಯೇಕ ಸಭೆ ನಡೆಸುವುದು ಬಹುತೇಕ ನಿಶ್ಚಿತ ಎನ್ನಲಾಗಿದೆ.

→ 4

ಉಪಾಹಾರದ ಮೆನು

- ಮಂಗಳವಾರ ಡಿಕೆಶಿ ನಿವಾಸದಲ್ಲಿ ಸಿದ್ದು ಉಪಾಹಾರ, 1 ಗಂಟೆ ಮಾತುಕತೆ
- ಸಿದ್ದರಾಮಯ್ಯಗೆ ಶಾಲು ಹೊದಿಸಿ, ಕಾಲಿಗೆ ನಮಸ್ಕರಿಸಿದ ಸಹೋದರ ಡಿ.ಕೆ.ಸುರೇಶ್
- ಈ ಸಭೆಯಲ್ಲಿ ನಾಯಕತ್ವ ಬದಲಾವಣೆ ಬಗ್ಗೆ ಚರ್ಚೆಗಿಂತ, ಇತರೆ ವಿಷಯಕ್ಕೆ ಮಹತ್ವ
- ಬೆಳಗಾವಿ ಚಳಿಗಾಲದ ಅಧಿವೇಶನದಲ್ಲಿ ಪ್ರತಿಪಕ್ಷದ ಅಸ್ತ್ರಕ್ಕೆ ಪ್ರತ್ಯಸ್ತ್ರದ ಬಗ್ಗೆ ಚರ್ಚೆ
- ದೆಹಲಿಯಲ್ಲಿ ನಡೆಯಲಿರುವ ಸರ್ವಪಕ್ಷ ಸಂಸದರ ಸಭೆ, ವಿಷಯಗಳ ಬಗ್ಗೆ ನಿಷ್ಕರ್ಷೆ
- ಪರಿಷತ್ ಚುನಾವಣೆಗೆ ಟಿಕೆಟ್ ಅಂತಿಮಗೊಳಿಸಲು ನಿರ್ಧಾರ, ಸುರ್ಜೇವಾಲಗೆ ಪಟ್ಟಿ

ಬೆಳಗಾವಿ ಅಧಿವೇಶನ ದಿನವೇ ಸರ್ವಪಕ್ಷ ಸಂಸದರ ಚರ್ಚೆ ಅದೇ ದಿನ ಅವಕಾಶ ಸಿಕ್ಕರೆ ಸೋನಿಯಾ ಜೊತೆ ಭೇಟಿ

8ಕ್ಕೆ ದಿಲ್ಲಿಗೆ ಸಿಎಂ, ಡಿಸಿಎಂ

ಬೆಂಗಳೂರು: ನಾಯಕತ್ವ ಬದಲಾವಣೆ ಕಾವು ಕಡಿಮೆಯಾಗಿದ್ದರೂ ರಾಜ್ಯ ಸಂಸದರ ಸರ್ವಪಕ್ಷ ಸಭೆಯ ನೆಪದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ದೆಹಲಿಗೆ ತೆರಳಲು ದಿನಾಂಕ ನಿಗದಿಪಡಿಸಿಕೊಂಡಿದ್ದಾರೆ. ಬೆಳಗಾವಿಯ

ಸುವರ್ಣಸೌಧದಲ್ಲಿ ಡಿ.8ರಿಂದ ಚಳಿಗಾಲದ ಅಧಿವೇಶನ ಆರಂಭವಾಗಲಿದ್ದು, ಅದೇ ದಿನ ಬೆಳಗಾವಿಯ ಕಾರ್ಯಕಲಾಪ ಮುಗಿಸಿಕೊಂಡು ದೆಹಲಿಗೆ ತೆರಳಲು ತೀರ್ಮಾನಿಸಲಾಗಿದೆ. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಿವಾಸದಲ್ಲಿ ನಡೆದ ಉಪಾಹಾರ ಸಭೆಯಲ್ಲಿ ಈ ತೀರ್ಮಾನವನ್ನು ನಾಯಕರು ಮಾಡಿಕೊಂಡಿದ್ದಾರೆ. ಈ ವೇಳೆ ಒಗ್ಗಟ್ಟಿನ ಮಂತ್ರ ಪಠಿಸಲು ಇಬ್ಬರೂ ಒಟ್ಟಿಗೆ ದೆಹಲಿಗೆ ತೆರಳುವ ಸಾಧ್ಯತೆಯಿದೆ ಎಂದು ತಿಳಿದುಬಂದಿದೆ.

ಸೋಮವಾರವೇ ಅಧಿವೇಶನ ಆರಂಭವಾದರೂ, ಹಾಲಿ ಶಾಸಕ ಎಚ್.ವೈ.ಮೇಟಿ ನಿಧನವಾಗಿರುವುದರಿಂದ ಸಂತಾಪ ಸೂಚನಾ ನಿರ್ಣಯದ ಬಳಿಕ ಕಲಾಪವನ್ನು ಮಂಗಳವಾರಕ್ಕೆ ಮುಂದೂಡಲಾಗುತ್ತದೆ. ಸರ್ವಪಕ್ಷ ಸಂಸದರ ಸಭೆಯನ್ನು ಕರೆದಿರುವುದರಿಂದ ಪ್ರತಿಪಕ್ಷದ ಪ್ರಮುಖರನ್ನು ಕರೆದುಕೊಂಡು ಹೋಗಲಾಗುತ್ತದೆ. ಆದ್ದರಿಂದ ಸದನವನ್ನು ಮುಂದೂಡಬಹುದು.

→ 4

ಕೇಂದ್ರ ಸರಕಾರದವರು ನಮಗೇನೂ ಜವಾಬ್ದಾರಿ ಇಲ್ಲವೆಂಬಂತೆ ಮಾತನಾಡುತ್ತಾರೆ. ಸಂಸದರ ಸಭೆ ಕರೆಯಬೇಕು ಎಂದು ತೀರ್ಮಾನಿಸಲಾಗಿದೆ. ಸಂತಾಪ ಸೂಚನೆ ನಿರ್ಣಯದ ಬಳಿಕ ಡಿ.8ರಂದು ಕಲಾಪ ಮುಂದೂಡಬಹುದೆಂದು ಭಾವಿಸಿ, ದೆಹಲಿಯಲ್ಲಿ ಅದೇ ದಿನ ಸಭೆ ಕರೆಯಲು ತೀರ್ಮಾನಿಸಲಾಗಿದೆ.

-ಸಿದ್ದರಾಮಯ್ಯ, ಮುಖ್ಯಮಂತ್ರಿ

ಪೋಕ್ಸೋ: ಬಿಎಸ್‌ವೈ ನಿರಾಳ

ಬೆಂಗಳೂರು: ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ವಿರುದ್ಧ ದಾಖಲಾಗಿರುವ ಪೋಕ್ಸೋ

(ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯ್ದೆ) ಪ್ರಕರಣದ ವಿಚಾರಣೆಗೆ ಸುಪ್ರೀಂ ಕೋರ್ಟ್ ತಾತ್ಕಾಲಿಕ ತಡೆ ನೀಡಿದೆ. ಜತೆಗೆ, ದಾಖಲಾಗಿರುವ ಪ್ರಕರಣವನ್ನು ಅರ್ಹತೆಯ ಆಧಾರದ ಮೇಲೆ ಮತ್ತೆ ಹೈಕೋರ್ಟ್ ಮುಂದೆ ಮುಂಡಿಸಲು ಯಡಿಯೂರಪ್ಪ ಅವರಿಗೆ ಅವಕಾಶವಿದೆಯೇ ಎಂಬುದನ್ನು ತಿಳಿಸಲು ಸೂಚಿಸಿ ರಾಜ್ಯ ಸರಕಾರಕ್ಕೆ ನೋಟಿಸ್ ಜಾರಿ ಮಾಡಿದೆ.

ಜಾರ್ಜ್ ತನಿಖೆ ರದ್ದು

ಬೆಂಗಳೂರು: ಸ್ಮಾರ್ಟ್ ಮೀಟರ್ ಗುತ್ತಿಗೆಯಲ್ಲಿ ನಡೆದಿದೆ ಎನ್ನಲಾದ ಅಕ್ರಮಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತ

ತನಿಖೆ ನಡೆಸಲು ನಿರ್ದೇಶನ ಕೋರಿ ಬಿಜೆಪಿ ಮುಖಂಡರು ಸಲ್ಲಿಸಿದ್ದ ಖಾಸಗಿ ದೂರನ್ನು ಹೈಕೋರ್ಟ್ ರದ್ದುಪಡಿಸಿ ಆದೇಶಿಸಿದೆ. ಬಿಜೆಪಿ ನಾಯಕರಾದ ಸಿ.ಎನ್.ಅಶ್ವತ್ಥನಾರಾಯಣ, ಎಸ್.ಆರ್.ವಿಶ್ವನಾಥ್ ಮತ್ತು ಧೀರಜ್ ಮುನಿರಾಜು ಸಲ್ಲಿಸಿದ್ದ ಖಾಸಗಿ ದೂರು ರದ್ದು ಕೋರಿ ಇಂಧನ ಸಚಿವ ಜಾರ್ಜ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಪೀಠ ದೂರನ್ನು ರದ್ದುಪಡಿಸಿದೆ.

ಸಂಸತ್‌ನಲ್ಲಿ ಎಸ್‌ಐಆರ್ ಚರ್ಚೆಗೆ ಅಸ್ತು: ಬಿಕ್ಕಟ್ಟು ಅಂತ್ಯ

ದೆಹಲಿ: ಸಂಸತ್ ಚಳಿಗಾಲದ ಅಧಿವೇಶನ ದಲ್ಲಿ ರಾಜ್ಯಸಭೆ- ಲೋಕಸಭೆಯಲ್ಲಿ ಪ್ರತಿಪಕ್ಷಗಳ ಗದ್ದಲ, ಸಭಾತ್ಯಾಗದ ನಡುವೆಯೇ ಒಮ್ಮತ ಮೂಡಿದೆ. ವಂದೇ ಮಾತರಂ ಮತ್ತು ವಿಶೇಷ ಮತಪಟ್ಟಿ ಪರಿಷ್ಕರಣೆ (ಎಸ್‌ಐಆರ್)ಗಳ ಬಗ್ಗೆ ಸುದೀರ್ಘ ಚರ್ಚೆ ನಡೆಸಲು ಕೇಂದ್ರ ಸರಕಾರ ಒಪ್ಪಿದೆ. ಪ್ರತಿಪಕ್ಷಗಳೂ ಸಮ್ಮತಿ ಸೂಚಿಸಿವೆ. ಅಲ್ಲಿಗೆ ಬಿಕ್ಕಟ್ಟು ಸದ್ಯಕ್ಕೆ ಮುಗಿದಿದೆ. ಕೇಂದ್ರ ಸರಕಾರ ಸಮಗ್ರ ಚುನಾವಣಾ ಸುಧಾರಣೆ ಬಗ್ಗೆ ಚರ್ಚಿಸಲಿದೆ. ಆ ಸಂದರ್ಭದಲ್ಲಿ ಪ್ರತಿಪಕ್ಷಗಳು ಎಸ್‌ಐಆರ್ ಅನ್ನು ಪ್ರಸ್ತಾಪಿಸಲಿವೆ. ಈ ಚರ್ಚೆ ಡಿ.9, 10ರಂದು ವಿಸ್ತೃತವಾಗಿ ಸಾಗಲಿದೆ.

ಇನ್ನು ವಂದೇ ಮಾತರಂ ರಚನೆಯಾಗಿ 150 ವರ್ಷಗಳಾಗಿರುವುದರಿಂದ ಅದರ ವಿಶೇಷ ಚರ್ಚೆಯನ್ನು ಸಂಸತ್ತಿನಲ್ಲಿ ನಡೆಸಲು ಕೇಂದ್ರ ಸರಕಾರ ಮುಂದಾಗಿದೆ. ಇದಕ್ಕೆ ಪ್ರತಿಪಕ್ಷಗಳು ಸಮ್ಮತಿಸಿವೆ. ಡಿ.8ರಂದು ಈ ಚರ್ಚೆ ನಡೆಯಲಿದ್ದು, ಸ್ವತಃ ಪ್ರಧಾನಮಂತ್ರಿ ನರೇಂದ್ರ ಮೋದಿಯೇ ವಿಷಯ ಪ್ರಸ್ತಾಪಿಸಲಿದ್ದಾರೆ. ಓಂ ಬಿರ್ಲಾ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಎರಡೂ ಗುಂಪುಗಳು ಅಂತಿಮ ತೀರ್ಮಾನಕ್ಕೆ ಬಂದವು.

ಜಿಲ್ಲೆಯಾದ್ಯಂತ 6000ಕ್ಕೂ ಅಧಿಕ ಪೊಲೀಸರಿಂದ ಭದ್ರತೆ

ಇಂದು ಚಿಕ್ಕಮಗಳೂರಲ್ಲಿ ಶೋಭಾಯಾತ್ರೆ

ಚಿಕ್ಕಮಗಳೂರು: ಚಿಕ್ಕಮಗಳೂರಿನ ದತ್ತಪೀಠದಲ್ಲಿ ಬುಧವಾರ ದತ್ತಜಯಂತಿ ಆಚರಣೆ ನಡೆಯಲಿದೆ. ಈ ಹಿನ್ನೆಲೆಯಲ್ಲಿ ಚಿಕ್ಕಮಗಳೂರಿನಲ್ಲಿ ಶೋಭಾ ಯಾತ್ರೆ ಯೂ ನಡೆಯಲಿದೆ. ಇತ್ತೀಚೆಗಿನ ವರ್ಷ ಗಳಲ್ಲಿ ಪರಿಸ್ಥಿತಿ ಶಾಂತವಾಗಿದ್ದರೂ, ಅದಕ್ಕೂ ಮುನ್ನ ಚಿಕ್ಕಮಗಳೂರಿನಲ್ಲಿ ದತ್ತಜಯಂತಿ ಇದ್ದಾಗ ಬಿಗುವಿನ ವಾತಾವರಣ ಏರ್ಪಡುತ್ತಿತ್ತು. ಈ ಹಿನ್ನೆಲೆಯಲ್ಲಿ ಪೊಲೀಸರು ಬಿಗಿಭದ್ರತೆಗೆ ಏರ್ಪಾಡು ಮಾಡಿದ್ದಾರೆ.

ಮಂಗಳವಾರ ಅನುಸೂಯಾ ಜಯಂತಿ ನೆರವೇರಿದೆ. ಡಿ.3ರಂದು ಚಿಕ್ಕಮಗಳೂರು ನಗರದಲ್ಲಿ ದತ್ತಭಕ್ತರು ಹಾಗೂ ಸಾರ್ವಜನಿಕರಿಂದ ಬೃಹತ್ ಮೆರವಣಿಗೆ ನಡೆಯಲಿದೆ. ಸುಮಾರು 20ರಿಂದ 25 ಸಾವಿರ ಭಕ್ತರು ಪಾಲ್ಗೊಳ್ಳಲಿದ್ದಾರೆ. ಡಿ.4ರಂದು ರಾಜ್ಯದ ಮೂಲೆ-ಮೂಲೆಗಳಿಂದ ಬರುವ 15 ಸಾವಿರಕ್ಕೂ ಅಧಿಕ ಭಕ್ತರು ದತ್ತಪೀಠಕ್ಕೆ ತೆರಳಿ ದತ್ತಪಾದುಕೆ ದರ್ಶನ ಪಡೆಯಲಿದ್ದಾರೆ.

ಚಿಕ್ಕಮಗಳೂರು ಜಿಲ್ಲೆಯಾದ್ಯಂತ ಪೊಲೀಸರು ಕಟ್ಟೆಚ್ಚರ ವಹಿಸಿದ್ದಾರೆ. ಚಿಕ್ಕಮಗಳೂರು ಪ್ರವೇಶಿಸಿದ ಮಾಜಿ ಸಂಸದ ಪ್ರತಾಪ್ ಸಿಂಹ ಅವರ ಕಾರನ್ನೂ ಪೊಲೀಸರು ಪರಿಶೀಲಿಸಿದ್ದಾರೆ. ಚಿಕ್ಕಮಗಳೂರು ಗಡಿ ಗ್ರಾಮ ಕೊಟ್ಟಿಗೆಹಾರದ ಬಳಿ ಮಂಗಳೂರಿನಿಂದ ಬರುತ್ತಿದ್ದ ಪ್ರತಾಪ್ ಸಿಂಹ ಕಾರನ್ನು ಪೊಲೀಸರು ತಪಾಸಣೆ ಮಾಡಿದ್ದಾರೆ. ದತ್ತಜಯಂತಿ ಅಂಗವಾಗಿ 28 ಚೆಕ್ ಪೋಸ್ಟ್‌ಗಳನ್ನು ಪೊಲೀಸರು ನಿರ್ಮಿಸಿದ್ದಾರೆ. 6 ಸಾವಿರಕ್ಕೂ ಅಧಿಕ ಪೊಲೀಸರಿಂದ ಭದ್ರತೆ ಕೈಗೊಳ್ಳಲಾಗಿದೆ.



ಮಾಜಿ ಸಂಸದ ಪ್ರತಾಪ್ ಸಿಂಹ ಅವರ ಕಾರನ್ನು ಪೊಲೀಸರು ತಪಾಸಣೆ ನಡೆಸಿದರು.

ಎಟಿಎಂ ಹೊತ್ತೊಯ್ದರೂ ಕೈಗೆ ದಕ್ಕಲಿಲ್ಲ ಹಣ

ಬೆಳಗಾವಿ: ತಳ್ಳು ಗಾಡಿ ತಂದು ಎಟಿಎಂ ಹೊತ್ತುಕೊಂಡು ಕಳ್ಳತನ ಮಾಡಿ ಪರಾರಿಯಾಗಿರುವ ಘಟನೆ ಬೆಳಗಾವಿ ತಾಲೂಕು ಹೊಸ ವಂಟಮೂರಿ ಗ್ರಾಮದಲ್ಲಿ ತಡವಾಗಿ ಬೆಳಕಿಗೆ ಬಂದಿದೆ. ಸಿಸಿ ಕ್ಯಾಮೆರಾದಲ್ಲಿ ದೃಶ್ಯ ಸೆರೆಯಾಗಿದೆ. ಆದರೆ

ಮಷಿನ್‌ನಲ್ಲಿದ್ದ 1 ಲಕ್ಷ ರು. ಹಣವನ್ನು ದೋಚಲು ಆಗದೇ ಹೋಗಿದ್ದರಿಂದ, ಕಳ್ಳರು ಅಲ್ಲೇ ಸಮೀಪದಲ್ಲಿ ಯಂತ್ರವನ್ನು ಎಸೆದು ಹೋಗಿದ್ದಾರೆ. ರಾಷ್ಟ್ರೀಯ ಹೆದ್ದಾರಿ 48ಕ್ಕೆ ಹೊಂದಿಕೊಂಡಿರುವ ಇಂಡಿಕ್ಯಾಶ್ ಎಟಿಎಂಗೆ ಅನ್ನು ಮೂರು ಜನ ಖದೀಮರು ಕನ್ನ ಹಾಕಿದ್ದರು. ಎಟಿಎಂನಲ್ಲಿರುವ ಸೆನ್ಸಾರ್ ಗೆ ಶಬ್ದ ಬರದಂತೆ ಬ್ಲ್ಯಾಕ್ ಸ್ಪ್ರೇ ಮಾಡಿ ಮಷಿನ್ ಹೊರತೆಗೆದು, ತಳ್ಳುವ ಗಾಡಿಯಲ್ಲಿಟ್ಟುಕೊಂಡು ಪರಾರಿಯಾಗಿದ್ದಾರೆ.

ರಾಜಧಾನಿಯ ಮೂಲೆಮೂಲೆಗಳಲ್ಲೂ ಕಣ್ಗಾವಲು

ಪುಟಿನ್ ಭೇಟಿ: ದೆಹಲಿಯಲ್ಲಿ ಕಟ್ಟೆಚ್ಚರ

ದೆಹಲಿ: ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಡಿ.4, 5ರಂದು ಭಾರತಕ್ಕೆ ಭೇಟಿ ನೀಡಲಿರುವ ಪರಿಣಾಮ, ಇಡೀ ದೆಹಲಿಯಲ್ಲಿ ಕಟ್ಟೆಚ್ಚರ ವಹಿಸಲಾಗಿದೆ. ದೆಹಲಿಯ ಮೂಲೆಮೂಲೆಗಳಲ್ಲಿ ಕಣ್ಗಾವಲು ಇಡಲಾಗಿದೆ. ಎಲ್ಲ ಕಡೆಗೆ ಪೊಲೀಸರೇ ಕಂಡುಬರುತ್ತಿದ್ದಾರೆ.

ಪುಟಿನ್ ಎರಡು ದಿನಗಳ ಭಾರತ ಭೇಟಿಯ ಹಿನ್ನಲೆಯಲ್ಲಿ ರಾಷ್ಟ್ರ ರಾಜಧಾನಿ ನವದೆಹಲಿಯಲ್ಲಿ ವಿವಿಧ ಭದ್ರತಾಪಡೆಗಳು ರಕ್ಷಣಾ ವ್ಯವಸ್ಥೆಯನ್ನು ಪರಿಶೀಲಿಸಿವೆ. ಪ್ರಮುಖ ಸ್ಥಳಗಳಲ್ಲಿ ಹೈ ಅಲರ್ಟ್ ಘೋಷಿಸಲಾಗಿದೆ ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ. ಪುಟಿನ್ ಅವರ ಭಾರತ ಪ್ರವಾಸದ ವೇಳಾಪಟ್ಟಿಯನ್ನು ತಯಾರಿಸಲಾಗಿದೆ. ಆದರೆ, ಪ್ರವಾಸದ ವೇಳೆ ಅವರು ಎಲ್ಲಿ ತಂಗಲಿದ್ದಾರೆ ಎನ್ನುವ ಮಾಹಿತಿಯನ್ನು ಭದ್ರತಾ ಉದ್ದೇಶದಿಂದ ಬಿಡುಗಡೆಗೊಳಿಸಿಲ್ಲ ಎಂದು ಹೇಳಿದ್ದಾರೆ.

ಪುಟಿನ್ ಅವರು ಭಾರತಕ್ಕೆ ಆಗಮಿಸುವ ವೇಳೆಯಿಂದ ಅವರು ನಿರ್ಗಮಿಸುವ ತನಕ ಅವರ ಪ್ರತಿಯೊಂದು ಚಲನವಲನವನ್ನು ದೆಹಲಿ ಪೊಲೀಸ್, ಕೇಂದ್ರ ಭದ್ರತಾ ಪಡೆಗಳು, ಭಯೋತ್ಪಾದಕ ನಿಗ್ರಹದಳ, ರಷ್ಯಾದ ಅಧಿಕಾರಿಗಳು ಸೇರಿದಂತೆ ವಿವಿಧ ಭದ್ರತಾಪಡೆಗಳು ಮೇಲ್ವಿಚಾರಣೆ ಮಾಡಲಿದ್ದಾರೆ. ಟ್ರಾಫಿಕ್‌ನಿಂದ ನೈರ್ಮಲ್ಯೀಕರಣದವರೆಗೆ ಎಲ್ಲಾ ವಿಷಯಗಳಲ್ಲೂ ನಿಗವಹಿಸಲಾಗಿದೆ ಎಂದು ತಿಳಿಸಿದ್ದಾರೆ. ಪುಟಿನ್ ಭೇಟಿಗೂ ಮುನ್ನ ರಷ್ಯಾದ 50 ಮಂದಿ ಅಧಿಕಾರಿಗಳು ದೆಹಲಿಗೆ ಆಗಮಿಸಲಿದ್ದು, ಭದ್ರತಾ ವ್ಯವಸ್ಥೆಯನ್ನು ಮರುಪರಿಶೀಲನೆ ಮಾಡಲಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ.

ವಿಮಾನ ನಿಲ್ದಾಣದಲ್ಲಿ ಸಂಚಾರ ದಟ್ಟಣೆ ನಿವಾರಣೆಗೆ ಕ್ರಮ

ಬೆಂಗಳೂರು ಏರ್‌ಪೋರ್ಟ್‌ನಲ್ಲಿ ದಂಡಾಸ್ತ್ರ!

ಬೆಂಗಳೂರು: ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ದಿನದಿಂದ ದಿನಕ್ಕೆ ಸಂಚಾರ ದಟ್ಟಣೆ ಹೆಚ್ಚಾಗುತ್ತಿರುವುದರಿಂದ, ಅನಗತ್ಯ ವಾಹನ ಸಂಚಾರ, ನಿಲುಗಡೆಯನ್ನು ತಡೆಯುವ ಉದ್ದೇಶದಿಂದ ವಾಹನ ನಿಲ್ದಾಣದ ನಿಯಮದಲ್ಲಿ ಬದಲಾವಣೆ ತರಲು ತೀರ್ಮಾನಿಸಲಾಗಿದೆ.

ನೂತನ ನಿಯಮ ಪ್ರಕಾರ ನಿಗದಿತ ಸಮಯಕ್ಕಿಂತ ಹೆಚ್ಚು ಅವಧಿ ಪಿಕ್ ಹಾಗೂ ಡ್ರಾಪ್ ಸ್ಥಳದಲ್ಲಿ ವಾಹನವನ್ನು ನಿಲ್ಲಿಸಿದರೆ, ಹೆಚ್ಚುವರಿ ದಂಡ ಹಾಗೂ ಟೋಯಿಂಗ್ ಮಾಡುವ ಕ್ರಮಕ್ಕೆ ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾಧಿಕಾರ ಮುಂದಾಗಿದೆ. ಈ ನೂತನ ನಿಯಮ ಡಿ.8ರಿಂದ ಶುರುವಾಗಲಿದೆ. ಅಧಿಕಾರಿಗಳ ಪ್ರಕಾರ ಎಂಟು ನಿಮಿಷಕ್ಕಿಂತ ಹೆಚ್ಚು ಅವಧಿ ವಾಹನವನ್ನು ಪಾರ್ಕ್ ಮಾಡಿದರೆ 150ರಿಂದ 300 ರು. ದಂಡ ವಿಧಿಸಲು ತೀರ್ಮಾನಿಸಲಾಗಿದೆ.

ಅನಧಿಕೃತ ಪಾರ್ಕಿಂಗ್ ತಡೆಯಲು ಮತ್ತು ಅನಗತ್ಯ ವಾಹನ ನಿಲುಗಡೆಯನ್ನು ತಗ್ಗಿಸಲು ಟಿ1, 2ನಲ್ಲಿ ಪ್ರತ್ಯೇಕ ಲೇನ್ ವ್ಯವಸ್ಥೆ ಪರಿಚಯಿಸಲಾಗುತ್ತಿದೆ. ಇದರೊಂದಿಗೆ ಇಂಗಾಲವನ್ನು ಕಡಿಮೆ ಮಾಡಲು ಕೆಲ ಕಠಿಣ ಕ್ರಮವಹಿಸಲಾಗುತ್ತಿದೆ. ಟರ್ಮಿನಲ್‌ಗಳ ಮುಂದೆ ಪಿಕಪ್ ವಲಯದಲ್ಲಿ ಆಗುತ್ತಿರುವ ಸಮಸ್ಯೆಯನ್ನು ಬಗೆಹರಿಸಲು ಈ ಕ್ರಮವಹಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಟಿ1 ಮತ್ತು ಟಿ2ನಲ್ಲಿ ನಿತ್ಯ 1.30 ಲಕ್ಷಕ್ಕೂ ಅಧಿಕ ಮಂದಿ ಸಂಚಾರ ನಡೆಸುತ್ತಾರೆ. ನಿತ್ಯ ಸುಮಾರು ಒಂದು ಲಕ್ಷದಷ್ಟು ವಾಹನಗಳು ಏರ್‌ಪೋರ್ಟ್‌ಗೆ ಆಗಮಿಸುತ್ತವೆ.

→ 4

ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಪ್ರಯಾಣಿಕರ ದಟ್ಟಣೆ ಹೆಚ್ಚುತ್ತಿರುವುದರಿಂದ, ಪಿಕ್-ಅಪ್ ವಲಯಗಳಲ್ಲಿ ಶಿಸ್ತನ್ನು ಕಾಪಾಡಿಕೊಳ್ಳುವುದು ಅತ್ಯಗತ್ಯ. ಪ್ರಯಾಣಿಕರನ್ನು ರಕ್ಷಿಸಲು, ಕ್ರಮಬದ್ಧ ಚಲನೆಯನ್ನು ಖಚಿತಪಡಿಸಿಕೊಳ್ಳಲು ಈ ಕ್ರಮ ಕೈಗೊಳ್ಳಲಾಗಿದೆ.

-ಹರಿ ಮಾರಾರ್, ಬಿಐಎಎಲ್‌ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ

ಯಾವುದಕ್ಕೆಲ್ಲ ದಂಡ?

- ಪಿಕಪ್, ಡ್ರಾಪ್‌ಗೆ 8 ನಿಮಿಷ ಮಾತ್ರ ಸಮಯ
- ಸಮಯ ಮಿತಿ ಮೀರಿದರೆ ಬೀಳಲಿದೆ ದಂಡ
- 8ರಿಂದ 13 ನಿಮಿಷಗಳವರೆಗೆ 150 ರು.ದಂಡ
- 13ರಿಂದ 18 ನಿಮಿಷಗಳಿಗೆ 300 ರು. ದಂಡ
- 18 ನಿಮಿಷಗಳ ನಂತರ ವಾಹನ ಪೊಲೀಸರಿಗೆ

2 ಹಂತದಲ್ಲಿ ಜಾತಿಗಣತಿ-ಜನಗಣತಿ: ಲೋಕಸಭೆಗೆ ಕೇಂದ್ರ ಮಾಹಿತಿ

ಏಪ್ರಿಲ್‌ನಲ್ಲಿ ಮತ್ತೆ ಗಣತಿ ಶುರು

ದೆಹಲಿ: 2011ರಲ್ಲಿ ನಡೆದಿದ್ದ ಜನಗಣತಿಯನ್ನು ಮತ್ತೆ ನಡೆಸಲು ಕೇಂದ್ರ ಸರಕಾರ ಸಜ್ಜಾಗಿದೆ. ಈ ಬಗ್ಗೆ ಲೋಕಸಭೆಯಲ್ಲಿ ವಿಪಕ್ಷ ನಾಯಕ ರಾಹುಲ್ ಗಾಂಧಿ ಕೇಳಿದ ಪ್ರಶ್ನೆಗೆ ಉತ್ತರಿಸಿದ ಕೇಂದ್ರ ಗೃಹ ಇಲಾಖೆ ಸಹಾಯಕ ಸಚಿವ ನಿತ್ಯಾನಂದ ರೈ, 2026ರಲ್ಲಿ ಏಪ್ರಿಲ್‌ನಿಂದ ಸೆಪ್ಟೆಂಬರ್ ನಡುವೆ, 2027ರಲ್ಲಿ ಫೆಬ್ರವರಿ ತಿಂಗಳಲ್ಲಿ ಜನಗಣತಿ ನಡೆಯಲಿದೆ ಎಂದು ಮಾಹಿತಿ ನೀಡಿದ್ದಾರೆ. ಅಷ್ಟು ಮಾತ್ರವಲ್ಲ ಅದೇ ವೇಳೆ ಜಾತಿಗಣತಿಯೂ ನಡೆಯಲಿದೆ ಎಂದು ಖಚಿತಪಡಿಸಿದ್ದಾರೆ.

ಒಟ್ಟು 2 ಹಂತಗಳಲ್ಲಿ ಜನಗಣತಿ ನಡೆಸಲಾಗುತ್ತದೆ. ಮೊದಲನೇ ಹಂತದಲ್ಲಿ ಮನೆ ಪಟ್ಟಿ ಮತ್ತು ವಸತಿ ಗಣತಿ, 2ನೇ ಹಂತದಲ್ಲಿ ಜನಸಂಖ್ಯಾ ಎಣಿಕೆ ಆಗಲಿದೆ. ಏಪ್ರಿಲ್‌ನಿಂದ ಸೆಪ್ಟೆಂಬರ್ 2026ರವರೆಗಿನ ಮೊದಲ ಹಂತವನ್ನು ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ಸರಕಾರಗಳ ಅನುಕೂಲಕ್ಕೆ ಅನುಗುಣವಾಗಿ 30 ದಿನಗಳ ಅವಧಿಯಲ್ಲಿ ನಡೆಸಲಾಗುವುದು. ಜನಗಣತಿ ಪ್ರಶ್ನಾವಳಿಯನ್ನು ವಿವಿಧ ಸಚಿವಾಲಯ ಗಳು, ಇಲಾಖೆಗಳು, ಸಂಸ್ಥೆಗಳು ಮತ್ತು ಜನಗಣತಿ ದತ್ತಾಂಶ ಬಳಕೆದಾರರಿಂದ ಬರುವ ಒಳಹರಿವು ಮತ್ತು ಸಲಹೆಗಳ ಆಧಾರದ ಮೇಲೆ ಅಂತಿಮಗೊಳಿಸಲಾಗುತ್ತದೆ ಎಂದು ಸಚಿವರು ಹೇಳಿದರು.

ಡಿಜಿಟಲ್ ಬಳಕೆ: ಮತ್ತೊಂದು ಪ್ರತಿಕ್ರಿಯೆಯಲ್ಲಿ, 2027ರ ಜನಗಣತಿಯನ್ನು ಡಿಜಿಟಲ್ ವಿಧಾನಗಳ ಮೂಲಕ ನಡೆಸಲಾಗುವುದು, ಇದರಲ್ಲಿ ಸ್ವಯಂ ಎಣಿಕೆಗಾಗಿ ಆ್ಯಪ್‌ಗಳ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗುವುದು ಎಂದು ಸಚಿವರು ಹೇಳಿದರು.

ಹೇಗೆ ನಡೆಯಲಿದೆ?

- 2026ರಲ್ಲಿ ಏಪ್ರಿಲ್‌ನಿಂದ ಸೆಪ್ಟೆಂಬರ್ ನಡುವೆ ಹಂತ-1ರಲ್ಲಿ ಎಣಿಕೆ. ಮೊದಲು ಮನೆಗಳ ಪಟ್ಟಿ
- ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳ ಪರಿಸ್ಥಿತಿ ನೋಡಿಕೊಂಡು ಗಣತಿಗೆ 30 ದಿನಗಳ ಬಳಕೆ
- 2027 ಫೆಬ್ರವರಿಯಲ್ಲಿ ಹಂತ-2ರ ಜನಗಣತಿ, ಇಲ್ಲಿ ಡಿಜಿಟಲ್ ಬಳಕೆ. ಆ್ಯಪ್ ಬಳಸಿ ಜನರೇ ಮಾಹಿತಿ ತುಂಬಲು ಸರಕಾರದಿಂದ ಅವಕಾಶ
- ಕೇಂದ್ರ ಸರಕಾರ ಮೊದಲೇ ಘೋಷಿಸಿದ್ದಂತೆ ಒಟ್ಟಿಗೆ ಜಾತಿಗಣತಿಯೂ ನಡೆಯಲಿದೆ
- ವಿವಿಧ ಸಚಿವಾಲಯಗಳು, ರಾಜ್ಯ ಸರಕಾರಗಳು ಜನರು ನೀಡಿದ ಮಾಹಿತಿ ಬಳಸಿ ಪ್ರಶ್ನಾವಳಿ ಸಿದ್ಧ

ಸಮಾಚಾರ ಸಣ್ಣದಲ್ಲ

ಟಿಇಟಿ ಪ್ರವೇಶ ಪತ್ರ ಬಿಡುಗಡೆ

ಬೆಂಗಳೂರು: ರಾಜ್ಯ ಶಾಲಾ ಶಿಕ್ಷಣ ಇಲಾಖೆ ಶಿಕ್ಷಕರ ಅರ್ಹತಾ ಪರೀಕ್ಷೆ (ಟಿಇಟಿ) 2025 ಪ್ರವೇಶ ಪತ್ರ ಬಿಡುಗಡೆ ಮಾಡಿದೆ. ಪರೀಕ್ಷೆಗೆ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಅಧಿಕೃತ ವೆಬ್‌ಸೈಟ್ sts.karnataka.gov.ಜ್ಞಿ ನಲ್ಲಿ ಪ್ರವೇಶ ಪತ್ರವನ್ನು ಪರಿಶೀಲಿಸಬಹುದು ಮತ್ತು ಡೌನ್‌ಲೋಡ್ ಮಾಡಬಹುದು. ಡಿ.7 ರಂದು ಪರೀಕ್ಷೆ ನಡೆಯಲಿದೆ. ಬೆಳಗ್ಗೆ 9:30 ರಿಂದ ಮಧ್ಯಾಹ್ನ 12 ರವರೆಗೆ ಮತ್ತು ಮಧ್ಯಾಹ್ನ 2 ರಿಂದ ಸಂಜೆ 4:30 ರವರೆಗೆ ಎರಡು ಪತ್ರಿಕೆಗಳು ನಡೆಯಲಿವೆ. ಡೌನ್ ಲೋಡ್ ಲಿಂಕ್; ಕರ್ನಾಟಕ ಟಿಇಟಿ ಪ್ರವೇಶ ಪತ್ರ 2025 ಡೌನ್‌ಲೋಡ್ ಲಿಂಕ್ https://sts.karnataka.gov.in/TET/Loginpage.aspx ಅಭ್ಯರ್ಥಿಗಳು ಪ್ರತಿ ಯೊಂದು ನಮೂದು ನಿಖರತೆಗಾಗಿ ಎಚ್ಚರಿ ಕೆಯಿಂದ ಪರಿಶೀಲಿಸಬೇಕು ಎಂದು ತಿಳಿಸಲಾಗಿದೆ.

ಡಿ.7ಕ್ಕೆ ಸಶಸ್ತ್ರ ಪಡೆಗಳ ಧ್ವಜ ದಿನಾಚರಣೆ

ಬೆಂಗಳೂರು: ಡಿ.7 ರಂದು ರಾಜಭವನದಲ್ಲಿ ಸಶಸ್ತ್ರ ಪಡೆಗಳ ಧ್ವಜ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿದ್ದು, ರಾಜ್ಯಪಾಲ ಥಾವರ್ ಚಂದ್ ಗೆಹ್ಲೋತ್ ಹಾಗೂ ಗೃಹ ಸಚಿವ ಪರಮೇಶ್ವರ್ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದು ಒಳಾಡಳಿತ ಇಲಾಖೆ (ಪಿಸಿಎಎಸ್) ಸರಕಾರದ ಪ್ರಧಾನ ಕಾರ್ಯದರ್ಶಿ ಕೆ. ವಿ ಶರತ್ ಚಂದ್ರ ತಿಳಿಸಿದರು.ವಿಧಾನಸೌಧದಲ್ಲಿ ಹಮ್ಮಿಕೊಳ್ಳಲಾಗಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಸರಕಾರದ ವಿವಿಧ ಇಲಾಖೆಗಳನ್ನು ಸಶಸ್ತ್ರ ಪಡೆಗಳ ಧ್ವಜ ದಿನಾಚರಣೆಯಂದು ಗೌರವಿಸಲಾಗುವುದು ಎಂದರು.

ಜೈಷ್-ಇ-ಮೊಹಮ್ಮದ್ ಉಗ್ರ ಸಂಘಟನೆ ಹೆಸರಲ್ಲಿ ಬೆದರಿಕೆ ಇ-ಮೇಲ್ | ಏರ್‌ಪೋರ್ಟ್, ಮಾಲ್‌ಗಳನ್ನು ಸ್ಫೋಟಿಸುವುದಾಗಿ ಸಂದೇಶ ರವಾನೆ

ವಿಮಾನ ನಿಲ್ದಾಣಕ್ಕೆ ಬಾಂಬ್ ಬೆದರಿಕೆ ಸಂದೇಶ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಹಾಗೂ ನಗರದ ಕೆಲವು ಮಾಲ್‌ಗಳಿಗೆ ಬಾಂಬ್ ಬೆದರಿಕೆ ಹಾಕಲಾಗಿದೆ.

ಮೋಹಿತ್ ಕುಮಾರ್ ಎಂಬಾತ ಜೈಷ್-ಇ-ಮೊಹಮ್ಮದ್ ಉಗ್ರ ಸಂಘಟನೆ ಹೆಸರಿನಲ್ಲಿ ಬೆಂಗಳೂರು ನಗರ ಪೊಲೀಸ್ ಆಯುಕ್ತರ ಇ-ಮೇಲ್ ವಿಳಾಸಕ್ಕೆ ಬಾಂಬ್ ಬೆದರಿಕೆ ಸಂದೇಶ ಬಂದಿದ್ದು, ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಹಾಗೂ ನಗರದ ಆಯ್ದ ಪ್ರಮುಖ ಶಾಪಿಂಗ್ ಮಾಲ್‌ಗಳನ್ನು ಸ್ಫೋಟಿಸುವುದಾಗಿ ಇ-ಮೇಲ್ ಕಳುಹಿಸಿದ್ದಾನೆ.

ಕೆಂಪೇಗೌಡ ಏರ್‌ಪೋರ್ಟ್ ಹಾಗೂ ನಗರದ ಕೆಲವು ಮಾಲ್‌ಗಳನ್ನು ಸ್ಫೋಟಿಸುವುದಾಗಿ ಜೈಷ್-ಎ-ಮೊಹಮ್ಮದ್ ಉಗ್ರ ಸಂಘಟನೆ ಹೆಸರಿನಲ್ಲಿ ನವೆಂಬರ್ 30ರಂದು ಬೆಂಗಳೂರು ನಗರ ಪೊಲೀಸ್ ಆಯುಕ್ತರ ಅಧಿಕೃತ ಇ-ಮೇಲ್‌ಗೆ ಕಳುಹಿಸಲಾಗಿದೆ. ಮೋಹಿತ್ ಕುಮಾರ್ ಎನ್ನುವಾತನೇ ಇ-ಮೇಲ್ ಸಂದೇಶ ಕಳುಹಿಸಿದ್ದ. ಕೂಡಲೇ ಎಚ್ಚೆತ್ತ ಪೊಲೀಸರು, ವಿಮಾನ ನಿಲ್ದಾಣ ಮತ್ತು ಹೆಸರಿಸಲಾದ ಮಾಲ್‌ಗಳ ಸುತ್ತಮುತ್ತ ತೀವ್ರ ಭದ್ರತಾ ತಪಾಸಣೆ ನಡೆಸಿದರು. ಬಾಂಬ್ ನಿಷ್ಕ್ರಿಯ ದಳ ಮತ್ತು ಶ್ವಾನದಳಗಳು ಸ್ಥಳಗಳನ್ನು ಕೂಲಂಕಷವಾಗಿ ಪರಿಶೀಲಿಸಿದ್ದು, ಯಾವುದೇ ಸ್ಫೋಟಕ ವಸ್ತುಗಳು ಪತ್ತೆಯಾಗಿಲ್ಲ. ಹೀಗಾಗಿ ಇದು ಹುಸಿ ಬಾಂಬ್ ಬೆದರಿಕೆ ಎಂಬುದು ದೃಢಪಟ್ಟಿದೆ. ಮೋಹಿತ್ ಕುರ್ಮಾ ಎಂಬಾತನಿಂದ ಹುಸಿ ಬಾಂಬ್ ಇ-ಮೇಲ್ ಬಂದಿದೆ ಎಂದು ಪೊಲೀಸರು ಖಚಿತಪಡಿಸಿದ್ದು, ಈ ಬಗ್ಗೆ ಕೇಂದ್ರ ಸೈಬರ್ ಕ್ರೈಂ ಪೊಲೀಸ್ ಸ್ಟೇಷನ್ ನಲ್ಲಿ mohitkumar.er989799gmail.com ಎನ್ನುವ ಇ ಮೇಲ್ ಐಡಿ ಮೇಲೆ ಎಫ್‌ಐಆರ್ ದಾಖಲಾಗಿದೆ.

ಬೆದರಿಕೆದಾರನು ತನ್ನನ್ನು ಜೈಷ್-ಇ-ಮೊಹಮ್ಮದ್ ವೈಟ್ ಕಾಲರ್ ಟೆರರ್ ಟೀಮ್ ಎಂದು ಪರಿಚಯಿಸಿಕೊಂಡು, ಇಂಗ್ಲಿಷ್‌ನಲ್ಲಿ ಸಂದೇಶ ಬರೆದಿದ್ದಾನೆ. ಜೈಷ್-ಇ-ಮೊಹಮ್ಮದ್ ವೈಟ್ ಕಾಲರ್ ಟೆರರ್ ಟೀಮ್‌ನಿಂದ ಇದೊಂದು ಎಚ್ಚರಿಕೆ. ನಾವು ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಬೆಂಗಳೂರು, ಒರಿಯನ್ ಮಾಲ್, ಲುಲು ಮಾಲ್, ಫೋರಂ ಸೌತ್ ಮಾಲ್, ಮಂತ್ರಿ ಸ್ಕ್ವೇರ್ ಮಾಲ್‌ಗಳನ್ನು ಗುರಿಯಾಗಿಸಿಕೊಂಡಿದ್ದೇವೆ. ಸಂಜೆ 7 ಗಂಟೆಯ ನಂತರ ಬಾಂಬ್ ಸ್ಫೋಟಗೊಳ್ಳಲಿದೆ. ನಮ್ಮ ಅಲ್ಲಾ ಮತ್ತು ನಮ್ಮ ಮಾಸ್ಟರ್ ಮೋಹಿತ್ ಅವರಿಗೆ ಧನ್ಯವಾದಗಳು. ಅಲ್ಲದೆ, ಇದು ಸಂಭವಿಸದಿರಲು ಬಯಸಿದರೆ ನೀವು +91 936★★★8077 ಸಂಖ್ಯೆಗೆ ಕರೆ ಮಾಡಿ, ಹಣವನ್ನು ಪಾವತಿ ಮಾಡಿ ಎಂದು ಹಣಕ್ಕೆ ಬೇಡಿಕೆ ಇಡುವ ಪ್ರಯತ್ನವನ್ನೂ ಮಾಡಲಾಗಿದೆ. ಈ ಸಂಬಂಧ ಬೆಂಗಳೂರಿನ ಕೇಂದ್ರ ಸೈಬರ್ ಕ್ರೈಂ ಪೊಲೀಸ್ ಠಾಣೆಯಲ್ಲಿ ಬಿಎನ್‌ಎಸ್ 173 ಅಡಿಯಲ್ಲಿ ಎಫ್‌ಐಆರ್ ದಾಖಲಿಸಲಾಗಿದ್ದು, ಇ-ಮೇಲ್ ಐಡಿಯಲ್ಲಿ ಉಲ್ಲೇಖಿಸಲಾದ ಮೋಹಿತ್ ಕುಮಾರ್ ಎಂಬಾತನೇ ಆರೋಪಿ ಅಥವಾ ಬೇರೆ ಯಾರೋ ಈ ಐಡಿ ಬಳಸಿದ್ದಾರೆ ಎಂಬ ಬಗ್ಗೆ ಪೊಲೀಸರು ತೀವ್ರ ತನಿಖೆ ಕೈಗೊಂಡಿದ್ದಾರೆ.

70ಕ್ಕೂ ಹೆಚ್ಚು ವಿಮಾನ ವ್ಯತ್ಯಯ

ದೇವನಹಳ್ಳಿ ಕೆಂಪೇಗೌಡ ವಿಮಾನ ನಿಲ್ದಾಣದಿಂದ ಹಾರಾಟ ನಡೆಸಬೇಕಿದ್ದ 70ಕ್ಕೂ ಹೆಚ್ಚು ವಿಮಾನಗಳ ಸಂಚಾರದಲ್ಲಿ ವ್ಯತ್ಯಯ ಉಂಟಾಗಿದೆ. 22 ವಿಮಾನಗಳು ರದ್ದಾಗಿದ್ದು, 50ಕ್ಕೂ ಹೆಚ್ಚು ವಿಳಂಬವಾಗಿದ್ದು, ಕೊಲ್ಕತ್ತಾ, ದೆಹಲಿ ಸೇರಿದಂತೆ ಹಲವು ನಗರಗಳಿಗೆ ತೆರಳಬೇಕಿದ್ದ ಪ್ರಯಾಣಿಕರು ಏರ್‌ಪೋರ್ಟ್‌ನಲ್ಲಿ ಪರದಾಟ ನಡೆಸಿದ್ದಾರೆ. ಈ ಅಡಚಣೆ ಬುಧವಾರವೂ ಮುಂದುವರಿಯುವ ಸಾಧ್ಯತೆ ಇದೆ. ವಿಮಾನಗಳ ಸಾಫ್ಟ್‌ವೇರ್ ಸಂಬಂಧಿತ ತಾಂತ್ರಿಕ ಕಾರಣಗಳಿಂದಾಗಿ ಕೊಲ್ಕತ್ತಾ, ದೆಹಲಿ, ಮುಂಬೈ, ಡೆಹ್ರಾಡೂನ್, ವಾರಣಾಸಿ, ಅಹಮದಾಬಾದ್, ಪುಣೆ, ಚೆನ್ನೈ , ಭೂಪಾಲ್ ಸೇರಿದಂತೆ ಹಲವು ಪ್ರದೇಶಗಳಿಗೆ ತೆರಳಬೇಕಿದ್ದ ವಿಮಾನಗಳ ಹಾರಾಟದಲ್ಲಿ ವ್ಯತ್ಯಯ ಉಂಟಾಗಿದೆ. ಸರಿಯಾದ ಸಮಯಕ್ಕೆ ವಿಮಾನಗಳು ಹಾರಾಟ ನಡೆಸದ ಕಾರಣ ಏರ್ಪೋರ್ಟ್‌ನಲ್ಲಿ ಪ್ರಯಾಣಿಕರು ಪರದಾಟ ನಡೆಸಿದ್ದಾರೆ. ನಿಗದಿತ ಸಮಯಕ್ಕೆ ಬಂದರೂ ಸರಿಯಾದ ಸಮಯಕ್ಕೆ ನಾವು ಪ್ರಯಾಣಿಸಬೇಕಿದ್ದ ಸ್ಥಳಕ್ಕೆ ತಲುಪಲು ಸಾಧ್ಯವಾಗುತ್ತಿಲ್ಲ ಎಂದು ಕೆಲವರು ಆಕ್ರೋಶ ವ್ಯಕ್ತಪಡಿಸಿದ್ದು, ಇಂದು ಮಾತ್ರವಲ್ಲದೆ ನಾಳೆಯೂ ಕೆಲ ವಿಮಾನಗಳ ಹಾರಾಟದಲ್ಲಿ ವಿಳಂಬವಾಗುವ ಸಾಧ್ಯತೆ ಇದೆ ಎನ್ನಲಾಗಿದೆ.ಬೆಂಗಳೂರಿನಲ್ಲಿ ಕಾಣಿಸಿಕೊಂಡಿದ್ದ ವಿಪರೀತ ಚಳಿಯ ಪರಿಣಾಮ ಪ್ರತಿಕೂಲ ವಾತಾವರಣದಿಂದ ಬೆಂಗಳೂರು ವಿಮಾನ ನಿಲ್ದಾಣದಿಂದ ಸಂಚಾರ ನಡೆಸಬೇಕಿದ್ದ ಸುಮಾರು 81 ವಿಮಾನಗಳ ಹಾರಾಟ ವಿಳಂಬವಾಗಿತ್ತು. ಕೆಲ ವಿಮಾನಗಳು ಕಡಿಮೆ ಅವಧಿಯ ಮಟ್ಟಿಗೆ ವಿಳಂಬವಾದರೆ ಇನ್ನೂ ಕೆಲ ವಿಮಾನಗಳು ಗರಿಷ್ಠ 69 ನಿಮಿಷಗಳವರೆಗೂ ತಡವಾಗಿ ಹಾರಾಟ ಆರಂಭಿಸಿತ್ತು. ನಾಗರಿಕ ವಿಮಾನಯಾನ ನಿರ್ದೇಶನಾಲಯದ ಮಾನದಂಡದ ಪ್ರಕಾರ ವಿಮಾನ ವಿಳಂಬಕ್ಕೆ 15 ನಿಮಿಷಗಳ ಮಿತಿಯಿದ್ದು, ಹಾರಾಟ ನಡೆಸಬೇಕಿದ್ದ 81 ವಿಮಾನಗಳ ಪೈಕಿ 33 ವಿಮಾನಗಳು ಮಾತ್ರ ಈ ಮಿತಿಯನ್ನು ದಾಟಿದ್ದವು. ದಟ್ಟ ಮಂಜಿನ ಕಾರಣಕ್ಕೆ ಮಂಗಳೂರು ಮತ್ತು ದೆಹಲಿಯಿಂದ ಬರುತ್ತಿದ್ದ ವಿಮಾನಗಳ ಸಂಚಾರ ಮಾರ್ಗ ಬದಲಾವಣೆ ಕೂಡ ಮಾಡಲಾಗಿತ್ತು.

ಡಿ.4ರಿಂದ ಅಥ್ಲೆಟಿಕ್ಸ್

ಬೆಂಗಳೂರು: ಕಂಠೀರವ ಹೊರಾಂಗಣ ಕ್ರೀಡಾಂಗಣದಲ್ಲಿ ಶಾಲಾ ಶಿಕ್ಷಣ ಇಲಾಖೆಯಿಂದ ರಾಜ್ಯ ಮಟ್ಟದ 17 ವರ್ಷ ವಯೋಮಿತಿಯ ಬಾಲಕ/ಬಾಲಕಿಯರ ಅಥ್ಲೆಟಿಕ್ಸ್ ಕ್ರೀಡಾಕೂಟ ಡಿ.4 ರಿಂದ 6 ರ ವರೆಗೆ ನಡೆಯಲಿದೆ. ಈ ಕ್ರೀಡಾಕೂಟವನ್ನು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ ಡಿ.4 ರಂದು ಸಂಜೆ 4 ಗಂಟೆಗೆ ಉದ್ಘಾಟಿಸಲಿದ್ದಾರೆ. ಕ್ರೀಡಾ ಕೂಟದಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಸುಮಾರು 3500 ಕ್ರೀಡಾಪಟುಗಳು ಭಾಗವಹಿಸಲಿದ್ದಾರೆ. ಹೆಚ್ಚಿನ ಮಾಹಿತಿಗೆ 9448999326, 98458 80035, 9663884077ಗೆ ಸಂಪರ್ಕಿಸಬಹುದು.

ಸಂಗಾತಿಯನ್ನು ಹತ್ಯೆಗೈದು ಆತ್ಮಹತ್ಯೆ

ಬೆಂಗಳೂರು: ಲಿವಿಂಗ್- ಟು-ಗೆದರ್ (ಸಹ ಜೀವನ)ದಲ್ಲಿದ್ದ ಸಂಗಾತಿಯನ್ನು ಕೊಲೆ ಮಾಡಿ ಪ್ರಿಯಕರನೂ ಆತಹತ್ಯೆ ಮಾಡಿಕೊಂಡಿರುವ ಘಟನೆ ರಾಜಗೋಪಾಲನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಹೈದರಾಬಾದ್ ಮೂಲದ ಗದಗ ಲಲಿತಾ (49) ಎಂಬಾಕೆಯನ್ನು ಕೊಲೆ ಮಾಡಿ ಲಕ್ಷ್ಮಿನಾರಾಯಣ (51) ಎಂಬಾತ ಆತಹತ್ಯೆ ಮಾಡಿಕೊಂಡಿದ್ದಾನೆ.

ಗದಗ ಲಲಿತಾಗೆ ಈಗಾಗಲೇ ಮದುವೆಯಾಗಿ ಮಕ್ಕಳಿದ್ದು, ಕೌಟುಂಬಿಕ ಕಾರಣಕ್ಕೆ ಕುಟುಂಬದಿಂದ ಬೇರೆಯಾಗಿ ನಗರದ ರಬ್ಬರ್ ಕಾರ್ಖಾನೆಯೊಂದರಲ್ಲಿ ಕೆಲಸ ಮಾಡಿಕೊಂಡು ವಾಸವಾಗಿದ್ದರು. ಕೊರಟಗೆರೆ ಮೂಲದ ಲಕ್ಷ್ಮಿನಾರಾಯಣನಿಗೂ ಈಗಾಗಲೇ ಮದುವೆಯಾಗಿ ಮಕ್ಕಳಿದ್ದಾರೆ. ಆತನೂ ಸಹ ಸಂಸಾರ ಬಿಟ್ಟು ಬಂದು ಕಾರ್ಖಾನೆಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ತದ ನಂತರದ ದಿನಗಳಲ್ಲಿ ಇವರಿಬ್ಬರಿಗೂ ಪರಿಚ ಯವಾಗಿದೆ. ಪರಿಚಯ ಸ್ನೇಹಕ್ಕೆ ತಿರುಗಿ ಪ್ರೀತಿಯಾಗಿದೆ. ಇವರಿಬ್ಬರೂ 8 ತಿಂಗಳಿನಿಂದ ದೊಡ್ಡ ಕೈಗಾರಿಕಾ ಪ್ರದೇಶದ ಇಂದಿರಾ ಪ್ರಿಯದರ್ಶಿನಿ ನಗರದಲ್ಲಿ ಬಾಡಿಗೆ ಮನೆ ಮಾಡಿಕೊಂಡು ಸಹ ಜೀವನ ನಡೆಸುತ್ತಿದ್ದರು.

ಪ್ರತಿ ನಿತ್ಯ ಎಂದಿನಂತೆ ಇಬ್ಬರು ಬೆಳಗ್ಗೆ ತಮ್ಮತಮ್ಮ ಕಾರ್ಖಾನೆಗಳಿಗೆ ಕೆಲಸಕ್ಕೆ ಹೋಗುತ್ತಿದ್ದರು. ರಾತ್ರಿ ಇವರಿಬ್ಬರೂ ಮದ್ಯಸೇವಿಸಿದ್ದು, ಅನುಮಾನದ ವಿಚಾರ ಸೇರಿದಂತೆ ಜಗಳವಾಗಿದೆ. ಇದು ಅಕ್ಕಪಕ್ಕದ ಮನೆಯವರಿಗೂ ಕೇಳಿಸಿದೆ. ಇವರಿಬ್ಬರ ಗಲಾಟೆ ವಿಕೋಪಕ್ಕೆ ತಿರುಗಿದಾಗ ಕೋಪದ ಕೈಗೆ ಬುದ್ದಿಕೊಟ್ಟು ಲಲಿತಾ ಧರಿಸಿದ್ದ ವೇಲ್‌ನ್ನು ಕಿತ್ತುಕೊಂಡ ಲಕ್ಷ್ಮಿನಾರಾಯಣ ಅದರಿಂದಲೇ ಆಕೆಯ ಕುತ್ತಿಗೆ ಬಿಗಿದು ಕೊಲೆ ಮಾಡಿದ್ದಾನೆ.

ನಂತರ ಅದೇ ವೇಲ್‌ನಿಂದ ಮನೆಯ ತೀರಿಗೆ ನೇಣು ಬಿಗಿದುಕೊಂಡು ಆತ ಆತಹತ್ಯೆ ಮಾಡಿಕೊಂಡಿದ್ದಾನೆ. ಮಂಗಳವಾರ ಬೆಳಗ್ಗೆ ಇವರ ಮನೆಯ ಬಾಗಿಲು ತೆರೆದಿಲ್ಲ. ರಾತ್ರಿ ಇವರ ಮನೆಯಲ್ಲಿ ಗಲಾಟೆ ಯಾಗಿರುವುದನ್ನು ಕೇಳಿಸಿಕೊಂಡಿದ್ದ ನೆರೆಹೊರೆಯವರಿಗೆ ಅನುಮಾನ ಬಂದು ಅವರ ಮನೆಯ ಬಳಿ ಹೋಗಿ ಕಿಟಕಿ ಮೂಲಕ ನೋಡಿದಾಗ ಇಬ್ಬರು ಸಾವನ್ನಪ್ಪಿರುವುದು ಕಂಡು ತಕ್ಷಣ ಪೊಲೀಸರಿಗೆ ವಿಷಯ ತಿಳಿಸಿದ್ದಾರೆ. ಸ್ಥಳಕ್ಕೆ ಆಗಮಿಸಿದ ಪೊಲೀಸರು, ಬಾಗಿಲು ಒಡೆದು ಒಳಗೆ ಹೋಗಿ ನೋಡಿದಾಗ ಮಹಿಳೆ ಕೊಲೆಯಾಗಿರುವುದು ಕಂಡು ಬಂದಿದೆ.

ನಕಲಿ ಔಷಧಿ ಕೊಟ್ಟು ಟೆಕ್ಕಿಗೆ ವಂಚಿಸಿದ ಆರೋಪಿ ಬಂಧನ

ಬೆಂಗಳೂರು: ಲೈಂಗಿಕ ಸಮಸ್ಯೆಗೆ ಪರಿಹಾರ ನೀಡುವ ನೆಪದಲ್ಲಿ ಸಾಫ್ಟ್‌ವೇರ್ ಎಂಜಿನಿಯರ್‌ಗೆ ನಂಬಿಸಿ 48 ಲಕ್ಷ ರು. ಪಡೆದು ವಂಚಿಸಿದ್ದ ಆರೋಪದ ಮಹಾ ರಾಷ್ಟ್ರದ ಪುಣೆಯ ವಿಜಯ್ ಗುರೂಜಿ ಎಂಬಾ ತನನ್ನು ಜ್ಞಾನಭಾರತಿ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ

ಲೈಂಗಿಕ ಸಮಸ್ಯೆಯಿಂದ ಬಳಲುತ್ತಿದ್ದ ಟೆಕ್ಕಿ ಚಿಕಿತ್ಸೆಗಾಗಿ ಕೆಂಗೇರಿಯ ಆಸ್ಪತ್ರೆಯೊಂದಕ್ಕೆ ಹೋಗಿ ವಾಪಸ್ ಬರುತ್ತಿದ್ದಾಗ ರಸ್ತೆ ಪಕ್ಕದಲ್ಲಿ ಟೆಂಟ್ ಹಾಕಿಕೊಂಡು ಲೈಂಗಿಕ ಸಮಸ್ಯೆಗೆ ಚಿಕಿತ್ಸೆ ಎಂಬ ಬೋರ್ಡ್ ಗಮನಿಸಿ ಟೆಂಟ್ ಒಳಗೆ ಹೋಗಿದ್ದಾರೆ. ಅಲ್ಲಿದ್ದ ವಿಜಯ್ ಗುರೂಜಿಯನ್ನು ಮಾತನಾಡಿಸಿ ತನ್ನ ಸಮಸ್ಯೆ ಹೇಳಿಕೊಂಡಾಗ ಆಯುರ್ವೇದಿಕ್ ಚಿಕಿತ್ಸೆಯಿಂದ ಗುಣವಾಗುತ್ತದೆ ಎಂದು ನಂಬಿಸಲಾಗಿತ್ತು. ಅಲ್ಲದೆ, ಒಂದು ಔಷಧಿಯ ಹೆಸರು ಹೇಳಿ 1 ಗ್ರಾಂ ಗೆ 1.60 ಲಕ್ಷ ರು. ಎಂದು ನಿಗದಿಪಡಿಸಿ ಯಶವಂತಪುರದ ವಿಜಯ ಲಕ್ಷ್ಮಿ ಆಯುರ್ವೇದಿಕ್ ಶಾಪ್‌ನಲ್ಲಿ ಖರೀದಿಸುವಂತೆ ಹೇಳಿದ್ದಾರೆ. ಈ ಔಷಧಿ ಖರೀದಿಸಲು ಯಾರನ್ನು ಜತೆಗೆ ಕರೆದುಕೊಂಡು ಹೋಗಬೇಡಿ, ಆನ್‌ಲೈನ್ ಪೇಮೆಂಟ್ ಮಾಡಬಾರದು ಎಂದು ಷರತ್ತುಗಳನ್ನು ಹಾಕಿದ್ದರಿಂದ ಟೆಕ್ಕಿ ಯಾರನ್ನು ಜೊತೆಗೆ ಕರೆದೊಯ್ಯದೇ ಹಲವಾರು ಬಾರಿ ಆ ಔಷಧಿ ಖರೀದಿಸುತ್ತಾ ಒಟ್ಟು 48 ಲಕ್ಷ ರು. ಖರ್ಚು ಮಾಡಿದ್ದಾರೆ.

ಆದರೆ ತನ್ನ ಸಮಸ್ಯೆಗೆ ಪರಿಹಾರ ಸಿಕ್ಕಿಲ್ಲ. ಬದಲಾಗಿ ಆರೋಗ್ಯ ಹದಗೆಟ್ಟಿದೆ. ತಕ್ಷಣ ಟೆಕ್ಕಿ ಆಸ್ಪತ್ರೆಗೆ ಹೋಗಿ ರಕ್ತ ಪರೀಕ್ಷೆ ಮಾಡಿಸಿದಾಗ ಕಿಡ್ನಿಗೆ ಗಂಭೀರ ಸಮಸ್ಯೆಯಾಗಿರುವುದು ಗೊತ್ತಾಗಿದೆ. ತಾನು ತೆಗೆದುಕೊಳ್ಳುತ್ತಿದ್ದ ಔಷಧಿಯಿಂದಲೇ ಕಿಡ್ನಿಗೆ ಹಾನಿಯಾಗಿದೆ ಎಂದು ವೈದ್ಯರು ತಿಳಿಸಿದ್ದರಿಂದ ಗಾಬರಿಯಾದ ಟೆಕ್ಕಿ ವಾಪಸ್ ಆಯುರ್ವೇದ ಔಷಧಿ ಪಡೆಯಲು ಹೇಳಿದ್ದ ವಿಜಯ್ ಗುರೂಜಿಯನ್ನು ಭೇಟಿ ಮಾಡಿದಾಗ ಟೆಕ್ಕಿಗೆ ಬೆದರಿಕೆ ಹಾಕಿದ್ದನು. ಬಳಿಕ ಕೇಸ್ ದಾಖಲಾಗಿತ್ತು.

ಬೆಂಗಳೂರು ವಿವಿ ಮರಗಳ ಕಡಿತ: ವಿವರ ಸಲ್ಲಿಸಲು ಸೂಚನೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಕ್ಯಾಂಪಸ್ ಆವರಣದಲ್ಲಿ ಎಷ್ಟು ಮರಗಳನ್ನು ಕಡಿಯಲಾಗಿದೆ, ಎಷ್ಟು ಮರಗಳನ್ನು ಸ್ಥಳಾಂತರ ಮಾಡಲಾಗಿದೆ, ಇನ್ನುಳಿದಿರುವ ಮರಗಳ ಸಂಖ್ಯೆ ಎಷ್ಟು ಎಂಬುದಕ್ಕೆ ಸಂಬಂಧಿಸಿದಂತೆ ವಿವರವಾದ ಪ್ರಮಾಣಪತ್ರ ಸಲ್ಲಿಸುವಂತೆ ಹೈಕೋರ್ಟ್ ಬೆಂಗಳೂರು ವಿವಿ ಕುಲಪತಿಗಳಿಗೆ ನಿರ್ದೇಶನ ನೀಡಿದೆ.

ಕ್ಯಾಂಪಸ್‌ನಲ್ಲಿ ವಿವಿಧ ಸಂಸ್ಥೆಗಳಿಗೆ ಭೂಮಿ ಹಂಚಿಕೆ ಮಾಡಿರುವುದನ್ನು ಮತ್ತು ಅವ್ಯಾಹತವಾಗಿ ಮರಗಳನ್ನು ಕತ್ತರಿಸುವುದನ್ನು ಪ್ರಶ್ನಿಸಿ ನಗರದ ಸ್ವಯಂ ಜಾಗೃತಿ ಸೇವಾ ಟ್ರಸ್ಟ್ ಅಧ್ಯಕ್ಷ ಸಿ. ಅಜಯ್ ಕುಮಾರ್ ಹಾಗೂ ಕೋರಮಂಗಲದ ಪಾರ್ವತಿ ಶ್ರೀರಾಮ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ನಡೆಸಿದ್ದ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಮತ್ತು ನ್ಯಾಯಮೂರ್ತಿ ಸಿ.ಎಂ. ಪೂಣಚ್ಚ ಅವರಿದ್ದ ವಿಭಾಗೀಯಪೀಠ, ಈ ಸೂಚನೆ ನೀಡಿ ವಿಚಾರಣೆಯನ್ನು ಮುಂದೂಡಿತು.

ಏನಿದು ಪ್ರಕರಣ?

ಜ್ಞಾನಭಾರತಿ ಕ್ಯಾಂಪಸ್ ಒಟ್ಟು 1,112 ಎಕರೆ ಪ್ರದೇಶದಲ್ಲಿ ವಿಸ್ತರಿಸಿಕೊಂಡಿದೆ. ಅದನ್ನು ನೈಸರ್ಗಿಕ ಭೂಪ್ರದೇಶ ಮತ್ತು ಜೀವವೈವಿಧ್ಯತೆಯ ಸಂರಕ್ಷಣೆಯ ಶೈಕ್ಷಣಿಕ ಹಾಗೂ ಪರಿಸರ ಕ್ಯಾಂಪಸ್ ಎಂದು ಭಾವಿಸಲಾಗಿದೆ. ಬಯೋಪಾರ್ಕ್‌ನಲ್ಲಿ ಔಷಧಿಯ, ಬಿದಿರು, ಚಿಟ್ಟೆ, ಹಣ್ಣು ಸೇರಿ ವಿವಿಧ 16 ಬಗೆಯ ವಲಯಗಳಿವೆ. ಇದು ನಗರದಲ್ಲಿ ಉಳಿದಿರುವ ಕೊನೆಯ ಹಸಿರು ಪ್ರದೇಶವಾಗಿದೆ. ಸಸ್ಯ ಮತ್ತು ಪ್ರಾಣಿ ಸಂಕುಲ, ನೈಸರ್ಗಿಕ ಜಲಮೂಲಗಳನ್ನು ಹೊಂದಿದೆ. ಆದರೆ, ವಿವಿಧ ನಿರ್ಮಾಣ ಯೋಜನೆಗಳ ಹಿನ್ನೆಲೆಯಲ್ಲಿ ಅದು ಅಪಾಯದಲ್ಲಿದೆ. ನೂರಾರು ಮರಗಳನ್ನು ಕಡಿಯುವ ಪ್ರಸ್ತಾವನೆ ಇದೆ. ಹಾಗಾಗಿ, ಯಾವುದೇ ಯೋಜನೆಗಳಿಗೆ ಭೂಮಿ ನೀಡದಂತೆ ನಿರ್ಬಂಧಿಸಬೇಕು ಎಂದು ಅರ್ಜಿಯಲ್ಲಿ ಕೋರಲಾಗಿದೆ

ವಿಚಾರಣೆ ವೇಳೆ ವಿಶ್ವವಿದ್ಯಾಲಯದ ಪರ ವಕೀಲರು, ಕ್ಯಾಂಪಸ್ ಆವರಣದಲ್ಲಿ ವಿವಿಧ ಕಾರಣಗಳಿಗಾಗಿ 138 ಮರಗಳನ್ನು ಕಡಿಯಬೇಕು ಎಂಬುದಾಗಿ ನಿರ್ಧರಿಸಲಾಗಿತ್ತು. ಅದರಲ್ಲಿ ಈಗಾಗಲೆ 137 ಮರಗಳನ್ನು ಕಡಿಯಲಾಗಿದೆ.

54 ಮರಗಳನ್ನು ಸ್ಥಳಾಂತರ ಮಾಡಲು ನಿರ್ಧರಿಸಿದ್ದು, ಈಗಾಗಲೇ 50 ಮರಗಳನ್ನು ಸ್ಥಳಾಂತರ ಮಾಡಲಾಗಿದೆ. ಈ ಘಟನೆ ಹಲವು ದಿನಗಳ ಹಿಂದೆಯೇ ನಡೆದಿದೆ ಎಂದು ಪೀಠಕ್ಕೆ ತಿಳಿಸಿದರು. ವಾದ ಆಲಿಸಿದ ಪೀಠ, ಎಷ್ಟು ಮರಗಳನ್ನು ಕಡಿಯಲಾಗಿದೆ, ಎಷ್ಟು ಮರಗಳನ್ನು ಸ್ಥಳಾಂತರ ಮಾಡಲಾಗಿದೆ ಎಂಬುದಕ್ಕೆ ಸಂಬಂಧಿಸಿದಂತೆ ವಿವರವಾದ ಪ್ರಮಾಣಪತ್ರ ಸಲ್ಲಿಸುವಂತೆ ಸೂಚನೆ ನೀಡಿ ವಿಚಾರಣೆಯನ್ನು ಡಿ.9ಕ್ಕೆ ಮುಂದೂಡಿದೆ.

ಲಾಕಪ್ ಡೆತ್ ಕೇಸ್ ಕಠಿಣ ಕ್ರಮಕ್ಕೆ ಆಗ್ರಹ

ಬೆಂಗಳೂರು: ವಿವೇಕನಗರ ಠಾಣೆ ಪೊಲೀಸ ಠಾಣೆಯಲ್ಲಿ ದಲಿತ ಯುವಕ ದರ್ಶನ್ ಲಾಕ್‌ಅಪ್ ಡೆತ್‌ಯಾಗಿದ್ದು, ಇದಕ್ಕೆ ಕಾರಣವಾದ ಅಧಿಕಾರಿಗಳ ವಿರುದ್ಧ ಕ್ರಮವಹಿಸಬೇಕು ಎಂದು ಮೃತ ದರ್ಶನ್ ಪತ್ನಿ ಅಶ್ವಿನಿ ಅಗ್ರಹಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ದರ್ಶನ್ ವಿರುದ್ಧ ಯಾವುದೇ ಎಫ್‌ಐಆರ್ ಇಲ್ಲದಿದ್ದರೂ ವಿವೇಕನಗರ ಠಾಣೆ ಪೊಲೀಸರು ನ.12 ರಂದು ಬಲವಂತವಾಗಿ ದರ್ಶನನ್ನು ಕರೆದೊಯ್ದು ನಾಲ್ಕು ದಿನ ಅನಧಿಕೃತವಾಗಿ ಕಸ್ಟಡಿಯಲ್ಲಿ ಇರಿಸಿ, ಅಮಾನವೀಯವಾಗಿ ಹಲ್ಲೆ ಮಾಡಿದ್ದಾರೆ. 4 ದಿನಗಳ ನಂತರ ದರ್ಶನ್ ಅವರನ್ನು ಅವರ ತಾಯಿ ಆದಿಲಕ್ಷ್ಮೀ ಮಾಹಿತಿ ಆಧರಿಸಿ ಮದನಾಯಕನಹಳ್ಳಿ ರಿಹಾಬ್ ಕೇಂದ್ರಕ್ಕೆ ಸೇರಿಸಲಾಗಿದ್ದು, ನವೆಂಬರ್ 19 ರಂದು ಅಲ್ಲಿಯೇ ಅವರ ಸಾವು ಸಂಭವಿಸಿದೆ. ಲಾಕಪ್ ಡೆತ್ ಸಂಬಂಧ ಸಿಐಡಿ ಪೊಲೀಸರಿಂದ ತನಿಖೆ ವಿಚಾರ ಮಾಡುವುದು ನಮಗೆ ಸಹಮತವಿಲ್ಲ, ನ್ಯಾಯಾಂಗ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು.

ಭಿಕ್ಷಾಟನೆ ಉದ್ದೇಶಕ್ಕೆ ಮಗುವಿನ ಕಿಡ್ನಾಪ್: ಮಹಿಳೆಗೆ ಜಾಮೀನು

ಬೆಂಗಳೂರು: ಭಿಕ್ಷಾಟನೆ ಮಾಡುವುದಕ್ಕೆ ಎರಡು ವರ್ಷದ ಹೆಣ್ಣು ಮಗುವನ್ನು ಅಪಹರಿಸಿದ ಆರೋಪದ ಮೇಲೆ ಬಂಧನಕ್ಕೆ ಒಳಗಾಗಿ ಒಂದು ವರ್ಷದಿಂದ ಜೈಲಿನಲ್ಲಿದ್ದ ಭಿಕ್ಷುಕಿಗೆ ಹೈಕೋರ್ಟ್ ಜಾಮೀನು ಮಂಜೂರು ಮಾಡಿದೆ.

ಪ್ರಕರಣ ಸಂಬಂಧ ಜಾಮೀನು ಕೋರಿ ಮಂಡ್ಯ ಜಿಲ್ಲೆಯ ಹೊಸಹಳ್ಳಿ ಗ್ರಾಮದ ರಾಧಾ ಸಲ್ಲಿಸಿದ್ದ ಅರ್ಜಿ ಪುರಸ್ಕರಿಸಿದ ನ್ಯಾಯಮೂರ್ತಿ ಶಿವಶಂಕರ ಅಮರಣ್ಣನವರ್ ಪೀಠ ಈ ಆದೇಶ ಮಾಡಿದೆ. ಪ್ರಕರಣ ಸಂಬಂಧ ಮಗುವಿನ ಅಜ್ಜಿ ಸರೋಜಮ್ಮ ಚಾಮರಾಜನಗರ ಟೌನ್ ಪೊಲೀಸ್ ಠಾಣೆಗೆ 2024ರ ನ.14ರಂದು ನಾಪತ್ತೆ ದೂರು ನೀಡಿದ್ದರು. ನನ್ನ ಮಗಳು ಅನಿತಾ ಎರಡು ವರ್ಷದ ಹೆಣ್ಣು ಮಗುವಿನೊಂದಿಗೆ 2024ರ ನ.8ರಂದು ಕಾಣೆಯಾಗಿದ್ದಾರೆ. ಅನಿತಾ ಮಾನಸಿಕವಾಗಿ ಅಸ್ವಸ್ಥಳು. ನ.15ರಂದು ಅನಿತಾ ಪತ್ತೆಯಾಗಿದ್ದು, ಭಿಕ್ಷಾಟನೆಗಾಗಿ ತನ್ನ ಮಗುವನ್ನು ಒಂದು ಮಹಿಳೆ ತೆಗೆದುಕೊಂಡು ಹೋಗಿದ್ದು, ವಾಪಸ್ ಕೊಟ್ಟಿಲ್ಲ ಎಂದು ದೂರಿನಲ್ಲಿ ಸರೋಜಮ್ಮ ಉಲ್ಲೇಖಿಸಿದ್ದಾರೆ. ಇನ್ನೂ ಅರ್ಜಿದಾರೆ 2024ರ ನ.19ರಂದು ಮೈಸೂರು ರೈಲ್ವೇ ನಿಲ್ದಾಣದಲ್ಲಿ ಮಗುವಿನೊಂದಿಗೆ ಕಂಡುಬಂದಿರುವುದಾಗಿ ದಾಖಲೆಗಳಲ್ಲಿ ವಿವರಿಸಲಾಗಿದೆ. ಅಲ್ಲದೇ, ಆರೋಪಿ ಮಹಿಳೆಯಾಗಿದ್ದು, ಭಿಕ್ಷುಕಿ ಎಂದು ಹೇಳಲಾಗಿದೆ. ಆಕೆ 2024ರ ನ.19ರಿಂದ ಜೈಲಿನಲ್ಲಿದ್ದಾರೆ. ಈಗಾಗಲೇ ಪ್ರಕರಣ ಸಂಬಂಧ ದೋಷಾರೋಪ ಪಟ್ಟಿಯೂ ಸಲ್ಲಿಕೆಯಾಗಿದೆ. ಹೆಚ್ಚಿನ ತನಿಖೆ ಆಕೆ ಅಗತ್ಯವಿಲ್ಲ, ಹಾಗಾಗಿ ಜಾಮೀನು ನೀಡಬಹುದಾಗಿದೆ ಎಂದು ತಿಳಿಸಿದ ನ್ಯಾಯಪೀಠ, ಅರ್ಜಿದಾರೆ 1 ಲಕ್ಷ ರು. ವೈಯಕ್ತಿಕ ಬಾಂಡ್ ಒದಗಿಸಬೇಕು. ವಿಚಾರಣಾ ನ್ಯಾಯಾಲಯದ ವಿಚಾರಣೆಗೆ ತಪ್ಪದೇ ಹಾಜರಾಗಬೇಕು ಎಂದು ನಿರ್ದೇಶಿಸಿದೆ.

ಅರ್ಜಿದಾರರ ಪರ ವಕೀಲರು. ರಾಧಾ ಭಿಕ್ಷುಕಿಯಾಗಿದ್ದು, ಮಗುವನ್ನು ಅಪಹರಿಸಿಲ್ಲ. ಬದಲಾಗಿ ಮಾನಸಿಕವಾಗಿ ಅಸ್ವಸ್ಥಳಾಗಿರುವ ಮಗುವಿನ ತಾಯಿಯೇ ಮಗುವನ್ನು ಅರ್ಜಿದಾರೆಗೆ ನೀಡಿದ್ದಾರೆ. ಈಗಾಗಲೇ ಪೊಲೀಸರು ತನಿಖೆ ಪೂರ್ಣಗೊಳಿಸಿ, ಅರ್ಜಿದಾರೆ ಮೇಲೆ ಅಧೀನ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ. ಆಕೆ ನ್ಯಾಯಾಂಗ ಬಂಧನದಲ್ಲಿದ್ದಾರೆ. ಅರ್ಜಿದಾರೆ ಮಹಿಳೆಯಾಗಿದ್ದು, ಮುಂದಿನ ತನಿಖೆಗೆ ಆಕೆಯ ಬಂಧನ ಅಗತ್ಯವಿಲ್ಲದ ಕಾರಣ ಪರಿಗಣಿಸಿ ಜಾಮೀನು ನೀಡಬೇಕು ಎಂದು ಕೋರಿದ್ದರು.

ಆಧ್ಯಾ ಫೌಂಡೇಶನ್ ವತಿಯಿಂದ ನಗರದ ರವೀಂದ್ರ ಕಲಾಕ್ಷೇತ್ರದ ಕನ್ನಡ ಭವನದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿರುವ ಗಣ್ಯರಿಗೆ ರಾಜ್ಯಮಟ್ಟದ ಕರ್ನಾಟಕ ಸೇವಾ ರತ್ನ 2025 ಪ್ರಶಸ್ತಿ ಪ್ರದಾನ ಮಾಡಲಾಯಿತು. ಈ ವೇಳೆ ಶಶಿಧರ್ ಕೋಟೆ, ಮಮತಾ ದೇವರಾಜ್, ಭಾರ್ಗವ್ ಹಾಗೂ ಡಾ. ಸಂಗೀತಾ ಹೊಳ್ಳಾ ಉಪಸ್ಥಿತರಿದ್ದರು.

ಮಾನ್ಯ ಗೌರವಾನ್ವಿತ 3ನೇ ಅಪರ ಸಿವಿಲ್ ನ್ಯಾಯಾಧೀಶರ (ಕಿರಿಯ ಶ್ರೇಣಿ ವಿಭಾಗ) ಮತ್ತು ಜೆ.ಎಂ.ಎಫ್‌ಸಿ ನ್ಯಾಯಾಲಯ ಕನಕಪುರ

ಸಿ.ಮಿಸ್. ನಂ: 813/2025

ಅರ್ಜಿದಾರರು: ಶ್ರೀ. ಎಂ.ಮುನಿಯಪ್ಪ ಬಿನ್ ಲೇಟ್ ಮುನಿವೆಂಕಟಯ್ಯ, ವಯಸ್ಸು 77 ವರ್ಷ ವಾಸ, ನಂ. 260,ಜಿ. ಫ್ಲೋರ್, 3ನೇ ಮುಖ್ಯ ರಸ್ತೆ, 1ನೇ ಬ್ಲಾಕ್, ರಾಮಕೃಷ್ಣ ನಗರ. ಮೈಸೂರ್, ಮೈಸೂರ್ ಜಿಲ್ಲೆ. ಮತ್ತು ಇತರರು.

V/S

ಪ್ರತಿ ಅರ್ಜಿದಾರರು: ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ನಗರಸಭೆ ಕನಕಪುರ ತಾಲ್ಲೂಕು ಕನಕಪುರ, ಬೆಂಗಳೂರು ದಕ್ಷಿಣ ಜಿಲ್ಲೆ.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1ನೇ ಅರ್ಜಿದಾರರ ತಾಯಿ, 2ನೇ ಅರ್ಜಿದಾರರ ಅತ್ತೆ, 3 ಮತ್ತು 4ನೇ ಅರ್ಜಿದಾರರ ಅಜ್ಜಿಯವರಾದ ಶ್ರೀಮತಿ. ಕೆಂಚಮ್ಮ ಕೋಂ ಲೇಟ್ ಮುನಿವೆಂಕಟಯ್ಯ ರವರು ದಿನಾಂಕ: 09.03.2003 ರಂದು ಬೆಂಗಳೂರು ದಕ್ಷಿಣ ಜಿಲ್ಲೆ, ಕನಕಪುರ ತಾಲ್ಲೂಕು, ಕನಕಪುರ ಟೌನ್, ಮಳಗಾಳು ಗ್ರಾಮದಲ್ಲಿ ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನಿಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 28/1/2026ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.

ದಿನಾಂಕ: 28 ನೇ ನವೆಂಬರ್ 2025 ರಂದು ನನ್ನ ಸ್ವಹಸ್ತಾಕ್ಷರ ಮತ್ತು ನ್ಯಾಯಾಲಯದ ಮೊಹರಿನಿಂದ ನೀಡಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
3ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಕನಕಪುರ
ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ಆರ್.ಮಹೇಶ್‌ಚಂದ್ರ ಗುರು
ವಕೀಲರು, ಕನಕಪುರ
ಸ್ಥಳ : ಕನಕಪುರ

ಕರ್ಣಾಟಕ ಬ್ಯಾಂಕ್ ಲಿಮಿಟೆಡ್
ನಿಮ್ಮ ಕುಟುಂಬದ ಬ್ಯಾಂಕ್ ಭಾರತದಾದ್ಯಂತ

ಶಾಖೆ : ಹೊಸಕೋಟೆ, ಸರ್ ಎಂ ವಿ ಎಕ್ಸ್‌ಟೆನ್ಷನ್ ಕಾಲೇಜು ರಸ್ತೆ, ಹೊಸಕೋಟೆ – 562114, ಬೆಂಗಳೂರು ಗ್ರಾಮೀಣ ಜಿಲ್ಲೆ. ದೂರವಾಣಿ : 080–27933555,
ಇ–ಮೇಲ್: hosakote@ktkbank.com, CIN: L85110KA1924PLC001128

ವಾಹನ ಮಾರಾಟ ಹರಾಜು ಸೂಚನೆ

ಈ ಕೆಳಗಿನ ವಾಹನಗಳನ್ನು "ಎಲ್ಲಿ ಹೇಗಿದೆಯೋ ಹಾಗೇ" ಮತ್ತು " ಅದು ಯಾವ ಸ್ಥಿತಿಯಲ್ಲಿದೆಯೋ ಹಾಗೇ" ವಶಪಡಿಸಿಕೊಂಡು **ದಿನಾಂಕ: 23.12.2025** ರಂದು ಮಧ್ಯಾಹ್ನ **3.30** ಗಂಟೆಗೆ ಮತ್ತು ಮೊಹರು ಮಾಡಿದ ಟೆಂಡರ್‌ಗಳನ್ನು ಆಹ್ವಾನಿಸುವ ಮೂಲಕ ಹರಾಜಿನಲ್ಲಿ ಮಾರಾಟ ಮಾಡಲಾಗುತ್ತದೆ. **ಹರಾಜಿನ ಸ್ಥಳ: ಕರ್ಣಾಟಕ ಬ್ಯಾಂಕ್ ಲಿಮಿಟೆಡ್, ಹೊಸಕೋಟೆ ಶಾಖೆ.**

ಮಾಲೀಕರ ಹೆಸರು	ವಾಹನದ ವಿಧ	ನೋಂದಣಿ ನಂ.	ಮಾದರಿ
ಸೈಯದ್ ವಸೀಮ್ ಸೋ. ಸೈಯದ್ ಗೌಸ್	TATA ULTRA 1918 T 5L BSVI TRUCK	KA 53 AA 6562	Manufacturing Date: 06/2022 Registration Date:01.08.2022

ಷರತ್ತು ಮತ್ತು ನಿಬಂಧನೆಗಳು: ಆಸಕ್ತಿಯುಳ್ಳ ಖರೀದಿದಾರರು/ಬಿಡ್‌ದಾರರು ವಾಹನಗಳ ಪರಶೀಲನೆಗಾಗಿ **ಶ್ರೀ ಮಂಜುನಾಥ ಸೀಜಿಂಗ್ & ರಿಕವರಿ, ನಂ.35, ನರಸಮ್ಮ ಲೇಔಟ್, ಕರೆಕಲ್ಲಹಳ್ಳಿ, ವಿದ್ಯಾ ನಗರ, ಗೌರಿಬಿದನೂರು–561208, ಮೊಬೈಲ್ ಸಂಖ್ಯೆ : 9845698521/9538284190** ಇವರನ್ನು ಕಛೇರಿಯ ಸಮಯದಲ್ಲಿ ಯಾವುದೇ ದಿನದಂದು ಭೇಟಿ ಮಾಡಬಹುದು. ವಾಹನವನ್ನು ಮೀಸಲು ಬೆಲೆ **ರೂ. 12,50,000/– ಕ್ಕಿಂತ** ಕಡಿಮೆ ಮಾರಾಟ ಮಾಡಲಾಗುವುದಿಲ್ಲ. ಮೀಸಲು ಬೆಲೆ, ಸ್ಥಳದಲ್ಲಿ ಯಾರು ಹೆಚ್ಚು ಬಿಡ್ ಮಾಡುವರೊ ಅಂತಹವರಿಗೆ ವಾಹನವನ್ನು ಮಾರಾಟ ಮಾಡಲಾಗುವುದು ಮತ್ತು ವಾಹನವನ್ನು ತಕ್ಷಣವೇ ತೆಗೆದುಕೊಳ್ಳಬೇಕಾಗುತ್ತದೆ. ಯಶಸ್ವಿ ಬಿಡ್‌ದಾರರು ಪೂರ್ಣ ಬಿಡ್ ಮೊತ್ತವನ್ನು ಸ್ಥಳದಲ್ಲಿ ಪಾವತಿಸಬೇಕು ಮತ್ತು ತಕ್ಷಣವೇ ವಾಹನವನ್ನು ತಮ್ಮ ಸುಪರ್ದಿಗೆ ತೆಗೆದುಕೊಳ್ಳುವುದು. ಹಾಗೆಯೇ ಬ್ಯಾಂಕ್ ಹರಾಜನ್ನು ರದ್ದು ಮಾಡುವ ಅಥವಾ ಮುಂದೂಡುವ ಹಕ್ಕನ್ನು ಹೊಂದಿರುತ್ತದೆ ಅಥವಾ ಯಾವುದೇ ಕಾರಣವನ್ನು ನೀಡದೆ ಅಧಿಕ ಬಿಡ್ ಅನ್ನು ಸ್ವೀಕರಿಸುವುದಿಲ್ಲ. ವಾಹನವನ್ನು **"ಎಲ್ಲಿ ಹೇಗಿದೆಯೋ ಹಾಗೆಯೇ ಮತ್ತು ಎಲ್ಲಿ ಏನಿದೆಯೋ ಹಾಗೆಯೇ"** ಆಧಾರದಲ್ಲಿ ಹರಾಜು ಮಾಡುತ್ತದೆ. ಬ್ಯಾಂಕಿನ ತೀರ್ಮಾನವೇ ಅಂತಿಮ ಮತ್ತು ಎಲ್ಲಾ ಸಮ್ಮತಿಯ ಮೇಲೆ ಬದ್ಧವಾಗಿರುತ್ತವೆ.

ದಿನಾಂಕ: 02.12.2025 — ಸಹಿ/– ಅಧಿಕೃತ ಅಧಿಕಾರಿ,
ಸ್ಥಳ : ಹೊಸಕೋಟೆ — ಕರ್ಣಾಟಕ ಬ್ಯಾಂಕ್ ಲಿಮಿಟೆಡ್

EMMVEE

ಎಂವೀ ಫೋಟೋವೋಲ್ಟಾಯಿಕ್ ಪವರ್ ಲಿಮಿಟೆಡ್
(ಹಿಂದೆ ಎಂವೀ ಫೋಟೊವೋಲ್ಟಾಯಿಕ್ ಪವರ್ ಪ್ರೈವೇಟ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)
ನೋಂದಾಯಿತ ಕಚೇರಿ: 13/1, ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆ, ಬೆಟ್ಟಹಲಸೂರು ಅಂಚೆ, ಬೆಂಗಳೂರು – 562 157, ಭಾರತ
ದೂರವಾಣಿ: +91 80 2217 4328/33 । **CIN:** U26101KA2007PLC042197
ಇಮೇಲ್ ಐಡಿ: investorrelations@emmvee.in । **ವೆಬ್‌ಸೈಟ್:** www.emmveepv.com

ಅಂಚೆ ಮತಪತ್ರದ ಸೂಚನೆ

ಕಂಪನಿಗಳ ಕಾಯ್ದೆ, 2013 ("ಕಾಯ್ದೆ") ನ ಸೆಕ್ಷನ್ 108, 110 ಮತ್ತು ಇತರ ಅನ್ವಯವಾಗುವ ನಿಬಂಧನೆಗಳು, ಯಾವುದಾದರೂ ಇದ್ದರೆ, ಆ ನಿಬಂಧನೆಗಳ ಪ್ರಕಾರ, ತಿದ್ದುಪಡಿ ಮಾಡಿದಂತೆ, ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014 ("ನಿಯಮಗಳು") ನಿಯಮ 20 ಮತ್ತು ನಿಯಮ 22 ರೊಂದಿಗೆ ಓದಿದಂತೆ, ಭಾರತೀಯ ಭದ್ರತಾ ಪತ್ರಗಳು ಮತ್ತು ವಿನಿಮಯ ಮಂಡಳಿಯ (ಪಟ್ಟಿ ಮಾಡುವ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವಿಕೆ ಅವಶ್ಯಕತೆಗಳು) ನಿಯಮಗಳು, 2015 ("ಪಟ್ಟಿ ಮಾಡುವ ನಿಯಮಗಳು") ನ ನಿಯಮ 44 ಮತ್ತು ಸಾಮಾನ್ಯ ಸುತ್ತೋಲೆ ಸಂಖ್ಯೆ 14/2020, ಏಪ್ರಿಲ್ 08, 2020, ಏಪ್ರಿಲ್ 17/2020, ಏಪ್ರಿಲ್ 13, 2020, 09/2024, ಸೆಪ್ಟೆಂಬರ್ 19, 2024 ರ ಸಾಮಾನ್ಯ ಸುತ್ತೋಲೆ ಸಂಖ್ಯೆ 14/2020 ರ ಪ್ರಕಾರ ಮತ್ತು ಅಕ್ಟೋಬರ್ 07, 2023 ರ ದಿನಾಂಕದ ಸೆಬಿ ಸುತ್ತೋಲೆ ಸಂಖ್ಯೆ SEBI/HO/CFD/CFD-PoD-2/P/CIR/2023/167 ಮತ್ತು ಅಕ್ಟೋಬರ್ 3, 2024 ರ ದಿನಾಂಕದ SEBI/HO/CFD/CFD-PoD-2/P/CIR/2024/133 ರೊಂದಿಗೆ ಓದಲಾದ ಇತರ ಸಂಬಂಧಿತ ಸುತ್ತೋಲೆಗಳಂತೆ ಕೆಳಗೆ ಸೂಚಿಸಲಾದ ನಿರ್ಣಯಗಳನ್ನು ಕಂಪನಿಯ ಸದಸ್ಯರು ಅಂಚೆ ಮತಪತ್ರದ ಮೂಲಕ, ರಿಮೋಟ್ ಇ-ಮತದಾನ ("ಇ-ಮತದಾನ") ಪ್ರಕ್ರಿಯೆಯ ಮೂಲಕ ಮಾತ್ರ ಪರಿಗಣಿಸಲು ಪ್ರಸ್ತಾಪಿಸಲಾಗಿದೆ ಎಂದು **ಎಂವೀ ಫೋಟೊವೋಲ್ಟಾಯಿಕ್ ಪವರ್ ಲಿಮಿಟೆಡ್** (ಹಿಂದೆ ಎಂವೀ ಫೋಟೊವೋಲ್ಟಾಯಿಕ್ ಪವರ್ ಪ್ರೈವೇಟ್ ಲಿಮಿಟೆಡ್) ಸದಸ್ಯರಿಗೆ ಸೂಚನೆ ನೀಡಲಾಗಿದೆ.

ಕ್ರ.ಸಂ.	ನಡಾವಳಿಯ ವಿವರ	ನಡಾವಳಿಯ ಸ್ವರೂಪ
1.	ನೌಕರರ ಸ್ಟಾಕ್ ಆಯ್ಕೆ ಯೋಜನೆ 2025 ರ ಅನುಮೋದನೆ (``ESOS-2025")	ವಿಶೇಷ
2.	ಕಂಪನಿಯ ಅಂಗಸಂಸ್ಥೆ ಕಂಪನಿಗಳ ಉದ್ಯೋಗಿಗಳಿಗೆ ಉದ್ಯೋಗಿ ಸ್ಟಾಕ್ ಆಯ್ಕೆ ಯೋಜನೆ 2025 ರ ಪ್ರಯೋಜನಗಳ ವಿಸ್ತರಣೆಯ ಅನುಮೋದನೆ.	

ಡೆಪಾಸಿಟರಿಗಳಲ್ಲಿ ತಮ್ಮ ಇ-ಮೇಲ್ ಐಡಿಯನ್ನು ನೋಂದಾಯಿಸಿದ ಲಾಭದಾಯಕ ಮಾಲೀಕರ ಪಟ್ಟಿಯಲ್ಲಿ ಯಾವ ಸದಸ್ಯರ ಹೆಸರು ಶುಕ್ರವಾರ, ನವೆಂಬರ್ 28, 2025 ("ಕಟ್ ಆಫ್ ದಿನಾಂಕ") ರವರೆಗೆ ಕಾಣಿಸಿಕೊಳ್ಳುತ್ತದೆಯೋ ಅಂಥಹ ಸದಸ್ಯರಿಗೆ ಅಂಚೆ ಮತಪತ್ರ ಸೂಚನೆ ("ಸೂಚನೆ") ಯನ್ನು ಕಳುಹಿಸಕೊಡುವ ಪ್ರಕ್ರಿಯೆಯನ್ನು ಕಂಪನಿಯು ಶುಕ್ರವಾರ, ನವೆಂಬರ್ 28, 2025**ರಂದು** ಮುಕ್ತಾಯಗೊಳಿಸಿದೆ

ಸದಸ್ಯರ ಮತದಾನದ ಹಕ್ಕುಗಳನ್ನು ಕಟ್–ಆಫ್ ದಿನಾಂಕದಂದು ಅವರು ಹೊಂದಿರುವ ಕಂಪನಿಯ ಈಕ್ವಿಟಿ ಷೇರುಗಳ ಆಧಾರದ ಮೇಲೆ ಲೆಕ್ಕಹಾಕಲಾಗುತ್ತದೆ ಮತ್ತು ಕಟ್–ಆಫ್ ದಿನಾಂಕದಂದು ಸದಸ್ಯರಲ್ಲದ ಯಾವುದೇ ವ್ಯಕ್ತಿಯು ಸೂಚನೆಯನ್ನು ಮಾಹಿತಿ ಉದ್ದೇಶಕ್ಕಾಗಿ ಮಾತ್ರ ಪರಿಗಣಿಸಬೇಕು. ಸದಸ್ಯರ ಒಪ್ಪಿಗೆ ಅಥವಾ ಭಿನ್ನಾಭಿಪ್ರಾಯದ ಸಂವಹನವು ರಿಮೋಟ್ ಇ–ವೋಟಿಂಗ್ ವ್ಯವಸ್ಥೆಯ ಮೂಲಕ ಮಾತ್ರ ನಡೆಯುತ್ತದೆ.

ಕಂಪನಿಯು ತನ್ನ ಎಲ್ಲಾ ಸದಸ್ಯರಿಗೆ ಇ–ಮತದಾನ ಸೌಲಭ್ಯವನ್ನು ಒದಗಿಸಲು ನ್ಯಾಷನಲ್ ಸೆಕ್ಯುರಿಟೀಸ್ ಡಿಪಾಸಿಟರಿ ಲಿಮಿಟೆಡ್ ("ಎನ್‌ಎಸ್‌ಡಿಎಲ್") ನ ಸೇವೆಗಳನ್ನು ಬಳಸಿಕೊಂಡಿದೆ. ಇ–ಮತದಾನವು ಬುಧವಾರ, ಡಿಸೆಂಬರ್ 03, 2025, ಬೆಳಿಗ್ಗೆ 9:00 (ಭಾ.ಕಾ.) ಕ್ಕೆ ಪ್ರಾರಂಭವಾಗಿ ಗುರುವಾರ, ಜನವರಿ 01, 2026 ರಂದು ಸಂಜೆ 5.00 (ಭಾ.ಕಾ.) ಕ್ಕೆ ಕೊನೆಗೊಳ್ಳುತ್ತದೆ. ಅದರ ನಂತರ ಎನ್‌ಎಸ್‌ಡಿಎಲ್ ಇ–ಮತದಾನ ಸೌಲಭ್ಯವನ್ನು ನಿಷ್ಕ್ರಿಯಗೊಳಿಸುತ್ತದೆ.

ಸೂಚನೆಯ ಪ್ರತಿಯನ್ನು ಕಂಪನಿಯ ವೆಬ್‌ಸೈಟ್ (www.emmvee.in) ಮತ್ತು ಇ–ವೋಟಿಂಗ್ ಸೇವಾ ಪೂರೈಕೆದಾರ– ಎನ್‌ಎಸ್‌ಡಿಎಲ್ ನ ವೆಬ್‌ಸೈಟ್ www.evoting.nsdl.com ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಕಂಪನಿಯ ಈಕ್ವಿಟಿ ಷೇರುಗಳನ್ನು ಪಟ್ಟಿ ಮಾಡಲಾದ ಸ್ಟಾಕ್ ಎಕ್ಸ್‌ಚೇಂಜ್‌ಗಳು – ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ (www.nseindia.com) ಮತ್ತು ಬಿಎಸ್‌ಇ ಲಿಮಿಟೆಡ್ (www.bseindia.com) ವೆಬ್‌ಸೈಟ್‌ಗಳಲ್ಲಿಯೂ ಪ್ರದರ್ಶಿಸಲಾಗುತ್ತದೆ.

ಕಂಪನಿಯು ಸಿಎಸ್ ಪ್ರಮೋದ್ ಎಸ್ ಎಂ (FCS: 7834 COP No: 13784) ತಪ್ಪಿದಲ್ಲಿ ಬಿಎಂಪಿ & ಕೊ ಎಲ್‌ಎಲ್‌ಪಿ, ಬೆಂಗಳೂರು ಇದರ ಪಾಲುದಾರರಾದ ಸಿಎಸ್ ಬಿಸ್ವಜಿತ್ ಘೋಶ್ ಅಥವಾ (FCS: 8750 COP No : 8239) ಅವರನ್ನು ಇ–ವೋಟಿಂಗ್ ಪ್ರಕ್ರಿಯೆಗೆ ಮತ್ತು ಮತದಾನದ ಫಲಿತಾಂಶಗಳ ಕುರಿತು ಪರಿಶೀಲಕರ ವರದಿಯನ್ನು ನೀಡಲು ಪರಿಶೀಲಕರನ್ನಾಗಿ ನೇಮಿಸಿದೆ. ಇ–ವೋಟಿಂಗ್ ಮುಕ್ತಾಯ ದಿನಾಂಕದ ನಂತರ, ಮತದಾನದ ಫಲಿತಾಂಶಗಳನ್ನು ಜನವರಿ 05, 2026 (ಸೋಮವಾರ) ಅಥವಾ ಅದಕ್ಕೂ ಮೊದಲು ಪ್ರಕಟಿಸಲಾಗುತ್ತದೆ. ಫಲಿತಾಂಶಗಳನ್ನು ಸ್ಟಾಕ್ ಎಕ್ ಚೇಂಜ್‌ಗಳಿಗೆ ತಿಳಿಸಲಾಗುತ್ತದೆ ಮತ್ತು ಕಂಪನಿಯ ವೆಬ್‌ಸೈಟ್‌ನಲ್ಲಿ ಮತ್ತು ಎನ್‌ಎಸ್‌ಡಿಎಲ್ ವೆಬ್‌ಸೈಟ್‌ನಲ್ಲಿ ಸಹ ಪೋಸ್ಟ್ ಮಾಡಲಾಗುತ್ತದೆ.

ತಮ್ಮ ಡೆಪಾಸಿಟರಿ ಪಾರ್ಟಿಸಿಪೆಂಟ್ಸ್ ಜೊತೆ ಇ–ಮೇಲ್ ವಿಳಾಸವನ್ನು ನೋಂದಾಯಿಸದ ಸದಸ್ಯರು ಮತ್ತು ಸೂಚನೆಯ ಎಲೆಕ್ಟ್ರಾನಿಕ್ ಪ್ರತಿಯನ್ನು ಪಡೆಯಲು ಬಯಸಿದರೆ, ಅವರು ತಮ್ಮ ವಿನಂತಿಯನ್ನು ಕಂಪನಿಯ ರಿಜಿಸ್ಟ್ರಾರ್ ಮತ್ತು ಶೇರ್ ಟ್ರಾನ್ಸ್‌ಫರ್ ಏಜೆಂಟ್ – ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್‌ಗೆ einward.ris@kfintech.com ನಲ್ಲಿ ಅಥವಾ ಕಂಪನಿಗೆ investorrelations@emmvee.in ನಲ್ಲಿ ಕಳುಹಿಸಬಹುದು. ಇದಲ್ಲದೆ, ಸದಸ್ಯರು ತಮ್ಮ ಇ–ಮೇಲ್ ವಿಳಾಸಗಳನ್ನು ಸಂಬಂಧಪಟ್ಟ ಡೆಪಾಸಿಟರಿ ಪಾರ್ಟಿಸಿಪೆಂಟ್ಸ್ ರೊಂದಿಗೆ ನೋಂದಾಯಿಸಲು ವಿನಂತಿಸಲಾಗಿದೆ.

ಇ–ಮತದಾನಕ್ಕೆ ಸಂಬಂಧಿಸಿದ ಯಾವುದೇ ಪ್ರಶ್ನೆಗಳು/ಕುಂದುಕೊರತೆಗಳಿಗಾಗಿ, ದಯವಿಟ್ಟು www.evoting.nsdl.com ನಲ್ಲಿ 'ಡೌನ್‌ಲೋಡ್' ವಿಭಾಗದ ಅಡಿಯಲ್ಲಿ ಲಭ್ಯವಿರುವ 'ಸದಸ್ಯರಿಗಾಗಿ ಬಳಕೆದಾರ ಕೈಪಿಡಿ'ಯನ್ನು ನೋಡಿ. ಸದಸ್ಯರು ಎನ್‌ಎಸ್‌ಡಿಎಲ್ ಅನ್ನು ಸಹ ಸಂಪರ್ಕಿಸಬಹುದು

(ದೂ.022–4886 7000), ಇ–ಮೇಲ್.: evoting@nsdl.com ಅಥವಾ ಕೆಳಗೆ ಸಹಿ ಮಾಡಲಾದ ದೂರವಾಣಿ ಸಂಖ್ಯೆ: 080 – 22174524, ಇ–ಮೇಲ್: investorrelations@emmvee.in.

ಎಂವೀ ಫೋಟೊವೋಲ್ಟಾಯಿಕ್ ಪವರ್ ಲಿಮಿಟೆಡ್ ಗಾಗಿ
(ಹಿಂದೆ ಎಮ್ಮೀ ಫೋಟೊವೋಲ್ಟಾಯಿಕ್ ಪವರ್ ಪ್ರೈವೇಟ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)
ಸಹಿ/–
ಶೈಲೇಶ ಬಾರ್ವೆ
ಕಂಪನಿ ಕಾರ್ಯದರ್ಶಿ ಮತ್ತು ಕಾಂಪ್ಲಯನ್ಸ್ ಅಧಿಕಾರಿ
ಸದಸ್ಯತ್ವ ಸಂಖ್ಯೆ ಎ50601

ಸ್ಥಳ: ಬೆಂಗಳೂರು
ದಿನಾಂಕ: ಡಿಸೆಂಬರ್ 02, 2025

পাবলিক নোটিশ

এই মর্মে সর্বসাধারণ ও আর্থিক প্রতিষ্ঠানের অবগতির জন্য জানানো যাচ্ছে যে, আমি, রাজেশ কুমার যাদব, উপরে বর্ণিত অফিস প্রাঙ্গণটি — ১৬৪ (প্রথম তলা), গগনাঞ্চল, ৩৭ ড. অবনী দত্ত রোড, সালকিয়া, হাওড়া-৭১১১০৬ — এর একমাত্র ও বৈধ মালিক। আমি উক্ত সম্পত্তি বিক্রির ইচ্ছা প্রকাশ করছি। এই সম্পত্তি সম্পর্কে যদি কোনো ব্যক্তি বা প্রতিষ্ঠান কোনো দাবি, আপত্তি বা স্বার্থ রাখেন, তবে তারা বৈধ প্রমাণসহ এই বিজ্ঞপ্তি প্রকাশের তারিখ থেকে ১৫ দিনের মধ্যে আমার সঙ্গে যোগাযোগ করার জন্য অনুরোধ করা হচ্ছে। উল্লিখিত সময়সীমার মধ্যে কোনো আপত্তি না পাওয়া গেলে, বিক্রয় প্রক্রিয়া কোনো অতিরিক্ত নোটিশ ছাড়াই এগিয়ে নেওয়া হবে।

তারিখ: ০৩-১২-২৫
স্থান: কলকাতা **নাম: রাজেশ কুমার যাদব**
যোগাযোগ নম্বর: ৯০০৭৫৭৮৬৩৮

IN THE COURT OF THE HON'BLE XXIV ADDITIONAL CITY CIVIL AND SESSIONS JUDGE, AT BENGALURU (CCH-6)

O. S. No. 8136 OF 2024

BETWEEN : State Bank of India, Retail Assets Central Processing Centre (RACPC), Branch Code 18994 At Sy No.5/1, "Prestige Star" Next to Mother Dairy, Yelahanka, BENGALURU - 560064 Rept., by its Chief Manager, Mr.Amrendra ...PLAINTIFF
AND : Mr. Niranjan N.B, ...DEFENDANT

Notice to the Defendant under Order V Rule 20(1-A) Of CPC:

To : Mr. Niranjan N.B, Aged about 64 years, R/at No.233, 9th Cross, Bapuji Layout, Bangalore -560040.

The plaintiff has instituted the above suit against you for the recovery of a total Sum of Rs.26,99,878/- (Rupees Twenty-Six Lakh Ninety-Nine Thousand Eight Hundred and Seventy-Eight Only) as on 03.09.2024 along with Court costs and future interest. thereon till its realization. Therefore, you are hereby summoned to appear before this Hon'ble Court either in person or through a duly instructed advocate on **21/01/2026 at 11.A.M.** to answer the claim of the plaintiff. On your failure to appear before the Hon'ble Court on the aforesaid date the case will be decided EXPARTE.

Given under my hand and seal of the court on 1-12-2025, Bengaluru.

By Order of the Court
Sd/- Senior Sheristedar
City Civil Court, Bengaluru

Advocate for Plaintiff : Mr. G.M. RUDRASWAMY, Office at No.27, Akshya Complex, 2nd Cross, First Floor, Nagappa Street, Palace Guttahalli, BENGALURU -560 003. Phone : 99868 33635

IN THE COURT OF THE HON'BLE XXIV ADDITIONAL CITY CIVIL AND SESSIONS JUDGE, AT BENGALURU (CCH-6)

O. S. No. 7947 OF 2024

BETWEEN : State Bank of India, Retail Assets Central Processing Centre (RACPC), Branch Code 18994 At Sy No.5/1, "Prestige Star" Next to Mother Dairy, Yelahanka, BENGALURU - 560064 Rept., by its Chief Manager, Mr.Amrendra ...PLAINTIFF
AND : Mr. NAGENDRA BABU. M ...DEFENDANT

Notice to the Defendant under Order V Rule 20(1-A) Of CPC:

To : Mr. NAGENDRA BABU.M, S/o Muniraju, Near Government School, Settigere Village, Doddajala Post, Bangalore North, Bangalore -562157.

The plaintiff has instituted the above suit against you for the recovery of a total Sum of Rs.6,17,131/- (Rupees Six Lakh Seventeen Thousand One hundred Thirty One Only) as on 03.09.2024 along with Court costs and future interest at 9.5% P.A. thereon till its realization. Therefore, you are hereby summoned to appear before this Hon'ble Court either in person or through a duly instructed advocate on **21/01/2026 at 11.A.M.** to answer the claim of the plaintiff. On your failure to appear before the Hon'ble Court on the aforesaid date the case will be decided EXPARTE.

Given under my hand and seal of the court on 1-12-2025, Bengaluru.

By Order of the Court
Sd/- Senior Sheristedar
City Civil Court, Bengaluru

Advocate for Plaintiff : Mr. G.M. RUDRASWAMY, Office at No.27, Akshya Complex, 2nd Cross, First Floor, Nagappa Street, Palace Guttahalli, BENGALURU -560 003. Phone : 99868 33635

ಹೂಡಿ ಸರ್ಕಲ್-ಹೋಪ್ ಫಾರ್ಮ್ ಜಂಕ್ಷನ್‌ವರೆಗೆ ರಸ್ತೆ ಪರಿಶೀಲನೆ

ಮಾದರಿ ರಸ್ತೆ ಅಭಿವೃದ್ಧಿಪಡಿಸಿ: ಸ್ನೇಹಲ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಬೆಂಗಳೂರು ಪೂರ್ವ ನಗರ ಪಾಲಿಕೆಯ ಹೂಡಿ ಜಂಕ್ಷನ್‌ನಿಂದ ಹೋಪ್ ಫಾರ್ ಹಾಗೂ ಹೂಡಿ ರಸ್ತೆಯಿಂದ ಕುರುಡು ಸೊನ್ನೆಹಳ್ಳಿ ಗೆ ಸಂಪರ್ಕ ಕಲ್ಪಿಸುವ ರಸ್ತೆಗಳ ಅಗಲೀಕರಣಕ್ಕೆ ಸಂಬಂಧಿಸಿದಂತೆ ಆಯುಕ್ತ ಡಿ.ಎಸ್. ರಮೇಶ್ ಹಾಗೂ ಅಪರ ಆಯುಕ್ತ (ಅಭಿವೃದ್ಧಿ) ಲೋಖಂಡೆ ಸ್ನೇಹಲ್ ಸುಧಾಕರ್ ಸ್ಥಳ ಪರಿಶೀಲಿಸಿದರು.

ಬೆಂಗಳೂರು ಪೂರ್ವ ನಗರ ಪಾಲಿಕೆಯ ಹೂಡಿ ಜಂಕ್ಷನ್‌ನಿಂದ ಹೋಪ್ ಫಾರ್ ಹಾಗೂ ಹೂಡಿ ರಸ್ತೆಯಿಂದ ಕುರುಡು ಸೊನ್ನೆಹಳ್ಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳ ಅಗಲೀಕರಣಕ್ಕೆ ಸಂಬಂಧಿಸಿದಂತೆ ಆಯುಕ್ತ ಡಿ.ಎಸ್.ರಮೇಶ್ ಹಾಗೂ ಅಪರ ಆಯುಕ್ತ (ಅಭಿವೃದ್ಧಿ) ಲೋಖಂಡೆ ಸ್ನೇಹಲ್ ಸುಧಾಕರ್ ಸ್ಥಳ ಪರಿಶೀಲಿಸಿ ಅಧಿಕಾರಿಗಳಿಗೆ ಅಗತ್ಯ ನಿರ್ದೇಶನ ನೀಡಿದರು.

ಹೂಡಿ ಸರ್ಕಲ್‌ನಿಂದ-ಹೋಪ್ ಫಾರ್ಮ್ ಜಂಕ್ಷನ್‌ವರೆಗಿನ ಪ್ರಸ್ತುತ ರಸ್ತೆ 80 ಅಡಿ ಅಗಲದ ರಸ್ತೆಯನ್ನು 150 ಅಡಿ ಅಗಲದ ಮಾದರಿ ರಸ್ತೆಯನ್ನಾಗಿ ಅಭಿವೃದ್ಧಿಪಡಿಸಲು ಆದ್ಯತೆ ಮೇಲೆ ಕ್ರಮ ತೆಗೆದುಕೊಳ್ಳಲು ಅಧಿಕಾರಿಗಳಿಗೆ ಮುಂದಿನಂತೆ ಅಗತ್ಯ ಸೂಚನೆ ನೀಡಿದರು. ಆರ್‌ಎಂಪಿ-2015 ರಂತೆ 150 ಅಡಿ ರಸ್ತೆ ಅಗಲೀಕರಣಕ್ಕೆ ರಿಲಿಂಕ್ವಿಶ್ ಡೀಡ್ ಆಗಿರುವ ಸ್ವತ್ತುಗಳನ್ನು ಈ ಕೂಡಲೇ ನಗರ ಪಾಲಿಕೆ ಸುಪರ್ದಿಗೆ ಪಡೆಯುವಂತೆ ನಗರ ಯೋಜನೆ ವಿಭಾಗದ ಅಧಿಕಾರಿಗಳಿಗೆ ಸೂಚಿಸಲಾಯಿತು. 150 ಅಡಿ ರಸ್ತೆ ಅಗಲೀಕರಣಕ್ಕೆ ಗುರುತಿಸಿದ್ದು, ರಿಲಿಂಕ್ವಿಶ್ ಡೀಡ್ ಆಗಿರದ ಆಸ್ತಿಗಳ ಭೂಸ್ವಾಧೀನಕ್ಕಾಗಿ ಕಾನೂನುಬದ್ಧ ಕ್ರಮ ಕೈಗೊಳ್ಳುವ ಸಲುವಾಗಿ ವ್ಯವಸ್ಥಾಪಕ ನಿರ್ದೇಶಕರು ಕೆಐಎಡಿಬಿ ರವರೊಂದಿಗೆ ಸಮನ್ವಯ ಸಾಧಿಸಲು ಸೂಚಿಸಿದರು.

ಹೂಡಿ-ಕುರುಡು ಸೊನ್ನೆನಹಳ್ಳಿ ಸಂಪರ್ಕ ರಸ್ತೆ ಪರಿಶೀಲನೆ: ಕುರುಡು ಸೊನ್ನೆನಹಳ್ಳಿಯಿಂದ ಹೂಡಿಗೆ ಸಂಪರ್ಕ ಕಲ್ಪಿಸುವ ರಸ್ತೆ ತುಂಬಾ ಕಿರಿದಾಗಿದ್ದು,ಆರ್ ಎಂಪಿ -2015 ಪ್ರಕಾರ ಈ ರಸ್ತೆಯನ್ನು 24 ಮೀಟರ್ ಅಗಲದ ರಸ್ತೆಯನ್ನಾಗಿ ಅಭಿವೃದ್ಧಿ ಪಡಿಸಲು ಅಗತ್ಯವಿರುವ ಭೂಸ್ವಾಧೀನ ಅಧಿಸೂಚನೆ ಹೊರಡಿಸಲಾಗಿರುತ್ತದೆ. ಭೂಸ್ವಾಧೀನ ಪ್ರಕ್ರಿಯೆ ಚುರುಕುಗೊಳಿಸಲು ಮತ್ತು ಟಿ.ಡಿ.ಆರ್ ಸಂಬಂಧಿತ ಕಾರ್ಯಗಳನ್ನು ವೇಗಗೊಳಿಸುವ ಸಲುವಾಗಿ ಭೂಮಾಲೀಕರೊಂದಿಗೆ ಸಮನ್ವಯ ಸಾಧಿಸುವ ಮೂಲಕ ಕಾಮಗಾರಿ ತ್ವರಿತ ಅನುಷ್ಠಾನಕ್ಕೆ ಅಧಿಕಾರಿಗಳಿಗೆ ಆಯುಕ್ತರು ಸೂಚನೆ ನೀಡಿದರು.

ಹೂಡಿ-ಸಾದರಮಂಗಲ ಪರಿಶೀಲನೆ

ಹೂಡಿ ಸಾದರಮಂಗಲ ರಸ್ತೆಯನ್ನು 60 ಅಡಿ ಅಗಲೀಕರಣಕ್ಕೆ ಗುರುತಿಸಿದ್ದು, ಈ ರಸ್ತೆಯಲ್ಲಿ ಕೆ-ರೈಡ್ ನಿಲ್ದಾಣ ಬಂದಿರುವುದರಿಂದ ಬದಲಿ ರಸ್ತೆಗಾಗಿ ಅಗತ್ಯವಿರುವ ಭೂಸ್ವಾಧೀನವನ್ನು ಸ್ವತ್ತಿನ ಮಾಲೀಕರ ಮನವೊಲಿಸಿ ಒಪ್ಪಿಗೆ ಪತ್ರ ಪಡೆದು ತ್ವರಿತಗತಿಯಲ್ಲಿ ಕಾಮಗಾರಿ ಮುಗಿಸಲು ಅಧಿಕಾರಿಗಳಿಗೆ ಸೂಚಿಸಿದರು. ಸಾದರಮಂಗಲ ಗ್ರಾಮದ ಬಿಎಂಟಿಸಿ ಬಸ್ ಡಿಪೋ ಹತ್ತಿರವಿರುವ ಖಾಲಿ ಜಾಗದಲ್ಲಿ ಘನತ್ಯಾಜ್ಯ ಟ್ರಾನ್ಸ್‌ಫರ್ ಘಟಕ ನಿರ್ಮಿಸುವ ಸಲುವಾಗಿ ಸ್ಥಳ ಪರಿಶೀಲಿಸಿದ ಆಯುಕ್ತರು ಸ್ವತ್ತಿನ ಸರ್ವೆ ನಕ್ಷೆ ಸಿದ್ದಪಡಿಸಿ ನಿಯಮನುಸಾರ ಭೂಸ್ವಾಧೀನಕ್ಕೆ ಕ್ರಮ ತೆಗೆದುಕೊಳ್ಳಬೇಕು. ನಗರ ಪಾಲಿಕೆಯ ಪ್ರಮುಖ ಸಂಪರ್ಕ ರಸ್ತೆಗಳ ಸುಧಾರಣೆ ಮತ್ತು ಹಂತ ಹಂತವಾಗಿ ಜಾರಿಗೆ ಬರುತ್ತಿರುವ ಅಭಿವೃದ್ಧಿ ಯೋಜನೆಗಳ ಪೂರ್ಣಗೊಳಿಸಲು ಎಲ್ಲಾ ಇಲಾಖೆಗಳು ಸಮನ್ವಯದಿಂದ ಕಾರ್ಯ ನಿರ್ವಹಿಸಿದಾಗ ಮಾತ್ರ ನಾಗರಿಕರಿಗೆ ಉತ್ತಮ ಗುಣಮಟ್ಟದ ರಸ್ತೆ ಮತ್ತು ಮೂಲಸೌಕರ್ಯ ಸಿಗಲಿದೆ ಎಂದು ಆಯುಕ್ತರು ತಿಳಿಸಿದರು.

ಮಂಗಳವಾರ ನಡೆದ ಸ್ಥಳ ಪರಿಶೀಲನೆಯಲ್ಲಿ ಕಾರ್ಯಪಾಲಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರು,ಭೂ ಸ್ವಾಧೀನ ಮತ್ತು ಟಿ.ಡಿ.ಆರ್ ವಿಭಾಗದ ಅಧಿಕಾರಿಗಳು, ಬೆಸ್ಕಾಂ ಅಧಿಕಾರಿಗಳು, ನಗರ ಯೋಜನೆ ವಿಭಾಗದ ಅಧಿಕಾರಿಗಳು ಇನ್ನಿತರೇ ಅಧಿಕಾರಿಗಳು ಉಪಸ್ಥಿತರಿದ್ದರು.

ಜಲಮಂಡಳಿಯಿಂದ ನೀರಿನ ಅದಾಲತ್ ನಾಳೆ

ಬೆಂಗಳೂರು: ಬೆಂಗಳೂರು ಜಲಮಂಡಳಿ ವತಿಯಿಂದ ಡಿ.4ರಂದು ಬೆಳಗ್ಗೆ 9.30ರಿಂದ 11.00 ಗಂಟೆಯವರೆಗೆ ನೀರಿನ ಅದಾಲತ್‌ನ್ನು ಆಯೋಜಿಸಲಾಗಿದೆ ಎಂದು ಮಂಡಳಿ ತಿಳಿಸಿದೆ. ನಗರದ(ಪೂರ್ವ)-1-1, (ಪೂರ್ವ)-2-1 (ಆಗ್ನೇಯ-1), (ಆಗ್ನೇಯ-4), (ಪಶ್ಚಿಮ)-1-1, (ಪಶ್ಚಿಮ)-2-1, (ವಾಯುವ್ಯ-1), (ವಾಯುವ್ಯ-3), (ಕೇಂದ್ರ)-1-1 (ಈಶಾನ್ಯ-1), (ಉತ್ತರ)-1-1 ಉಪವಿಭಾಗಗಳಲ್ಲಿ ನೀರಿನ ಬಿಲ್ಲು, ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವಲ್ಲಿನ ವಿಳಂಬ, ಗೃಹ ಬಳಕೆಯಿಂದ ಗೃಹೇತರ ಬಳಕೆ ಪರಿವರ್ತನೆ ವಿಳಂಬ ಮತ್ತಿತರ ಕುಂದುಕೊರತೆಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ಸಾರ್ವಜನಿಕರು ಮಂಡಳಿಯ 24/7 ದೂರು ನಿರ್ವಹಣಾ ಕೇಂದ್ರದ ಸಹಾಯವಾಣಿ 1916 ಗೆ ಕರೆಮಾಡಿ ಅಥವಾ ವಾಟ್ಸ್ ಆಪ್ ಸಂಖ್ಯೆ:8762228888 ಸಂದೇಶದ ಮೂಲಕ ದೂರನ್ನು ಸಲ್ಲಿಸಬಹುದು ಎಂದು ಮಂಡಳಿ ತಿಳಿಸಿದೆ.

ವಿಕ್ಷಿತ್ ಭಾರತ್ 2047 ವತಿಯಿಂದ ಹೈದರಾಬಾದ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ನಂದನ ಸಮೂಹ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಆರ್.ರವಿಚಂದರ್ ಅವರಿಗೆ ಜೀವಮಾನ ಸಾಧನೆಗಾಗಿ ಭಾರತ್ ಗೌರವ್ ಪ್ರಶಸ್ತಿ 2025 ಪ್ರದಾನ ಮಾಡಲಾಯಿತು. ಈ ವೇಳೆ ಪದ್ಮಭೂಷಣ ಸ್ವಾಮಿ ಚಿನ್ನ ಜೀಯರ್ ಮತ್ತು ತೆಲಂಗಾಣದ ರಾಜ್ಯಪಾಲ ಜಿಷ್ಣು ದೇವ್ ವರ್ಮಾ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಸೋಮನಹಳ್ಳಿಯ ಎಪಿಎಸ್ ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನ ವತಿಯಿಂದ ಡಿ.1 ರಂದು ಕಾಲೇಜಿನ ಅನಂತ ಜ್ಞಾನ ಗಂಗೋತ್ರಿ ಆವರಣದಲ್ಲಿ 2025-26 ಶೈಕ್ಷಣಿಕ ವರ್ಷದ ವಿಜ್ಞಾನ ಮತ್ತು ಮಾನವಿಕ ಎಂಬ ಶೀರ್ಷಿಕೆಯ ಅಡಿಯಲ್ಲಿ ವಸ್ತುಪ್ರದರ್ಶನವನ್ನು ಆಯೋಜಿಸಲಾಗಿತ್ತು. ಈ ವೇಳೆ ಎಪಿಎಸ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಡಾ.ವಿಷ್ಣುಭರತ್ ಅಲಂಪಲ್ಲಿ ಇದ್ದರು.

ನಗರದಲ್ಲಿ ಹೆಚ್ಚಿದ ಹಳೇ ವಾಹನಗಳ ಸಂಖ್ಯೆ

ಬೆಂಗಳೂರು: ನಗರದಲ್ಲಿ ಹಳೆಯ ವಾಹನಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವುದರಿಂದ ವಾಯುಮಾಲಿನ್ಯದ ಪ್ರಮಾಣವೂ ಹೆಚ್ಚಾಗುತ್ತಿದ್ದು, ವಾಹನ ಮಾಲೀಕರು ಹಳೆ ವಾಹನಗಳನ್ನು ಗುಜುರಿಗೆ ಹಾಕಲು ಹಿಂದೇಟು ಹಾಕುತ್ತಿರುವುದೇ ಇದಕ್ಕೆ ಮುಖ್ಯ ಕಾರಣ ಎನ್ನಲಾಗಿದೆ.

ರಾಜ್ಯದಲ್ಲಿ ಹಳೆಯ ವಾಹನಗಳ ಸಂಖ್ಯೆ ಹೆಚ್ಚಾಗುತ್ತಿದ್ದು ಕೇಂದ್ರ ಸರಕಾರವು 2023ರ ಏಪ್ರಿಲ್ 1ರಲ್ಲೇ ಗುಜರಿ ನೀತಿಯನ್ನು ಜಾರಿಗೆ ತಂದಿದ್ದು, 15 ವರ್ಷ ದಾಟಿದ ಎಲ್ಲಾ ಸರಕಾರಿ ವಾಹನಗಳನ್ನು ಗುಜರಿಗೆ ಹಾಕಬೇಕು ಎಂಬ ನಿಯಮವಿದೆ. ಎನ್‌ಜಿಟಿ ರೂಲ್ಸ್ ಪ್ರಕಾರ ದೆಹಲಿಯಲ್ಲಿ 10 ವರ್ಷ ಮೇಲ್ಪಟ್ಟ ಪೆಟ್ರೋಲ್ ವಾಹನ ಮತ್ತು 15 ವರ್ಷ ಮೇಲ್ಪಟ್ಟ ಡಿಸೇಲ್ ವಾಹನಕ್ಕೆ ನಿಷೇಧ ಹೇರಲಾಗಿದೆ. ರಾಜ್ಯದಲ್ಲೂ 15 ವರ್ಷ ಮೇಲ್ಪಟ್ಟ ಸರಕಾರಿ ವಾಹನ ಮತ್ತು ಸ್ವಂತ ವಾಹನಗಳನ್ನು ಗುಜರಿಗೆ ಹಾಕಬೇಕು ಎಂಬ ನಿಯಮ ಇದೆ. ತಮ್ಮ ಸ್ವಂತ ವಾಹನಗಳನ್ನು ಗುಜರಿಗೆ ಹಾಕಿದರೆ ಹೊಸ ವಾಹನ ಖರೀದಿಸುವಾಗ ಸಬ್ಸಿಡಿ ಕೂಡ ನೀಡುತ್ತಿದ್ದಾರೆ. ಆದರೆ 15 ವರ್ಷ ಮೇಲ್ಪಟ್ಟ ತಮ್ಮ ಹಳೆಯ ವಾಹನಗಳನ್ನು ಗುಜರಿಗೆ ಹಾಕಲು ವಾಹನ ಮಾಲೀಕರು ಹಿಂದೇಟು ಹಾಕುತ್ತಿದ್ದಾರೆ.

ಸಾರಿಗೆ ಇಲಾಖೆಯ ಹೆಚ್ಚುವರಿ ಆಯುಕ್ತ ಸಿ. ಮಲ್ಲಿಕಾರ್ಜುನ್ ಈ ಕುರಿತು ಮಾಹಿತಿ ನೀಡಿ, ನಮ್ಮ ರಾಜ್ಯದಲ್ಲಿ ಕಡ್ಡಾಯವಾಗಿ ಹಳೆಯ ವಾಹನಗಳನ್ನು ಗುಜರಿಗೆ ಹಾಕಬೇಕು ಎಂಬ ನಿಯಮವಿಲ್ಲ. ಹಾಗಾಗಿ ವಾಹನ ಮಾಲೀಕರು ಹಳೆಯ ವಾಹನಗಳನ್ನು ಗುಜರಿಗೆ ಹಾಕಲು ಮುಂದಾಗುತ್ತಿಲ್ಲ. ಕಳೆದ ವರ್ಷ ಸುಮಾರು 4 ಸಾವಿರ ಸರಕಾರಿ ವಾಹನಗಳನ್ನು ಗುಜರಿಗೆ ಹಾಕಿದ್ದಾರೆ. ಬೆಂಗಳೂರಲ್ಲಿ 15 ವರ್ಷ ಮೀರಿದ ಬೈಕ್‌ಗಳ ಸಂಖ್ಯೆ - 24,46,372 ಇದ್ದರೆ, ಕಾರುಗಳ ಸಂಖ್ಯೆ 7,059,39, ಲಾರಿ, ಬಸ್ ಸೇರಿದಂತೆ ಇತರೆ ವಾಹನಗಳ ಸಂಖ್ಯೆ 5,93,028ರಷ್ಟಿವೆ. ಬೆಂಗಳೂರಲ್ಲಿ 15 ವರ್ಷ ಮೀರಿದ 37,45,339 ಲಕ್ಷ ವಾಹನಗಳಿವೆಯಂತೆ. ಕರ್ನಾಟಕದಲ್ಲೇ ಅದರಲ್ಲೂ ಬೆಂಗಳೂರಲ್ಲಿ ಅತೀ ಹೆಚ್ಚು ಹಳೆಯ ವಾಹನಗಳಿವೆ. ಒಟ್ಟು 37 ಲಕ್ಷ ವಾಹನಗಳಿದ್ದು, ಅದರಲ್ಲಿ 24 ಲಕ್ಷ ದ್ವಿಚಕ್ಷ ವಾಹನಗಳು, 7 ಲಕ್ಷ ಕಾರುಗಳಿವೆ.

ಡಿಸೆಂಬರ್ 6ರಂದು ಕ್ಯಾನ್ಸರ್ ಉಚಿತ ಚಿಕಿತ್ಸಾ ಶಿಬಿರ

ಬೆಂಗಳೂರು: ಕ್ಯಾನ್ಸರ್ ಚಿಕಿತ್ಸಾ ಶಿಬಿರ ಡಿ.6 ರಂದು ನಡೆಯಲಿದೆ ಎಂದು ಪರಿಷತ್ ವಿಪಕ್ಷದ ಮುಖ್ಯ ಸಚೇತಕ ಎನ್.ರವಿಕುಮಾರ್ ತಿಳಿಸಿದರು.

ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಪೋಸ್ಟರ್ ಬಿಡುಗಡೆ ಮಾಡಿ ಮಾತನಾಡಿ, ಪಂಚಗವ್ಯದಿಂದ ಎಲ್ಲಾ ವಿಧದ ಕ್ಯಾನ್ಸರ್ (ಅಂಕೊಲಜಿ) ರೋಗಿಗಳಿಗೆ ಚಿಕಿತ್ಸಾ ಶಿಬಿರವನ್ನು 25 ವರ್ಷ ಅನುಭವವುಳ್ಳ ಡಾ.ಡಿ.ಪಿ.ರಮೇಶ್ ಮತ್ತು ಸಂಪ್ರದಾ ಹಾಸ್ಪಿಟಲ್ ವೈದ್ಯರ ತಂಡದವರಿಂದ ಉಚಿತವಾಗಿ ಆಯೋಜಿಸಲಾಗಿದೆ ಎಂದರು.

ಬೆಂಗಳೂರಿನ ಗೋಸೇವಾ ಗತಿವಿಧಿ, ಕರ್ನಾಟಕ, ಬೆಂಗಳೂರಿನ ಪರಕಾಲ ಸ್ವಾಮಿ ಮಠ, ಸಂಪ್ರದಾ ಆಸ್ಪತ್ರೆ, ಸಿದ್ಧಗಿರಿ ನ್ಯಾಚುರಲ್ ಇವರ ಸಹಯೋಗದಲ್ಲಿ ಮತ್ತು ಬಿಜೆಪಿಯ ವೈದ್ಯಕೀಯ ಪ್ರಕೋಷ್ಠದ ಸಹಕಾರದೊಂದಿಗೆ ಈ ಒಂದು ದಿನದ ಶಿಬಿರ ನಡೆಯಲಿದೆ. ಕ್ಯಾನ್ಸರ್ ಬಗ್ಗೆ ಸಮಾಜದಲ್ಲಿ ಭಯವಿದೆ. ಅದನ್ನು ಗುಣಪಡಿಸಬಹುದು ಎಂಬುದನ್ನು ತಿಳಿಸುವ ಮತ್ತು ಅವರಲ್ಲಿ ಆತ್ಮವಿಶ್ವಾಸ ಹೆಚ್ಚಿಸುವ ದೃಷ್ಟಿಯಿಂದ ಚಿಕಿತ್ಸಾ ಶಿಬಿರವನ್ನು ಬೆಂಗಳೂರು ಸುಭಾಭಿ ನಗರ , ಧನ್ವಂತರಿ ರಸ್ತೆಯ ಆಯುರ್ವೇದ ಸರಕಾರಿ ಮೆಡಿಕಲ್ ಕಾಲೇಜ್ ಪಕ್ಕದ ಶ್ರೀ ಲಕ್ಷ್ಮೀ ಹಯಗ್ರೀವ ದೇವಸ್ಥಾನ, ನಂ.8, ಪರಕಾಲ ಸ್ವಾಮಿ ಮಠದ ಆವರಣದಲ್ಲಿ ನಡೆಸಲಾಗುತ್ತದೆ. ಇದನ್ನು ಆರ್‌ಎಸ್‌ಎಸ್‌ನ ದಕ್ಷಿಣ ಪ್ರಾಂತದ ಪ್ರಧಾನ ಕಾರ್ಯದರ್ಶಿ ಡಾ.ಜಯಪ್ರಕಾಶ್ ಅವರು ಉದ್ಘಾಟಿಸುವರು. ಸವಿತಾ ಮಠದ ಶ್ರೀ ಸವಿತಾನಂದನಾಥ ಸ್ವಾಮೀಜಿ, ಡಾ.ರಾಧೇಶಾಮ್ ನಾಯಕ್, ಲೋಕಸೇವಾ ಆಯೋಗದ ಪ್ರಭುದೇವ್, ಶಾಸಕ ಡಾ.ಸಿ.ಎನ್.ಅಶ್ವತ್ಥನಾರಾಯಣ್ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದರು.

ಈಜಿಪುರ ಮೇಲ್ಸೇತುವೆಗೆ ಭೂಸ್ವಾಧಿನಪಡಿಸಿಕೊಳ್ಳಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಈಜಿಪುರ ಮೇಲ್ಸೇತುವೆಗೆ ಸಂಬಂಧಿಸಿದಂತೆ ಬಿಎಸ್‌ಡಬ್ಲ್ಯೂಎಂಎಲ್ ಕಚೇರಿಯಲ್ಲಿ ಮಂಗಳವಾರ ನಡೆದ ಸಭೆಯಲ್ಲಿ ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಮಾತನಾಡಿದರು.

ಈಜಿಪುರ ಮೇಲ್ಸೇತುವೆಗೆ ಅಗತ್ಯವಿರುವ ಜಾಗವನ್ನು ತ್ವರಿತವಾಗಿ ಭೂಸ್ವಾಧೀನಪಡಿಸಿಕೊಳ್ಳಿ ಎಂದು ಅಧಿಕಾರಿಗಳಿಗೆ ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಸೂಚಿಸಿದರು.

ಈಜಿಪುರ ಮೇಲ್ಸೇತುವೆಗೆ ಸಂಬಂಧಿಸಿದಂತೆ ಬಿಎಸ್‌ಡಬ್ಲ್ಯೂಎಂಎಲ್ ಕಚೇರಿಯಲ್ಲಿ ಮಂಗಳವಾರ ನಡೆದ ಸಭೆಯಲ್ಲಿ ಮಾತನಾಡಿ, ಈಜಿಪುರ ಮೇಲ್ಸೇತುವೆ ಕಾಮಗಾರಿ ನಡೆಯುವ ಸ್ಥಳದಲ್ಲಿ ಪ್ರಮುಖವಾಗಿ ಸೆಂಟ್ ಜಾನ್ಸ್ ಸಂಸ್ಥೆಗೆ ಸೇರಿದ 2 ಕಡೆ ಜಾಗ, ಕೇಂದ್ರ ಸರಕಾರದ ಅಡಿಯಲ್ಲಿ ಬರುವ ಕೇಂದ್ರೀಯ ಸದನ ಮತ್ತು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಆಸ್ಟ್ರೋ ಫಿಜಿಕ್ಸ್ ಸ್ವತ್ತುಗಳನ್ನು ಭೂಸ್ವಾಧೀನಪಡಿಸಿಕೊಳ್ಳಬೇಕಾಗಿದೆ. ಅದಕ್ಕೆ ಸಂಬಂಧಿಸಿದ ಎಲ್ಲಾ ಅಧಿಕಾರಿಗಳ ಜತೆ ಮಾತನಾಡಿ ಇರುವ ಸಮಸ್ಯೆಯನ್ನು ಕೂಡಲೇ ಇತ್ಯರ್ಥಪಡಿಸಿ ಜಾಗವನ್ನು ವಶಕ್ಕೆ ಪಡೆಯಬೇಕು ಎಂದು ಸೂಚನೆ ನೀಡಿದರು. ಈಜಿಪುರ ಸಿಗ್ನಲ್ ಬಳಿ ರಸ್ತೆ ಅಗಲೀಕರಣ ಹಾಗೂ ಪಾದಚಾರಿ ಮಾರ್ಗ ನಿರ್ಮಾಣ ಮಾಡುವ ಸಲುವಾಗಿ ಅತ್ಯವಶ್ಯಕವಾಗಿ 230 ಚ.ಮೀ. ನ ಖಾಸಗಿ ಜಾಗವನ್ನು ಭೂಸ್ವಾಧೀನಪಡಿಸಿಕೊಳ್ಳಬೇಕಿದ್ದು, ಈ ಸಂಬಂಧ ಸ್ಥಳವನ್ನು ಕಾನೂನಿನಡಿ ತ್ವರಿತವಾಗಿ ವಶಪಡಿಸಿಕೊಳ್ಳಲು ಕ್ರಮವಹಿಸಬೇಕು. ಸೆಂಟ್ ಜಾನ್ಸ್ ಆವರಣದಲ್ಲಿ ಆರ್.ಎಂ.ಪಿ ಪ್ರಕಾರ ರಸ್ತೆ ಅಗಲೀಕರಣಕ್ಕೆ ಮೀಸಲಿರಿಸಲು ಬೇಕಾಗಿರುವ ಜಾಗವನ್ನು ಗುರುತಿಸಲು ನ್ಯಾಯಾಲಯದ ಆದೇಶಿಸಿರುತ್ತದೆ. ಅದರಂತೆ ನಗರ ಯೋಜನಾ ವಿಭಾಗದ ಅಧಿಕಾರಿಗಳು ಹಾಗೂ ಯೋಜನಾ ವಿಭಾಗದ ಅಭಿಯಂತರರು ಸ್ಥಳಕ್ಕೆ ಭೇಟಿ ನೀಡಿ ಜಂಟಿಯಾಗಿ ಪರಿಶೀಲನೆ ನಡೆಸಿ, ರಸ್ತೆ ಭಾಗವನ್ನು ಗುರುತು ಮಾಡಲು ಕ್ರಮವಹಿಸಬೇಕು ಎಂದು ಹೇಳಿದರು.

ಸಭೆಯಲ್ಲಿ ಅಭಿಯಂತರ ಡಾ. ರಾಘವೇಂದ್ರ ಪ್ರಸಾದ್ ಮಾತನಾಡಿ, ಈಜಿಪುರ ಮುಖ್ಯ ರಸ್ತೆಯಲ್ಲಿ 2.38 ಕಿ.ಮೀ ಉದ್ದದ ಮೇಲ್ಸೇತುವೆ ಕಾಮಗಾರಿಯನ್ನು ತ್ವರಿತಗತಿಯಲ್ಲಿ ನಡೆಸಲಾಗುತ್ತಿದೆ. ಮೇಲ್ಸೇತುವೆಗೆ ಒಟ್ಟು 762 ಸೆಗ್ಮೆಂಟ್‌ಗಳನ್ನು ಕಾಸ್ಟಿಂಗ್ ಮಾಡಬೇಕಿದ್ದು, ಈಗಾಗಲೇ 584 ಸೆಗ್ಮೆಂಟ್ ಗಳನ್ನು ಕಾಸ್ಟಿಂಗ್ ಮಾಡಲಾಗಿದೆ. ಇನ್ನು 178 ಸೆಗ್ಮೆಂಟ್‌ಗಳನ್ನು ಕಾಸ್ಟಿಂಗ್ ಮಾಡಬೇಕಿದೆ. ಈಗಾಗಲೇ ಕಾಸ್ಟಿಂಗ್ ಆಗಿರುವ 584 ಸೆಗ್ಮೆಂಟ್‌ಗಳಲ್ಲಿ 454 ಸೆಗ್ಮೆಂಟ್‌ಗಳನ್ನು ಜೋಡಣೆ ಮಾಡಲಾಗಿದೆ. ಸೆಂಟ್ ಜಾನ್ಸ್ ಸ್ವತ್ತನ್ನು ತ್ವರಿತವಾಗಿ ಭೂಸ್ವಾಧೀನಪಡಿಸಿಕೊಂಡಲ್ಲಿ ಕಾಮಗಾರಿಗೆ ಮತ್ತಷ್ಟು ವೇಗ ನೀಡಿ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಲು ಸಹಕಾರಿಯಾಗಲಿದೆ ಎಂದು ತಿಳಿಸಿದರು.

ಈ ವೇಳೆ ದಕ್ಷಿಣ ನಗರ ಪಾಲಿಕೆ ಆಯುಕ್ತ ಕೆ.ಎನ್ ರಮೇಶ್, ಉಪ ಆಯುಕ್ತೆ ಗಾಯತ್ರಿ ನಾಯ್ಕ್, ಕಾನೂನುಕೋಶ ವಿಭಾಗದ ಮುಖ್ಯಸ್ಥ ಚಂದ್ರಶೇಖರ್ ಪಾಟೀಲ್, ನಗರ ಯೋಜನಾ ವಿಭಾಗದ ಅಪರ ನಿರ್ದೇಶಕ ಗಿರೀಶ್, ಮುಖ್ಯ ಅಭಿಯಂತರ ರವಿ ಮತ್ತಿತರರು ಇದ್ದರು.

ಸಮಾಚಾರ ಸಣ್ಣದಲ್ಲ

ಬಸ್ ಚಕ್ರಕ್ಕೆ ಸಿಲುಕಿ ನಾಡಬಾಂಬ್ ಸ್ಫೋಟ

ಶಿವಮೊಗ್ಗ: ಕೆಎಸ್‌ಆರ್‌ಟಿಸಿ ಬಸ್ಸಿನ ಚಕ್ರಕ್ಕೆ ಸಿಲುಕಿ ನಾಡಬಾಂಬ್ ಸ್ಫೋಟಗೊಂಡ ಘಟನೆ ಶಿಕಾರಿಪುರ ತಾಲೂಕಿನ ಹಿರೇಕಲವತ್ತಿ ಗ್ರಾಮದಲ್ಲಿ ನಡೆದಿದೆ. ಬಸ್ ಮುಡಬ ಸಿದ್ದಾಪುರದಿಂದ ಶಿಕಾರಿಪುರಕ್ಕೆ ತೆರಳುತ್ತಿತ್ತು. ಈ ವೇಳೆ ಬಸ್ ಹಿರೇಕಲವತ್ತಿ ಗ್ರಾಮದ ಬಳಿ ಬರುತ್ತಿದ್ದಾಗ ಸ್ಫೋಟ ಸಂಭವಿಸಿದೆ. ಜೋರಾದ ಸ್ಫೋಟದ ಶಬ್ದದಿಂದ ಚಾಲಕ ನಿಯಂತ್ರಣ ಕಳೆದುಕೊಂಡಿದ್ದಾನೆ. ಇದರಿಂದ ಪಕ್ಕದಲ್ಲಿದ್ದ ಟಿಸಿಗೆ (ವಿದ್ಯುತ್ ಪರಿವರ್ತಕಕ್ಕೆ) ಬಸ್ ಡಿಕ್ಕಿ ಹೊಡೆದಿದೆ. ಸ್ಫೋಟಕ್ಕೂ 5 ನಿಮಿಷಗಳ ಮುನ್ನ ಹಿಂದಿನ ನಿಲ್ದಾಣದಲ್ಲಿ 45 ವಿದ್ಯಾರ್ಥಿಗಳು ಬಸ್‌ನಿಂದ ಇಳಿದಿದ್ದರು. ಇದರಿಂದ ದೊಡ್ಡ ಅನಾಹುತವೊಂದು ತಪ್ಪಿದೆ. ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ. ಬಸ್ಸಿನ ಟೈಯರ್ ಅಂಚಿಗೆ (ರಿಮ್‌ಗೆ) ನಾಡಬಾಂಬ್ ತಗುಲಿ ಸ್ಫೋಟಗೊಂಡಿದ್ದರಿಂದ ದುರಂತದ ಪ್ರಮಾಣ ಕಡಿಮೆ ಆಗಿದೆ. ಒಂದು ವೇಳೆ ಬಾಂಬ್ ಟೈಯರ್‌ಗಳ ನಡುವೆ ಅಥವಾ ಬಸ್‌ನ ಮುಖ್ಯ ಭಾಗದ ಅಡಿಯಲ್ಲಿ ಸ್ಫೋಟಗೊಂಡಿದ್ದರೆ, ಬಸ್‌ನಲ್ಲಿದ್ದ ಪ್ರಯಾಣಿಕರಿಗೆ ಪ್ರಾಣಾಪಾಯ ಅಥವಾ ಗಂಭೀರ ಗಾಯಗಳಾಗುವ ಸಾಧ್ಯತೆ ಇತ್ತು.

ವಿದ್ಯಾರ್ಥಿನಿ ಮೇಲೆ ಅತ್ಯಾಚಾರ: ಇಬ್ಬರ ಸೆರೆ

ಬೆಳಗಾವಿ: ಏಳನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದ ವಿದ್ಯಾರ್ಥಿನಿಯನ್ನು ಕಬ್ಬಿನ ಗದ್ದೆಗೆ ಎಳೆದೊಯ್ದು ಸಾಮೂಹಿಕ ಅತ್ಯಾಚಾರ ಎಸಗಿರುವ ಘಟನೆ ಬೆಳಗಾವಿ ಜಿಲ್ಲೆಯ ಮುರಗೋಡ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದು, ತಡವಾಗಿ ಬೆಳಕಿಗೆ ಬಂದಿದೆ. ಕಳೆದ ನವೆಂಬರ್ 23 ರಂದು ಬಾಲಕಿ ತನ್ನ ಮನೆಯಿಂದ ಹಿಟ್ಟಿನ ಗಿರಣಿಗೆ ತೆರಳುತ್ತಿದ್ದಳು. ಈ ವೇಳೆ ಇಬ್ಬರು ಆರೋಪಿತರು ಸಂತ್ರಸ್ತ ಬಾಲಕಿಯನ್ನು ಕಬ್ಬಿನ ಗದ್ದೆಗೆ ಎಳೆದೊಯ್ದು ಸಾಮೂಹಿಕ ಅತ್ಯಾಚಾರ ಎಸಗಿದ್ದಾರೆ. ನೊಂದ ಬಾಲಕಿ ಪೋಷಕರ ಮುಂದೆ ವಿಷಯ ಹೇಳಿದಾಗ ಘಟನೆ ಬೆಳಕಿಗೆ ಬಂದಿದೆ. ಕೃತ್ಯ ಎಸಗಿರುವ ಆರೋಪದ ಮೇಲೆ ಮಣಿಕಂಠ ದಿನ್ನಿಮನಿ ಹಾಗೂ ಈರಣ್ಣ ಸಂಕಮ್ಮನವರ್ ಎಂಬುವವರನ್ನು ಪೊಲೀಸರು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ವಿರಾಮ
ಪ್ರತಿ ಭಾನುವಾರ

ಮಾಲೆ ವಿಸರ್ಜನೆಗೆ ಪೊಲೀಸ್ ಕಣ್ಗಾವಲು | ಸುಮಾರು 250 ಸಿಸಿ ಕ್ಯಾಮೆರಾ ಅಳವಡಿಕೆ | ಸಮಸ್ಯೆಯಾಗದಂತೆ ಜಿಲ್ಲಾಡಳಿತ ಸಿದ್ಧತೆ

ಅಂಜನಾದ್ರಿಯತ್ತ ಮಾಲಾಧಾರಿಗಳ ದಂಡು

ಶರಣಬಸವ ಹುಲಿಹೈದರ, ಗಂಗಾವತಿ

ರಾಜ್ಯದ ನಾನಾ ಜಿಲ್ಲೆಯಿಂದ ಹನುಮಮಾಲೆ ಧಾರಣೆ ಮಾಡಿ, ವ್ರತ ಕೈಗೊಂಡಿರುವ ಮಾಲಾಧಾರಿಗಳು ಡಿ.3ರಂದು ಅಂಜನಾದ್ರಿ ಬೆಟ್ಟದ ಮೇಲೆ ಮಾಲೆ ವಿಸರ್ಜನೆ ಮಾಡಲಿದ್ದಾರೆ. ಬುಧವಾರ ಮಧ್ಯರಾತ್ರಿಯಿಂದಲೇ ಮಾಲಾಧಾರಿಗಳು ಬೆಟ್ಟ ಏರಿ ಮಾಲೆ ವಿಸರ್ಜನೆ ಮಾಡಲಿದ್ದು, ಮಂಗಳವಾರ ಸಂಜೆಯಿಂದಲೇ ಹನುಮ ಮಾಲಾಧಾರಿಗಳು ಅಂಜನಾದ್ರಿ ಬೆಟ್ಟದ ಕಡೆಗೆ ಹರಿದು ಬರುತ್ತಿದ್ದಾರೆ. ಈಗಾಗಲೇ ಇಡೀ ಅಂಜನಾದ್ರಿ ಬೆಟ್ಟಕ್ಕೆ ವಿದ್ಯುತ್ ದೀಪಾಲಂಕರ ಮಾಡಲಾಗಿದ್ದು, ಹನುಮಂತ ಜನ್ಮಸ್ಥಳ ಕಣ್ಮನ ಸೆಳೆಯುತ್ತಿದೆ. ಸುಮಾರು ಒಂದೂವರೆ ಲಕ್ಷಕ್ಕೂ ಹೆಚ್ಚು ಭಕ್ತರು ಬೆಟ್ಟಕ್ಕೆ ಬರುವ ಹಿನ್ನೆಲೆ ಕೊಪ್ಪಳ ಜಿಲ್ಲಾಡಳಿತ ಸಕಲ ವ್ಯವಸ್ಥೆ ಮಾಡಿಕೊಂಡಿದೆ.

ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ಮಂಗಳವಾರ ಕೊನೆ ಕ್ಷಣದ ಸಿದ್ಧತೆ ವೀಕ್ಷಿಸಿದರು. ಮಧ್ಯಾಹ್ನದ ವೇಳೆಗೆ ಅಂಜನಾದ್ರಿ ಬೆಟ್ಟಕ್ಕೆ ಆಗಮಿಸಿದ ಸಚಿವರು, ಪಾದಗಟ್ಟೆಯಲ್ಲಿ ವಿಶೇಷ ಪೂಜೆ ಸಲ್ಲಿಸಿದರು. ನಂತರ ಬೆಟ್ಟದ ಹಿಂಭಾಗಕ್ಕೆ ಆಗಮಿಸಿ, ಗಂಗಾವತಿ ಶಾಸಕ ಜಿ.ಜನಾರ್ದನ್ ರೆಡ್ಡಿ, ಜಿಲ್ಲಾಧಿಕಾರಿ ಸುರೇಶ ಇಟ್ನಾಳ, ಜಿಪಂ ಸಿಇಒ ವರ್ಣಿತ್ ನೇಗಿ ಹಾಗೂ ಎಸ್‌ಪಿ ಒಳಗೊಂಡು ಸಿದ್ಧತೆ ಪರಿಶೀಲಿಸಿದರು. ಈ ವೇಳೆ ಭಕ್ತರಿಗೆ ಪ್ರಸಾದ ಬಡಿಸುವ ಮೂಲಕ ಅಧಿಕೃತವಾಗಿ ಪ್ರಸಾದ ವ್ಯವಸ್ಥೆಗೆ ಚಾಲನೆ ನೀಡಿದರು. ಪೊಲೀಸರು ಕೈಗೊಂಡಿರುವ ಭದ್ರತೆ ಬಗ್ಗೆ ಮಾಹಿತಿ ಪಡೆದು, ಬೆಟ್ಟದ ಕೆಳಗಿನ ವ್ಯವಸ್ಥೆ ಬಗ್ಗೆ ಪರಿಶೀಲಿಸಿದರು. ಭಕ್ತರ ಊಟದ ವ್ಯವಸ್ಥೆ ಮಾಡಿರುವ ಸ್ಥಳಕ್ಕೆ ಭೇಟಿ ನೀಡಿ ಅಗತ್ಯ ತರಕಾರಿ, ಆಹಾರ ಪದಾರ್ಥ ಇರುವ ಬಗ್ಗೆ ಪರಿಶೀಲಿಸಿದರು. ಲಕ್ಷಾಂತರ ಹನುಮ ಮಾಲಾಧಾರಿಗಳು ಅಂಜನಾದ್ರಿ ಬೆಟ್ಟಕ್ಕೆ ಬರುವ ಹಿನ್ನೆಲೆ ಕಳೆದೊಂದು ವಾರದಿಂದ ಜಿಲ್ಲಾಡಳಿತ ವ್ಯವಸ್ಥೆ ಮಾಡಿಕೊಂಡಿದೆ.

ಪೊಲೀಸ್, ಸಿಸಿ ಕ್ಯಾಮೆರಾ ಕಣ್ಗಾವಲು: ಹನುಮಮಾಲೆ ವಿಸರ್ಜನೆ ಕಾರ್ಯಕ್ರಮ ಹಿನ್ನೆಲೆ ಪೊಲೀಸ್ ಇಲಾಖೆ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಿದೆ. ಜತೆಗೆ ಅಪರಾಧ ಶೀಘ್ರ ಪತ್ತೆಗೆ ಸಿಸಿ ಕ್ಯಾಮೆರಾ ಅಳವಡಿಸಲಾಗಿದೆ. ಸಂಕೀರ್ತನೆ ಯಾತ್ರೆ ನಡೆಯುವ ಹಿನ್ನೆಲೆ ಗಂಗಾವತಿ ನಗರದಲ್ಲಿ ಮತ್ತು ಅಂಜನಾದ್ರಿ ಬೆಟ್ಟ ಸೇರಿ ಸುಮಾರು 2 ಸಾವಿರಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿಯನ್ನು ಭದ್ರತೆಗೆ ನಿಯೋಜಿಸಲಾಗಿದೆ. ಗಂಗಾವತಿ ನಗರದಲ್ಲಿ ಒಬ್ಬರು ಎಎಸ್‌ಪಿ, ಆರು ಜನ ಡಿವೈಎಸ್‌ಪಿ, 21 ಸಿಪಿಐ, 53 ಪಿಎಸ್‌ಐ, 133 ಎಎಸ್‌ಐ, 532 ಪೇದೆ, 80 ಮಹಿಳಾ ಪೇದೆ ಹಾಗೂ 272 ಗೃಹ ರಕ್ಷಕ ದಳ ಸಿಬ್ಬಂದಿ ಸೇರಿ ಒಟ್ಟು 1098 ಸಿಬ್ಬಂದಿ ಕೇವಲ ಗಂಗಾವತಿ ನಗರದಲ್ಲಿ ಭದ್ರತೆಗೆ ನಿಯೋಜನೆ ಮಾಡಲಾಗಿದೆ. ಇನ್ನು ಅಂಜನಾದ್ರಿ ಸುತ್ತಲಿನ ಪ್ರದೇಶ ಒಳಗೊಂಡು ಬೇರೆ ಬೇರೆ ಕಡೆಗೆ ಒಬ್ಬರು ಎಎಸ್‌ಪಿ, ನಾಲ್ವರು ಡಿವೈಎಸ್‌ಪಿ, 21 ಸಿಪಿಐ, 39 ಪಿಎಸ್‌ಐ, 87 ಎಎಸ್‌ಐ, ಪೇದೆ, ಮಹಿಳಾ ಪೇದೆ ಸೇರಿ ಒಟ್ಟು 572 ಜನ ಸಿಬ್ಬಂದಿ ಜತೆಗೆ ಗೃಹ ರಕ್ಷಕ ದಳ ಸಿಬ್ಬಂದಿ ಹಾಗೂ ಮೂರು ಕೆಎಸ್‌ಆರ್‌ಪಿ, ಆರು ಡಿಆರ್ ತುಕುಡಿ ಸೇರಿ 944 ಪೊಲೀಸ್ ಸಿಬ್ಬಂದಿ ನಿಯೋಜನೆ ಮಾಡಿದ್ದಾರೆ. ಇದರ ಜತೆಗೆ ನಗರ ವ್ಯಾಪ್ತಿಯಲ್ಲಿ 156 ಹಾಗೂ ಅಂಜನಾದ್ರಿ ಬೆಟ್ಟದಲ್ಲಿ 96 ಸಿಸಿ ಕ್ಯಾಮೆರಾ ಅಳವಡಿಕೆ ಮಾಡುವ ಮೂಲಕ ಯಾವುದೇ ಅಹಿತಕರ ಘಟನೆ ನಡೆಯದಂತೆ ಪೊಲೀಸರು ಭದ್ರತೆ ಕಲ್ಪಿಸಿದ್ದಾರೆ.

ಗಂಗಾವತಿ ತಾಲೂಕಿನನ ಅಂಜನಾದ್ರಿ ಬೆಟ್ಟದಲ್ಲಿ ಸಚಿವ ಶಿವರಾಜ ತಂಗಡಗಿ ಹಾಗೂ ಶಾಸಕ ಜನಾರ್ದನ ರೆಡ್ಡಿ ಮಂಗಳವಾರ ಕೊನೆ ಕ್ಷಣದ ಸಿದ್ಧತೆ ವೀಕ್ಷಿಸಿದರು.

5 ಕಡೆ ಚೆಕ್ ಪೋಸ್ಟ್

ರಾಜ್ಯದ ನಾನಾ ಜಿಲ್ಲೆಗಳಿಂದ ಸಾವಿರಾರು ಮಾಲಾಧಾರಿಗಳು ಅಂಜನಾದ್ರಿಗೆ ಬರುತ್ತಿದ್ದಾರೆ. ಈ ಹಿನ್ನೆಲೆ ಬುಕ್ಕಸಾಗರ ಕ್ರಾಸ್, ಸಣಾಪೂರ, ಶಿವಪುರ, ಜಂಗ್ಲಿ ಕ್ರಾಸ್, ಕಡೆಬಾಗಿಲು ಕ್ರಾಸ್ ಸೇರಿ ಒಟ್ಟು 5 ಕಡೆ ಚೆಕ್ ಪೋಸ್ಟ್ ಸ್ಥಾಪನೆ ಮಾಡಿ, ಅಂಜನಾದ್ರಿಗೆ ಬರುವ ಪ್ರತಿ ವಾಹನ ತಪಾಸಣೆ ಮಾಡಲಿದ್ದಾರೆ. ವಾಹನದ ನೋದಣಿ ಮಾಡಿಕೊಳ್ಳುವ ವ್ಯವಸ್ಥೆ ಮಾಡಲಾಗಿದೆ. ದಿನದ 24 ಗಂಟೆ ತಪಾಸಣೆ ನಡೆಯಲಿದೆ.

250ಕ್ಕೂ ಹೆಚ್ಚು ಸಿಸಿ ಕ್ಯಾಮೆರಾ

ಅಹಿತಕರ ಘಟನೆ ಶೀಘ್ರ ಪತ್ತೆಗೆ ಪೊಲೀಸ್ ಇಲಾಖೆ ಹಾಗೂ ಜಿಲ್ಲಾಡಳಿತ ಹನುಮಮಾಲೆ ವಿಸರ್ಜನೆ ಪ್ರದೇಶ ಹಾಗೂ ಸಂಕೀರ್ತನಾ ಯಾತ್ರೆಯನ್ನು ಸಂಪೂರ್ಣವಾಗಿ ಲೈವ್ ಮಾಡುತ್ತಿದೆ. ಇದರಿಂದ ಬೇರೆ ಕಡೆ ಇದ್ದು ನೋಡುವವರಿಗೆ ಸಹಕಾರಿ ಆಗಲಿದೆ. ಸುಮಾರು 250 ಸಿಸಿ ಕ್ಯಾಮೆರಾ ಅಳವಡಿಸಿ ಅಹಿತಕರ ಘಟನೆ ಮೇಲೆ ನಿಗಾ ವಹಿಸಲಾಗಿದೆ. ಅಂಜನಾದ್ರಿಯ ವೇದ ಪಾಠಶಾಲೆ ಆವರಣದಲ್ಲಿ, ಅಂಜನಾದ್ರಿ ಬೆಟ್ಟದ ಮುಂಭಾಗ, ಮೇಲ್ಭಾಗ, ಪಾರ್ಕಿಂಗ್ ಸ್ಥಳ, ಚೆಕ್ ಪೋಸ್ಟ್ ಸೇರಿ ನಾನಾ ಕಡೆ 156 ಸಿಸಿ ಕ್ಯಾಮೆರಾ ಅಳವಡಿಸಲಾಗಿದೆ. ಗಂಗಾವತಿ ನಗರದಲ್ಲಿ ಸಂಕೀರ್ತನೆ ಯಾತ್ರೆ ನಡೆಯಲಿದ್ದು, ಭದ್ರತೆ ದೃಷ್ಟಿಯಿಂದ ಪ್ರಮುಖ ಸರ್ಕಲ್, ಸೂಕ್ಷ್ಮ ಸ್ಥಳ ಗುರುತಿಸಿ ಸಿಸಿ ಕ್ಯಾಮೆರಾ ಅಳವಡಿಸಲಾಗಿದೆ.

ರೈಲಿನ ಸಮಯ ಬದಲಾವಣೆ

ಕಲಬುರಗಿ: ಕಲಬುರಗಿ-ಬೆಂಗಳೂರು ಮಧ್ಯೆ ಸಂಚರಿಸುತ್ತಿರುವ ವಂದೇ ಭಾರತ್ ರೈಲಿನ ಸಮಯವನ್ನು 2026ರ ಜನವರಿ 1ರಿಂದ ಅನ್ವಯವಾಗುವಂತೆ ದಕ್ಷಿಣ ಮಧ್ಯ ರೈಲ್ವೆಯು ಬದಲಾಯಿಸಿದ್ದು, ಕಲಬುರಗಿಯಿಂದ ಬೆಳಗ್ಗೆ 5.15ರ ಬದಲು ಬೆಳಗ್ಗೆ 6.10ಕ್ಕೆ ಹೊರಟು ಮಧ್ಯಾಹ್ನ 2.10ಕ್ಕೆ ಬೆಂಗಳೂರು ತಲುಪಲಿದೆ.

ಪ್ರಯಾಣಿಕರ ಕೋರಿಕೆ ಮೇರೆಗೆ ಸತ್ಯಸಾಯಿ ಪ್ರಶಾಂತಿ ನಿಲಯಂ (ಪುಟ್ಟಪರ್ತಿ)ನಲ್ಲಿ ನಿಲುಗಡೆ ನೀಡಲಿದೆ. ಬೆಳಗ್ಗೆ 6.10ಕ್ಕೆ ಕಲಬುರಗಿಯಿಂದ ಹೊರಡುವ ರೈಲು ವಾಡಿ, ಯಾದಗಿರಿ, ರಾಯಚೂರು, ಮಂತ್ರಾಲಯಂ ರೋಡ್, ಗುಂತಕಲ್, ಅನಂತಪುರ, ಧರ್ಮಾವರಂ, ಸತ್ಯಸಾಯಿ ಪ್ರಶಾಂತಿ ನಿಲಯಂ, ಯಲಹಂಕ ಮೂಲಕ ಸಾಗಿ ಮಧ್ಯಾಹ್ನ 2.10ಕ್ಕೆ ಬೆಂಗಳೂರಿನ ಸರ್ ಎಂ.ವಿಶ್ವೇಶ್ವರಯ್ಯ ಟರ್ಮಿನಲ್ ತಲುಪಲಿದೆ. ಮಧ್ಯಾಹ್ನ 2.40ಕ್ಕೆ ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್‌ನಿಂದ ರಾತ್ರಿ 10.45ಕ್ಕೆ ಕಲಬುರಗಿ ತಲುಪಲಿದೆ. ಈ ಮುಂಚೆ ರಾತ್ರಿ 11.30ಕ್ಕೆ ತಲಪುತ್ತಿತ್ತು.

ಇಂದು ವೇಣು-ಸಿದ್ದು ಭೇಟಿ?

← ಮೊದಲಪುಟದಿಂದ

ಈ ಭೇಟಿಯ ವೇಳೆ ಪ್ರಮುಖವಾಗಿ ನಾಯಕತ್ವ ಗೊಂದಲಕ್ಕೆ ಸಂಬಂಧಿಸಿದಂತೆ ವಿವರಣೆ ನೀಡುವ ಸಾಧ್ಯತೆ ಯಿದೆ. ಉಪಾಹಾರ ಸಭೆಯಲ್ಲಿ ನಡೆದ ಚರ್ಚೆ ಗಳು, ದೆಹಲಿಯಲ್ಲಿ ವರಿಷ್ಠರನ್ನು ಭೇಟಿಯಾಗಲು ಸಮಯ ನಿಗದಿ ಸೇರಿದಂತೆ ಹಲವು ವಿಷಯಗಳು ಮುನ್ನೆಲೆಗೆ ಬರಲಿದೆ.

1 ಗಂಟೆ ಸಿದ್ದು-ಡಿಕೆ ಚರ್ಚೆ: ಮಂಗಳವಾರ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಿವಾಸಕ್ಕೆ ಭೇಟಿ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಉಪಾಹಾರ ಸೇವಿಸಿದರು. ಉಪಾಹಾರದ ಬಳಿಕ ಉಭಯ ನಾಯಕರು ಒಂದು ಗಂಟೆಗೂ ಹೆಚ್ಚು ಕಾಲ ಚರ್ಚೆ ನಡೆಸಿದ್ದು, ಕುತೂಹಲಕ್ಕೆ ಕಾರಣವಾಗಿದೆ. ಸಿದ್ದರಾಮಯ್ಯನವರು ನಾಟಿಕೋಳಿ ಸಾರು, ಇಡ್ಲಿ ಸವಿದರು. ಡಿ.ಕೆ.ಶಿವಕುಮಾರ್ ಅವರ ಸಹೋದರ ಡಿ.ಕೆ. ಸುರೇಶ್, ಶಾಸಕ ಕುಣಿಗಲ್ ರಂಗನಾಥ್, ಉಪಾಹಾರ ಸೇವಿಸಿದರು.

ಪರಂ ನಿವಾಸದಲ್ಲೂ ಉಪಾಹಾರ ಸಭೆ?

ಕಳೆದ ಶನಿವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ನಿವಾಸದಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಉಪಾಹಾರ ಸಭೆಗೆ ಕರೆದಿದ್ದರೆ, ಮಂಗಳವಾರ ಡಿ.ಕೆ. ಶಿವಕುಮಾರ್ ತಮ್ಮ ನಿವಾಸಕ್ಕೆ ಸಿದ್ದರಾಮಯ್ಯ ಅವರನ್ನು ಆಹ್ವಾನಿಸಿದ್ದರು. ಇದೀಗ ಈ ಇಬ್ಬರೂ ನಾಯಕರನ್ನು ಹಿರಿಯ ಸಚಿವ ಡಾ.ಜಿ.ಪರಮೇಶ್ವರ ತಮ್ಮ ಮನೆಗೆ ಬ್ರೇಕ್‌ಫಾಸ್ಟ್‌ಗೆ ಬರುವಂತೆ ಆಹ್ವಾನಿಸಲು ಸಜ್ಜಾಗಿದ್ದಾರೆ ಎನ್ನಲಾಗಿದೆ. ಈ ಬಗ್ಗೆ ಮಾತನಾಡಿರುವ ಪರಮೇಶ್ವರ ಅವರು, ಸಿಎಂ-ಡಿಸಿಎಂ ಎರಡನೇ ಬ್ರೇಕ್ ಫಾಸ್ಟ್‌ಗೂ ನನ್ನನ್ನು ಕರೆದಿಲ್ಲ. ಸದ್ಯಕ್ಕೆ ಅವರು ಇಬ್ಬರೇ ತಿಂಡಿ ತಿನ್ನುತ್ತಿದ್ದಾರೆ. ನಮ್ಮನ್ನೂ ಕರೆದರೆ ನಾವೂ ತಿಂಡಿ ತಿನ್ನಲು ಹೋಗುತ್ತೇವೆ. ಅಗತ್ಯ ಬಿದ್ದರೆ ನಮ್ಮ ಮನೆಗೂ ಬ್ರೇಕ್ ಫಾಸ್ಟ್‌ಗೆ ಕರೆಯುತ್ತೇನೆ. ಸಿಎಂ-ಡಿಸಿಎಂ ಇಬ್ಬರನ್ನೂ ನನ್ನ ಮನೆಗೂ ಏಕೆ ಕರೆಯಬಾರದು ಎಂದರು.

ನಾವು ಯಾವಾಗಲೂ ಒಗ್ಗಟ್ಟಾಗಿದ್ದೇವೆ. ನಾನು, ಡಿಕೆ ಯಾವಾಗಲೂ ಸಹೋದರರಿದ್ದಂತೆ. ಒಂದೇ ಸಿದ್ಧಾಂತವನ್ನು ಒಪ್ಪಿಕೊಂಡಿದ್ದೇವೆ. 2028ರಲ್ಲೂ ಒಟ್ಟಿಗೆ ಕೆಲಸ ಮಾಡಿ ಚುನಾವಣೆ ಗೆಲ್ಲುತ್ತೇವೆ. ನಾನು ಡಿಸಿಎಂ ಒಟ್ಟಾಗಿ ಸರಕಾರ ಮಾಡಿದ್ದೇವೆ. ಮುಂದೆಯೂ ಮಾಡುತ್ತೇವೆ.
– ಸಿದ್ದರಾಮಯ್ಯ, ಮುಖ್ಯಮಂತ್ರಿ

ನಮ್ಮದು ಒಂದೇ ಧ್ವನಿ, ಒಂದೇ ಆಚಾರ ವಿಚಾರ. ಪ್ರತಿಪಕ್ಷವನ್ನು ಒಟ್ಟಾಗಿ ಎದುರಿಸುತ್ತೇವೆ. ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಅವರು ಕರೆದರೆ ಹೋಗಿ ಭೇಟಿ ಮಾಡುತ್ತೇವೆ. ಉಪಾಹಾರದ ಬಳಿಕ ಪರಿಷತ್ ಚುನಾವಣೆ, ಸರ್ವಪಕ್ಷ ಸಂಸದರ ಸಭೆ, ಬೆಳಗಾವಿ ಅಧಿವೇಶನದ ಬಗ್ಗೆ ಚರ್ಚಿಸಿದ್ದೇವೆ.
-ಶಿವಕುಮಾರ್, ಉಪಮುಖ್ಯಮಂತ್ರಿ

ಹೈಕಮಾಂಡ್ ಹೇಳಿದಾಗ ಡಿಕೆ ಸಿಎಂ: ಸಿದ್ದು

ಈ ನಡುವೆ ಮಂಗಳವಾರ ಡಿ.ಕೆ. ಶಿವಕುಮಾರ್ ನಿವಾಸದಲ್ಲಿ ನಡೆದ ಉಪಾಹಾರ ಸಭೆಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಿದ್ದರಾಮಯ್ಯ, ಪಕ್ಷದ ಹೈಕಮಾಂಡ್ ಹೇಳಿದಾಗ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗ ಲಿದ್ದಾರೆ ಎಂದಿದ್ದಾರೆ. ಇದು ಕುತೂಹಲಕ್ಕೆ ಕಾರಣವಾಗಿದೆ. ಉಪಾಹಾರ ಸಭೆಯ ಬಳಿಕ ಮಾತನಾಡಿದ ಇಬ್ಬರೂ ನಾಯಕರು, ಹೈಕಮಾಂಡ್ ಏನು ಹೇಳುತ್ತಾರೋ ಅದರಂತೆ ನಾವಿಬ್ಬರೂ ನಡೆದುಕೊಳ್ಳುತ್ತೇವೆ. ರಾಹುಲ್ ಗಾಂಧಿ, ಸೋನಿಯಾ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಏನು ತೀರ್ಮಾನ ಕೈಗೊಳ್ಳುತ್ತಾರೋ ಅದಕ್ಕೆ ನಾವು ಬದ್ಧ. ಈವರೆಗೆ ಹೈಕಮಾಂಡ್ ಜತೆ ಯಾವುದೇ ಮಾತುಕತೆಯಾಗಿಲ್ಲ. ನಾವಿಬ್ಬರೂ ಯಾವಾಗಲೂ ಒಗ್ಗಟ್ಟಾಗಿದ್ದೇವೆ. ನಮ್ಮ ಎಲ್ಲ ಶಾಸಕರು ಒಗ್ಗಟ್ಟಾಗಿ ಇದ್ದಾರೆ. ಒಟ್ಟಾಗಿ ಪ್ರತಿಪಕ್ಷವನ್ನು ಎದುರಿಸಲಿದ್ದಾರೆ ಎಂದಿದ್ದಾರೆ. ನಾವು ಯಾವಾಗಲೂ ಬ್ರದರ್ಸ್ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಜೂನ್‌ಗೆ ಗೇಟ್ ಕಾಮಗಾರಿ ಪೂರ್ಣ

ಗಂಗಾವತಿ: ಕರ್ನಾಟಕ, ಆಂಧ್ರ-ತೆಲಂಗಾಣ ರೈತರ ಜೀವನಾಡಿ ತುಂಗಭದ್ರಾ ಡ್ಯಾಂ ಗೇಟ್ ದುರಸ್ತಿ ಕಾಮಗಾರಿ ಜೂನ್ ಅಂತ್ಯಕ್ಕೆ ಪೂರ್ಣಗೊಳ್ಳಲಿದೆ ಎಂದು ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್.ಬೋಸ ರಾಜು ವಿಶ್ವಾಸ ವ್ಯಕ್ತಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರೈತರು ಯಾವುದೇ ಕಾರಣಕ್ಕೆ ಆರಂಕಕ್ಕೆ ಒಳಗಾಗುವ ಅಗತ್ಯವಿಲ್ಲ. ಗಾಬರಿಯಾಗಬಾರದು. ಈಗಾಗಲೇ ಜಲಾಶಯದ ಗೇಟ್ ಸಿದ್ಧಗೊಂಡಿವೆ. ಗೇಟ್ ಅಳವಡಿಕೆಗೆ ಸಂಬಂಧಿಸಿದಂತೆ ರಾಜ್ಯ ಸರಕಾರ ಮಾತ್ರ ನಿರ್ಧಾರ ತೆಗೆದುಕೊಳ್ಳಲು ಬರುವುದಿಲ್ಲ, ಆಂಧ್ರ, ತೆಲಂಗಾಣ, ಕರ್ನಾಟಕ ಮೂರು ರಾಜ್ಯ ಸೇರಿ ನಿರ್ಣಯ ತೆಗೆದುಕೊಳ್ಳಬೇಕಿದೆ. ಹಾಗಾಗಿ ಈಗಾಗಲೇ ಬೋರ್ಡ್ ಸಭೆ ನಡೆಸಿ, ಜಲಾಶಯದ ಎಲ್ಲ ಗೇಟ್ ಅಳವಡಿಕೆ ಮಾಡಬೇಕು ಎಂದು ತಿರ್ಮಾನ ತೆಗೆದುಕೊಂಡಿದೆ. ಬೇಸಿಗೆಯಲ್ಲಿ ಕುಡಿಯಲು ಬೇಕಾವಷ್ಟು ನೀರು ಸಂಗ್ರಹ ಮಾಡಿಕೊಂಡು ಕಾಮಗಾರಿ ಆರಂಭ ಮಾಡಲಾಗುವುದು ಎಂದು ಮಾಹಿತಿ ನೀಡಿದರು. ಗೇಟ್ ಸಿದ್ಧತೆ ಕಾರ್ಯ ನಡೆಯು ತ್ತಿದ್ದು, ಅದಕ್ಕಾಗಿಯೇ ಈಗಾಗಲೇ 20 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ. ಇನ್ನೂ 10 ಕೋಟಿ ರೂ. ಬಿಡುಗಡೆ ಮಾಡಲಾಗುತ್ತದೆ. 2026ರ ಜೂನ್ ಅಂತ್ಯಕ್ಕೆ ಗೇಟ್ ಅಳವಡಿಕೆ ಕಾರ್ಯ ಮುಗಿಸಿ, ಜುಲೈನಲ್ಲಿ ಜಲಾಶ ಯದಿಂದ ನೀರು ಬಿಡುಗಡೆ ಮಾಡಲಾಗುವುದು ಎಂದರು.



ಸಿಎಂ, ಡಿಸಿಎಂ ವಿಚಾರಕ್ಕೆ ಸಂಬಂಧಿಸಿದಂತೆ ಯಾವುದೇ ಬದಲಾವಣೆಯಿಲ್ಲ. ಇಬ್ಬರು ಸಹ ಒಂದಾಗಿ ರಾಜ್ಯ ಸರಕಾರ ನಡೆಸಲಿದ್ದಾರೆ. ಸರಕಾರಕ್ಕೆ ಯಾವುದೇ ತೊಂದರೆ ಆಗಲ್ಲ.
-ಎನ್.ಎಸ್.ಬೋಸರಾಜು, ಸಚಿವ

ಬೆಂಗಳೂರು ಏರ್ಪೋರ್ಟ್‌ಲ್ಲಿ ದಂಡಾಸ್ತ್ರ!

← ಮೊದಲಪುಟದಿಂದ

ಇವುಗಳಿಂದ ಏರ್‌ಪೋರ್ಟ್ ಮುಂದೆ ಸಾಕಷ್ಟು ಸಂಚಾರ ದಟ್ಟಣೆಯುಂಟಾಗುತ್ತಿದ್ದು, ಪಿಕಪ್ ಮತ್ತು ಡ್ರಾಪ್ ಬಳಿಕ ಹಲವು ವಾಹನಗಳು ಅಲ್ಲಿಯೇ ನಿಂತಿರುವುದು ಈ ಸಮಸ್ಯೆಗೆ ಕಾರಣವಾಗಿದೆ. ಆದ್ದರಿಂದ ಈ ದಂಡ ಪ್ರಯೋಗಕ್ಕೆ ಮುಂದಾಗಿದೆ. ಹೊಸ ನಿಯಮ, ದಂಡ ಹೇರಿಕೆ: ಏರ್ ಪೋರ್ಟ್‌ಗೆ ಬರುವ ಖಾಸಗಿ ವಾಹನಗಳು (ಬಿಳಿ ಬೋರ್ಡ್) ಪಿಕಪ್, ಡ್ರಾಪ್‌ಗೆ ಮೊದಲ 8 ಎಂಟು ನಿಮಿಷ ಉಚಿತವಾಗಿರಲಿದೆ. ಈ ಸಮಯ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಗಳ ಮಾನದಂಡಗಳಿಗೆ ಹೋಲಿಸಿದರೆ ಹೆಚ್ಚು ಎನ್ನಲಾಗಿದೆ. ಈ ನಿಗದಿತ ಸಮಯ ಮೀರಿದರೆ ದಂಡ ಅನ್ವಯವಾಗುತ್ತದೆ. ಏರ್‌ಪೋರ್ಟ್ ಆವರಣ ದಲ್ಲಿ ಪಿಕ್ ಅಪ್ ಖಾಸಗಿ ವಾಹನಗಳೂ 18 ನಿಮಿಷಕ್ಕಿಂತ ಹೆಚ್ಚು ಸಮಯ ನಿಂತರೆ ವಾಹನ ಟೋಯಿಂಗ್ ಮಾಡಲಾಗುತ್ತದೆ. ಪೊಲೀಸ್ ಠಾಣೆಗೆ ಹಸ್ತಾಂತರಿಸಲಾ ಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

8ಕ್ಕೆ ದಿಲ್ಲಿಗೆ ಸಿಎಂ, ಡಿಸಿಎಂ

← ಮೊದಲಪುಟದಿಂದ

ಆದ್ದರಿಂದ ಸಂತಾಪ ಸೂಚನೆ ಮಂಡಿಸಿದ ಬಳಿಕ ದೆಹಲಿಗೆ ತೆರಳಲು ತೀರ್ಮಾನಿಸಿದ್ದಾರೆ. ಈ ಬಗ್ಗೆ ಮಾತನಾಡಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾಆರ್, ಡಿ.8ರಂದು ದೆಹಲಿಗೆ ಹೋಗಿ ವಾಪಸ್ಸಾಗಬೇಕು ಎಂದು ತೀರ್ಮಾನಿಸಿ ದ್ದೇವೆ. ಮೇಕೆದಾಟು ವಿಚಾರವಾಗಿ ನ್ಯಾಯಾಲ ಯದ ತೀರ್ಪು ಬಂದಿದ್ದು, ಮೆಕ್ಕೆಜೋಳ ದರ ವಿಚಾರ, ಕೇಂದ್ರ ಸರಕಾರದಿಂದ ಗ್ರಾಮೀಣಾಭಿ ವೃದ್ಧಿ, ನಗರಾಭಿವೃದ್ಧಿ, ನೀರಾವರಿ ಯೋಜನೆಗಳಿಗೆ ಅನುದಾನ ಬಾರದಿರುವ ವಿಚಾರವಾಗಿ ಸಂಸದರ ಜತೆ ಚರ್ಚೆ ಮಾಡಿ ಅವರಿಗೆ ಜವಾಬ್ದಾರಿ ನೀಡ ಬೇಕಾಗಿದೆ. ಈ ಸಭೆಗೆ ವಿಧಾನಸಭೆ ಹಾಗೂ ವಿಧಾನ ಪರಿಷತ್ ಪ್ರತಿಪಕ್ಷದ ನಾಯಕರನ್ನು ಹಾಗೂ ಜೆಡಿಎಸ್ ನಾಯಕರನ್ನು ಕರೆದುಕೊಂಡು ಹೋಗಲು ತೀರ್ಮಾನಿಸಿದ್ದೇವೆ ಎಂದು ಹೇಳಿದರು.

ಪ್ರತಿಪಕ್ಷ ನಾಯಕರಿಗೂ ಆಹ್ವಾನ

ಇನ್ನು ದೆಹಲಿಯಲ್ಲಿ ನಡೆಯಲಿರುವ ಈ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತ್ರವಲ್ಲದೇ, ಪ್ರತಿಪಕ್ಷ ನಾಯಕರಾದ ಆರ್.ಅಶೋಕ್, ಛಲವಾದಿ ನಾರಾಯಣ ಸ್ವಾಮಿ, ಜೆಡಿಎಸ್ ಸಭಾನಾಯಕರಾದ ಸುರೇಶ್ ಬಾಬು ಸೇರಿದಂತೆ ಕೆಲ ಸಚಿವರನ್ನು ದೆಹಲಿಗೆ ಕರೆದುಕೊಂಡು ಹೋಗಲು ತೀರ್ಮಾನಿಸಲಾಗಿದೆ. ಚಳಿಗಾಲ ಅಧಿವೇಶನದ ಮೊದಲ ದಿನವಾಗಿರುವುದರಿಂದ ಸದನವನ್ನು ಮುಂದೂಡಿಕೆ ಮಾಡಿ ದೆಹಲಿಗೆ ತೆರಳಲಿದ್ದಾರೆ ಎನ್ನಲಾಗಿದೆ.

- ಬೆಳಗಾವಿ ಅಧಿವೇಶನದ ನಡುವೆಯೇ ದೆಹಲಿಗೆ ಹೋಗಿಬರಲು ನಿರ್ಧಾರ
- ಒಂದೇ ವಿಮಾನದಲ್ಲಿ ಸಿಎಂ, ಡಿಸಿಎಂ ದೆಹಲಿಗೆ ಹೋಗಿ ಬರುವ ಸಾಧ್ಯತೆ
- ಉಭಯ ಸದನದ ಪ್ರತಿಪಕ್ಷ ನಾಯ ಕರು, ಜೆಡಿಎಸ್ ನಾಯಕರಿಗೂ ಕರೆ
- ರಾಜ್ಯದ ಸಮಸ್ಯೆಗಳ ಬಗ್ಗೆ ಧ್ವನಿ ಎತ್ತಲು ಸಂಸದರೊಂದಿಗೆ ಚರ್ಚೆ ನಿರೀಕ್ಷೆ
- ಸಂಸದರ ಸಭೆ ಬಳಿಕ, ಸಮಯಾವಕಾಶ ಸಿಕ್ಕರೆ ಸೋನಿಯಾ ಭೇಟಿ ಸಾಧ್ಯತೆ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ ಬಾಗಲಕೋಟ ಇವರ ಕಛೇರಿ.
ಸಂಖ್ಯೆ.ಲೋಇ:ಬಾವಿ:ಪಿಬಿ:ಕೆಡಬ್ಲು:2025-26/3300 ದಿನಾಂಕ: 01-12-2025
-ಃ ಟೆಂಡರ ಪ್ರಕಟಣೆಃ-
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999-2000ರ ಪ್ರಕಾರ ಆ್ಯಕ್ಟ 2000ರ ನಿಯಮದಂತೆ ಸ್ಟಾಂಡರ್ಡ ಬಿಡ್ ಡಾಕ್ಯುಮೆಂಟ ಕೆ/ಡಬ್ಲೂ-1,2,3,4 ನಿಯಮದನ್ವಯ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ KPPP ಪೋರ್ಟಲ್ ಮುಖಾಂತರ ಬಾಗಲಕೋಟ ವಿಭಾಗದ ಅಡಿಯಲ್ಲಿಯ ಈ ಕೆಳಕಾಣಿಸಿದ ಒಟ್ಟು 19 ಕಾಮಗಾರಿಗಳ ಟೆಂಡರ ಅಹ್ವಾನಿಸಲಾಗಿದೆ.
ವರ್ಕ ಇಂಡೆಂಟ್ ನಂ: ಸಾಮಾನ್ಯ:27975,28282,27823,21615ಕಾಲ್-2, 28646,28644, 28864, 28841, 27985, 28860, 28944, 28762, 28023
SC: 28948, 28843. ST: 28825 CAT - II(A): 28934, 28925, 28842
ಈ ಎಲ್ಲ ಕಾಮಗಾರಿಗಳ ಗರಿಷ್ಠ ಟೆಂಡರಗಿಟ್ಟ ಮೊತ್ತ ರೂ.300.00 ಲಕ್ಷ ಹಾಗೂ ಕನಿಷ್ಠ ಮೊತ್ತ ರೂ.7.00 ಲಕ್ಷಗಳ ವರೆಗಿನ ಕಾಮಗಾರಿಗಳಿಗೆ ಈ ಕೆಳಕಾಣಿಸಿದ ದಿನಾಂಕಗಳಂತೆ ಟೆಂಡರ ಅಹ್ವಾನಿಸಲಾಗಿದೆ.
ಅ) ಪ್ರೀಬಿಡ್ ಮೀಟಿಂಗ್: 20-12-2025 ರಂದು ಬೆಳಿಗ್ಗೆ 11-30 ಘಂಟೆಯವರೆಗೆ ಅ) ಟೆಂಡರ ಆಕ್ಷೇಪಣೆಗಾಗಿ ನಿಗಧಿ ಪಡಿಸಿದ ದಿನಾಂಕ:22-12-2025 ರಂದು ಸಂಜೆ 5-30 ಘಂಟೆಯವರೆಗೆ, ಬ) ಟೆಂಡರ ಸ್ವೀಕರಿಸುವ ದಿನಾಂಕ: 23-12-2025 ರಂದು ಸಂಜೆ 4-00 ಘಂಟೆಯವರೆಗೆ, ಕ) ತಾಂತ್ರಿಕ ಬಿಡ್ ತೆರೆಯುವ ದಿನಾಂಕ:24-12-2025 ರಂದು ಸಂಜೆ 4.30 ಘಂಟೆಯವರೆಗೆ, ಡ) ಆರ್ಥಿಕ ಬಿಡ್ ತೆರೆಯುವ ದಿನಾಂಕ:26-12-2025 ರಂದು ಸಂಜೆ 4.30 ಘಂಟೆಯವರೆಗೆ
ಸಹಿ/-ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ ಬಾಗಲಕೋಟೆ.
DIPR/BGK/RO-NO-421/KSMCA/2025-26

ಕರ್ನಾಟಕ ಸರ್ಕಾರ
ಜಲಸಂಪನ್ಮೂಲ ಇಲಾಖೆ
ಮುಖ್ಯ ಸಂಶೋಧನಾಧಿಕಾರಿಯವರ ಕಛೇರಿ, ತಾಂತ್ರಿಕ ಸೇವಾ ವಿಭಾಗ,
ಕರ್ನಾಟಕ ಇಂಜಿನಿಯರಿಂಗ್ ಸಂಶೋಧನಾ ಕೇಂದ್ರ, ಕೃಷ್ಣರಾಜಸಾಗರ.
ಐ.ಎಫ್.ಟಿ:05/2025-26 ದಿ:28.11.2025
ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ-ಪ್ರಕ್ಯೂಮೆಂಟ್ ಮೂಲಕ ಮಾತ್ರ)
ಕರ್ನಾಟಕ ಇಂಜಿನಿಯರಿಂಗ್ ಸಂಶೋಧನಾ ಕೇಂದ್ರ, ತಾಂತ್ರಿಕ ಸೇವಾ ವಿಭಾಗದ ಮುಖ್ಯ ಸಂಶೋಧನಾಧಿಕಾರಿಯವರಿಂದ ಐ.ಎಫ್.ಟಿ ಸಂ:05/2025-26 ದಿನಾಂಕ: 28.11.2025 ರಲ್ಲಿ ನಮೂದಿಸಿರುವ "Providing man power services to water quality lab level-II of KERS, K R Sagara" ಸೇವೆಗೆ ಅರ್ಹ ಗುತ್ತಿಗೆದಾರರಿಂದ ಇ-ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್‌ಗಳನ್ನು ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ರಲ್ಲಿನ ಷರತ್ತುಗಳಿಗೆ ಅನುಗುಣವಾಗಿ ಆಹ್ವಾನಿಸಲಾಗಿದೆ.
ಟೆಂಡರ್ ದಸ್ತಾವೇಜುಗಳನ್ನು ವಿದ್ಯುನ್ಮಾನ ಜಾಲದಲ್ಲಿ ದಿನಾಂಕ: 29.11.2025 ರಿಂದ 06.12.2025 ರವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್ ಸ್ವೀಕೃತಿ ಅಂತಿಮ ದಿನಾಂಕ: 06.12.2025 ರ ಸಂಜೆ 4.30 ಗಂಟೆವರೆಗೆ. ಟೆಂಡರ್ ತಾಂತ್ರಿಕ ಬಿಡ್‌ಗಳನ್ನು 08.12.2025 ರಂದು ಬೆಳಗ್ಗೆ 11.00 ಗಂಟೆಯ ನಂತರ ತೆರೆಯಲಾಗುವುದು. ಹೆಚ್ಚಿನ ವಿವರಗಳು ಬೇಕಾದಲ್ಲಿ ಈ ಕಛೇರಿಯನ್ನು ಕಛೇರಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಅಥವಾ ವೆಬ್ ಸೈಟ್ https://kppp.karnataka.gov.in ಮೂಲಕ ಪಡೆಯಬಹುದಾಗಿದೆ. ವೆಬ್‌ಸೈಟ್‌ನಲ್ಲಿರುವ ಟೆಂಡರ್ ವಿವರಗಳೇ ಅಂತಿಮವಾಗಿರುತ್ತವೆ.
ಸಹಿ/-ಮುಖ್ಯ ಸಂಶೋಧನಾಧಿಕಾರಿ, ತಾಂತ್ರಿಕ ಸೇವಾ ವಿಭಾಗ,
ಕರ್ನಾಟಕ ಇಂಜಿನಿಯರಿಂಗ್ ಸಂಶೋಧನಾ ಕೇಂದ್ರ ಕೃಷ್ಣರಾಜಸಾಗರ
ವಾಸಾಸಂಇ/ಹಿಸನಿ-ಮಂ/ಕೆಎಸ್‌ಎಂಸಿ&ಎ/605/2025-26

ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ (ಒಂದು ಷೆಡ್ಯೂಲ್ ವಾಣಿಜ್ಯ ಬ್ಯಾಂಕ್)
ಪ್ರಧಾನ ಕಛೇರಿ: ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ದ ಫೇರ್‌ವೇ, ನೆಲ ಮತ್ತು ಮೊದಲ ಮಹಡಿ, ಸರ್ವೆ ನಂ. 10/1, 11/2 & 12/2ಬಿ ಆಫ್ ದೊಮ್ಮೂರು, ಕೋರಮಂಗಲ ಒಳ ವರ್ತುಲ ರಸ್ತೆ, ಇಜಿಎಲ್ ಬ್ಯುಸಿನೆಸ್ ಪಾರ್ಕ್ ಹತ್ತಿರ, ಚಳ್ಳಘಟ್ಟ, ಬೆಂಗಳೂರು-560071
ಚಿನ್ನಾಭರಣಗಳ ಹರಾಜಿಗಾಗಿ ಸಾರ್ವಜನಿಕ ಸೂಚನೆ
ಈ ಕೆಳಗೆ ಹೆಸರಿಸಿರುವ ಸಾಲಗಾರರು ಹಲವಾರು ವಿನಂತಿಯ ನಂತರವೂ ಸಾಲ ಮರು ಪಾವತಿಸಲು ವಿಫಲರಾಗಿ, ಚಿನ್ನಾಭರಣ ಪಡೆದುಕೊಳ್ಳಲು ಸಾಧ್ಯವಾಗಿರುವುದಿಲ್ಲ. ಈ ಕೆಳಗೆ ಹೆಸರಿಸಿರುವ ಖಾತೆಗಳ ಸಾಲಗಾರರ ಚಿನ್ನಾಭರಣಗಳನ್ನು ಸಾರ್ವಜನಿಕ/ಆನ್‌ಲೈನ್/ಖಾಸಗಿ ಹರಾಜು ಮೂಲಕ ನಮ್ಮ ಶಾಖೆಯಲ್ಲಿ ಆನ್‌ಲೈನ್ ಆಕ್ಷನ್ ಟೈಗರ್ ಮೂಲಕ **10.12.2025 ರಂದು ಬೆಳಿಗ್ಗೆ 10.30ಕ್ಕೆ** ಮಾರಾಟ ಮಾಡಲಾಗುವುದು. ಭಾಗವಹಿಸಲು ಆಸಕ್ತರಾಗಿರುವವರು ಶಾಖೆಯನ್ನು ಸಂಪರ್ಕಿಸಬಹುದಾಗಿದೆ. ಯಾವುದೇ ಕಾರಣ ನೀಡದೆ, ಯಾವುದೇ ಅಥವಾ ಎಲ್ಲಾ ಬಿಡ್‌ಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿದೆ. ದಯವಿಟ್ಟು ಗಮನಿಸಬೇಕಾದುದೇನೆಂದರೆ, ಹರಾಜಿನ ದಿನದಂದು ಹರಾಜು ಪೂರ್ಣಗೊಂಡಿಲ್ಲವಾದರೆ, ಅದನ್ನು ಮರುದಿನ ಅದೇ ನಿಯಮ ನಿಬಂಧನೆಗಳಿಗನುಸಾರವಾಗಿ ನಡೆಸಲಾಗುವುದು. ಒಂದು ವೇಳೆ ಗ್ರಾಹಕ ಮೃತನಾಗಿದ್ದರೆ, ಅದೇ ನಿಯಮ ಮತ್ತು ನಿಬಂಧನೆ ಅವರ ಉತ್ತರಾಧಿಕಾರಿ/ ನಾಮನಿರ್ದೇಶಿತನಿಗೆ ಅನ್ವಯವಾಗುವುದು. ಸಾಲಗಾರರಿಗೆ ಈ ಮೂಲಕ ಸೂಚಿಸುವುದೇನೆಂದರೆ, ಹರಾಜಿನ ಮೊದಲು ಎಲ್ಲ ಬಾಕಿ, ಬಡ್ಡಿ ಹಾಗೂ ಇತರೆ ವೆಚ್ಚಗಳನ್ನು ಪಾವತಿಸಬೇಕು. ತಪ್ಪಿದಲ್ಲಿ ಅಡಮಾನ ಮಾಡಿರುವ ಚಿನ್ನಾಭರಣಗಳನ್ನು ಮಾರಾಟ ಮಾಡಿ ಬ್ಯಾಂಕಿಗೆ ಬರಬೇಕಾಗಿರುವ ಬಾಕಿ ಹಣವನ್ನು ಬಡ್ಡಿ ಹಾಗೂ ಇತರೆ ವೆಚ್ಚಗಳನ್ನು ವಸೂಲು ಮಾಡಲಾಗುವುದು. ಯಾವುದೇ ವಿಚಾರಣೆ ಮತ್ತು ನಿಯಮ ಮತ್ತು ನಿಬಂಧನೆಗಳಿಗೆ ಶಾಖೆಯನ್ನು ಸಂಪರ್ಕಿಸಿ. ಶಾಖೆ ವಿಳಾಸಕ್ಕಾಗಿ **www.janabank.com** ಗೆ ಭೇಟಿ ನೀಡಿ.

ಕ್ರ. ಸಂ.	ಸಾಲದ ಖಾತಾ ಸಂ.	ಸಾಲಗಾರರ / ಸಹ-ಸಾಲಗಾರರ ಹೆಸರು	ಅಡಮಾನ ಮಾಡಿದ ಆಭರಣಗಳ ಒಟ್ಟು ತೂಕ
1	31138730066568, 31139170068716	ಶೋಭಾ ರಾಥೋಡ್	39.4
2	31138730065743, 31130480000042	ನಸೀಮ ರಾಮ್‌ಜಾನ್‌ಸಾಬ್ ನಡಾಫ್	6.2
3	31138730064829, 31139170068653	ಹಲೀಮ ಶೇಕ್	4.9
4	31138730064131, 31139170060862	ಹಲೀಮ ಅಬ್ದುಲ್ ಶೇಕ್	6.7
5	31138730066683, 31138820010845	ನಸೀಮ ಮೀರಸಾಬ್	5.3
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., #9, ಎಂಐಜಿ, ಕೆಹೆಚ್‌ಬಿ ಕಾಲೊನಿ, ಶೋಲಾಪುರ ರಸ್ತೆ, ಬಿಜಾಪುರ, ಪಿನ್; 586103			
6	46448730039326	ಮಾದನಾಯ್ಕ್	7.7
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಒಂದನೇ ಮಹಡಿ, ನಂ. 1809/1809 ಮತ್ತು 1810/1810 ರಾಮಸಮುದ್ರ ಪಟ್ಟಣ, ಎಫ್ ವಿಭಾಗ, ಬಿ ಆರ್ ಹಿಲ್ಸ್, ಚಾಮರಾಜನಗರ-571313.			
7	31870670000017	ಸತ್ಯಶ್ರೀ ಕೆ	113.6
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಒಂದನೇ ಮಹಡಿ, ನಂ. 273-ಬಿ, ಕೊ-ಅಪರೇಟಿವ್ ಹೌಸ್ ಕಟ್ಟಡ ಸೊಸೈಟಿ ಚೌಡೇಶ್ವರಿ ಬಸ್ ನಿಲ್ದಾಣದ ಎದುರು, ಮತ್ತಿಕೆರೆ, ಬೆಂಗಳೂರು-560078.			
8	31138730062836	ಮಲ್ಲಿಕಾರ್ಜುನ್ ಕಟ್ಟಿಮನಿ	13.5
9	31138160004142	ವಿಶ್ವೇಶ್ವರಯ್ಯ ಡಿ ಮಠಪತಿ	766.1
10	31138160004139	ವಿಶ್ವೇಶ್ವರಯ್ಯ ಡಿ ಮಠಪತಿ	664.2
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಸಿಟಿಎಸ್ ನಂ.1334/ಎ, 2ನೇ ಮಹಡಿ, ಜಯಲಕ್ಷ್ಮಿ ಟ್ರಾನ್ಸ್‌ಪೋರ್ಟ್ ಕಂ. ಮೇಲ್ಭಾಗ, ಶಹಾಪೇಟೆ, ಬಿಜಾಪುರ-586101			
11	33878730045032	ಸುಮಿತ್ರ ಲಕ್ಷ್ಮಣ	6
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ನಂ. 33/34, ಖಾತಾ ನಂ.159, ಪಿಐಡಿ ನಂ.14-23-33/34, 1ನೆ ಕ್ರಾಸ್, ಮುನೇಶ್ವರ ಬ್ಲಾಕ್, ಬೆಂಗಳೂರು-560086.			
12	33878730045390, 33879170062069	ಅಕ್ವೀಲ್ ಅಹಮದ್	4.1
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ನಂ. 33/34, ಮಹಾಲಕ್ಷ್ಮಿ ಲೇಔಟ್ ಮುನೇಶ್ವರ ಬ್ಲಾಕ್, ಬೆಂಗಳೂರು-560086			
13	45358160000836	ಚಂದ್ರಕಲಾ ಎನ್	49.6
14	45358160000823	ಚಂದ್ರಕಲಾ ಎನ್	67.8
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನಂ. 12, 1ನೇ ಮಹಡಿ, ಇಂಡಿಯನ್ ಓವರ್‌ಸೀಸ್ ಬ್ಯಾಂಕ್ ಮೇಲ್ಭಾಗ, ನಾಗರಬಾವಿ 2ನೇ ಹಂತ, 11ನೇ ಬ್ಲಾಕ್, ಪಿ ಆರ್ ಪಾಳ್ಯ, ಬೆಂಗಳೂರು-560072.			
15	32018730008188	ಶಕುಂತಲ ಹೊಸಮನಿ	4.25
16	32018730008152	ಮಂಜು ಮಾದಾರ್	5.4
17	32018160001826	ವಿಜಯ್ ಹಲವಾರ್ ನಾಗಪ್ಪ ಹಲವಾರ್	48.7
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನಂ. 239/2ಎ+ಬಿ/1ಡಿ, ಪ್ಲಾಟ್ ನಂ. 5, ನಂದಗೌಡ ರಸ್ತೆ, ಕೆರೂಡಿ ಆಸ್ಪತ್ರೆ ಹತ್ತಿರ, ವಿನಾಯಕ್ ನಗರ, ಬಾಗಲಕೋಟೆ – 587101, ಭಾರತ			
18	99998730000606	ಮೊಹಮ್ಮದ್ ಹುಸೇನ್ ಖಿಲ್ಜಿ	19.9
19	99998730000569	ಅಂಜಲಿ ಕಶ್ಯಪ್	12.78
20	99998730000454	ಲಕ್ಷ್ಮಿ ಬಾಯಿ ಸಿಂಗ್	3.1
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ, 1ನೇ ಮತ್ತು 2ನೇ ಮಹಡಿ, 'ನಂದಿನಿ' ನಂ. 300/ಎ-70 10ನೇ ಮೈನ್, 36ನೇ ಕ್ರಾಸ್, 5ನೇ ಬ್ಲಾಕ್, ಜಯನಗರ, ಬೆಂಗಳೂರು-560041, ಭಾರತ			
21	45438160000032	T B Sunanda ಟಿ ಬಿ ಸುನಂದ	131.4
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, #3365/6ಎ ಮತ್ತು 6ಬಿ, ಲಕ್ಷ್ಮಿ ಫ್ಲೋರ್ ಮಿಲ್ ಹತ್ತಿರ, ಶಾಮನೂರು ರಸ್ತೆ, ದಾವಣಗೆರೆ-577004, ಭಾರತ			
22	47460670000018	ಮೆಹಮೂದಾ ಇಬ್ರಾಹಿಂ ಪಾಶಾ	186.9
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, 7ಎಂ-414, ಹೆಚ್‌ಆರ್‌ಬಿಆರ್ 1ನೇ ಬ್ಲಾಕ್ ಎಕ್ಸ್‌ಟೆನ್ಶನ್, ಬೆಂಗಳೂರು-560043, ಭಾರತ			
23	45488730018288	ಶರಣಪ್ಪ ಇ	5
24	45488730018160	ರಮೇಶ್ ಎನ್	11.6
25	45488730017539	ಶ್ರೀನಿವಾಸ ಜಿ	15.3
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲಮಹಡಿ, ಡೋರ್ ನಂ.1-4-380, ಹೆಚ್ ಕೆ ದುಂಬಾ ನರ್ಸಿಂಗ್ ಹೋಂ, ಆರ್ಥೋಪೆಡಿಕ್ ಸೆಂಟರ್, ಐ ಬಿ ರಸ್ತೆ, ರೈಲ್ವೆ ನಿಲ್ದಾಣ ಸಮೀಪ, ರಾಯಚೂರು-584101, ಭಾರತ			
26	99998730000747	ಸಚಿನ್ ಅಜಿತ್ ಕಾಂಬ್ಳೆ	5
27	99998730000467	ಅನ್ವಿತ್ ಕುಮಾರ್	17.4
28	31838730059659, 31839170071909	ಲತಾ ಎಂ	258.3
29	99998730000224	ಸುಕ್ತಾರ ರೇಜಕ್	3.58
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ, 1ನೇ ಮತ್ತು 2ನೇ ಮಹಡಿ, 'ನಂದಿನಿ' ನಂ. 300/ಎ-70 10ನೇ ಮೈನ್, 36ನೇ ಕ್ರಾಸ್, 5ನೇ ಬ್ಲಾಕ್, ಜಯನಗರ, ಬೆಂಗಳೂರು-560041, ಭಾರತ			
30	46448730040191, 47099170018160	ಶಿವಣ್ಣ	19
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಒಂದನೇ ಮಹಡಿ, ನಂ. 1809/1809 ಮತ್ತು 1810/1810 ರಾಮಸಮುದ್ರ ಪಟ್ಟಣ, ಎಫ್ ವಿಭಾಗ, ಬಿ ಆರ್ ಹಿಲ್ಸ್, ಚಾಮರಾಜನಗರ-571313.			
31	45448730007249, 45449170011351	ಹಜರತಾಲಿ ಕೆ ಖಾಜೇಸಾಬ್ ನಾಯಕನವರ್	14.8
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ವಿದ್ಯಾನಗರ, ಬಿವಿಬಿ ಇಂಜಿನಿಯರಿಂಗ್ ಕಾಲೇಜು ಎದುರು, ಮೆಕ್ ಡೊನಾಲ್ಡ್ ಹತ್ತಿರ, ಹಳೆ ರಾಷ್ಟ್ರೀಯ ಹೆದ್ದಾರಿ ಹುಬ್ಬಳ್ಳಿ, ಹುಬ್ಬಳ್ಳಿ – 580021			

ಸ್ಥಳ: ಕರ್ನಾಟಕ
ದಿನಾಂಕ: 03.12.2025
ಸಹಿ/-ಅಧಿಕೃತ ಅಧಿಕಾರಿ
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್

ಕರ್ನಾಟಕ ಸರ್ಕಾರ
ನಗರ ಭೂ ಸಾರಿಗೆ ನಿರ್ದೇಶನಾಲಯ, ನಗರಾಭಿವೃದ್ಧಿ ಇಲಾಖೆ
ಆಯುಕ್ತರ ಕಾರ್ಯಾಲಯ ನಗರ ಭೂ ಸಾರಿಗೆ
ಬಿಎಂಟಿಸಿ, ಟಿಟಿಎಂಸಿ, 'ಬಿ' ಬ್ಲಾಕ್ (ಬಸ್ ಸ್ಟ್ಯಾಂಡ್ ಮೇಲ್ಭಾಗ), 4ನೇ ಮಹಡಿ, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು-560027, ದೂರವಾಣಿ : 080-22226627/6628, ಫ್ಯಾಕ್ಸ್ : 080-22226630, ಇಮೇಲ್ : dultbangalore@gmail.com, dult@karnataka.gov.in
No: DULT-ADMOCARE(HSTA)/1/2025/1005 ದಿನಾಂಕ 02.12.2025
ಹುದ್ದೆ ಪ್ರಕಟಣೆ
ನಗರ ಭೂ ಸಾರಿಗೆ ನಿರ್ದೇಶನಾಲಯವು ಬೆಂಗಳೂರಿನ ಕಛೇರಿಯಲ್ಲಿ ಗುತ್ತಿಗೆ ಆಧಾರದ ಮೇಲೆ ವಿವಿಧ ಹುದ್ದೆಗಳಿಗೆ ಅರ್ಹ ವೃತ್ತಿಪರ ಅಭ್ಯರ್ಥಿಗಳನ್ನು ನೇಮಿಸಿಕೊಳ್ಳಲು ಉದ್ದೇಶಿಸಲಾಗಿರುತ್ತದೆ. ಆಸಕ್ತ ಅಭ್ಯರ್ಥಿಗಳು ಹೆಚ್ಚಿನ ವಿವರಗಳಿಗಾಗಿ https://dult.karnataka.gov.in/59/careers/en ಗೆ ಭೇಟಿ ನೀಡಿ, ಅರ್ಜಿ ಸಲ್ಲಿಸಬಹುದು.
ಸಹಿ/- ಜಂಟಿ ನಿರ್ದೇಶಕರು (ಆಡಳಿತ)
ನಗರ ಭೂ ಸಾರಿಗೆ ನಿರ್ದೇಶನಾಲಯ
ನಗರಾಭಿವೃದ್ಧಿ ಇಲಾಖೆ.
ವಾಸಾಸಂಇ/ವಾಪ್ರ/4159/ಶಿರಡಿ ಸಾಯಿ/2025-26

ಸಮಾಚಾರ ಸಣ್ಣದಲ್ಲ

ಊಟ, ತಿಂಡಿಯಲ್ಲೇ ಕಾಲಹರಣ

ಚಿತ್ರದುರ್ಗ: ಊಟ ತಿಂಡಿ ಮಾಡಿಕೊಂಡೇ ಸಿಎಂ, ಡಿಸಿಎಂ ಎರಡೂವರೆ ವರ್ಷ ಕಳೆದಿದ್ದಾರೆ. ಸುಳ್ಳು ಹೇಳಿಕೊಂಡು ಬಂದ ಸರಕಾರದಿಂದ ಜನರಿಗೆ ಅನ್ಯಾಯವಾಗಿದೆ ಎಂದು ಶ್ರೀರಾಮುಲು ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿ, 2028ರ ವಿಧಾನಸಭಾ ಚುನಾವಣೆಯಲ್ಲಿ ಬಿಹಾರ ಚುನಾವಣೆಯ ಫಲಿತಾಂಶ ರಾಜ್ಯದಲ್ಲಿ ಬರಲಿದೆ. ಬಿಹಾರಕ್ಕಿಂತ ದೊಡ್ಡಮಟ್ಟದಲ್ಲಿ ಬಿಜೆಪಿ ಗೆಲುವು ಸಾಧಿಸಲಿದೆ. ಸಿದ್ದರಾಮಯ್ಯ ಅವರು ಡಿಕೆಶಿ ಮೇಲೆ ಡಿಕೆಶಿಯವರು ಸಿದ್ದರಾಮಯ್ಯ ಮೇಲೆ ಯಾವತ್ತು ಬಾಂಬ್ ಹಾಕುತ್ತಾರೋ ಗೊತ್ತಿಲ್ಲ. ಸದ್ಯಕ್ಕಂತೂ ಕದನ ವಿರಾಮ ಘೋಷಣೆಯಾಗಿದೆ. ಅಧಿಕಾರಕ್ಕಾಗಿ ಕಚ್ಚಾಡುತ್ತಿರುವ ಕಾಂಗ್ರೆಸ್ ನಾಯಕರು ರಾಜ್ಯವನ್ನು ಮರೆತಿದ್ದಾರೆ. ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಠೇವಣಿ ಕಳೆದುಕೊಳ್ಳಲಿದೆ ಎಂದರು. ಬಿ.ವೈ.ವಿಜಯೇಂದ್ರ ಅವರು ಬಿಜೆಪಿ ಉಸ್ತುವಾರಿ ವಹಿಸಿಕೊಂಡ ನಂತರ ಕಾರ್ಯಕರ್ತರು ಚುರುಕಿನಿಂದ ಕೆಲಸ ಮಾಡುತ್ತಿದ್ದಾರೆ. ಮುಂದೆಯೂ ಅವರೇ ರಾಜ್ಯಘಟಕದ ಅಧ್ಯಕ್ಷರಾಗಿ ಮುಂದು ವರಿಯಲಿದ್ದಾರೆ ಎಂದರು.

ಪಕ್ಷ ತೆಗೆದುಕೊಳ್ಳುವ ತೀರ್ಮಾನಕ್ಕೆ ಬದ್ಧ

ಶಿವಮೊಗ್ಗ: ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರ ನೇಮಕದ ವಿಚಾರದಲ್ಲಿ ಪಕ್ಷದ ವರಿಷ್ಠರ ತೀರ್ಮಾನಕ್ಕೆ ನಾವು ಬದ್ಧರಾಗಿದ್ದೇವೆ. ನಮ್ಮ ತಂಡದ ನಿಲುವನ್ನು ಈಗಾಗಲೇ ಸ್ಪಷ್ಟಪಡಿಸಿದ್ದೇವೆ. ಅಧ್ಯಕ್ಷರ ಆಯ್ಕೆ ಇನ್ನೂ ತೀರ್ಮಾನವಾಗಬೇಕಿದೆ ಎಂದು ಮಾಜಿ ಸಚಿವ ಕುಮಾರ ಬಂಗಾರಪ್ಪ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಮಾಜಿ ಸಂಸದ ಜಿ.ಎಂ.ಸಿದ್ದೇಶ್ವರ ನೇತೃತ್ವದಲ್ಲಿ ನಮ್ಮ ತಂಡ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದು, ಬಿಜೆಪಿಯಲ್ಲಿರುವ ಆಂತರಿಕ ಪ್ರಜಾಪ್ರಭುತ್ವದ ಭಾಗವಾಗಿಯೇ ಹೊರತು, ಅದು ಯಾರನ್ನೂ ಗುರಿಯಾಗಿಸಿಕೊಂಡು ಮಾಡಿದ ಹೋರಾಟವಲ್ಲ. ಬಿಜೆಪಿ ಪಕ್ಷವಾಗಿಯೇ ನಾವು ಮಾಡಿದ್ದ ವಕ್ಫ್‌ಬೋರ್ಡ್ ಭೂಮಿ ಕಬಳಿಕೆ ವಿಚಾರ, ವಾಲ್ಮೀಕಿ ನಿಗಮದ ಹಗರಣಗಳ ಬಗ್ಗೆ ಮಾಡಿದ್ದ ಹೋರಾಟಗಳು ತಾರ್ಕಿಕ ಅಂತ್ಯಕ್ಕೆ ಹೋಗಿವೆ. ನಮಗೆ ಜಯ ಸಿಕ್ಕಿದೆ ಎಂದರು.

99 ಗುತ್ತಿಗೆದಾರರ ವಿರುದ್ಧ ಕ್ರಮ

ದೆಹಲಿ: ಜಲಜೀವನ್ ಮಿಷನ್ ಯೋಜನೆಯಲ್ಲಿ ಅಕ್ರಮ ಹಾಗೂ ಕಳಪೆ ಗುಣಮಟ್ಟದ ಕಾಮಗಾರಿ ನಡೆಸಿದ ಹಿನ್ನೆಲೆಯಲ್ಲಿ ರಾಜ್ಯದ 99 ಗುತ್ತಿಗೆದಾರರ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ ಎಂದು ಕೇಂದ್ರ ಜಲಶಕ್ತಿ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ತಿಳಿಸಿದರು. ಲೋಕಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರ ನೀಡಿದ ಅವರು, ಅಕ್ರಮಕ್ಕೆ ಸಂಬಂಧಿಸಿದಂತೆ ರಾಜ್ಯದಲ್ಲಿ 169 ದೂರುಗಳು ಸಲ್ಲಿಕೆಯಾಗಿವೆ. ಒಂಬತ್ತು ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲಾಗಿದೆ. ಒಂದು ಪ್ರಕರಣದ ಬಗ್ಗೆ ಸ್ವತಂತ್ರ ಸಂಸ್ಥೆಯಿಂದ ತನಿಖೆ ನಡೆಸಲಾಗಿದೆ ಎಂದರು. ಯೋಜನೆಯ ಅನುಷ್ಠಾನದಲ್ಲಿ ಅಕ್ರಮ ಆಗಿದೆ ಎಂದು ಆರೋಪಿಸಿ 32 ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳಿಂದ 17,036 ದೂರುಗಳು ಬಂದಿವೆ. ಈ ಪೈಕಿ ಶೇ.8ರಷ್ಟು ದೂರುಗಳು ಉತ್ತರ ಪ್ರದೇಶದಿಂದಲೇ (14,212) ಸಲ್ಲಿಕೆಯಾಗಿವೆ. ಈ ರಾಜ್ಯದಲ್ಲಿ 171 ಅಧಿಕಾರಿಗಳು ಹಾಗೂ 119 ಗುತ್ತಿಗೆದಾರರ ವಿರುದ್ಧ ಕ್ರಮವಹಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ನೀರಿನ ವಿಚಾರದಲ್ಲಿ ಬಿಜೆಪಿ ರಾಜಕೀಯ

ಗಂಗಾವತಿ: ತುಂಗಭದ್ರಾ ನೀರಿನ ವಿಚಾರದಲ್ಲಿ ಬಿಜೆಪಿಗರು ಅನಗತ್ಯವಾಗಿ ರಾಜಕೀಯ ಮಾಡುತ್ತಿದ್ದಾರೆ. ಬಿಜೆಪಿಗರಿಗೆ ಮಾನ-ಮಾರ್ಯದೆ ಇದ್ದರೆ ಪ್ರಧಾನಿ ನರೇಂದ್ರ ಮೋದಿ ಅವರ ಬಳಿ ಹೋಗಿ ಕುಣಿದು, ರೈತರಿಗೆ ಅನುಕೂಲ ಮಾಡಲಿ ಎಂದು ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ವಾಗ್ದಾಳಿ ನಡೆಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿಗರಿಗೆ ಬೇರೆ ಕೆಲಸ ಇಲ್ಲ. ರೈತರ ಬಗ್ಗೆ ಮಾತನಾಡಲು ಬಿಜೆಪಿಗರಿಗೆ ಯಾವುದೇ ನೈತಿಕತೆ ಇಲ್ಲ. ಈ ಹಿಂದೆ ಯಾವಾಗಲಾದರೂ ಒಂದೇ ಬೆಳೆಗೆ ನೀರು ಕೊಟ್ಟಾಗ, ಪರಿಹಾರ ಕೊಟ್ಟ ಉದಾಹರಣೆ ಇದ್ದರೆ ಬಿಜೆಪಿ ತಿಳಿಸಲಿ ಎಂದು ಸವಾಲು ಹಾಕಿದ ಸಚಿವ, ಜಲಾಶಯ ಸುರಕ್ಷತೆ ದೃಷ್ಟಿಯಿಂದ 80 ಟಿಎಂಸಿ ನೀರು ಮಾತ್ರ ಸಂಗ್ರಹಿಸಿ ಎಂದು ಹೇಳಿದವರು ಯಾರು? ರೈತರ ಪರ ರಾಜ್ಯ ಬಿಜೆಪಿ ನಾಯಕರು ಕೇಂದ್ರ ಸರಕಾರದ ಬಳಿ ಧ್ವನಿ ಎತ್ತಲಿ. ಆಗ ಪ್ರಧಾನಿ ಮೋದಿ ಅವರ ಬಳಿ ಕುಣಿದರೆ ಸ್ವಲ್ಪ ಉಪಯೋಗವಾಗಲಿದೆ ಎಂದು ಮಾರ್ಮಿಕವಾಗಿ ಹೇಳಿದರು.



ಬೇಲೂರು ಗೋಪಾಲಕೃಷ್ಣ ಜತೆ ಸಂಭಾಷಣೆ ವೇಳೆ ಸುದ್ದಿಗಾರರಿಗೆ ಕೇಳಿಸುವ ರೀತಿ ಸಿದ್ದರಾಮಯ್ಯ ಹೇಳಿಕೆ | ಬ್ರೇಕ್‌ಫಾಸ್ಟ್ ಸಭೆ ಬಳಿಕ ಸಂದೇಶ ನೀಡಿದರೇ ಸಿಎಂ?

ರಾಜಕೀಯ ಯಾರಪ್ಪನ ಆಸ್ತಿಯಲ್ಲ

ಸಿಎಂ ಹೇಳಿಕೆ ಭಾರೀ ಚರ್ಚೆಗೆ ಗ್ರಾಸ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯ ಕಾಂಗ್ರೆಸ್‌ನಲ್ಲಿ ಉದ್ಭವಿಸಿದ್ದ ನಾಯಕತ್ವ ಬದಲಾವಣೆಯ ಚರ್ಚೆಗೆ ಸದ್ಯಕ್ಕೆ ಶಾಂತವಾಗಿದ್ದರೂ, ಅಲ್ಲಲ್ಲಿ ಹೇಳಲಾಗುತ್ತಿರುವ 'ಹೇಳಿಕೆ'ಗಳು ಕೆಂಡ ಸಂಪೂರ್ಣ ಆರಿಲ್ಲ ಎನ್ನುವುದನ್ನು ಪದೇಪದೆ ಸಾಬೀತುಪಡಿಸುತ್ತಿದೆ. ಇದಕ್ಕೆ ಪೂರಕ ಎನ್ನುವ ರೀತಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ 'ರಾಜಕೀ ಯ ಯಾರಪ್ಪನ ಆಸ್ತಿಯಲ್ಲ; ಏನಾಗುತ್ತೋ ಆಗಲಿ' ಎನ್ನುವ ಮಾತು ಚರ್ಚೆಯನ್ನು ಹುಟ್ಟುಹಾಕಿದೆ.

ಮಂಗಳವಾರ ಬೆಳಗ್ಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಿವಾಸ ದಲ್ಲಿ ನಡೆದ ಉಪಾಹಾರ ಸಭೆಯ ಬಳಿಕ ಮುಖ್ಯಮಂತ್ರಿ, ಉಪಮು ಖ್ಯಮಂತ್ರಿಗಳಿಬ್ಬರೂ 'ನಾವಿಬ್ಬರೂ ಸಹೋದರರಂತೆ. ಮುಂದೆಯೂ ಒಟ್ಟಿಗೆ ಪಕ್ಷಕ್ಕಾಗಿ ದುಡಿಯುತ್ತೇವೆ ಎನ್ನುವ ಮಾತನ್ನು ಹೇಳಿದ್ದರು. ಆದರೆ ಇದಾದ ಕೆಲಗಂಟೆಗಳಲ್ಲಿ ಎಲ್ಲವನ್ನು ಹೈಕಮಾಂಡ್ ತೀರ್ಮಾನಿಸುತ್ತದೆ ಎಂದು ಮಾಗಡಿ ಬಾಲಕೃಷ್ಣ ಹೇಳಿದ್ದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 'ರಾಜಕೀಯ ಯಾರಪ್ಪನ ಆಸ್ತಿಯಲ್ಲ' ಎಂದು ಬೇಲೂರು ಗೋಪಾಲಕೃಷ್ಣಗೆ ಹೇಳಿದ್ದು ಹೊಸ ಚರ್ಚೆಗೆ ಗ್ರಾಸವಾಗಿದೆ.

ವಿಧಾನಸೌಧದ ಕೆಂಗಲ್ ಗೇಟ್ ಬಳಿಕ ಬೇಲೂರು ಗೋಪಾಲಕೃಷ್ಣ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬಳಿ ಬ್ರೇಕ್‌ಫಾಸ್ಟ್ ಸಭೆ ಬಗ್ಗೆ ಅನೌಪ ಚಾರಿಕವಾಗಿ ಪ್ರಶ್ನಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ ಅವರು, 'ರಾಜಕೀಯ ಶಾಶ್ವತ ಅಲ್ಲ. ನಾನು ಯಾವುದಕ್ಕೂ ತಲೆಕೆಡಿಸಿಕೊಳ್ಳಲ್ಲ. ರಾಜ ಕೀಯ ನಮ್ಮಪ್ಪನ ಆಸ್ತಿ ಅಲ್ಲ. ಏನ್ ಆಗುತ್ತೋ ಆಗಲಿ. ಎನ್ನುವ ಮಾತನ್ನು ಆಡಿದ್ದಾರೆ. ಮೇಲ್ನೋಟಕ್ಕೆ ಇದು ಲೋಕಾಭಿರಾಮ ಮಾತಾಗಿದ್ದರೂ, ಸದ್ಯದ ಬೆಳವಣಿಗೆಯಲ್ಲಿ ಹಲವು ಪ್ರಶ್ನೆಗಳಿಗೆ ಎಡೆಮಾಡಿಕೊಟ್ಟಿದೆ.

> ವಿಪಕ್ಷಗಳು ಕೇಳಬಹುದಾದ ಪ್ರಶ್ನೆಗಳನ್ನು ಸಮರ್ಥವಾಗಿ ಸರಕಾರ ಎದುರಿಸಲಿದೆ. ಕಬ್ಬು, ಮೆಕ್ಕೆಜೋಳದ ಸಮಸ್ಯೆ ಸೇರಿದಂತೆ ರಾಜ್ಯದ ಸಮಸ್ಯೆಗಳಿಗೆ ಸಮರ್ಪಕ ಪರಿಹಾರಗಳನ್ನು ಕಂಡುಕೊಳ್ಳಲು ಈ ಅಧಿವೇಶನದಲ್ಲಿ ಪ್ರಯತ್ನಿಸಲಾಗುವುದು.
> -ಸಿದ್ದರಾಮಯ್ಯ, ಮುಖ್ಯಮಂತ್ರಿ

ಉಪಾಹಾರಕ್ಕೆ ಮನೆಗೆ ಆಗಮಿಸಿದ ಸಿಎಂ ಸಿದ್ದರಾಮಯ್ಯ ಅವರನ್ನು ಡಿಸಿಎಂ ಡಿಕೆ ಶಿವಕುಮಾರ್ ಸಂತಸದಿಂದ ಭರಮಾಡಿಕೊಂಡರು.

ಗೊಂದಲದಲ್ಲಿ ಬಣ ನಾಯಕರು

ಈ ನಡುವೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಡುವಿನ ಎರಡು ಬ್ರೇಕ್‌ಫಾಸ್ಟ್ ಸಭೆಯ ಬಳಿಕ ತಾತ್ಕಲಿಕ ಗೊಂದಲ ಶಮನವಾಗಿದೆ. ಆದರೆ, ತಮ್ಮ ತಮ್ಮ ನಾಯಕರ ಪರವಾಗಿ ಬ್ಯಾಟ್‌ಬೀಸಿದ್ದ ಹಲವರಿಗೆ ಮುಂದೇನು ಎನ್ನುವ ಗೊಂದಲ ಶುರುವಾಗಿದೆ. ಈ ಇಬ್ಬರ ನಡುವಿನ ತಿಕ್ಕಾಟದಲ್ಲಿ ಕೆಲ ಶಾಸಕರು, ಸಚಿವರು ಬಹಿರಂಗ ಹೇಳಿಕೆಗಳನ್ನು ನೀಡಿದ್ದರು. ಆದರೀಗ ಸಿಎಂ-ಡಿಸಿಎಂ 'ನಾವಿಬ್ಬರೂ ಸಹೋದರರು' ಎಂದು ಹೇಳಿಕೊಳ್ಳುತ್ತಿದ್ದಾರೆ. ಇದು ತಾತ್ಕಲಿಕ ಎನ್ನುವುದು ಗೊತ್ತಿದ್ದರೂ ಮುಂದಿನ ಬದಲಾವಣೆ ಸಮಯದಲ್ಲಿ ತಮ್ಮ ಸ್ಥಾನಗಳಿಗೆ ಏನಾದರೂ ಸಮಸ್ಯೆಯಾಗಬಹುದೇ ಎನ್ನುವ ಆತಂಕದಲ್ಲಿ ಹಲವರಿದ್ದಾರೆ. ಪಕ್ಷದ ಶಿಸ್ತು ಸಮಿತಿಯ ನೋಟಿಸ್‌ಗಳನ್ನು ಎದುರಿಸಬೇಕಾಗುವುದೇ ಎಂದು ಚಿಂತೆಗೀಡಾಗಿದ್ದಾರೆ.

ಅಧಿವೇಶನದಲ್ಲಿ ಪ್ರತಿಪಕ್ಷಗಳನ್ನು ಸರಕಾರ ಸಮರ್ಥವಾಗಿ ಎದುರಿಸಲಿದೆ

ನಾನು, ಡಿಕೆಶಿ ಸಹೋದರರಂತೆ: ಸಿಎಂ

ಬೆಂಗಳೂರು: ನನ್ನ ಮತ್ತು ಡಿ.ಕೆ.ಶಿವಕುಮಾರ್ ನಡುವೆ ಯಾವುದೇ ಭಿನ್ನಾಭಿಪ್ರಾಯಗಳಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿ ಸಿದ್ದಾರೆ.

ಡಿ.ಕೆ.ಶಿವಕುಮಾರ್ ನಿವಾಸದಲ್ಲಿ ಉಪಾಹಾರ ಸಭೆಯ ಬಳಿಕ ಮಾತನಾಡಿದ ಅವರು, ನಮ್ಮಲ್ಲಿ ಭಿನ್ನಾಭಿಪ್ರಾಯಗಳಿಲ್ಲ. ಒಗ್ಗಟ್ಟಿನಿಂದ ಇದ್ದೇವೆ. ಶಾಸಕಾಂಗ ಪಕ್ಷದ ಸಭೆ ಕರೆದಾಗ ನಮ್ಮ ಶಾಸಕರೊಂದಿಗೆ ಊಟ ಮಾಡುತ್ತೇವೆ. ನಾನು ಹಾಗೂ ಉಪಮುಖ್ಯಮಂತ್ರಿಗಳು ಸಹೋದರರಿದ್ದಂತೆ, ಒಂದೇ ಪಕ್ಷದಲ್ಲಿದ್ದು, ಒಂದೇ ಸಿದ್ಧಾಂತ ನಂಬಿಕೊಂಡಿದ್ದೇವೆ. 2028ರ ಚುನಾವಣೆಯಲ್ಲಿಯೂ ಒಟ್ಟಿಗೆ ಕೆಲಸ ಮಾಡಿ ಪಕ್ಷವನ್ನು ಅಧಿಕಾರಕ್ಕೆ ತರಲಾಗುವುದು ಎಂದರು.

ದೆಹಲಿಯಲ್ಲಿ ಸರ್ವಪಕ್ಷ ಸಂಸದರ ಸಭೆಯನ್ನು ಡಿ.8ರಂದು ಕರೆಯಲಾಗಿದೆ. ಆದ್ದರಿಂದ ನಾನು, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ದೆಹಲಿಗೆ ಹೋಗುತ್ತಿದ್ದೇವೆ. ಸಭೆಯ ಬಳಿಕ ಹೈಕಮಾಂಡ್ ಭೇಟಿಗೆ ಅವಕಾಶ ಸಿಕ್ಕರೆ ಭೇಟಿ ಮಾಡಲಾಗುವುದು. ಬುಧವಾರ ಮಂಗಳೂರಿಗೆ ಆಗಮಿಸಲಿರುವ ಕೆ.ಸಿ.ವೇಣುಗೋಪಾಲ್ ಅವರೊಂದಿಗೆ ಚರ್ಚೆ ನಡೆಸುತ್ತೇನೆ ಎಂದರು. ಉಪಾಹಾರ ಸಭೆಯಲ್ಲಿ ಹೈಕಮಾಂಡ್ ಸೂಚನೆಯಂತೆ ನಡೆದುಕೊ ಳ್ಳುವುದಾಗಿ ಮೊನ್ನೆ ಹಾಗೂ ಇಂದು ಕೂಡ ಚರ್ಚಿಸಲಾಗಿದೆ ಎಂದರು.

ಇಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಆಹ್ವಾನದ ಮೇರೆಗೆ ಬೆಳಗಿನ ಉಪಹಾರಕ್ಕಾಗಿ ಅವರ ನಿವಾಸಕ್ಕೆ ಭೇಟಿ ನೀಡಿದೆ. ಕಾಂಗ್ರೆಸ್ ಪಕ್ಷದ ವಿಚಾರಗಳನ್ನು ಈ ಭೇಟಿಯಲ್ಲಿ ಚರ್ಚಿಸಲಾಗಿದೆ. ಡಿ.8ರಂದು ಬೆಳಗಾವಿ ಅಧಿವೇಶನ ಪ್ರಾರಂಭವಾಗಲಿದ್ದು, ಪ್ರತಿಪಕ್ಷಗಳನ್ನು ಎದುರಿಸಲು ಸರಕಾರದ ರಣನೀತಿಗಳ ಬಗ್ಗೆ ಚರ್ಚಿಸಲಾಗಿದೆ. ಪ್ರತಿಪಕ್ಷಗಳು ಸರಕಾರದ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಲಿದ್ದಾರೆ ಎಂದು ಹೇಳಲಾಗಿದೆ.

ಒಂದೇ ಧ್ವನಿಯಲ್ಲಿ ವಿಪಕ್ಷ ಎದುರಿಸಲು ನಾವಿಬ್ಬರು ಸಿದ್ಧ

ರಾಜಕೀಯ ಕುರಿತು ಚರ್ಚೆ: ಡಿಸಿಎಂ

ಬೆಂಗಳೂರು: ನಾನು ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉಪಾಹಾರ ಕೂಟದಲ್ಲಿ ವಿಧಾನ ಪರಿಷತ್ ಚುನಾವಣೆ ಅಭ್ಯರ್ಥಿಗಳ ಆಯ್ಕೆ, ದೆಹಲಿಯಲ್ಲಿ ಸರ್ವಪಕ್ಷ ಸಂಸದರ ಸಭೆ, ವಿಧಾನಸಭೆ ಚಳಿಗಾಲದ ಅಧಿವೇಶನದ ಕಾರ್ಯತಂತ್ರಗಳು ಸೇರಿದಂತೆ ಪಕ್ಷ, ಸರಕಾರ ಹಾಗೂ ರಾಜಕೀಯ ವಿಚಾರಗಳ ಕುರಿತು ಉಪಹಾರ ಕೂಟದಲ್ಲಿ ಚರ್ಚೆ ಮಾಡಿದ್ದೇವೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ತಿಳಿಸಿದರು.

ಉಪಾಹಾರ ಕೂಟದ ಬಳಿಕ ಮಾತನಾಡಿದ ಅವರು, ನಾನು ಮುಖ್ಯಮಂತ್ರಿಗಳನ್ನು ಉಪಾಹಾರ ಕೂಟಕ್ಕೆ ಬರುವಂತೆ ಮೊದಲು ಕರೆದಿದ್ದೆ. ಅವರು ಮೊದಲು ನೀವೇ ನಮ್ಮ ಮನೆಗೆ ಬನ್ನಿ, ಆಮೇಲೆ ಬರುತ್ತೇನೆ ಎಂದಿದ್ದರು. ಅದರಂತೆ ನಾನು ಅವರ ಮನೆಗೆ ಹೋಗಿದ್ದೆ. ಇಂದು ನಮ್ಮ ಮನೆಗೆ ಆಹ್ವಾನಿಸಿದ್ದೆ. ನಾವಿಬ್ಬರೂ ಬಹಳ ಸಂತೋಷದಿಂದ ಉಪಹಾರ ಸೇವಿಸಿದ್ದೇವೆ. ಈ ವೇಳೆ ರಾಜಕೀಯವಾಗಿಯೂ ಚರ್ಚೆ ಮಾಡಿದ್ದೇವೆ. ಪದವೀಧರ ಹಾಗೂ ಶಿಕ್ಷಕರ ನಾಲ್ಕು ಕ್ಷೇತ್ರಗಳ ವಿಧಾನ ಪರಿಷತ್ ಚುನಾವಣೆಗೆ ನಮ್ಮ ಪಕ್ಷದ ಅಭ್ಯರ್ಥಿಗಳನ್ನು ಅಂತಿಮಗೊಳಿಸಬೇಕಿದೆ. ಈ ವಿಚಾರವಾಗಿ ನಾವಿಬ್ಬರೂ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರೊಂದಿಗೆ ಚರ್ಚೆ ಮಾಡಿದ್ದೇವೆ. ಪಕ್ಷ ಹಾಗೂ ಸರಕಾರದ ವಿಚಾರವನ್ನು ಚರ್ಚೆ ಮಾಡಿದ್ದೇವೆ ಎಂದು ತಿಳಿಸಿದರು.

> ನಮ್ಮ ಪಕ್ಷದಲ್ಲಿ ಯಾರೂ ಬೇರೆಯಾಗಿಲ್ಲ. ಮಾಧ್ಯಮಗಳು ಬೇರೆ ಮಾಡುತ್ತಿದ್ದೀರಿ. ಬಿಜೆಪಿ ಹಾಗೂ ಜೆಡಿಎಸ್ ನಾಯಕರು ಸದನದಲ್ಲಿ ಪ್ರತಿಭಟನೆ ಮಾಡುವುದಾದರೆ ಮಾಡಲಿ. ಯಾವ ವಿಚಾರಕ್ಕೆ ಮಾಡುತ್ತಾರೆ? ಅವರದ್ದು ಖಾಲಿ ಟ್ರಂಕ್.
> -ಡಿ.ಕೆ.ಶಿವಕುಮಾರ್, ಡಿಸಿಎಂ

ಸಿದ್ದು-ಡಿಕೆ ಇಬ್ಬರನ್ನು ಆಹ್ವಾನಿಸಲಿರುವ ಗೃಹ ಸಚಿವ ಜಿ.ಪರಮೇಶ್ವರ

ಮುಂದಿನ ಬ್ರೇಕ್‌ಫಾಸ್ಟ್ ಪರಂ ಮನೇಲಿ?

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯ ಕಾಂಗ್ರೆಸ್‌ನಲ್ಲಿ ಶುರುವಾಗಿದ್ದ ಗೊಂದಲಕ್ಕೆ ಬ್ರೇಕ್ ಹಾಕಿದ್ದ 'ಬ್ರೇಕ್‌ಫಾಸ್ಟ್ ಮೀಟಿಂಗ್' ಸರಣಿ ಮುಂದುವರಿಯುವ ಸಾಧ್ಯತೆ ದಟ್ಟವಾಗಿದೆ.

ಕಳೆದ ಶನಿವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ನಿವಾಸದಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಉಪಹಾರ ಸಭೆಗೆ ಕರೆದಿದ್ದರೆ, ಮಂಗಳವಾರ ಡಿ.ಕೆ.ಶಿವಕುಮಾರ್ ತಮ್ಮ ನಿವಾಸಕ್ಕೆ ಸಿದ್ದರಾಮಯ್ಯ ಅವರನ್ನು ಆಹ್ವಾನಿಸಿದ್ದರು. ಇದೀಗ ಈ ಇಬ್ಬರೂ ನಾಯಕರನ್ನು ಹಿರಿಯ ಸಚಿವ ಡಾ.ಜಿ. ಪರಮೇಶ್ವರ ತಮ್ಮ ಮನೆಗೆ ಬ್ರೇಕ್‌ಫಾಸ್ಟ್‌ಗೆ ಬರುವಂತೆ ಆಹ್ವಾನಿಸಲು ಸಜ್ಜಾಗಿದ್ದಾರೆ ಎನ್ನಲಾಗಿದೆ.

ಸಿದ್ದರಾಮಯ್ಯ ನಿವಾಸದಲ್ಲಿ ನಡೆದ ಉಪಹಾರ ಸಭೆಗೆ ನಮ್ಮನ್ನು ಕರೆದಿಲ್ಲ. ಅದಕ್ಕೆ ಹೋಗಿಲ್ಲ ಎಂದಿದ್ದ ಗೃಹ ಸಚಿವ ಪರಮೇಶ್ವರ ಅವರು, ಇದೀಗ ತಮ್ಮ ಮನೆಯಲ್ಲಿಯೇ ಬ್ರೇಕ್‌ಫಾಸ್ಟ್ ಮೀಟಿಂಗ್ ನಡೆಸುವ ಇರಾದೆ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ಮಂಗಳವಾರ ಮಾತನಾಡಿದ ಪರಮೇಶ್ವರ, ಪಕ್ಷದಲ್ಲಿ ಎಲ್ಲವೂ ತಿಳಿಯಾಗಿದೆ. ಈಗ ಸಂತೋಷದ ವಾತಾವರಣವಿದೆ. ಸಿಎಂ-ಡಿಸಿಎಂ 2ನೇ ಬ್ರೇಕ್ ಫಾಸ್ಟ್‌ಗೂ ನನ್ನನ್ನು ಕರೆದಿಲ್ಲ. ಸದ್ಯಕ್ಕೆ ಅವರು ಇಬ್ಬರೇ ತಿಂಡಿ ತಿನ್ನುತ್ತಿದ್ದಾರೆ. ನಮ್ಮನ್ನೂ ಕರೆದರೆ ನಾವೂ ತಿಂಡಿ ತಿನ್ನಲು ಹೋಗುತ್ತೇವೆ. ಅಗತ್ಯ ಬಿದ್ದರೆ ನಮ್ಮ ಮನೆಗೂ ಬ್ರೇಕ್ ಫಾಸ್ಟ್‌ಗೆ ಕರೆಯುತ್ತೇನೆ. ಸಿಎಂ-ಡಿಸಿಎಂ ಇಬ್ಬರನ್ನೂ ನನ್ನ ಮನೆಗೂ ಏಕೆ ಕರೆಯಬಾರದು ಎಂದರು.

ಒಬ್ಬರಿಗೆ ಒಂದೊಂದು ಆಸೆ; ಹೈಕಮಾಂಡ್ ಅಂತಿಮ: ಇನ್ನು ಪರಮೇಶ್ವರ ಮುಖ್ಯಮಂತ್ರಿಯಾಗಲಿ ಎಂದು ಅಭಿಮಾನಿಗಳಿಂದ ಕೇಳಿ ಬರುತ್ತಿರುವ ಹೇಳಿಕೆ ವಿಚಾರಕ್ಕೆ ಪ್ರತಿಕ್ರಿಯಿಸುತ್ತಾ, ಎಲ್ಲ ನಾಯಕರ ಅಭಿಮಾನಿಗಳಿಗೆ ತಮ್ಮ ನಾಯಕ ಮುಖ್ಯಮಂತ್ರಿ ಆಗಲಿ ಅಂತ ಇರುತ್ತದೆ. ನನ್ನ ಅಭಿಮಾನಿಗಳಲ್ಲೂ ಆಸೆ ಇರುತ್ತದೆ. ಕೆಲವರಿಗೆ ಸಿದ್ದರಾಮಯ್ಯ ಮುಂದುವರಿಯಲಿ ಅಂತ ಇದೆ. ಇನ್ನು ಕೆಲವರಿಗೆ ಡಿಸಿಎಂ ಶಿವಕುಮಾರ್ ಸಿಎಂ ಆಗಲಿ ಅಂತ ಇದೆ. ಕೆಲವರಿಗೆ ಪರಮೇಶ್ವರ ಸಿಎಂ ಆಗಲಿ ಅಂತ ಇದೆ. ಇದೆಲ್ಲಾ ಜನರ ಅಭಿಲಾಷೆ. ಅದನ್ನು ತಪ್ಪು ಎಂದು ಹೇಳಲು ಆಗುವುದಿಲ್ಲ. ನಮ್ಮ ಹೈಕಮಾಂಡ್ ಏನು ನಿರ್ಧಾರ ಮಾಡುತ್ತೆ ಅದೇ ಮುಖ್ಯವಾಗುತ್ತದೆ ಎಂದು ತಿಳಿಸಿದರು.

ಬಿಎಸ್‌ವೈ ವಿರುದ್ಧದ ಪೋಕ್ಸೊ ಪ್ರಕರಣ ವಿಚಾರಣೆಗೆ ಸುಪ್ರೀಂಕೋರ್ಟ್‌ನಿಂದ ತಡೆ

ಬೆಂಗಳೂರು: ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ವಿರುದ್ಧ ದಾಖಲಾಗಿರುವ ಪೋಕ್ಸೋ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯ್ದೆ) ಪ್ರಕರಣದ ವಿಚಾರಣೆಗೆ ಸುಪ್ರೀಂ ಕೋರ್ಟ್ ತಾತ್ಕಾಲಿಕ ತಡೆ ನೀಡಿದೆ. ಜತೆಗೆ, ದಾಖಲಾಗಿರುವ ಪ್ರಕರಣವನ್ನು ಅರ್ಹತೆಯ ಆಧಾರದ ಮೇಲೆ ಮತ್ತೆ ಹೈಕೋರ್ಟ್ ಮುಂದೆ ಮುಂಡಿಸಲು ಯಡಿ ಯೂರಪ್ಪ ಅವರಿಗೆ ಅವಕಾಶವಿದೆಯೇ ಎಂಬುದನ್ನು ತಿಳಿಸಲು ಸೂಚಿಸಿ ರಾಜ್ಯ ಸರಕಾರಕ್ಕೆ ನೋಟಿಸ್ ಜಾರಿ ಮಾಡಿದೆ.

ತಮ್ಮ ವಿರುದ್ಧ ದಾಖಲಾಗಿರುವ ಪೋಕ್ಸೊ ಪ್ರಕರಣ ರದ್ದು ಮಾಡಲು ನಿರಾಕರಿಸಿದ ಹೈಕೋರ್ಟ್‌ನ ನ.13ರ ಆದೇಶದ ವಿರುದ್ಧ ಮಾಜಿ ಸಿಎಂ ಯಡಿಯೂರಪ್ಪ, ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಇದರ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ನೇತೃತ್ವದ ಪೀಠ ಕೇಸ್‌ನ ವಿಚಾರಣೆಗೆ ಮಧ್ಯಂತರ ತಡೆ ನೀಡಿತು.

ಪೋಕ್ಸೊ ಕೇಸಲ್ಲಿ ಆರೋಪಿಗಳಾಗಿರುವ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ, ವೈ. ಎಂ.ಅರುಣ, ಎಂ.ರುದ್ರೇಶ್ ಮತ್ತು ಜಿ. ಮರಿಸ್ವಾಮಿಗೆ ಬೆಂಗಳೂರಿನ ಎಫ್‌ಟಿಎಸ್ ವಿಶೇಷ ಕೋರ್ಟ್ ಸಮನ್ಸ್ ಜಾರಿ ಮಾಡಿತ್ತು. ಅದರಂತೆ ಆರೋಪಿಗಳು ಡಿ.2 ರಂದು ಖುದ್ದು ವಿಚಾರಣೆಗೆ ಹಾಜರಾಗಬೇಕು. ಮುಂದಿನ 30 ದಿನಗಳ ಒಳಗೆ ಸಾಕ್ಷಿ ವಿಚಾರಣೆ ನಡೆಯಬೇಕು

ಪ್ರಕರಣದ ಹಿನ್ನೆಲೆ ಏನು?

ಅಪ್ರಾಪ್ತೆಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವ ಆರೋಪ ಸಂಬಂಧ ಸಂತ್ರಸ್ತೆಯ ತಾಯಿ 2024ರ ಮಾರ್ಚ್ 14ರಂದು ಸದಾಶಿವನಗರ ಪೊಲೀಸ್ ಠಾಣೆಗೆ ದೂರು ಸಲ್ಲಿಸಿದ್ದರು. ಆ ದೂರು ಆಧರಿಸಿ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡಿದ್ದರು. ನಂತರ ಸಿಐಡಿಗೆ ತನಿಖೆ ವರ್ಗಾವಣೆಯಾಗಿತ್ತು. ಸಿಐಡಿ ಪೊಲೀಸರು ಯಡಿಯೂರಪ್ಪ ಅವರ ವಿರುದ್ಧ ಆರೋಪ ಪಟ್ಟಿ ಸಲ್ಲಿಸಿದ್ದರು. ಆನಂತರ ವಿಚಾರಣಾಧೀನ ನ್ಯಾಯಾಲಯವು ಕಾಗ್ನಿಜೆನ್ಸ್ ತೆಗೆದುಕೊಂಡಿತ್ತು. ಇದನ್ನು ಪ್ರಶ್ನಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ್ದ ನ್ಯಾಯಾಲಯ, ಹೊಸದಾಗಿ ಕಾಗ್ನಿಜೆನ್ಸ್ ಪಡೆದುಕೊಳ್ಳಲು ನಿರ್ದೇಶನ ನೀಡಿತ್ತು. ಇದೀಗ ಎರಡನೇ ಬಾರಿಗೆ ಯಡಿಯೂರಪ್ಪ ಮತ್ತಿತರರು ಮತ್ತೆ ಸಂಜ್ಞೆ ಪರಿಗಣಿಸಿರುವ ವಿಚಾರಣಾಧೀನ ನ್ಯಾಯಾಲಯದ ಆದೇಶ ಪ್ರಶ್ನಿಸಿದ್ದರು. ಈ ಅರ್ಜಿ ವಜಾಗೊಂಡ ಹಿನ್ನೆಲೆಯಲ್ಲಿ ಸಮನ್ಸ್ ಜಾರಿ ಮಾಡಲಾಗಿತ್ತು. ಇದೀಗ ಸುಪ್ರೀಂಕೋರ್ಟ್‌ನಲ್ಲಿ ಅದಕ್ಕೆ ತಡೆ ನೀಡಿದೆ.

ರಾಜ್ಯ ಲೂಟಿ ಮಾಡಲು ಸಿಎಂ, ಡಿಸಿಎಂ ಸಭೆ: ಛಲವಾದಿ ನಾರಾಯಣಸ್ವಾಮಿ

ನರಿ ಕೂಗು ಗಿರಿ ಮುಟ್ಟಲ್ಲ: ರೆಬೆಲ್ಸ್ ವಿರುದ್ಧ ಕಿಡಿ

ಚಾಮರಾಜನಗರ: ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರನ್ನು ಬದಲಾಯಿಸುವಂತೆ ಬಿಜೆಪಿ ಭಿನ್ನಮತಿಯರು ದೆಹಲಿಗೆ ಭೇಟಿ ನೀಡಿರುವ ಕುರಿತು ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ವಾಗ್ದಾಳಿ ನಡೆಸಿದರು. ಕೊಳ್ಳೇಗಾಲದಲ್ಲಿ ಸುದ್ದಿಗಾರರ ಜತೆ ಮಾತಮಾಡಿದ ಅವರು, ವಿಜಯೇಂದ್ರ ಅವರನ್ನು ರಾಜ್ಯಾಧಕ್ಷ ಸ್ಥಾನದಿಂದ ಇಳಿಸಿ ಏನು ಮಾಡುತ್ತಾರೆ? ಅವರು ಹತ್ತೋಕೆ ಆಗುತ್ತಾ? ಆಗಲ್ಲ, ಯಾರಿಗೆ ಜನ ಬೆಂಬಲವಿದೆ ಎಂದು ಗುರುತಿಸಿ ಹೈಕಮಾಂಡ್ ಅಧಿಕಾರ ಕೊಡಲಿದೆ. ವಿಜಯೇಂದ್ರ ಅಧ್ಯಕ್ಷರಾಗಿರುವದರಿಂದ ಯಾವುದೇ ಸಮಸ್ಯೆ ಇಲ್ಲ. ನರಿ ಕೂಗು ಗಿರಿ ಮುಟ್ಟಲ್ಲ ಎಂದು ಭಿನ್ನಮತೀಯರಿಗೆ ಟಾಂಗ್ ನೀಡಿದ್ದಾರೆ.

> ಖರ್ಗೆ ಕುಟುಂಬ ಬಿಟ್ಟು ಬೇರೆ ಯಾವ ದಲಿತನೂ ಸಿಎಂ ಆಗಬಾರದು. ಪ್ರಿಯಾಂಕ್ ಖರ್ಗೆಯನ್ನು ಸಿಎಂ ಅಥವಾ ಡಿಸಿಎಂ ಮಾಡಬೇಕು ಎನ್ನುವ ಉದ್ದೇಶವಿದೆ. ಸಂಪುಟ ಪುನರ್ ರಚನೆಯಾದರೆ ಸಿಎಂ ಆಗಬೇಕೆನ್ನುತ್ತಿರುವ ಡಾ.ಜಿ.ಪರಮೇಶ್ವರ್, ಡಾ.ಎಚ್.ಸಿ.ಮಹದೇವಪ್ಪ, ಮುನಿಯಪ್ಪ ಸ್ಥಾನಗಳನ್ನು ಕಿತ್ತುಕೊಳ್ಳುತ್ತಾರೆ.
> - ಛಲವಾದಿ ನಾರಾಯಣಸ್ವಾಮಿ
> ವಿಧಾನ ಪರಿಷತ್ ಪ್ರತಿಪಕ್ಷ ನಾಯಕ

ದಲಿತ ಸಚಿವರ ಸ್ಥಾನಕ್ಕೆ ಕುತ್ತು: ಸಿಎಂ-ಡಿಸಿಎಂ ಬ್ರೇಕ್ ಫಾಸ್ಟ್ ಮೀಟಿಂಗ್ ಬಗ್ಗೆ ಲೇವಡಿ ಮಾಡಿದ ಛಲವಾದಿ, ಪಾಪ ಸಿದ್ದರಾಮಯ್ಯಗೆ ಡಿಕೆ ಮನೆ ಗೊತ್ತಿರಲಿಲ್ಲ, ಡಿಕೆಗೆ ಸಿಎಂ ಮನೆ ಗೊತ್ತಿರಲಿಲ್ಲ, ಒಬ್ಬರು ಮತ್ತೊಬ್ಬರ ಮುಖವನ್ನು ನೋಡುವ ಪರಿಸ್ಥಿತಿಯಿಲ್ಲ, ಒಬ್ಬರ ಮನೆಗೆ ಮತ್ತೊಬ್ಬರು ಹೋದವರಲ್ಲ, ಎಲ್ಲ ಅಧಿಕಾರಕ್ಕಾಗಿ ಅಂಟಿಕೊಂಡು ರಾಜ್ಯವನ್ನು ಲೂಟಿ ಮಾಡುವಂತಹ ಪರಿಸ್ಥಿತಿ ಇದೆ ಎಂದರು.

ಸ್ಮಾರ್ಟ್‌ಮೀಟರ್ ಹಗರಣ; ಜಾರ್ಜ್‌ಗೆ ರಿಲೀಫ್

ಬೆಂಗಳೂರು: ಸ್ಮಾರ್ಟ್ ಮೀಟರ್ ಗುತ್ತಿಗೆಯಲ್ಲಿ ನಡೆದಿದೆ ಎನ್ನಲಾದ ಅಕ್ರಮಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತ ತನಿಖೆ ನಡೆಸಲು ನಿರ್ದೇಶನ ಕೋರಿ ಬಿಜೆಪಿ ಮುಖಂಡರು ಸಲ್ಲಿಸಿದ್ದ ಖಾಸಗಿ ದೂರನ್ನು ಹೈಕೋರ್ಟ್ ರದ್ದುಪಡಿಸಿ ಆದೇಶಿಸಿದೆ.

ಬಿಜೆಪಿ ನಾಯಕರಾದ ಸಿ.ಎನ್.ಅಶ್ವತ್ಥ ನಾರಾಯಣ, ಎಸ್.ಆರ್.ವಿಶ್ವನಾಥ್ ಮತ್ತು ಧೀರಜ್ ಮುನಿರಾಜು ಸಲ್ಲಿಸಿದ್ದ ಖಾಸಗಿ ದೂರು ರದ್ದು ಕೋರಿ ಸಚಿವ ಕೆ.ಜೆ.ಜಾರ್ಜ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯ ಮೂರ್ತಿ ಎಂ.ಐ.ಅರುಣ್ ಅವರ ನ್ಯಾಯಪೀಠ, ಖಾಸಗಿ ದೂರನ್ನು ರದ್ದುಪಡಿಸಿದೆ. ಅಲ್ಲದೆ, ಖಾಸಗಿ ದೂರಿನ ಸಂಬಂಧ ವರದಿ ಸಲ್ಲಿಸುವಂತೆ ಲೋಕಾಯುಕ್ತ ಪೊಲೀಸರಿಗೆ ಜನಪ್ರತಿ ನಿಧಿಗಳ ವಿಶೇಷ ನ್ಯಾಯಾಲಯ ನೀಡಿದ್ದ ಆದೇಶ ರದ್ದುಪಡಿಸಿದೆ.

ಈ ಹಿಂದೆ ನಡೆದಿದ್ದ ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, ಒಂದು ರಾಜಕೀಯ ಪಕ್ಷ ಮತ್ತೊಂದು ರಾಜಕೀಯ ಪಕ್ಷದ ಮೇಲೆ ಪ್ರಕರಣ ದಾಖಲಿಸಲಾಗಿದೆ. ಖಾಸಗಿ ದೂರು ಪರಿಗಣಿಸಿರುವ ವಿಚಾರಣಾ ನ್ಯಾಯಾಲಯ, ತನಿಖಾ ವರದಿ ಸಲ್ಲಿಸುವಂತೆ ನಿರ್ದೇಶನ ನೀಡಿದ್ದು, ಇದಕ್ಕೆ ಕಾನೂನಿನಲ್ಲಿ ಅವಕಾಶ ವಿಲ್ಲ ಎಂದು ಪೀಠಕ್ಕೆ ವಿವರಿಸಿದರು.

ದೂರುದಾರರ ಪರ ವಕೀಲರು, ಯಾವುದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಖಾಸಗಿ ದೂರು ದಾಖಲಿಸಿದಾಗ ಅದಕ್ಕೆ ಸಂಬಂಧಿಸಿದಂತೆ ವರದಿ ಕೇಳುವುದಕ್ಕೆ ನ್ಯಾಯಾಲಯಕ್ಕೆ ಅವಕಾಶ ಇರಲಿದೆ. ಈ ಅರ್ಜಿಗೆ ಸಂಬಂಧಿಸಿದಂತೆ ಪ್ರತಿವಾದಿಗಳಾದ ನಮ್ಮ ಕಕ್ಷಿದಾರರಿಗೆ ನೋಟಿಸ್ ಬಂದಿಲ್ಲ, ಅರ್ಜಿಯ ಪ್ರತಿ ನೋಡಿಲ್ಲ, ಆದ ಕಾರಣದ ವಿಚಾರಣೆ ಮುಂದೂಡಬೇಕು ಎಂದು ಕೋರಿದರು.

ಪ್ರಕರಣದ ಹಿನ್ನೆಲೆ ಏನು?

ಇಂಧನ ಸಚಿವರಾಗಿರುವ ಕೆ.ಜೆ.ಜಾರ್ಜ್ ಅವರು ಬೆಸ್ಕಾಂನ ಅಧಿಕಾರಿಗಳೊಂದಿಗೆ ಪಿತೂರಿ ನಡೆಸಿ ಸ್ಮಾರ್ಟ್ ಮೀಟರ್ ಪೂರೈಕೆಗೆ ಸಂಬಂಧಿಸಿದಂತೆ ಟೆಂಡರ್‌ನಲ್ಲಿ ಅಕ್ರಮವೆಸಗಿ ಟೆಂಡರ್ ಪ್ರಕ್ರಿಯೆ

ತಿರುಚಿದ್ದಾರೆ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಕಾಯ್ದೆ(ಕೆಟಿಪಿಪಿ)ಯ ನಿಯಮಗಳು ಹಾಗೂ ಸರಕಾರದ ಆದೇಶಗಳನ್ನು ಉಲ್ಲಂಘಿಸಿ, ಪೂರ್ವನಿಗದಿಯಾಗಿದ್ದ ಕಂಪನಿಗೆ ಟೆಂಡರ್ ನೀಡಲಾಗಿದೆ. ಆ ಮೂಲಕ ಸಾರ್ವಜನಿಕ ತೆರಿಗೆಯ ಹಣವನ್ನು ಮೂರನೇ ವ್ಯಕ್ತಿಯಾಗಿರುವ ಗುತ್ತಿಗೆದಾರರಾದ ಮೆಸೆಸ್ ರಾಜಶ್ರೀ ಎಲೆಕ್ಟ್ರಾನಿಕ್ಸ್‌ಗೆ ಲಾಭ ಮಾಡಿಕೊಡಲು ಮುಂದಾಗಿದ್ದಾರೆ ಎಂದು ಆರೋಪಿಸಿ ಬಿಜೆಪಿ ಶಾಸಕರಾಗಿರುವ ಸಿ.ಎನ್.ಅಶ್ವತ್ಥನಾರಾ ಯಣ ಸೇರಿದಂತೆ ಇತರೆ ಇಬ್ಬರು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಖಾಸಗಿ ದೂರು ದಾಖಲಿಸಿದ್ದರು. ದೂರು ದಾಖಲಿಸುವುದಕ್ಕೂ ಮುನ್ನ ಪ್ರಕರಣಕ್ಕೆ ಸಂಬಂಧ ಸಚಿವ ಕೆ.ಜೆ.ಜಾರ್ಜ್ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ಕೋರಿ ರಾಜ್ಯಪಾಲರಿಗೆ ಮನವಿ ಮಾಡಿದ್ದರು. ಈ ಮನವಿ ಬಾಕಿಯಿರುವಾಗಲೇ ಖಾಸಗಿ ದೂರು ದಾಖಲಿಸಲಾಗಿದೆ. ದೂರಿನ ವಿಚಾರಣೆ ನಡೆಸಿರುವ ವಿಶೇಷ ನ್ಯಾಯಾಲಯ, ಲೋಕಾಯುಕ್ತ ಪೊಲೀಸರಿಂದ ವರದಿ ಕೇಳಿತ್ತು. ಈ ಕ್ರಮ ಪ್ರಶ್ನಿಸಿ ಸಚಿವ ಜಾರ್ಜ್ ಹೈಕೋರ್ಟ್ ಮೆಟ್ಟಿಲೇರಿದ್ದರು.



ವಿಶ್ವವಾಣಿ

ಸಂಪಾದಕೀಯ

ಪೊರೆವ ಪ್ರಕೃತಿಯೇ ಮುನಿದರೆ...

ನೆರೆರಾಷ್ಟ್ರ ಶ್ರೀಲಂಕಾದಲ್ಲಿ ಕಂಡುಬಂದಿರುವ 'ದಿತ್ವಾ' ಚಂಡಮಾರುತದ ರುದ್ರನರ್ತನವು ಜಗದ ಜನರನ್ನು ಕಂಗೆಡಿಸಿದೆ. ಈ ಚಂಡಮಾರುತದಿಂದಾಗಿ ಕಳೆದ ಕೆಲ ದಿನಗಳಿಂದ ಶ್ರೀಲಂಕಾದಲ್ಲಿ ತಲೆದೋರಿರುವ ಅಸ್ತವ್ಯಸ್ತತೆಯನ್ನು ಕಂಡಾಗ ನಿಜಕ್ಕೂ ತಲ್ಲಣವಾಗುತ್ತದೆ. 330ಕ್ಕೂ ಹೆಚ್ಚು ಜನರ ಸಾವಿಗೆ, 370 ಜನರ ನಾಪತ್ತೆಗೆ ಕಾರಣವಾಗಿರುವ ಈ ಪ್ರಕೃತಿ ವಿಕೋಪವು ಒಂಬತ್ತೂವರೆ ಲಕ್ಷಕ್ಕೂ ಹೆಚ್ಚು ಜನರನ್ನು ಸಂಕಷ್ಟಕ್ಕೆ ಸಿಲುಕಿಸಿಬಿಟ್ಟಿದೆ. ಸಂತ್ರಸ್ತರ ನೆರವಿಗಾಗಿ ಸಾಕಷ್ಟು ಪುನರ್ವಸತಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆಯಾದರೂ, ಈ ವಿಕೋಪದ ನಂತರದ ಸಾಮಾಜಿಕ ಮತ್ತು ಆರ್ಥಿಕ ಅವ್ಯವಸ್ಥ ಸ್ಥಿತಿಯನ್ನು ಶ್ರೀಲಂಕಾ ಹೇಗೆ ಸಂಭಾಳಿಸಲಿದೆ? ಎಂಬುದೇ ಪ್ರಶ್ನೆಯಾಗಿದೆ. ಕೆಲ ವರ್ಷಗಳ ಹಿಂದೆ 'ಸುನಾಮಿ' ಅಪ್ಪಳಿಸಿದಾಗ ಬೃಹತ್ ಕಟ್ಟಡಗಳು ತರಗೆಲೆಗಳಂತೆ ಉದುರಿದ, ವಾಹನಗಳು ಆಟಿಕೆಗಳಂತೆ ತೇಲಿ ಹೋದ ದೃಶ್ಯಗಳನ್ನು ಬಹುತೇಕರು ಕಂಡಿದ್ದರು; ಶ್ರೀಲಂಕಾದಲ್ಲಿ ಸಂಭವಿಸಿರುವ ಈ ಪ್ರಕೃತಿ ವಿಕೋಪದಲ್ಲಿ ಅಂಥದೇ ದೃಶ್ಯಗಳ ಪುನರಾವರ್ತನೆಯಾಗಿರುವುದು ನಾವೆಲ್ಲರೂ ಗಂಭೀರವಾಗಿ ಆಲೋಚನೆಗೆ ತೊಡಗಿಸಿಕೊಳ್ಳಬೇಕಿರುವುದರ ಅನಿವಾರ್ಯತೆಯನ್ನು ಒತ್ತಿಹೇಳುತ್ತದೆ. ಕಾಡ್ಗಿಚ್ಚು, ಚಂಡಮಾರುತ/ಸುನಾಮಿ, ಕುಂಭದ್ರೋಣ ಮಳೆ, ಮಹಾಪ್ರವಾಹ, ಗುಡ್ಡಗಳ ಕುಸಿತ ಮುಂತಾದ ಪ್ರಕೃತಿ ವಿಕೋಪಗಳನ್ನು ಹುಲುಮಾನವರು ತಡೆಯುವುದಕ್ಕಂತೂ ಸಾಧ್ಯವಿಲ್ಲ; ಆದರೆ ಅವು ಘಟಿಸುವುದಕ್ಕೆ ಮನುಷ್ಯರ ಒಂದಿಷ್ಟು ತಪ್ಪುಹೆಜ್ಜೆಗಳೂ ಕಾರಣವಾಗಿದ್ದರೆ, ಅಂಥ ತಪ್ಪುಗಳನ್ನು ತಿದ್ದಿಕೊಳ್ಳುವುದಕ್ಕೆ ಇನ್ನಾದರೂ ನಾವು ಕಟಿಬದ್ಧರಾಗಬೇಕಿದೆ. ಬೆಟ್ಟ-ಗುಡ್ಡ, ನದಿ-ತೊರೆ-ಜಲಪಾತ, ಅರಣ್ಯಗಳನ್ನು ಅವುಗಳ ಪಾಡಿಗೆ ಅವು ಇರುವಂತೆ ಬಿಡುವ ಬದಲು, ಅಭಿವೃದ್ಧಿ ಚಟುವಟಿಕೆಗಳ ಹಣೆಪಟ್ಟಿಯಡಿ ಅವುಗಳ ಸಹಜ ಸ್ವರೂಪಕ್ಕೆ ಮನುಷ್ಯರು ಕೊಡಲಿಯೇಟು ಹಾಕಲು ಮುಂದಾಗುವುದು ಕೂಡ ಪ್ರಕೃತಿಯು ಮನುಕುಲದ ಮೇಲೆ ಮುನಿಯುವುದಕ್ಕಿರುವ ಒಂದು ಕಾರಣವಾಗುತ್ತದೆ. ಹೀಗಾಗಿ, ವಿವೇಚನೆಯ ನಡೆ ಯಾವತ್ತಿಗೂ ಕ್ಷೇಮ. ಸಂಬಂಧಪಟ್ಟವರು ಅದನ್ನು ಅರ್ಥಮಾಡಿಕೊಳ್ಳಬೇಕಷ್ಟೇ...

ಸೊಂಪಾದಕೀಯ

ಮೂರ್ತಿ ಚಿಕ್ಕದು, ಕೀರ್ತಿ ದೊಡ್ಡದು

ಭಾರತದಲ್ಲಿ ಮನರಂಜನೆ ಅಂದ್ರೆ ಸಿನಿಮಾ ಅನ್ನೋ ಮಾತು ಜನಜನಿತ. ಈಗೀಗ ಸಿನಿಮಾ ನೋಡಬೇಕು ಅಂದ್ರೆ ಚಿತ್ರಮಂದಿರಕ್ಕೇ ಹೋಗಬೇಕು ಅಂತೇನಿಲ್ಲ, ಮನೆಯ ದೂರದರ್ಶನ ಈಗ ಎಲ್ಲರಿಗೂ ಚಿತ್ರಮಂದಿರದಷ್ಟೇ ಹತ್ತಿರ. ಅಲ್ಲದೆ ಮೊಬೈಲ್, ಲ್ಯಾಪ್‌ಟಾಪ್, ಟ್ಯಾಬ್ಲೆಟ್‌ಗಳೂ ಈಗ ಟೂರಿಂಗ್ ಟಾಕೀಸ್‌ಗಳಾಗಿವೆ. ಹಾಗಾಗಿ ಮನರಂಜನೆ ಈಗ ಮನೆರಂಜನೆ ಆಗಿದೆ. ಆದರೆ ಇತ್ತೀಚೆಗೆ, ಜನಪ್ರಿಯತೆಯಲ್ಲೂ, ಕಮರ್ಷಿಯಲ್ ವಿಷಯದಲ್ಲೂ ಸಿನಿಮಾಗಳಿಗಿಂತ ಹೆಚ್ಚು ಸದ್ದು ಮಾಡ್ತಾ ಇರೋದು ಟಿವಿ ಧಾರಾವಾಹಿಗಳು. ಜನಪ್ರಿಯತೆಯ ವಿಷಯಕ್ಕೆ ಬಂದ್ರೆ ನಮ್ಮ ಹೋಮ್ಲಿ ಆಡಿಯೆನ್ಸ್‌ಗೆ ಧಾರಾವಾಹಿಗಳ ಪರಿಚಯ ಇದ್ದಷ್ಟು ಸಿನಿಮಾಗಳ ಬಗ್ಗೆ ಇರೋದಿಲ್ಲ. ಧಾರಾವಾಹಿಗಳ ಹೆಸರು ನಮ್ಮ ವೀಕ್ಷಕರಿಗೆ ನಾಲಿಗೆಯ ತುದಿಯಲ್ಲೇ ಇರುತ್ತೆ. ಆದರೆ ಸಿನಿಮಾಗಳು ಸೆಟ್ಟೇರಿದ್ದೂ, ಬಿಡುಗಡೆ ಆಗಿದ್ದೂ ಗೊತ್ತಾಗಿರಲ್ಲ. ಸಿನಿಮಾ ನಟರಲ್ಲಿ ಹಳೆ ತಲೆಗಳನ್ನು ಬಿಟ್ಟರೆ ಹೊಸಬರ ಬಗ್ಗೆ ಒಂದಿನಿತೂ ಗೊತ್ತಿರಲ್ಲ. ಆದರೆ ಧಾರಾವಾಹಿಯ ನಟ, ನಟಿಯರನ್ನು ಮಾತ್ರ ತಮ್ಮ ಮನೆ ಮಕ್ಕಳಂತೇ ನೋಡುತ್ತಾರೆ. ಇನ್ನು ಕಮರ್ಷಿಯಲ್ ವಿಷಯಕ್ಕೆ ಬಂದರೆ ವರ್ಷದಲ್ಲಿ ನೂರಾರು ಸಿನಿಮಾಗಳು ಬಿಡುಗಡೆ ಆದ್ರೂ, ಅವುಗಳಲ್ಲಿ ಜನರನ್ನು ತಲುಪೋದು ಮೂರು ಮತ್ತೊಂದು ಎನ್ನುವಷ್ಟು ಮಾತ್ರ. ಸಿನಿಮಾ ಮಾಡಿ ಮನೆ-ಮಠ ಕಳೆದುಕೊಂಡ ಎಷ್ಟೋ ಜನ ನಮಗೆ ಕಾಣಸಿಗುತ್ತಾರೆ. ಆದರೆ, 'ಧಾರಾವಾಹಿ ಮಾಡಿ ಹಣ ಕಳೆದುಕೊಂಡೆ' ಅನ್ನೋರು ಸಿಗೋದು ಕಷ್ಟ. ಧಾರಾವಾಹಿಗಳು ಹಣಗಳಿಕೆಯಲ್ಲೂ ಸಿನಿಮಾಗಳಿಗಿಂತ ಮುಂದೆ ಇವೆ. ಹಾಗಾಗಿ ಜಾಹೀರಾತುಗಳಿಗೂ ಸೀರಿಯಲ್ ಉದ್ಯಮದವರು ಸಾಕಷ್ಟು ಖರ್ಚು ಮಾಡುತ್ತಿದ್ದಾರೆ. ಸಿನಿಮಾದವರೇ ಯಾವುದೇ ಪ್ರಚಾರ ಇಲ್ಲದೆ ಇದ್ದಕ್ಕಿದ್ದಂತೆ ಸಿನಿಮಾ ಬಿಡುಗಡೆ ಮಾಡುತ್ತಾರೆ. 'ಅದಕ್ಯಾಕೆ ಮತ್ತಷ್ಟು ಖರ್ಚು, ಮತ್ತಷ್ಟು ಲಾಸು' ಅನ್ನೋ ಮನೋಭಾವ ಇವರದು. ಆದರೆ ಧಾರಾವಾಹಿಗಳು ಹಾಗಲ್ಲ. ಹೊಸ ಧಾರಾವಾಹಿ ಶುರು ಆಗ್ತಾ ಇದೆ ಅಂದ್ರೆ ಎಲ್ಲ ಪತ್ರಿಕೆಗಳಲ್ಲೂ ಫುಲ್‌ಪೇಜ್ ಜಾಹೀರಾತು. ಟಿವಿಗಳಲ್ಲಂತೂ ಕೇಳೋದೇ ಬೇಡ. ಅಷ್ಟೇ ಅಲ್ಲದೆ ಊರಿನ ಗೋಡೆಗಳ ಮೇಲೆ ಪೋಸ್ಟರನ್ನು ಕೂಡಾ ಅಂಟಿಸಲಾಗುತ್ತದೆ. ಜತೆಗೆ ಸ್ಕೈವಾಕ್‌ಗಳ ಮೇಲೆ, ಆಟೋ, ಸಿಟಿ ಬಸ್ಸುಗಳಲ್ಲೂ ಧಾರಾವಾಹಿಗಳ ಅಬ್ಬರ. ಹಾಗಾಗಿ ಈಗ ಟಿವಿ ಧಾರಾವಾಹಿಗಳು ಸಿನಿಮಾಗಿಂತ ಒಂದು ಹೆಜ್ಜೆ ಮುಂದಿವೆ ಮತ್ತು ಹಣಕಾಸಿನ ವಿಷಯದಲ್ಲಿ ಸೇಫ್ ಎನಿಸಿಕೊಂಡಿವೆ ಅನ್ನೋದಂತೂ ಸತ್ಯ.

ಸಂಪಾದಕರ ಸದ್ಯಶೋಧನೆ

ಪೈಲಟ್ ಅಮಾನತು ಚರ್ಚೆ

ನೇಪಾಳ ಏರ್‌ಲೈನ್ಸ್‌ನ ಅತ್ಯಂತ ಪ್ರಸಿದ್ಧ ಮತ್ತು ಹಿರಿಯ ಪೈಲಟ್ ಕ್ಯಾಪ್ಟನ್ ವಿಜಯ್ ಲಾಮಾ ಅವರನ್ನು ಅಮಾನತುಗೊಳಿಸಿರುವ ವಿಷಯ ಈಗ ಅಂತಾರಾಷ್ಟ್ರೀಯ ಮಟ್ಟದಲ್ಲಿ ವಿಮಾನಯಾನ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ. ಈ ಘಟನೆಯು ಕೇವಲ ಒಬ್ಬ ವ್ಯಕ್ತಿಯ ಮೇಲಿನ ಶಿಸ್ತುಕ್ರಮದ ವಿಷಯವಾಗಿರದೇ, ವಿಮಾನಯಾನ ಸುರಕ್ಷತೆ, ಸೆಲೆಬ್ರಿಟಿ ಸಂಸ್ಕೃತಿ ಮತ್ತು ವೃತ್ತಿಪರ ಜವಾಬ್ದಾರಿಗಳ ನಡುವಿನ ಸಂಘರ್ಷವನ್ನು ಎತ್ತಿ ತೋರಿಸಿದೆ. ವಿಜಯ್ ಲಾಮಾ ಅವರು ವಿಮಾನವನ್ನು ಚಲಾಯಿಸುತ್ತಿದ್ದ ಸಂದರ್ಭದಲ್ಲಿ, ಫೋಟೋ ಮತ್ತು ವಿಡಿಯೋಗಳನ್ನು ಸೆರೆಹಿಡಿಯುತ್ತಿದ್ದರು ಎಂಬುದು ಅವರ ಮೇಲಿರುವ ಗಂಭೀರ ಆರೋಪ. ವಿಮಾನಯಾನದ ನಿಯಮಗಳ ಪ್ರಕಾರ, ವಿಮಾನ ಹಾರಾಟದ ನಿರ್ಣಾಯಕ ಹಂತಗಳಲ್ಲಿ ಅಥವಾ ಕಾಕ್‌ಪಿಟ್‌ನಲ್ಲಿರುವಾಗ ಪೈಲಟ್‌ಗಳು ತಮ್ಮ ಗಮನವನ್ನು ಸಂಪೂರ್ಣವಾಗಿ ವಿಮಾನದ ನಿಯಂತ್ರಣದ ಮೇಲೆಯೇ ಇರಿಸಬೇಕಾಗುತ್ತದೆ. ವೈಯಕ್ತಿಕ ಫೋಟೋಶೂಟ್ ಅಥವಾ ವಿಡಿಯೋ ರೆಕಾರ್ಡಿಂಗ್ ಮಾಡುವುದು 'ಫ್ಲೈಟ್ ಡೆಕ್' ನಿಯಮಗಳ ಸ್ಪಷ್ಟ ಉಲ್ಲಂಘನೆಯಾಗಿದೆ. ಆದರೆ, ನಿಯಂತ್ರಕರು ಹೇಳುವಂತೆ, ಲಾಮಾ ಅವರು ಈ ನಿಯಮವನ್ನು ಮುರಿದಿದ್ದಾರೆ. ಆಘಾತಕಾರಿ ವಿಷಯವೆಂದರೆ, ಕ್ಯಾಪ್ಟನ್ ಲಾಮಾ ಅವರ ವೃತ್ತಿಜೀವನದಲ್ಲಿ ಅವರು ಅಮಾನತುಗೊಂಡಿರುವುದು ಇದು ಮೊದಲ ಬಾರಿಯಲ್ಲ, ಬದಲಿಗೆ ನಾಲ್ಕನೇ ಬಾರಿಗೆ. ಕ್ಯಾಪ್ಟನ್ ಲಾಮಾ ನೇಪಾಳದಲ್ಲಿ ಕೇವಲ ಒಬ್ಬ ಪೈಲಟ್ ಮಾತ್ರವಲ್ಲ, ಅವರೊಬ್ಬ ಸೂಪರ್ ಸ್ಟಾರ್, ಒಬ್ಬ ಜನಪ್ರಿಯ ನಟ, ಗಾಯಕ ಮತ್ತು ಟಿವಿ ನಿರೂಪಕ. ಗಣನೀಯ ಸಂಖ್ಯೆಯ ಸಿನಿಮಾಗಳಲ್ಲಿ ನಟಿಸಿರುವ ಅವರು ನೇಪಾಳದಲ್ಲಿ ಮನೆಮಾತು. ಸಾಮಾಜಿಕ ಜಾಲತಾಣಗಳಲ್ಲಿ ಅವರಿಗೆ ಲಕ್ಷಾಂತರ ಹಿಂಬಾಲಕರಿದ್ದಾರೆ. ಅವರ ಪ್ರತಿಯೊಂದು ಪೋಸ್ಟ್ ವೈರಲ್ ಆಗುತ್ತದೆ. ಪೈಲಟ್ ಆಗಿಯೂ ಅವರು ಸಾಮಾನ್ಯರಲ್ಲ. ಅವರ ಬಳಿ 25 ಸಾವಿರಕ್ಕೂ ಹೆಚ್ಚು ಗಂಟೆಗಳ ಹಾರಾಟದ ಅಗಾಧ ಅನುಭವವಿದೆ. ಮೂರು ದಶಕಗಳಿಗೂ ಹೆಚ್ಚು ಕಾಲ ಅವರು ವಿಮಾನ ಹಾರಿಸಿದ್ದಾರೆ. ಆದರೆ, ಇದೇ 'ಸೆಲೆಬ್ರಿಟಿ ವರ್ಚಸ್ಸು' ಮತ್ತು 'ಅತಿಯಾದ ಆತ್ಮವಿಶ್ವಾಸ' ಅವರಿಗೆ ಮುಳುವಾಗುತ್ತಿದೆ. ವಿಜಯ್ ಲಾಮಾ ಅವರು ವಿವಾದಕ್ಕೆ ಸಿಲುಕಿರುವುದು ಇದೇ ಮೊದಲೇನಲ್ಲ. ಇವರ ಹಿಂದಿನ ವರ್ತನೆಗಳೂ ಅಷ್ಟೇ ಚರ್ಚಾಸ್ಪದವಾಗಿದ್ದವು. ಕೆಲವು ವರ್ಷಗಳ ಹಿಂದೆ ನಡೆದ ಒಂದು ಘಟನೆ ಪ್ರಪಂಚದಾದ್ಯಂತ ಸುದ್ದಿಯಾಗಿತ್ತು. ವಿಶ್ವದ ಅತ್ಯಂತ ಪ್ರಸಿದ್ಧ ಏವಿಯೇಷನ್ ಯುಟ್ಯೂಬರ್ (Aviation YouTuber) ಸ್ಯಾಮ್ ಚುಯ್ ನೇಪಾಳಕ್ಕೆ ಭೇಟಿ ನೀಡಿದ್ದಾಗ, ಕ್ಯಾಪ್ಟನ್ ಲಾಮಾ ಅವರು ಹಾರಾಟದ ಸಮಯದಲ್ಲಿ ಸ್ಯಾಮ್ ಚುಯ್ ಅವರನ್ನು ಕಾಕ್‌ಪಿಟ್ ಒಳಗೆ ಆಹ್ವಾನಿಸಿದ್ದರು. ವಿಮಾನ ಹಾರಾಟದ ಸಮಯದಲ್ಲಿ ಅನಧಿಕೃತ ವ್ಯಕ್ತಿಗಳನ್ನು ಕಾಕ್‌ಪಿಟ್‌ಗೆ ಸೇರಿಸುವುದು ಸುರಕ್ಷತಾ ದೃಷ್ಟಿಯಿಂದ ದೊಡ್ಡ ಅಪರಾಧ. ಸ್ಯಾಮ್ ಚುಯ್ ವಿಡಿಯೋ ವೈರಲ್ ಆಗುತ್ತಿದ್ದಂತೆ, ನೇಪಾಳದ ವಿಮಾನಯಾನ ಪ್ರಾಧಿಕಾರ ತನಿಖೆಗೆ ಆದೇಶಿಸಿತ್ತು. ಅಂದು ಕೂಡ ಲಾಮಾ ಅವರ ವರ್ತನೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಟೀಕೆಗೆ ಗುರಿಯಾಗಿತ್ತು. ಹಳೆಯ ತಪ್ಪುಗಳಿಂದ ಪಾಠ ಕಲಿಯುವ ಬದಲಿಗೆ, ಅವರು ಮತ್ತೆ ಅದೇ ಹಾದಿಯಲ್ಲಿ ಸಾಗುತ್ತಿದ್ದಾರೆ ಎಂಬುದು ಈಗಿನ ಅಮಾನತು ತೋರಿಸಿದೆ. ಈ ಪ್ರಕರಣದಲ್ಲಿ ಅತ್ಯಂತ ಆಶ್ಚರ್ಯಕರ ಸಂಗತಿಯೆಂದರೆ, ಇಂಥ ತಪ್ಪುಗಳನ್ನು ಮಾಡುತ್ತಿರುವುದು ಒಬ್ಬ ಹೊಸ ಪೈಲಟ್ (Rookie) ಅಲ್ಲ. ಅನುಭವಿ ಹಿರಿಯ ಕ್ಯಾಪ್ಟನ್ ಒಬ್ಬರು, ಪ್ರತಿಯೊಬ್ಬ ಪೈಲಟ್‌ಗೂ ತಿಳಿದಿರುವ ಮೂಲಭೂತ ನಿಯಮಗಳನ್ನು ಪದೇ ಪದೆ ಉಲ್ಲಂಘಿಸುತ್ತಿದ್ದಾರೆ. ವಿಮಾನಯಾನದಲ್ಲಿ 'Sterile Cockpit Rule' ಎಂಬ ಒಂದು ನಿಯಮವಿದೆ. ಇದರ ಪ್ರಕಾರ, ಹಾರಾಟದ ಸಮಯದಲ್ಲಿ ಪೈಲಟ್‌ಗಳು ಅನಗತ್ಯ ಮಾತುಕತೆ ಅಥವಾ ಚಟುವಟಿಕೆಗಳಲ್ಲಿ ತೊಡಗುವಂತಿಲ್ಲ. ಫೋಟೋ ಅಥವಾ ವಿಡಿಯೋ ತೆಗೆಯುವುದು ಗಮನವನ್ನು ಬೇರೆಡೆ ಸೆಳೆಯುತ್ತದೆ. ಇದು ನೂರಾರು ಪ್ರಯಾಣಿಕರ ಜೀವಕ್ಕೆ ಕುತ್ತು ತರಬಲ್ಲದು. ಒಬ್ಬ ಅನುಭವಿ ಪೈಲಟ್ ಆಗಿ, ಅವರು ಕಿರಿಯರಿಗೆ ಮಾದರಿಯಾಗಬೇಕು. ಆದರೆ, ಇಲ್ಲಿ ಅವರೇ ನಿಯಮಗಳನ್ನು ಮುರಿಯುತ್ತಿರುವುದು ವಿಮಾನಯಾನ ಸಂಸ್ಥೆಯ ಶಿಸ್ತಿನ ಬಗ್ಗೆ ಪ್ರಶ್ನೆಗಳನ್ನು ಹುಟ್ಟುಹಾಕಿದೆ.

ವಾಗ್ದಾನ ನೀಡಿದ್ದಲ್ಲಿ ಅದನ್ನು ಈಡೇರಿಸುವುದು ಕರ್ತವ್ಯವಲ್ಲವೇ?

ಕರ್ನಾಟಕದಲ್ಲಿನ ಈಗಿನ ರಾಜಕೀಯ ಪ್ರಹಸನಗಳು ಹಿಂದೆ ಪಂಜಾಬ್, ಛತ್ತೀಸ್‌ಗಢ ಮತ್ತು ರಾಜಸ್ಥಾನಗಳಲ್ಲಿ ಕೂಡ ನಡೆದು, ಆ ಮೂರೂ ರಾಜ್ಯಗಳಲ್ಲಿ ಕಾಂಗ್ರೆಸ್ ಪಕ್ಷವು ಅಧಿಕಾರವನ್ನು ಕಳೆದುಕೊಂಡಿತು ಎಂಬುದನ್ನು ನೆನಪಿಸಿಕೊಳ್ಳಬೇಕಾಗುತ್ತದೆ. ಛತ್ತೀಸ್‌ಗಢದಲ್ಲಿ ಒಬಿಸಿ ಸಮುದಾಯದ ಭೂಪೇಶ್ ಬಗೇಲ್ ಅವರನ್ನು ಸಿಎಂ ಆಗಿ ಆಯ್ಕೆ ಮಾಡುವ ಮುನ್ನ ಮೇಲ್ವರ್ಗದ ರಜಪೂತ ಸಮುದಾಯದ ಟಿ.ಎಸ್. ಸಿಂಗ್‌ದೇವ್ ಆ ಸ್ಥಾನಕ್ಕಾಗಿ ಪ್ರಬಲ ಲಾಬಿ ಮಾಡಿದ್ದರು ಎಂಬುದಿಲ್ಲಿ ಸ್ಮರಣಾರ್ಹ.

ಜನಪಥ

ರಾಘವ ಶರ್ಮ ನಿಡ್ಲೆ
vveditoped@gmail.com

ಡಿಸಿಎಂ ಡಿ.ಕೆ. ಶಿವಕುಮಾರ್ ಅವರಿಗೆ ಈಗ 63 ವರ್ಷ. ಈ ಸರಕಾರದ ಅವಧಿ ಮುಗಿಯುವಾಗ ಅವರ ವಯಸ್ಸು 65ಕ್ಕೇರಲಿದೆ. ಅಭಿವೃದ್ಧಿ ಕೆಲಸದಲ್ಲಿ ಹಿಂದೆ ಬಿದ್ದಿರುವ ಸರಕಾರವನ್ನು ಜನರು ಮುಂದಿನ ಚುನಾವಣೆಯಲ್ಲಿ ಮರು ಆಯ್ಕೆ ಮಾಡುತ್ತಾರೆ ಎಂಬ ಭರವಸೆ ಅವರಲ್ಲಿ, ಬೆಂಬಲಿಗರಲ್ಲಿ ಸದ್ಯಕ್ಕಂತೂ ಕಾಣುತ್ತಿಲ್ಲ. ಅಲ್ಲದೆ, ಕರ್ನಾಟಕದ ಮತದಾರ ಪ್ರತಿ ಚುನಾವಣೆಯಲ್ಲೂ ಸರಕಾರದ ಬದಲಾವಣೆಯನ್ನೇ ಬಯಸಿದ್ದಾನೆ. ಹೀಗಿದ್ದಾಗ, 2028ರ ಚುನಾವಣೆ ಸೋತರೆ, ಮತ್ತೈದು ವರ್ಷ ವಿಪಕ್ಷದಲ್ಲಿದ್ದುಕೊಂಡೇ ಬೆಂಚು ಬಿಸಿ ಮಾಡಬೇಕು. ಆ 5 ವರ್ಷಗಳ ನಂತರ ಡಿಕೆಶಿಗೆ ವಯಸ್ಸು 70 ಆಗಿರುತ್ತದೆ. ಆಗ ಸಿಎಂ ಸ್ಥಾನಕ್ಕೆ ಬೇರೆಯವರು ತಯಾರಾಗಿರುತ್ತಾರೆ. ಕೆಪಿಸಿಸಿ ಅಧ್ಯಕ್ಷ ಸ್ಥಾನದಲ್ಲಿದ್ದಾಗಲೇ ಸಿಎಂ ಸ್ಥಾನ ದಕ್ಕಿಸಿಕೊಳ್ಳಲು ಸಾಧ್ಯವಾಗದ ತನಗೆ, 70ರ ವಯಸ್ಸಲ್ಲಿ ಖಂಡಿತಾ ಸಾಧ್ಯವಾಗದು ಎನ್ನುವುದು ಶಿವಕುಮಾರ್‌ರಿಗೆ ಗೊತ್ತಿಲ್ಲದೇನಿಲ್ಲ. ಹೀಗಾಗಿ, ಮುಖ್ಯಮಂತ್ರಿಯಾದರೆ ಈಗಲೇ ಆಗಬೇಕು ಎಂದುಕೊಂಡಿರುವ ಅವರು, ಶತಾಯಗತಾಯ ಪ್ರಯತ್ನ ಮುಂದುವರಿಸಿದ್ದಾರೆ.

2023ರಲ್ಲಿ ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯರನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ, 'ಎರಡೂವರೆ ವರ್ಷಗಳ ನಂತರ ನಿಮಗೆ ಸೂಕ್ತ ಸ್ಥಾನಮಾನ ನೀಡುತ್ತೇವೆ' ಎಂದು ಸೋನಿಯಾ ಗಾಂಧಿ ಸಮ್ಮುಖದಲ್ಲಿ ವಾಗ್ದಾನ ನೀಡಲಾಗಿತ್ತು. ಇದನ್ನೇ ಅಸ್ತ್ರವನ್ನಾಗಿಟ್ಟುಕೊಂಡಿರುವ ಶಿವಕುಮಾರ್, 'ಕೊಟ್ಟ ಮಾತನ್ನು ಉಳಿಸಿಕೊಳ್ಳಿ' ಎಂಬ ಸ್ಪಷ್ಟ ಸಂದೇಶವನ್ನು ಸಾಮಾಜಿಕ ಜಾಲತಾಣದ ಮೂಲಕ ದಿಲ್ಲಿಗೆ ರವಾನಿಸಿಯಾಗಿದೆ. ಎಂದಿನಂತೆ ಶಿವಕುಮಾರ್ ಬೆನ್ನಿಗೆ ನಿಂತಿರುವ ಸೋದರ ಡಿ.ಕೆ. ಸುರೇಶ್, ತೆರೆಮರೆಯಲ್ಲೇ ಶಾಸಕರು-ಸಚಿವರು ಹಾಗೂ ದಿಲ್ಲಿ ನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಯತ್ನದಲ್ಲಿದ್ದಾರೆ.

ಇವೆಲ್ಲದರ ನಡುವೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನವೆಂಬರ್ 24ರಂದು ದೇಶದ ಒಬಿಸಿ ಸಮುದಾಯಗಳನ್ನು ಸೆಳೆಯುವ ಕುರಿತ ತಮ್ಮ ಕಾರ್ಯಕ್ರಮಗಳ ಭಾಗವಾಗಿ, ರಾಜಸ್ಥಾನ ಕಾಂಗ್ರೆಸ್ ಮುಖಂಡ ಸಚಿನ್ ಪೈಲಟ್, ಕರ್ನಾಟಕದ ಬಿ.ಕೆ. ಹರಿಪ್ರಸಾದ್, ಮಾಣಿಕ್ಕಂ ಟ್ಯಾಗೋರ್, ಅಜಯ್ ಕುಮಾರ್ ಲಲ್ಲು, ಪೊನ್ನಂ ಪ್ರಭಾಕರ್, ವಿಜಯ್ ವಡೆತ್ತಿವಾರ್ ಮತ್ತು ಸುಭಾಷಿಣಿ ಯಾದವ್ ಜತೆಗೆ ಸುಮಾರು 1 ಗಂಟೆ ಸಭೆ ನಡೆಸಿದ್ದಾರೆ. ಒಬಿಸಿ ಸಮುದಾಯದ ಸಬಲೀಕರಣಕ್ಕೆ ಸಂಬಂಧಿಸಿದ ಪ್ರಮುಖ ವಿಷಯಗಳ ಬಗ್ಗೆ ಚರ್ಚೆ ನಡೆದಿದೆ. ಕಾಂಗ್ರೆಸ್‌ನ ಇತರ ಹಿಂದುಳಿದ ವರ್ಗಗಳ (ಒಬಿಸಿ) ವಿಭಾಗದ ಮುಖ್ಯಸ್ಥರಾಗಿರುವ ಅನಿಲ್ ಜೈಹಿಂದ್ ಅವರು, ತಮ್ಮ ವಿಭಾಗದಿಂದ ಹಮ್ಮಿಕೊಂಡಿರುವ ಕಾರ್ಯಕ್ರಮಗಳು ಮತ್ತು ಸಂಪರ್ಕ ಉಪಕ್ರಮಗಳ ಕುರಿತು ರಾಹುಲ್‌ಗೆ ವಿವರಣೆ ನೀಡಿದ್ದಾರೆ.

ರಾಷ್ಟ್ರವ್ಯಾಪಿ ಕಾಂಗ್ರೆಸ್ ಪಕ್ಷದ ರಾಜಕೀಯ ಪ್ರಾಬಲ್ಯದ ಪುನರ್‌ಸ್ಥಾಪನೆ ಮಾಡಬೇಕೆಂದರೆ ಒಬಿಸಿ ಸಮುದಾಯದ ವಿಶ್ವಾಸ ಗಳಿಸುವುದು ಅತಿಮುಖ್ಯ ಎಂದು ನಂಬಿರುವ ರಾಹುಲ್ ಗಾಂಧಿ, ಅಧಿಕಾರಶಾಹಿಯಲ್ಲೂ ಇತರೆ ಹಿಂದುಳಿದ ವರ್ಗಗಳು (ಒಬಿಸಿಗಳು) ಕಡಿಮೆ ಪ್ರಾತಿನಿಧ್ಯ ಹೊಂದಿವೆ ಎಂದಿರುವುದು ಚರ್ಚೆಗೆ ಗ್ರಾಸವಾಗಿತ್ತು. ಕೇಂದ್ರ ಸರಕಾರದ ಪ್ರಮುಖ ಹುದ್ದೆಗಳಲ್ಲಿ ಒಬಿಸಿ ಅಧಿಕಾರಿಗಳ ಸಂಖ್ಯೆ ಕಡಿಮೆ ಎಂಬ ತಮ್ಮ ವಾದಕ್ಕೆ ಅವರು ಅಂಕಿ-ಅಂಶಗಳನ್ನೂ ಮುಂದಿಟ್ಟಿದ್ದರು. ಅಧಿಕಾರಶಾಹಿಯಲ್ಲಿ ಜಾತಿ ನೋಡುವ ರಾಹುಲ್‌ರದ್ದು ಸಂಕೀರ್ಣ ಮನಸ್ಥಿತಿ ಎಂದು ಬಿಜೆಪಿ ಟೀಕಿಸಿದರೂ ಆ ಬಗ್ಗೆ ರಾಹುಲ್ ತಲೆಕೆಡಿಸಿಕೊಂಡಿರಲಿಲ್ಲ.

ಒಬಿಸಿ ಪ್ರಾತಿನಿಧ್ಯದ ಕೊರತೆಯ ಪರಿಹಾರಕ್ಕೆಂದೇ ರಾಷ್ಟ್ರವ್ಯಾಪಿ ಜಾತಿ ಜನಗಣತಿ ನಡೆಸಬೇಕೆಂದು ಪ್ರಬಲವಾಗಿ ಪ್ರತಿಪಾದಿಸಿದವರು ರಾಹುಲ್. ಜಾತಿ ಜನಗಣತಿಯ ಮುಖ್ಯ ಉದ್ದೇಶ ಜಾತಿಗಳ ಜನಸಂಖ್ಯೆ ಎಣಿಕೆ ಮಾತ್ರವಲ್ಲ, ಬದಲಿಗೆ, ಸಮುದಾಯಗಳಿಗೆ ಪೂರಕವಾದ ನೀತಿಗಳ ರಚನೆಗೆ ಮಾಹಿತಿ ನೀಡುವುದು ಮತ್ತು ದೇಶದಲ್ಲಿ ಸವಲತ್ತು-ಅವಕಾಶಗಳನ್ನು ಸಮಾನವಾಗಿ ಹಂಚುವುದೇ ಆಗಿದೆ ಎಂದಿದ್ದರು. ತೆಲಂಗಾಣ ಕಾಂಗ್ರೆಸ್ ಸರಕಾರದ ಜಾತಿ ಜನಗಣತಿಯನ್ನು ಶ್ಲಾಘಿಸಿದ್ದ ಅವರು ನಾವು ಕೇಂದ್ರದಲ್ಲಿ ಅಧಿಕಾರಕ್ಕೆ ಬಂದರೆ ರಾಷ್ಟ್ರವ್ಯಾಪಿ ಇದನ್ನು ಮಾಡುತ್ತೇವೆ ಎಂದು ಘೋಷಿಸಿದ್ದರು. ರಾಹುಲ್ ಗಾಂಧಿಯವರ ಚಿಂತನೆಗಳಿಗೆ ಪೂರಕವಾಗಿ ಸಿದ್ದರಾಮಯ್ಯ ಕೂಡ ಜಾತಿಗಣತಿ ಪರ

ಅನೇಕ ಬಾರಿ ಧ್ವನಿ ಎತ್ತಿದ್ದಾರೆ. ಇಬ್ಬರ ಚಿಂತನೆಗಳಿಗೂ ತಾಳೆಯಾಗಿರುವುದರಿಂದಲೇ, ಸಿದ್ದರಾಮಯ್ಯರ ಬಗ್ಗೆ ರಾಹುಲ್‌ಗೆ ವಿಶೇಷ ಒಲವು-ಗೌರವ ಇದೆ. ಅದು ಗುಟ್ಟಿನ ವಿಷಯವೇನಲ್ಲ.

ಕರ್ನಾಟಕದಲ್ಲಿ ಒಬಿಸಿ ವ್ಯಾಪ್ತಿಯ ಕುರುಬ ಸಮುದಾಯದ ಸಿದ್ದರಾಮಯ್ಯರನ್ನು ಉದಾಹರಣೆಯಾಗಿಟ್ಟುಕೊಂಡೇ ಅನೇಕ ಭಾಷಣಗಳನ್ನು ಮಾಡಿರುವ ರಾಹುಲ್ ಗಾಂಧಿ, ಸಿದ್ದರಾಮಯ್ಯರಂಥ ಒಬಿಸಿ ನಾಯಕರು ನಮಗೆ ವಿವಿಧ ರಾಜ್ಯಗಳಲ್ಲಿ ಬೇಕಾಗಿದ್ದಾರೆ ಎನ್ನುತ್ತಾ ಈ ಸಮುದಾಯಗಳ ಮನಸ್ಸನ್ನು ಗೆಲ್ಲಲು ಅವರ ವರ್ಚಸ್ಸನ್ನೇ ಬಳಸಿಕೊಂಡಿದ್ದಾರೆ. ಬಿಹಾರ ವಿಧಾನಸಭೆ ಚುನಾವಣೆ ಪೂರ್ವದಲ್ಲಿ ಅಲ್ಲಿ ನಡೆಸಿದ್ದ ಮತಾಧಿಕಾರ ಯಾತ್ರೆಗೂ ಸಿದ್ದರಾಮಯ್ಯರನ್ನು ರಾಹುಲ್ ಕರೆಸಿಕೊಂಡಿದ್ದರು. ಪರಿಸ್ಥಿತಿ ಹೀಗಿರುವಾಗ, ರಾಹುಲ್ ಗಾಂಧಿ ಯಾವ ಕಾರಣ ನೀಡಿ, 'ಸಿಎಂ ಸ್ಥಾನದಿಂದ ನೀವು ಕೆಳಗಿಳಿಯಿರಿ ಸಿದ್ದರಾಮಯ್ಯನವರೇ' ಎಂದು ರಾಜೀನಾಮೆ ಪಡೆದುಕೊಂಡಾರು?

ಬಿಹಾರದಲ್ಲಿ ಮಹಾಘಟಬಂಧನದ ಸಿಎಂ ಅಭ್ಯರ್ಥಿಯಾಗಿದ್ದ, ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಒಬಿಸಿ ಸಮುದಾಯದವರು. ಅಲ್ಲಿ ಮಹಾಘಟಬಂಧನ ಗೆದ್ದು ಅಧಿಕಾರಕ್ಕೆ ಬರುತ್ತಿದ್ದರೆ ಒಬಿಸಿ ನಾಯಕನೊಬ್ಬನ ಪ್ರತಿಷ್ಠಾಪನೆಗೆ ಕಾಂಗ್ರೆಸ್ ಕೂಡ ಕಾರಣ ಎಂದು ವಾದಿಸಬಹುದಿತ್ತು. ಆದರೆ, ಲೆಕ್ಕಾಚಾರಗಳೆಲ್ಲವೂ ಉಲ್ಟಾ ಹೊಡೆದವು. ಹಾಗೆ ನೋಡಿದರೆ, ಬಿಹಾರದಲ್ಲಿ ಮಹಾಘಟಬಂಧನ ಸೋತಿದ್ದರಿಂದ ಕರ್ನಾಟಕದಲ್ಲಿ ಸಿಎಂ ಸಿದ್ದರಾಮಯ್ಯರ ಕುರ್ಚಿ ಮತ್ತಷ್ಟು ಗಟ್ಟಿಯಾಯಿತು. ಮಹಾಮೈತ್ರಿ ಗೆಲ್ಲುತ್ತಿದ್ದರೆ ತಮ್ಮನ್ನು ಸಿಎಂ ಮಾಡಿ ಎಂಬ ಡಿ.ಕೆ. ಶಿವಕುಮಾರ್ ಪ್ರತಿಪಾದನೆಗೆ ಮತ್ತಷ್ಟು ಬಲ ಸಿಗುತ್ತಿತ್ತು. ಹೀಗಾಗಿ, ಬಿಹಾರ ಫಲಿತಾಂಶ ಸಿದ್ದರಾಮಯ್ಯರ ಬೆಂಬಲಿಗರಿಗೆ ವರವಾದರೆ, ಡಿ.ಕೆ. ಶಿವಕುಮಾರ್ ಪಾಲಿಗೆ ಶಾಪವಾಗಿ ಪರಿಣಮಿಸಿತು!

ಅದೇನೇ ಇದ್ದರೂ, ಡಿ.ಕೆ. ಶಿವಕುಮಾರ್ ಅವರ ಉದಾತ್ತ ಪಕ್ಷನಿಷ್ಠೆಯನ್ನು ಕಡೆಗಣಿಸಲು ಸಾಧ್ಯವಿದೆಯೇ? ಅಕ್ರಮ ಆಸ್ತಿ ಸಂಪಾದನೆ ಪ್ರಕರಣದಲ್ಲಿ ಕೇಂದ್ರ ಸರಕಾರದ ಅಧೀನದಲ್ಲಿರುವ ಇ.ಡಿ (ಜಾರಿ ನಿರ್ದೇಶನಾಲಯ), ಸಿಬಿಐ ತನಿಖಾ ಸಂಸ್ಥೆಗಳು ತಮ್ಮ ವಿರುದ್ಧ ಸಮರ ಸಾರಿ 55 ದಿನಗಳ ಕಾಲ ದೆಹಲಿಯ ತಿಹಾರ್ ಜೈಲಿಗಟ್ಟಿದರೂ, ಧೃತಿಗೆಡದೆ ಕಾಂಗ್ರೆಸ್ ಪಕ್ಷದೊಂದಿಗೇ ಅವರು ಇದ್ದರು. ತನಿಖಾ ಸಂಸ್ಥೆಗಳಿಂದ ರೇಡ್ ಆಗುತ್ತದೆ ಎಂಬ ಸುಳಿವು ಸಿಕ್ಕ ಕೂಡಲೇ ಬಿಜೆಪಿ ಸೇರಿಕೊಂಡು ರಕ್ಷಣೆಯ ಹಾದಿ ಕಂಡುಕೊಂಡ ಹಲವು ರಾಜಕಾರಣಿಗಳ ಮಧ್ಯೆ, ಡಿ.ಕೆ. ಶಿವಕುಮಾರ್ ಭಿನ್ನರಾಗಿ ಕಾಣಿಸಿಕೊಳ್ಳುವುದು ಇದೇ ಕಾರಣಕ್ಕೆ. 2024ರ ಫೆಬ್ರವರಿ ತಿಂಗಳಲ್ಲಿ ಹಿಮಾಚಲ ಪ್ರದೇಶ ಕಾಂಗ್ರೆಸ್ ಪತನಗೊಳ್ಳುವ ಅಂಚಿನಲ್ಲಿದ್ದಾಗ ಅಲ್ಲಿನ ಪರಿಸ್ಥಿತಿಯನ್ನು ನಿಭಾಯಿಸುವ ಟಾಸ್ಕ್ ಅನ್ನು ಡಿ.ಕೆ. ಶಿವಕುಮಾರ್‌ಗೆ ನೀಡಲಾಗಿತ್ತು ಮತ್ತು ಅದರಲ್ಲಿ ಅವರು ಯಶಸ್ವಿಯಾಗಿದ್ದರು ಕೂಡ. ಉತ್ತರ ಭಾರತದ ಮಾಧ್ಯಮಗಳಲ್ಲಿ ಹಾಗೂ ಅಲ್ಲಿನ ರಾಜಕಾರಣಿಗಳ ನಡುವೆ 'ಟ್ರಬಲ್ ಶೂಟರ್' ಎಂದೇ ಖ್ಯಾತರಾಗಿರುವ ಶಿವಕುಮಾರ್, ಕಾಂಗ್ರೆಸ್ ಅನ್ನು ಸಂಕಷ್ಟದಿಂದ ಪಾರು ಮಾಡುವ ನಾಯಕ ಎಂದೇ ಗುರುತಿಸಿಕೊಂಡಿದ್ದಾರೆ.

2017ರಲ್ಲಿ ಸೋನಿಯಾ ಗಾಂಧಿ ಆಪ್ತ, ಗುಜರಾತಿನ ಅಹ್ಮದ್ ಪಟೇಲ್ ಅವರು ರಾಜ್ಯಸಭೆ ಚುನಾವಣೆ ಗೆದ್ದು ಸಂಸತ್ ಮರುಪ್ರವೇಶ ಮಾಡಿದ್ದರ ಹಿಂದೆ ಡಿ.ಕೆ. ಶಿವಕುಮಾರ್ ಪಾತ್ರವಿದ್ದುದನ್ನು ಅಲ್ಲಗಳೆಯಲಾದೀತೆ? ಗುಜರಾತ್ ರಾಜ್ಯ ಕಾಂಗ್ರೆಸ್‌ನಲ್ಲಿನ ಬಂಡಾಯದ ನಡುವೆ ರಾಜ್ಯಸಭೆಗೆ ಐದನೇ ಬಾರಿಗೆ ಆಯ್ಕೆಯಾಗಲು ಅಹ್ಮದ್ ಪಟೇಲ್ ಅವರಿಗೆ 44 ಶಾಸಕರ ಬೆಂಬಲ ಬೇಕಿತ್ತು. ಅದಕ್ಕೂ ಮುನ್ನ ಗುಜರಾತ್ ಕಾಂಗ್ರೆಸ್ಸಿನ 6 ಶಾಸಕರು ರಾಜೀನಾಮೆ ನೀಡಿದ್ದರು ಮತ್ತು 8 ಮಂದಿ ಬಂಡಾಯವೆದ್ದಿದ್ದರು. ಇದು ಅಹ್ಮದ್ ಪಟೇಲ್‌ರ ರಾಜ್ಯಸಭೆಯ ಹಾದಿಯನ್ನು ಸಂಕೀರ್ಣಗೊಳಿಸಿತ್ತು. ಗುಜರಾತ್ ವಿಧಾನಸಭೆಯ ಬಲ 176ಕ್ಕೆ ಇಳಿದಿದ್ದರಿಂದ ಕಾಂಗ್ರೆಸ್‌ಗೆ ಉಳಿದ ಶಾಸಕರನ್ನು ರಕ್ಷಿಸಿಡುವುದು ಅನಿವಾರ್ಯವಾಗಿತ್ತು. ಆಗ ಕರ್ನಾಟಕದಲ್ಲಿ ಇಂಧನ ಸಚಿವರಾಗಿದ್ದ ಡಿ.ಕೆ. ಶಿವಕುಮಾರ್ ಈ ಶಾಸಕರನ್ನು ಬೆಂಗಳೂರಿನ ಬಳಿಯ ರೆಸಾರ್ಟ್‌ನಲ್ಲಿ ತಂದಿರಿಸಿದರು. ಶಾಸಕರು ಮತದಾನಕ್ಕೆ ಮುನ್ನ ಬಿಜೆಪಿಗೆ ಪಕ್ಷಾಂತರ ಮಾಡುವುದನ್ನು ತಪ್ಪಿಸಲು, ಶಿವಕುಮಾರ್ ಮೇಲ್ವಿಚಾರಣೆಯಲ್ಲೇ ಕಾರ್ಯಯೋಜನೆ ನಡೆದಿತ್ತು. ಅಂತಿಮವಾಗಿ ಅಹ್ಮದ್ ಪಟೇಲ್ ಗೆದ್ದರು. ಅವರ ಗೆಲುವು ಕೇಂದ್ರ ಕಾಂಗ್ರೆಸ್‌ಗೆ ಪ್ರತಿಷ್ಠೆಯ ಪ್ರಶ್ನೆಯಾಗಿತ್ತು. ಅಕ್ಷರಶಃ ಯುದ್ಧವಾಗಿ ರೂಪುಗೊಂಡಿದ್ದ ಈ ಚುನಾವಣೆ ಮತ್ತು ಪಟೇಲ್‌ರ ಗೆಲುವು ಶಿವಕುಮಾರ್‌ಗೆ ರಾಷ್ಟ್ರಮಟ್ಟದಲ್ಲಿ ಭಾರಿ ವರ್ಚಸ್ಸು ತಂದು ಕೊಟ್ಟಿತ್ತು ಮತ್ತು ಶಿವಕುಮಾರ್‌ರನ್ನು ರಾಜ್ಯ ಕಾಂಗ್ರೆಸ್ ಅಧ್ಯಕ್ಷರನ್ನಾಗಿ ನೇಮಕ ಮಾಡಲು ದಿಲ್ಲಿ ನಾಯಕರಿಗೆ ಪ್ರೇರಣೆಯಾಗಿತ್ತು.

ಪಟೇಲ್ ಗೆಲುವಿನ ಬೆನ್ನಲ್ಲೇ ಅಕ್ರಮ ಆಸ್ತಿ ಸಂಪಾದನೆ ಕೇಸಲ್ಲಿ ಶಿವಕುಮಾರ್ ಮೇಲೆ ಐಟಿ, ಇ.ಡಿ, ಸಿಬಿಐ ತನಿಖಾ ತಂಡಗಳಿಂದ ರೇಡ್‌ಗಳಾಗಿ, ನಂತರ ಜೈಲು ಸೇರಿದ್ದರು. ವಿಚಾರಣೆಗಾಗಿ ಜೈಲಿನ ಬಸ್ಸಿನಿಂದಿಳಿದು, ದಿಲ್ಲಿಯ ರೌಸ್ ಅವೆನ್ಯೂ ಕೋರ್ಟ್ ಹಾಲ್‌ನಲ್ಲಿ ಕಾಣಿಸಿಕೊಳ್ಳುತ್ತಿದ್ದ ಶಿವಕುಮಾರ್‌ರನ್ನು ನೋಡಿದಾಗ, ಕರ್ನಾಟಕ ಕಾಂಗ್ರೆಸ್‌ನ ಬಲಶಾಲಿ ನಾಯಕ ಇವರೇನಾ? ಎಂದೆನಿಸುತ್ತಿತ್ತು. ಕುಸಿದು ಹೋದಂತಿದ್ದ ಮುಖಭಾವ ಅವರ ಅಂದಿನ ಸಂಕಷ್ಟಕರ ಪರಿಸ್ಥಿತಿಗೆ ಕನ್ನಡಿ ಹಿಡಿದಿತ್ತು. ತಮ್ಮ ಜೈಲುವಾಸವನ್ನು ಸ್ವಪಕ್ಷೀಯರೇ ಸಂಭ್ರಮಿಸುತ್ತಿದ್ದಾರೆ ಎನ್ನುವುದು ಅವರಲ್ಲಿ ಮತ್ತಷ್ಟು ಬೇಸರ ತರಿಸಿತ್ತು. ಹಾಗಂತ ಇದು ರಾಜಕಾರಣದ ಕಟು ವಾಸ್ತವ ಎನ್ನುವುದೂ ಗೊತ್ತಿತ್ತು. ಇವೆಲ್ಲದರ ನಡುವೆ, ಸೋನಿಯಾ ಗಾಂಧಿಯವರು ತಿಹಾರ್ ಜೈಲಿಗೆ ಹೋಗಿ ಸಾಂತ್ವನ ಹೇಳಿದ್ದು, ಅವರಿಗೆ 'ಬೂಸ್ಟರ್ ಡೋಸ್' ನೀಡಿದಂತಾಗಿತ್ತು.

ಜೈಲಿನಿಂದ ಹೊರಬಂದಿದ್ದ ಶಿವಕುಮಾರ್‌ಗೆ ಕರ್ನಾಟಕದಲ್ಲಿ ಪಕ್ಷದ ಸಾರಥ್ಯವನ್ನು ಸೋನಿಯಾ ಗಾಂಧಿ ಅವರು ಅತ್ಯಂತ ಪ್ರೀತ್ಯಾದರಗಳಿಂದ ನೀಡಿದ್ದರು. ಇಂತಿಪ್ಪ ಶಿವಕುಮಾರ್, 2023ರ ಚುನಾವಣೆಯಲ್ಲೂ ಪಕ್ಷದ ಗೆಲುವಿಗೆ ಮಹತ್ವದ ಕೊಡುಗೆ ನೀಡಿದ್ದರಿಂದಲೇ, ಎರಡೂವರೆ ವರ್ಷಗಳ ಹಿಂದೆ ವಾಗ್ದಾನ ಮಾಡಿದಂತೆ, 'ನನ್ನ ಕೆಲಸಕ್ಕೆ ನ್ಯಾಯ ಕೊಡಿ, ವಚನಭ್ರಷ್ಟರಾಗಬೇಡಿ. ನಮ್ಮ ಸಮುದಾಯ ಹಾಗೂ ಬೆಂಬಲಿಗರ ಆಕ್ರೋಶಕ್ಕೆ ಕಾರಣವಾಗಬೇಡಿ' ಎಂದು ದಿಲ್ಲಿ ದೊರೆಗಳ ಕರ್ತವ್ಯಪ್ರಜ್ಞೆಯನ್ನು ಜಾಗೃತಗೊಳಿಸುತ್ತಾ, ತಮ್ಮ ಪಟ್ಟಾಭಿಷೇಕದ ಸಮಯ ನಿಗದಿ ಮಾಡಿ ಎಂದು ಒತ್ತಾಯಿಸುತ್ತಿದ್ದಾರೆ.

ಆದರೆ, 2023ರಲ್ಲಿ ಶಿವಕುಮಾರ್‌ಗೆ ವಾಗ್ದಾನ ನೀಡಿದ್ದಾಗ, 'ಎರಡೂವರೆ ವರ್ಷಗಳ ನಂತರ ನೀವು ಶಿವಕುಮಾರ್‌ಗೆ ಅಧಿಕಾರ ಹಸ್ತಾಂತರ ಮಾಡಬೇಕು' ಎಂದು ಸಿದ್ದರಾಮಯ್ಯರಿಗೆ ತಿಳಿಸಲಾಗಿತ್ತೇ? ಎನ್ನುವುದನ್ನು ಹೈಕಮಾಂಡೇ ಬಹಿರಂಗಪಡಿಸಬೇಕು. ವಾಗ್ದಾನ ಮಾಡಿದ್ದು ನಿಜವೇ ಆಗಿದ್ದರೆ ಅದನ್ನು ಈಡೇರಿಸಬೇಕು. ಇಲ್ಲವಾದಲ್ಲಿ, ಅಂಥ ಒಪ್ಪಂದವೇ ನಡೆದಿಲ್ಲ ಎನ್ನುವ ಸ್ಪಷ್ಟನೆಯನ್ನಾದರೂ ನೀಡಬೇಕಲ್ಲವೇ? ಆದರೆ, ಹಲ್ಲು ಕಿತ್ತ ಹಾವಿನಂತಿರುವ ದುರ್ಬಲ ಹೈಕಮಾಂಡ್, ಇವ್ಯಾವುದನ್ನೂ ಮಾಡದಿರುವುದೇ ಕಾಂಗ್ರೆಸ್‌ನ ಆಂತರಿಕ ಬಿಕ್ಕಟ್ಟಿನ ಗಾಯಕ್ಕೆ ಬರೆ ಎಳೆಯುತ್ತಿದೆ.

ಈಗ ಕರ್ನಾಟಕದಲ್ಲಿ ನಡೆಯುತ್ತಿರುವ ರಾಜಕೀಯ ಪ್ರಹಸನಗಳು ಹಿಂದೆ ಪಂಜಾಬ್, ಛತ್ತೀಸ್‌ಗಢ ಮತ್ತು ರಾಜಸ್ಥಾನಗಳಲ್ಲಿ ಕೂಡ ನಡೆದು, ಆ ಮೂರೂ ರಾಜ್ಯಗಳಲ್ಲಿ ಕಾಂಗ್ರೆಸ್ ಅಧಿಕಾರ ಕಳೆದುಕೊಂಡಿರುವುದನ್ನು ನೆನಪಿಸಿಕೊಳ್ಳುವುದು ಪ್ರಸ್ತುತ. ಛತ್ತೀಸ್‌ಗಢದಲ್ಲಿ ಒಬಿಸಿ ಸಮುದಾಯದ ಭೂಪೇಶ್ ಬಗೇಲ್ ಅವರನ್ನು ಮುಖ್ಯಮಂತ್ರಿಯನ್ನಾಗಿ ಆಯ್ಕೆ ಮಾಡುವ ಮುನ್ನ ಮೇಲ್ವರ್ಗದ ರಜಪೂತ ಸಮುದಾಯದ ಟಿ.ಎಸ್. ಸಿಂಗ್‌ದೇವ್ ಸಿಎಂ ಸ್ಥಾನಕ್ಕಾಗಿ ಪ್ರಬಲ ಲಾಬಿ ಮಾಡಿದ್ದರು. ಆಗ, ಎರಡೂವರೆ ವರ್ಷಗಳ ನಂತರ ಸೂಕ್ತ ಸ್ಥಾನಮಾನದ ಭರವಸೆ ನೀಡಿ ಅವರನ್ನು ಸಮಾಧಾನಪಡಿಸಲಾಗಿತ್ತು. ಆದರೆ, ಟಿ.ಎಸ್. ಸಿಂಗ್ ದೇವ್‌ಗೆ ನೀಡಿದ್ದ ವಾಗ್ದಾನವನ್ನು ಹೈಕಮಾಂಡ್ ಉಳಿಸಿಕೊಳ್ಳಲಿಲ್ಲ. ಬದಲಿಗೆ ಚುನಾವಣೆಗೆ 6 ತಿಂಗಳು ಬಾಕಿ ಇರುವಾಗಲೇ ಅವರನ್ನು ಉಪ ಮುಖ್ಯಮಂತ್ರಿಯನ್ನಾಗಿ ನೇಮಕ ಮಾಡಲಾಯಿತು. ಆದರೆ, ಕಾಲ ಮೀರಿತ್ತು ಮತ್ತು ಚುನಾವಣೆಯಲ್ಲಿ ಬಿಜೆಪಿ ವಿರುದ್ಧ ಕಾಂಗ್ರೆಸ್ ನೆಲಕಚ್ಚಿತ್ತು. ಈ 3 ರಾಜ್ಯಗಳ ಕಹಿನೆನಪುಗಳಿಂದಾಗಿಯೇ ಕರ್ನಾಟಕದಲ್ಲಿ ನಾಯಕತ್ವ ಬದಲಾವಣೆ ವಿಚಾರ ಎನ್ನುವುದು ಕೈ ಹೈಕಮಾಂಡಿಗೆ ಕತ್ತಿ ಅಲಗಿನ ಮೇಲಿನ ನಡಿಗೆಯಂತಾಗಿದೆ. ಇಲ್ಲಿ ಯಾರ ಪರ ನಿರ್ಧಾರ ತೆಗೆದುಕೊಂಡರೂ ಪರಿಣಾಮ ನೆಟ್ಟಗಿರುವ ಲಕ್ಷಣಗಳಂತೂ ಇಲ್ಲ.

(ಲೇಖಕರು ಹಿರಿಯ ಪತ್ರಕರ್ತರು)

ಟ್ರಾಫಿಕ್ ಸಮಸ್ಯೆಗೆ ಸಮೂಹ ಸಾರಿಗೆಯೇ ಪರಿಹಾರ

ಈ ಟ್ರಾಫಿಕ್ ಜಾಮ್ ಅನ್ನುವುದು ಉದ್ಯಮದ, ಕೈಗಾರಿಕೆಗಳ ಸಮಯವನ್ನೂ ತಿನ್ನುತ್ತಾ ಉದ್ಯಮಶೀಲತೆಗೆ ಹೊಡೆತ ಕೊಡುತ್ತಿದೆ. ಅದನ್ನು ಸರಿದೂಗಿಸಲು ಸಮೂಹ ಸಾರಿಗೆಯ ಉತ್ತೇಜನ ಒಂದೇ ಪರಿಹಾರ. ಬೆಂಗಳೂರಿನಂಥ ನಗರಗಳಲ್ಲಿ ರಸ್ತೆಗಳ ಅಗಲೀಕರಣ ಅಸಾಧ್ಯ.

ಹಿತೋಪದೇಶ

ವಿನಾಯಕ ಭಟ್ ಒಣಿ ವಿಘ್ನೇಶ್ವರ
vveditoped@gmail.com

ಬೆಂಗಳೂರು ಅವಕಾಶಗಳ ನಗರ. ಏನೂ ಇಲ್ಲದೇ ಏನನ್ನೂ ಸಾಧಿಸುವ ಅವಕಾಶಗಳನ್ನು ಬೆಂಗಳೂರು ಕೊಡುತ್ತದೆ. ಕೆಲಸ ಮಾಡುವ ಮನಸ್ಸೊಂದು ಇದ್ದರೆ ಸಾಕು, ಬೆಂಗಳೂರು ಕೆಲಸ ಕೊಡುತ್ತದೆ. ಅದು ದೈಹಿಕ ಶ್ರಮ ಬೇಡುವ ದಿನಗೂಲಿ ಇರಬಹುದು, ಮಾನಸಿಕ ಒತ್ತಡದ ಯಾವುದೋ ಕಂಪನಿಯ ಸಿಇಒ ಕೆಲಸ ಇರಬಹುದು. ಇಲ್ಲಿ ಅವಕಾಶಗಳು ಅಗಾಧ. ಇದೇ ಕಾರಣಕ್ಕೆ ದೇಶದ ಎಲ್ಲಾ ಭಾಗಗಳಿಂದ ಜನರು ಬಂದು ಬೆಂಗಳೂರನ್ನು ಸೇರುವುದು. ಈ ಎಲ್ಲಾ ಜನರ ಶ್ರಮದಿಂದಲೇ ಉದ್ದಿಮೆಗಳು, ಕೈಗಾರಿಕೆಗಳು ಬೆಳೆಯುತ್ತಾ ಸರಕಾರಕ್ಕೂ ಆದಾಯವನ್ನು ತರುವುದು. ತಾವು ಮಾಡಿದ ಕೆಲಸಕ್ಕೆ ಗಳಿಸುವ ಆದಾಯದಿಂದ ಸರಕಾರಕ್ಕೆ ತೆರುವ ತೆರಿಗೆ ಆದಾಯ ಮಾತ್ರ ಭಾಗ್ಯಗಳಿಗೆ ಹೊರತಾಗಿ ಹೋಗುವುದು ಕಾಣುವುದಿಲ್ಲ. ಅದರಲ್ಲೂ ಬೆಂಗಳೂರಿನ ರಸ್ತೆಗಳ ದುರವಸ್ಥೆಯಿಂದಾಗಿ ಉಂಟಾಗುತ್ತಿರುವ ಟ್ರಾಫಿಕ್ ಜಾಮ್ ಎಲ್ಲ ವರ್ಗದ ಜನರನ್ನು ಹಿಂಡಿ ಹಿಪ್ಪೆ ಮಾಡುತ್ತಿದೆ. ಅದೆಷ್ಟೇ ಗುಂಡಿಗಳನ್ನು ಮುಚ್ಚಿದ್ದೇವೆಂದು ಪುಂಗಿ ಊದಿದರೂ ಸತ್ಯಾಂಶವು ಇಲ್ಲಿ ಓಡ್ಡಾಡುತ್ತಿರುವವರಿಗೆ ಗೊತ್ತು. ಹೆಚ್ಚುತ್ತಿರುವ ಜನ, ಅದೇ ಪ್ರಮಾಣದಲ್ಲಿ ಹೆಚ್ಚುತ್ತಿರುವ ವಾಹನಗಳೂ ಬೆಂಗಳೂರಿನ ಟ್ರಾಫಿಕ್ ಜಾಮ್‌ಗೆ ಹೇರಳವಾಗಿ ಕೊಡುಗೆಗಳನ್ನು ನೀಡುತ್ತಿವೆ.

ಈ ಟ್ರಾಫಿಕ್ ಜಾಮ್ ಅನ್ನುವುದು ಉದ್ಯಮದ, ಕೈಗಾರಿಕೆಗಳ ಸಮಯವನ್ನೂ ತಿನ್ನುತ್ತಾ ಉದ್ಯಮಶೀಲತೆಗೆ ಹೊಡೆತ ಕೊಡುತ್ತಿವೆ ಅನ್ನುವುದು ಎಲ್ಲರಿಗೂ ತಿಳಿದ ವಿಚಾರವೇ. ಅದನ್ನ ಸರಿದೂಗಿಸಲು ಸಮೂಹ ಸಾರಿಗೆಯ ಉತ್ತೇಜನ ಒಂದೇ ಪರಿಹಾರ. ಬೆಂಗಳೂರಿನಂಥ ನಗರಗಳಲ್ಲಿ ರಸ್ತೆಗಳ ಅಗಲೀಕರಣ ಅಸಾಧ್ಯದ ಮಾತೇ ಸರಿ. ಹಾಗಾಗಿ ಇರುವ ಜಾಗವನ್ನು, ರಸ್ತೆಯನ್ನು ಪರಿಣಾಮಕಾರಿಯಾಗಿ ಉಪಯೋಗಿಸಿಕೊಳ್ಳುವುದು ಒಂದೇ ಸರಿಯಾದ ಮಾರ್ಗ. ಸಮೂಹ ಸಾರಿಗೆ ಹೆಚ್ಚಿದಂತೆ ಪರಿಸರ ಮಾಲಿನ್ಯವನ್ನು ಕಡಿಮೆ ಮಾಡುವ ಅವಕಾಶವನ್ನೂ ಅದು ಹುಟ್ಟು ಹಾಕುತ್ತದೆ. ಆ ನಿಟ್ಟಿನಲ್ಲಿ ಮೆಟ್ರೋ ಸಂಚಾರ ಬೆಂಗಳೂರಿನ ಮಹತ್ವದ ಭಾಗ ಎನಿಸಿಕೊಳ್ಳುತ್ತದೆ. ಇತ್ತೀಚೆಗೆ ನಮಗೆ ಮೆಟ್ರೋದ ಮೂರನೇ ಲೈನ್ ಕೂಡಾ ಸೇರ್ಪಡೆ ಆಗಿದೆ. ಆದರೂ ಆ ದಿಕ್ಕಿನಲ್ಲಿರುವ ಯಾವುದೇ ರಸ್ತೆಗಳ ಜಾಮ್ ಕಡಿಮೆ ಆಗಿಲ್ಲ ಅನ್ನುವುದು ವಿಷಾದನೀಯ ಸಂಗತಿ. ಇದಕ್ಕೆ ಕಾರಣ ಮತ್ತು ಪರಿಹಾರವನ್ನು ಕಂಡುಹಿಡಿದು ಅನುಷ್ಠಾನ ಮಾಡದೇ ಇದ್ದಲ್ಲಿ ಮೂರಲ್ಲ, ನೂರು ಮೆಟ್ರೋ ಬಂದರೂ ರಸ್ತೆಗಳಲ್ಲಿನ ಜಾಮ್ ಕಡಿಮೆ ಆಗುವ ಸಾಧ್ಯತೆಗಳೇ ಇಲ್ಲ.

ಸುಮ್ಮನೇ ಮೆಟ್ರೋ ಲೈನ್ ಇರುವ ರಸ್ತೆಗಳನ್ನೇ ಗಮನಿಸಿದರೆ ಇದು ಅರ್ಥ ಆಗುತ್ತದೆ. ನಮ್ಮ ಟ್ರಾಫಿಕ್ ಜಾಮ್‌ಗೆ ಕಾರು ಮತ್ತು ದ್ವಿಚಕ್ರ ವಾಹನಗಳ ಕೊಡುಗೆ ಗಣನೀಯ. 40 ಜನ ಪ್ರಯಾಣಿಸುವ ಬಸ್ಸು ತೆಗೆದುಕೊಳ್ಳುವ ಜಾಗಕ್ಕೂ, ನಲವತ್ತು ದ್ವಿಚಕ್ರ ವಾಹನ ತೆಗೆದುಕೊಳ್ಳುವ ಜಾಗಕ್ಕೂ, ನಲವತ್ತು ಕಾರು ತೆಗೆದುಕೊಳ್ಳುವ ಜಾಗಕ್ಕೂ ಇರುವ ವ್ಯತ್ಯಾಸ ಸಾಮಾನ್ಯರಿಗೂ ಅರ್ಥವಾಗುವಂಥದ್ದೇ. ಲಕ್ಷಾಂತರ ದ್ವಿಚಕ್ರ ವಾಹನಗಳು.... ಇಡೀ ಕಾರಿನಲ್ಲಿ ಒಬ್ಬನೇ ವ್ಯಕ್ತಿ ಪ್ರಯಾಣಿಸುವುದನ್ನು ಕಾಣುತ್ತೇವೆ. ತಮ್ಮ ತಲೆಯ ಮೇಲೆಯೇ ಮೆಟ್ರೋ ಇದ್ದರೂ ಇವರ್‍ಯಾಕೆ ಅದನ್ನು ಉಪಯೋಗಿಸುವುದಿಲ್ಲ ಎನ್ನುವ ಆಶ್ಚರ್ಯ ನಮ್ಮನ್ನು ಕಾಡುತ್ತದೆ. ಉರಿಯುವ ಬಿಸಿಲು, ಸುರಿಯುವ ಮಳೆಯನ್ನೂ ಲೆಕ್ಕಿಸದೆ ದ್ವಿಚಕ್ರ ವಾಹನದಲ್ಲಿ ತಮ್ಮ ಕಚೇರಿಗೆ ಹೋಗುವ ಜನ, ಹವಾನಿಯಂತ್ರಿತ ಮೆಟ್ರೋದಲ್ಲಿ ಹೋಗಲು ಹಿಂಜರಿಯುತ್ತಾರೆ. ತಮ್ಮ ಕಾರಿನಲ್ಲಿ ಆಗುವ ಪೆಟ್ರೋಲ್ ಖರ್ಚನ್ನೂ ಲೆಕ್ಕಿಸದೇ ಒಬ್ಬರೇ ಅದರಲ್ಲಿ ಕಚೇರಿಗೆ ಹೋಗುತ್ತಾರೆ. ಇವೆರಡನ್ನೂ ಕಡಿಮೆ ಮಾಡಿದರೆ ಬೆಂಗಳೂರಿನ ಟ್ರಾಫಿಕ್ ಜಾಮ್ ಸಲ್ಪ ಮಟ್ಟಿಗೆ ತಗ್ಗಬಹುದು. ಈ ಎರಡೂ ವರ್ಗ ಯಾಕೆ ಮೆಟ್ರೋವನ್ನು ಅವಲಂಬಿಸುವುದಿಲ್ಲ ಎನ್ನುವುದಕ್ಕೆ ಸರಳ ಉತ್ತರ- ಮೊದಲ ಮೈಲಿ ಮತ್ತು ಕೊನೆಯ ಮೈಲಿ. ಅಂದರೆ, ಅವರ ಮನೆಯಿಂದ ಸಮೀಪದ ಮೆಟ್ರೋ ನಿಲ್ದಾಣಕ್ಕೆ ಬರುವ ಸಾರಿಗೆ ವ್ಯವಸ್ಥೆ ಮತ್ತು ಸಮಯ ಹಾಗೂ ಮೆಟ್ರೋ ನಿಲ್ದಾಣದಿಂದ ಕಚೇರಿಗೆ ಇರುವ ದೂರ, ಸಾರಿಗೆ ವ್ಯವಸ್ಥೆ ಮತ್ತು ತಗಲುವ ಸಮಯ. ಒಂದು ಉದಾಹರಣೆಯನ್ನು ನೋಡೋಣ: ಒಬ್ಬ ವ್ಯಕ್ತಿ ಕೆಂಗೇರಿ ಮೆಟ್ರೋ ಸ್ಟೇಷನ್‌ನಿಂದ 2 ಕಿ.ಮೀ. ದೂರದ ಬಡಾವಣೆಯಲ್ಲಿ ಇದ್ದಾನೆ ಎಂದು ಕೊಳ್ಳೋಣ. ಅವನ ಕಚೇರಿಯು ಬ್ರಿಗೇಡ್ ರಸ್ತೆಯ ತುದಿಯಲ್ಲಿ ಇದೆ ಎಂದುಕೊಳ್ಳೋಣ. ಮನೆಯಿಂದ ಮೆಟ್ರೋ ಸ್ಟೇಷನ್ ತನಕ ಅವನು ಹೇಗೆ ಬರಬೇಕು? ಅದೇ ರೀತಿಯಲ್ಲಿ ಎಂ.ಜಿ. ರೋಡ್ ಮೆಟ್ರೋ ಸ್ಟೇಷನ್‌ನಿಂದ ಕಚೇರಿಯ ತನಕ ಹೇಗೆ ಬರಬೇಕು? ಈ ಎರಡೂ ಕಡೆಯಲ್ಲಿ ಸುಲಭವಾಗಿ ಸಾರಿಗೆ ಸಿಗುವಂತಿದ್ದರೆ ಈ ವ್ಯಕ್ತಿ ಖಂಡಿತ ಬೈಕ್ ಅಥವಾ ಕಾರನ್ನು ಬಳಸುವುದಿಲ್ಲ. ಇದರ ಜತೆಗೆ ಮೆಟ್ರೋ ಸ್ಟೇಷನ್‌ನಲ್ಲಿ ವಾಹನವನ್ನು ನಿಲ್ಲಿಸಿದರೆ ಪಾರ್ಕಿಂಗ್ ಫೀಸ್ ಬೇರೆ. ಇವೆಲ್ಲಾ ಕಾರಣಗಳಿಂದ ಕೊನೆಯಲ್ಲಿ ಅವನು ಬೈಕ್ ಅಥವಾ ಕಾರಿನಲ್ಲಿಯೇ ಕಚೇರಿಗೆ ಬರುತ್ತಾನೆ. ಅಂದರೆ ಮೆಟ್ರೋ ಸಾರಿಗೆಯನ್ನು ಇನ್ನೂ ಹೆಚ್ಚು ಉಪಯೋಗ ಮಾಡಿಕೊಳ್ಳಬೇಕು ಎಂದರೆ ಈ ಸಮಸ್ಯೆಗೆ ಪರಿಹಾರ ಸಿಗಬೇಕು.

ಸರಕಾರ ಅದೆಷ್ಟೋ ಕೋಟಿಗಳ ವೆಚ್ಚದ ಸುರಂಗ ರಸ್ತೆಯ ಬಗ್ಗೆ ಆಲೋಚಿಸುತ್ತಿದೆ. ಅದರ ಬದಲಿಗೆ ಯಾವ ರೀತಿಯಿಂದ ಮೆಟ್ರೋ ಕಡೆಗೆ ಸುಲಭವಾಗಿ ಪ್ರಯಾಣಿಕರನ್ನು ಸೆಳೆಯಬಹುದು ಎಂದು ಆಲೋಚನೆ ಮಾಡುವುದು ಒಳ್ಳೆಯದು. ಅದರಲ್ಲೂ ಮೊದಲ ಸಂಪರ್ಕ ಮತ್ತು ಕೊನೆಯ ಸಂಪರ್ಕ ಸುಲಭವಾದರೆ ಇನ್ನಷ್ಟು ಜನರು ಖಂಡಿತಾ ಮೆಟ್ರೋ ಸಾರಿಗೆಗೆ ಬಂದೇ ಬರುತ್ತಾರೆ. ಪರಿಹಾರಕ್ಕೂ ಒಂದೆರಡು ಉದಾಹರಣೆಗಳನ್ನು ಕೊಡಬಹುದು. ಮೊದಲನೆಯದು ಬಿಎಂಟಿಸಿ ಮಿನಿ ಬಸ್. ಇವುಗಳು ಪ್ರತಿ ರಸ್ತೆಯಲ್ಲೂ ಓಡಾಡಲಿ. ಯಾವುದೇ ಹತ್ತಿರದ ಮುಖ್ಯ ರಸ್ತೆಯಲ್ಲಿ ನಿಂತರೂ ಪೀಕ್ ಅವರ್‌ನಲ್ಲಿ ಐದು ನಿಮಿಷಕ್ಕೆ ಮೆಟ್ರೋ ಫೀಡರ್ ಮಿನಿ ಬಸ್ ಸಿಗಬೇಕು. ಇದಕ್ಕೆ ಪಾಸುಗಳ ವ್ಯವಸ್ಥೆ ಆಗಬೇಕು. ಟಿಕೆಟ್ ಕೊಡುವ ಕೆಲಸ ಕಡಿಮೆ. ಯಾವುದೇ ಭಾಗ್ಯಗಳೂ ಈ ಮಿನಿ ಬಸ್‌ಗಳಿಗೆ ಅವಶ್ಯಕತೆ ಇಲ್ಲ. ಇದರಿಂದ ಆದಾಯದ ಸಮಸ್ಯೆಯೂ ಇಲ್ಲ. ಇವುಗಳು ಎಲ್ಲಾ ರಸ್ತೆಗಳಲ್ಲಿ ಸುತ್ತುಹಾಕುತ್ತಾ ಜನರನ್ನು ಮನೆಯಿಂದ ಮೆಟ್ರೋಗೆ, ಮೆಟ್ರೋದಿಂದ ಕಚೇರಿಗೆ ತಲುಪಿಸುವ ಕೆಲಸ ಮಾಡಲಿ.

ಇನ್ನು ಮತ್ತೊಂದು ಸಾಧ್ಯತೆಯನ್ನೂ ಸರಕಾರ ಆಲೋಚಿಸಬಹುದು. ಲಕ್ಷಾಂತರ ಆಟೋರಿಕ್ಷಾಗಳನ್ನು ಸಮೂಹ ಸಾರಿಗೆಗೆ ಬಳಸುವುದು. ಅದು ಬೆಂಗಳೂರಿನಲ್ಲಿ ಆಟೋ ರಿಕ್ಷಾ ಶೇರಿಂಗ್. ಇದಕ್ಕೆ ಆಟೋ ಚಾಲಕರು/ಮಾಲೀಕರ ಸಹಕಾರವೂ ಬೇಕೇ ಬೇಕು. ಈ ವ್ಯವಸ್ಥೆಯಲ್ಲಿ ಆಟೋ ಚಾಲಕರೂ ಜನರನ್ನು ಶೇರಿಂಗ್ ಮೂಲಕ ಮೆಟ್ರೋಗೆ ಬಿಡುವುದು ಮತ್ತು ಮೆಟ್ರೋದಿಂದ ಕರೆತರುವುದು. ಒಬ್ಬರೇ ಹೋಗಿ-ಬಂದು ಮಾಡಿದರೂ ಸಿಗುವ ಅದೇ ಮೊತ್ತ ಚಾಲಕರಿಗೆ. ಖಾಲಿ ಗಾಡಿ ಓಡಿಸುವ ಅನಿವಾರ್ಯತೆಯೂ ಇಲ್ಲ. ಬೆಳಗ್ಗೆ 8ರಿಂದ ರಾತ್ರಿ 9ರ ತನಕ ಆಟೋ ಚಾಲಕರಿಗೆ ಖಚಿತ ವರಮಾನ, ಪ್ರಯಾಣಿಕರಿಗೆ ಅನುಕೂಲ. ಇವೆರಡೂ ಕ್ರಮಗಳು ಪ್ರಯಾಣಿಕರ ಜೇಬಿಗೂ ಅಂಥ ಭಾರವನ್ನು ಹೇರುವುದಿಲ್ಲ. ಮಿನಿ ಬಸ್ ದರ ಮತ್ತು ಶೇರಿಂಗ್ ಆಟೋ ದರದಲ್ಲಿ ತುಂಬಾ ವ್ಯತ್ಯಾಸಗಳು ಆಗಬೇಕೆಂದೇನೂ ಇಲ್ಲ. ಒಬ್ಬ ವ್ಯಕ್ತಿ ಮನೆಯಿಂದ ಬೈಕ್‌ನಲ್ಲಿ ಹೊರಟು, ಮೆಟ್ರೋದಲ್ಲಿ ನಿಲ್ಲಿಸಿ ಕಚೇರಿಗೆ ಹೋಗಿ ಬರುವಾಗ ಪೂರ್ತಿ ದಿನಕ್ಕೆ ಪಾರ್ಕಿಂಗ್‌ಗೆ 40 ರುಪಾಯಿ ಕೊಡುತ್ತಾನೆ. ಅದರ ಬದಲಿಗೆ 30 ರುಪಾಯಿಗೆ ಎರಡೂ ಕಡೆ ಸಾರಿಗೆ ಸಿಕ್ಕರೆ ಅದರಷ್ಟು ಅನುಕೂಲ ಇನ್ನೊಂದಿಲ್ಲ.

ಅನವಶ್ಯಕವಾದ ಯೋಜನೆಗಳನ್ನು ಕೈ ಬಿಟ್ಟು ಇರುವ ವ್ಯವಸ್ಥೆಯನ್ನು ಉಪಯೋಗಿಸಿಕೊಳ್ಳುವ, ಬಲಪಡಿಸುವ ಬಗ್ಗೆ ಸರಕಾರ ಆಲೋಚಿಸುವುದು ಒಳಿತು. ಅದರಿಂದ ಜನರಿಗೂ ಹೆಚ್ಚಿನ ಅನುಕೂಲ. ಸಮೂಹ ಸಾರಿಗೆ ವ್ಯವಸ್ಥೆಗಳು ಯಾವಾಗಲೂ ಪರಿಸರದ ದೃಷ್ಟಿಯಿಂದ ಕೂಡಾ ಒಳ್ಳೆಯದೇ. ಇಂದಿನ ಬಹುತೇಕ ಜನರು ಸುಲಭವಾಗಿ ಆಗುತ್ತದೆ ಎಂದಾದರೆ ಖಂಡಿತಾ ಸಮೂಹ ಸಾರಿಗೆಯನ್ನೇ ಬಳಸುತ್ತಾರೆ. ಅದಕ್ಕೆ ಸರಕಾರ ಅನುಕೂಲ ಮಾಡಿಕೊಡಬೇಕು ಅಷ್ಟೇ. ಆ ನಿಟ್ಟಿನಲ್ಲಿ ಸರಕಾರ ಕ್ರಮ ಕೈಗೊಳ್ಳಲಿ. ಸಮೂಹ ಸಾರಿಗೆಯನ್ನು ಉತ್ತೇಜಿಸಲಿ.

(ಲೇಖಕರು ಹವ್ಯಾಸಿ ಬರಹಗಾರರು)

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ನಗಿಸಿ ನಿರ್ಗಮಿಸಿದ ನಟ

ಹಿರಿಯ ಹಾಸ್ಯನಟ ಉಮೇಶ್ ಅವರನ್ನು ಸ್ಮರಿಸಿಕೊಂಡು ನವೀನ್ ಸಾಗರ್ ಅವರು 'ಪದಸಾಗರ' ಅಂಕಣದಲ್ಲಿ (ಡಿ.2) ಒಳ್ಳೆಯ ಲೇಖನವನ್ನೇ ಬರೆದಿದ್ದಾರೆ. 350ಕ್ಕೂ ಅಧಿಕ ಚಲನಚಿತ್ರಗಳಲ್ಲಿ ನಟಿಸಿರುವ ಕಲಾವಿದ ಉಮೇಶ್ ಅವರು, 'ಗುರು ಶಿಷ್ಯರು', 'ಗೋಲ್‌ಮಾಲ್ ರಾಧಾಕೃಷ್ಣ' ಸೇರಿದಂತೆ ಹಲವಾರು ಚಿತ್ರಗಳಲ್ಲಿನ ತಮ್ಮ ಹಾಸ್ಯಾಭಿನಯದಿಂದಾಗಿ ಸದಾ ನೆನಪಿನಲ್ಲಿ ಉಳಿಯುತ್ತಾರೆ. ನವೀನ್ ಸಾಗರ್ ಅವರು ಈ ಲೇಖನದಲ್ಲಿ 'ಚಿತ್ರಲೇಖಾ' ಸಿನಿಮಾದ ಪಾತ್ರಗಳು, ರವಿ ಬೆಳಗೆರೆಯವರ ವಿಲಕ್ಷಣತೆ ಮುಂತಾದ ವಿಷಯಗಳನ್ನೂ ಸ್ವಾರಸ್ಯಕರವಾಗಿ ಬರೆದಿದ್ದಾರೆ. 'ಚಿತ್ರಲೇಖಾ' ಸಿನಿಮಾದಲ್ಲಿನ ಪಾತ್ರಗಳು, ಕೆಲವರು ಸಾಯುವವರೆಗಾದರೂ ಕಾಯುತ್ತಿದ್ದವು; ಆದರೆ ಈಗ ಸಾಮಾಜಿಕ ಜಾಲತಾಣಗಳಲ್ಲಿನ ಒಂದಿಷ್ಟು ಮಹಾಶಯರು, ಪ್ರಸಿದ್ಧರು ಸಾಯುವವರೆಗೂ ಕಾಯದೆಯೇ ಬದುಕಿದ್ದಾಗಲೇ 'ಅವರು ಸತ್ತರು' ಎಂಬ ಸುಳ್ಳು ಸುದ್ದಿಯನ್ನು ಹಬ್ಬಿಸುತ್ತಿರುವುದು ಮಾತ್ರ ನೋವಿನ ಸಂಗತಿ.

– ರಾಘವೇಂದ್ರ ಜೋಯಿಸ್, ಮೈಸೂರು

ಪ್ರಜಾಪ್ರಭುತ್ವಕ್ಕೆ ಅಪಾಯ

ಪಶ್ಚಿಮ ಬಂಗಾಳದಲ್ಲಿ ಈವರೆಗೆ ನಡೆದ ಮತದಾರರ ಪಟ್ಟಿಯ 'ವಿಶೇಷ ತೀವ್ರ ಪರಿಷ್ಕರಣೆ' (ಎಸ್‌ಐಆರ್) ವೇಳೆ 21 ಲಕ್ಷಕ್ಕೂ ಅಧಿಕ ಮೃತರ ಹೆಸರು ಕಂಡುಬಂದಿರುವುದು ಆಘಾತಕಾರಿ ವಿಷಯ. ಮೃತ ವ್ಯಕ್ತಿಗಳ ಹೆಸರುಗಳು ಮತದಾರರ ಪಟ್ಟಿಯಲ್ಲಿ ಹಾಗೆಯೇ ಉಳಿದುಕೊಳ್ಳುವುದು ನಮ್ಮ ದೇಶದ ಚುನಾವಣಾ ವ್ಯವಸ್ಥೆಗೆ ಗಂಭೀರ ಸವಾಲಾಗಿ ಪರಿಣಮಿಸಿದೆ. ಇಂಥ ಅಪಸವ್ಯಗಳ ಕಾರಣದಿಂದಾಗಿ ಚುನಾವಣಾ ವ್ಯವಸ್ಥೆಯಲ್ಲಿನ ಪಾರದರ್ಶಕತೆ ಕುಸಿಯುತ್ತದೆ ಮತ್ತು ಜನರು ಈ ವ್ಯವಸ್ಥೆಯಲ್ಲಿ ಇಟ್ಟಿರುವ ನಂಬಿಕೆಗೆ ಧಕ್ಕೆಯಾಗುತ್ತದೆ.

ಮತದಾರರ ಪಟ್ಟಿಯಲ್ಲಿ ಮೃತ ವ್ಯಕ್ತಿಗಳ ಹೆಸರುಗಳು ಉಳಿದಿರುವುದರಿಂದಾಗಿ ಅಡ್ಡಮತದಾನವಾಗಿ ನ್ಯಾಯಸಮ್ಮತ ಅಭ್ಯರ್ಥಿಗಳು ಸೋಲು ಕಾಣಬಹುದು, ಭ್ರಷ್ಟಾಚಾರ ಹೆಚ್ಚಬಹುದು. ಇದರ ಪರಿಣಾಮವಾಗಿ ಫಲಿತಾಂಶಗಳ ಪಾರದರ್ಶಕತೆಯ ಮೇಲಿನ ಜನರ ವಿಶ್ವಾಸವೂ ಕುಂದುತ್ತದೆ. ಇಂಥದೊಂದು ಅಸಮಂಜಸ ಸ್ಥಿತಿಗೆ ಸ್ಥಳೀಯ ಆಡಳಿತ ಸಂಸ್ಥೆಗಳು, ಪಂಚಾಯತ್ ಕಚೇರಿಗಳು, ಮರಣ ನೋಂದಣಿ ಇಲಾಖೆ ಮತ್ತು ಆಯಾ ವ್ಯಾಪ್ತಿಯ ಚುನಾವಣಾ ಅಧಿಕಾರಿಗಳು ಒಟ್ಟಾಗಿ ಹೊಣೆಗಾರರಾಗುತ್ತಾರೆ. ಮರಣ ನೋಂದಣಿ ಮತ್ತು ಮತದಾರರ ಪಟ್ಟಿಯ ನವೀಕರಣದ ನಡುವಿನ ಸಮನ್ವಯದ ಕೊರತೆಯೇ ಈ ಸಮಸ್ಯೆಗೆ ಮೂಲಕಾರಣ. ಮರಣ ನೋಂದಣಿ ಮಾಹಿತಿಯನ್ನು ಚುನಾವಣಾ ಆಯೋಗದ ಡೇಟಾ ಬೇಸ್‌ಗೆ ಸ್ವಯಂಚಾಲಿತವಾಗಿ ಲಿಂಕ್ ಮಾಡುವುದು, ವಾರ್ಷಿಕ ಸಮಗ್ರ ಪರಿಶೀಲನೆ, ಜನರಿಂದ ನೇರವಾಗಿ ದೂರು ನೀಡಲು ಸುಲಭ ವ್ಯವಸ್ಥೆಯನ್ನು ರೂಪಿಸುವಿಕೆ ಈ ಎಲ್ಲ ಉಪಕ್ರಮಗಳು ಪ್ರಸ್ತುತ ಅಗತ್ಯವಾಗಿವೆ. ಸಾರ್ವಜನಿಕ ಜಾಗೃತಿ ಮತ್ತು ಅಧಿಕಾರಿಗಳ ಹೊಣೆಯರಿತ ನಡೆಯೇ ದೋಷವಿಲ್ಲದ ಮತದಾರರ ಪಟ್ಟಿಗೆ ಮೂಲವಾಗುತ್ತದೆ ಎಂದರೆ ತಪ್ಪಾಗಲಾರದು.

– ಜಿ.ನಾಗೇಂದ್ರ, ಕಾವೂರು, ಸಂಡೂರು

ಓದುಗರ ಒಣಿಗೆ ಭೇಟಿ ಕೊಡಿ

ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಭಟ್ಟರ್ ಸ್ಕಾಚ್

- **ಕೆ.ಕೆ.ಆರಾಧ್ಯ, ಬೆಂಗಳೂರು**
ಭಟ್ರೇ, ಉಚಿತ ಯೋಜನೆಗಳಿಗೂ ಮತ್ತು ಇವಿ ಬೋನಿಗೂ ಏನು ಸಂಬಂಧ?
– **ಎರಡರಲ್ಲೂ ತಿನ್ನೋಕೆ ಏನಾದ್ರೂ ಇಟ್ಟಿರ್ತಾರೆ, ಸಿಕ್ಕಿದಾಗ ಬಾಚಿಕೊಳ್ಳಿ ಅಂತಾನೇ!**

- **ಸುರೇಶ ಪಿ.ಕೆ.ಹಳ್ಳಿ, (ಇಮೇಲ್ ಮೂಲಕ)**
ಭಟ್ರೇ, ಡಿವೋರ್ಸ್ ಲಾಯರ್ ಯಾಕೆ ಮದುವೆಗಳಲ್ಲಿ ನಗ್ತಾ ಇರ್ತಾರೆ?
– **ಇನ್ನೊಬ್ಬ ಕಸ್ಟಮರ್ ಸಿಕ್ಕಿದ್ರಲ್ಲ ಅನ್ನೋ ಖುಷಿಗೆ!**

- **ಶ್ರೀಹರಿ ಕಾರಂತ, ಉಡುಪಿ**
ಭಟ್ರೇ, ಹುಡುಗರು ಮದುವೆಗೆ ಮುಂಚೆ ಯಾಕೆ ಜಾಸ್ತಿ ಸೇವಿಂಗ್ಸ್ ಮಾಡಲ್ಲ?
– **ಗರ್ಲ್‌ಫ್ರೆಂಡ್ ಜತೆ ಸುತ್ತಾಡೋದ್ರಲ್ಲೇ ಅರ್ಧ ಸಂಬಳ ಹೋಟೆಲ್‌ಗೆ ಹೋಗಿರುತ್ತೆ!**

- **ರಾಮಕುಮಾರ ಹೆಜ್ಜಾಲ, ತುಮಕೂರು**
ಭಟ್ರೇ, ಪ್ರೀತಿಯಲ್ಲಿ ಬಿದ್ದವರಿಗೆ ಹಸಿವು, ನಿದ್ದೆ ಯಾಕೆ ಬರಲ್ಲ?
– **ಫೋನ್ ರೀಚಾರ್ಜ್ ಮಾಡ್ಕೋಕೆ ದುಡ್ಡು ಹೊಂದಿಸೋ ಟೆನ್ಷನ್‌ನಲ್ಲಿ ಅದೆಲ್ಲ ಎಲ್ಲಿ ಬರುತ್ತೆ?**

- **ಪ್ರಶಾಂತ ಪಾಟೀಲ, ಬೆಂಗಳೂರು**
ಭಟ್ರೇ, ಗಂಡ-ಹೆಂಡತಿ ಇಬ್ಬರೂ ಕೆಲಸಕ್ಕೆ ಹೋಗೋದ್ರಿಂದ ಆಗೋ ಲಾಭ ಏನು?
– **ಇಬ್ಬರೂ ಸಂಜೆ ಸುಸ್ತಾಗಿ ಮನೆಗೆ ಬರೋದ್ರಿಂದ ಜಗಳ ಆಡೋಕೆ ಎನರ್ಜಿ ಇರಲ್ಲ!**

- **ವೆಂಕಟೇಶ ಆಚಾರ, ಮೈಸೂರು**
ಭಟ್ರೇ, ಪ್ರಜಾಪ್ರಭುತ್ವದಲ್ಲಿ ನಿಜವಾದ 'ರಾಜ' ಯಾರು?
– **ಐದು ವರ್ಷಕ್ಕೊಮ್ಮೆ ವೋಟು ಹಾಕಿ, ನಂತರ ಐದು ವರ್ಷ ಬಾಯಿ ಮುಚ್ಚಿಕೊಂಡಿರುವ ಪ್ರಜೆ!**

- **ಸೌಮ್ಯ, (ಇಮೇಲ್ ಮೂಲಕ)**
ಭಟ್ರೇ, ಲೇಡೀಸ್ ಕ್ಲಬ್‌ಗಳಲ್ಲಿ 'ಮೌನ ಆಚರಣೆ' ಯಾವಾಗ ನಡೆಯುತ್ತೆ?
– **ಎಲ್ಲರೂ ಪಾನಿಪುರಿ ತಿನ್ನುವಾಗ ಮಾತ್ರ!**

- **ಯಶೋಮೂರ್ತಿ ಶೆಟ್ಟಿಗಾರ, ಬಂಡೂರು**
ಲೇಡೀಸ್ ಕ್ಲಬ್ ಮೀಟಿಂಗ್‌ನ ಮುಖ್ಯ ಅಜೆಂಡಾ ಏನು?
– **ಪಕ್ಕದವಳು ಉಟ್ಟಿರುವ ಸೀರೆಯ ಬೆಲೆ ಮತ್ತು ಬ್ರ್ಯಾಂಡ್ ಕಂಡುಹಿಡಿಯುವುದು!**

- **ಪ್ರಭಾಕರ ಸಭಾಹಿತ, ಶಿರಸಿ**
ಭಟ್ರೇ, ಲಂಚಕ್ಕೆ ಈಗಿನ ಮಾಡರ್ನ್ ಹೆಸರೇನು?
– **'ಅಡ್ಜಸ್ಟ್ ಮಾಡ್ಕೊಳ್ಳಿ' ಅಥವಾ 'ಪ್ರೊಸೆಸಿಂಗ್ ಫೀಸ್'!**

ಸರಕಾರದ ಸರ್ವರ್ ಸ್ಲೋ ಸಾರ್ವಕಾಲಿಕ !

ಲೋಕಮತ
ಲೋಕೇಶ್ ಕಾಯರ್ಗ
vveditoped@gmail.com

ಬದುಕು ತುಂಬಾನೇ ಫಾಸ್ಟ್ ಆಗಿದೆ. ಇದು ಪಟಾಪಟ್ ಜಮಾನ ಎಂದವರಿಗೆ ಇದಕ್ಕೆ ಅಪವಾದವಾಗಿರುವ ಎರಡು ವಿಷಯಗಳನ್ನು ಎತ್ತಿ ತೋರಿಸಬಹುದು. ಒಂದು ನಮ್ಮ ಬೆಂಗಳೂರಿನ ಟ್ರಾಫಿಕ್. ಇನ್ನೊಂದು ನಮ್ಮ ಸರಕಾರಿ ಇಲಾಖೆಗಳ ಸರ್ವರ್. ಬೆಂಗಳೂರಿನ ಸಂಚಾರ ಸಮಸ್ಯೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಚರ್ಚಿತ ವಿಚಾರ. ಈ ಬಗ್ಗೆ ವಿವರಣೆ ಬೇಕಿಲ್ಲ. ಹಾಗೆಯೇ ಯಾವುದೇ ಸರಕಾರಿ ಇಲಾಖೆಗೆ ಭೇಟಿ ಕೊಟ್ಟಾಗ, ಕೇಳಿಸಿಕೊಳ್ಳಲೇಬೇಕಾದ ಮಾತು- ಸರ್ವರ್ ಸ್ಲೋ. ಏರ್‌ಟೆಲ್ ಮತ್ತು ಜಿಯೋ 5ಜಿ ಬಳಿಕ 6 ಜಿ ಸೇವೆ ನೀಡಲು ಪೈಪೋಟಿಗೆ ಬಿದ್ದರೂ ನಮ್ಮ ಸರಕಾರಿ ಇಲಾಖೆಗಳ ಸರ್ವರ್ ಸಮಸ್ಯೆ ಸುಧಾರಿಸುವುದೇ ಇಲ್ಲ. 10ಜಿ ತಂತ್ರಜ್ಞಾನ ಬಂದರೂ ಈ ಸ್ಲೋ ಸರ್ವರ್ ಸಮಸ್ಯೆ ಸುಧಾರಣೆಯಾಗುವ ಸಾಧ್ಯತೆ ಕಡಿಮೆ. ಇದು ಆಡಳಿತ ಯಂತ್ರಕ್ಕೂ ಅನ್ವಯವಾಗುವ ಮಾತು.

ನಮ್ಮ ಕಂದಾಯ ಇಲಾಖೆ ಮತ್ತು ನಗರಾಭಿವೃದ್ಧಿ ಇಲಾಖೆ ಸಚಿವರು ಪೈಪೋಟಿಗೆ ಬಿದ್ದವರಂತೆ ದಿನಕ್ಕೊಂದು ಕಾನೂನು, ನಿಯಮಗಳನ್ನು ತರುತಿದ್ದಾರೆ. ಈ ಬಗ್ಗೆ ಪತ್ರಿಕಾಗೋಷ್ಠಿ ನಡೆಸುವಾಗ ಸಾಮಾನ್ಯವಾಗಿ ಹೇಳುವ ಮಾತೊಂದಿದೆ- 'ಇನ್ನು ಜನರು ಎಲ್ಲೂ ಹೋಗಬೇಕಾಗಿಲ್ಲ. ಮಧ್ಯವರ್ತಿಗಳನ್ನು ಆಶ್ರಯಿಸಬೇಕಿಲ್ಲ. ಮನೆಯಲ್ಲಿ ಕುಳಿತೇ ಅರ್ಜಿ ಹಾಕಬಹುದು. ಶುಲ್ಕ ಪಾವತಿಸಬಹುದು. ತಮಗೆ ಬೇಕಾದ ಸೇವೆ ಪಡೆದುಕೊಳ್ಳಬಹುದು'. ಹಾಗಿದ್ದೂ ಈ ಇಲಾಖೆಗಳಿಂದ ಬರುವ ಯಾವ ಕಚೇರಿಗಳಲ್ಲೂ ಕ್ಯೂ ಕಡಿಮೆಯಾಗಿಲ್ಲ, ಮಧ್ಯವರ್ತಿಗಳ ನೆರವು ಇಲ್ಲದೆ ಯಾವ ಕೆಲಸವೂ ಆಗುತ್ತಿಲ್ಲ. ಮುಂದೆ ಆಗುವ ಭರವಸೆಯೂ ಇಲ್ಲ.

ಯಾವುದೇ ಸೇವೆಯಲ್ಲಿ ಪಾರದರ್ಶಕತೆ ಮತ್ತು ದಕ್ಷತೆಯನ್ನು ಹೆಚ್ಚಿಸಿಕೊಳ್ಳಲು ತಂತ್ರಜ್ಞಾನ ನಮಗೆ ಹಲವು ರೀತಿಯಲ್ಲಿ ನೆರವಾಗಿದೆ. ಖಾಸಗಿ ವಲಯವು ಇದೇ ತಂತ್ರಜ್ಞಾನ ಬಳಸಿಕೊಂಡು ಜನರ ಮನೆ ಬಾಗಿಲಿಗೆ ತಲುಪುತ್ತಿದೆ. ಹಾಲು, ತರಕಾರಿ, ಔಷಧಿಯಿಂದ ಹಿಡಿದು ಯಾವುದೇ ವಸ್ತು ಬೇಕಿದ್ದರೂ ಕ್ಷಣ ಮಾತ್ರದಲ್ಲಿ ಮನೆ ಬಾಗಿಲಿಗೆ ಬರುತ್ತಿದೆ. ನಗರಕ್ಕೆ ಸೀಮಿತವಾದ ಈ ಸೇವೆಗಳು ಇನ್ನು ಕೆಲವೇ ದಿನಗಳಲ್ಲಿ ನಮ್ಮ ಪ್ರತಿಯೊಂದು ಹಳ್ಳಿಗಳನ್ನು ತಲುಪುವುದರಲ್ಲಿ ಅನುಮಾನವಿಲ್ಲ. ಆದರೆ ಸರಕಾರದ ಸೇವೆಯ ವಿಚಾರ ಬಂದಾಗ ಮನೆ ಬಾಗಿಲಿಗೆ ಬಿಡಿ, ಸಂಬಂಧಪಟ್ಟ ಕಚೇರಿಗೆ ಹತ್ತಾರು ಬಾರಿ ಎಡತಾಕಿದರೂ ಸಮಸ್ಯೆ ಬಗೆಹರಿಯುವುದಿಲ್ಲ.

ಕಾರಣ ಸ್ಪಷ್ಟ. ಯಾವುದೇ ತಂತ್ರಜ್ಞಾನ ತಾನಾಗಿಯೇ ಸೇವೆ ನೀಡುವುದಿಲ್ಲ, ಅದನ್ನು ಸರಿಯಾಗಿ ಬಳಸಿಕೊಳ್ಳುವ ಶಕ್ತಿ ಮತ್ತು ಕೌಶಲ ಬೇಕು. ಸೇವೆ ನೀಡುವ ಮನಸ್ಥಿತಿ, ನೀಡುವ ಕೈಗಳಿಗೆ ತಲುಪಿಸಲು ಈಗ ನೂರಾರು ಮಾರ್ಗಗಳಿವೆ. ಆದರೆ 'ಕಾಣಿಕೆ' ಸಂದಾಯವಾಗದ ಹೊರತು ಸೇವೆ ಸಲ್ಲಲೇಬಾರದು ಎಂದು ಯೋಚಿಸುವವರನ್ನು ಯಾವ ತಂತ್ರಜ್ಞಾನದಿಂದಲೂ ನಿಭಾಯಿಸಲಾಗದು. ಟೆಕ್ ದೈತ್ಯ ಎಲಾನ್ ಮಸ್ಕ್, ಮನುಷ್ಯನ ಯೋಚನೆ, ಸಂವೇದನೆಯನ್ನು ಗ್ರಹಿಸುವ ತಂತ್ರಜ್ಞಾನ ಅಭಿವೃದ್ಧಿಪಡಿಸುವ ಧಾವಂತದಲ್ಲಿದ್ದಾರೆ. ಇದರ ಬದಲು ಮನುಷ್ಯನ ಯೋಚನೆಯನ್ನೇ ಒಳಿತೆಡೆಗೆ ಒಯ್ಯುವ ತಂತ್ರಜ್ಞಾನ ಅಭಿವೃದ್ಧಿಪಡಿಸಿದರೆ ಇಡೀ ವಿಶ್ವವೇ ಸುಭಿಕ್ಷೆಯತ್ತ ಸಾಗುತ್ತಿತ್ತು.

ಮನೆ ತೆರಿಗೆ, ಜನನ-ಮರಣ ಪ್ರಮಾಣ ಪತ್ರ, ವಂಶಾವಳಿ, ಆದಾಯ ಪ್ರಮಾಣ ಪತ್ರ, ಪಹಣಿ, ಋಣಭಾರ ರಾಹಿತ್ಯ ಪ್ರಮಾಣ ಪತ್ರ, ಭೂ ಸಾಗುವಳಿ ಪತ್ರ, ಭೂ ನಕ್ಷೆ, ಜಮೀನಿನ ಸರ್ವೇ, ನೋಂದಣಿ, ವಿಕ್ರಯ, ವಿಭಾಗ ಪತ್ರ, ಭೂ ಪರಿವರ್ತನೆ, ಪಡಿತರ,ನಿರಾಕ್ಷೇಪಣೆ ಪತ್ರ... ಹೀಗೆ ಹತ್ತಾರು ಸೇವೆಗಳ ಕೇಂದ್ರ ಬಿಂದು ಕಂದಾಯ ಇಲಾಖೆ. ಕಳೆದ ಮೂರು ದಶಕಗಳಿಂದ ಕಂದಾಯ ಇಲಾಖೆಯ ಸೇವೆಯನ್ನು ಸುಗಮ ಮತ್ತು ಸುಲಲಿತಗೊಳಿಸುವ ನಿಟ್ಟಿನಲ್ಲಿ ಕೆಲಸ ನಡೆಯುತ್ತಲೇ ಇದೆ. ಹಾಲಿ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ನಿರ್ದಿಷ್ಟ ಗಡುವನ್ನು ನೀಡಿ ಇಲಾಖೆಯ ಸೇವೆಯನ್ನು ಜನರಿಗೆ ತಲುಪಿಸಲು ಪ್ರಯತ್ನಿಸುತ್ತಿದ್ದಾರೆ. ಆದರೆ ಜನರಿಗೆ ಸೇವೆ ನೀಡುವ ವಿಚಾರದಲ್ಲಿ ಈ ಇಲಾಖೆಯನ್ನು ಮುಂದಕ್ಕೆ ಒಯ್ಯಲು ಸಾಧ್ಯವಾಗುತ್ತಿಲ್ಲ ಎನ್ನುವುದು ಅವರ ಮಾತಿನಲ್ಲೇ ವ್ಯಕ್ತವಾಗುತ್ತಿದೆ.

ಭೂಮಿ, ಭೂ ಕಂದಾಯ ಮತ್ತು ಭೂ ಒಡೆತನಕ್ಕೆ ಸಂಬಂಧಿಸಿ ಕಳೆದ 10 ವರ್ಷಗಳಲ್ಲಿ ಜಾರಿಗೆ ತಂದ ಹೊಸ ನಿಯಮ, ಹೊಸ ಕಾನೂನು ಮತ್ತು ತಿದ್ದುಪಡಿಗಳಿಗೆ ಲೆಕ್ಕವಿಲ್ಲ. ಆದರೆ ತಂತ್ರಜ್ಞಾನದ ಬದಲಾವಣೆಯ ಕಾರಣ ಪಹಣಿ ಸೇರಿದಂತೆ ಒಂದಷ್ಟು ಸೇವೆಗಳು ಜನರಿಗೆ ಕೈಗೆಟಕುತ್ತಿವೆ. ಆದರೆ ಸಿಬ್ಬಂದಿ ಹಸ್ತಕ್ಷೇಪ ಅನಿವಾರ್ಯವಾದ ಪ್ರಕರಣಗಳಲ್ಲಿ ಜನಸ್ನೇಹಿ ಸೇವೆ ನೀಡಲು ಇನ್ನೂ ಸಾಧ್ಯವಾಗಿಲ್ಲ. ಮುಖ್ಯವಾಗಿ ಮನೆ, ಆಸ್ತಿ ಮತ್ತು ಜಮೀನಿನ ಮಾಲೀಕತ್ವದ ಗೊಂದಲವನ್ನು ಕಾಯಂ ಆಗಿ ಬಗೆಹರಿಸುವಲ್ಲಿ ಈ ತನಕ ಯಾವುದೇ ನಿಯಮ, ಕಾನೂನುಗಳು ನೆರವಾಗಿಲ್ಲ. ಕಾರಣ ಇವು ಇಲಾಖೆಯ ಸಿಬ್ಬಂದಿಗಳೇ ಪ್ರಾಮಾಣಿಕತೆ ಮತ್ತು ಶ್ರದ್ಧೆಯಿಂದ ಮಾಡಬೇಕಾದ ಕೆಲಸ.

ಉದಾಹರಣೆಗೆ ಕಾವೇರಿ 2.0 ಸಾಫ್ಟ್‌ವೇರ್ ಆಸ್ತಿ ನೋಂದಣಿ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ಆನ್‌ಲೈನ್ ಮೂಲಕ ನಿರ್ವಹಿಸಲು ಸರಕಾರ ತಂದ ವ್ಯವಸ್ಥೆ. 'ಇನ್ನು ಮುಂದೆ ಸಬ್-ರಿಜಿಸ್ಟ್ರಾರ್ ಕಚೇರಿಗಳಲ್ಲಿ ಸರತಿ ಸಾಲು ನಿಲ್ಲುವ ಅವಶ್ಯಕತೆ ಇಲ್ಲ. ಜನರು ಮನೆಯಲ್ಲೇ ಕುಳಿತು ನೋಂದಣಿಗೆ ಬೇಕಾದ ಅರ್ಜಿ ತುಂಬಬಹುದು ಮತ್ತು ಶುಲ್ಕ ಪಾವತಿಸಬಹುದು. ಕೇವಲ ಹೆಬ್ಬೆಟ್ಟು ಗುರುತು ಮತ್ತು ಫೋಟೋ ತೆಗೆಸಲು ಮಾತ್ರ ಕಚೇರಿಗೆ ಹೋದರೆ ಸಾಕು' ಎಂದು ಸರಕಾರ ಹೇಳಿಕೊಂಡಿತ್ತು. ಆದರೆ ಕಾವೇರಿ 1.0 ತಂತ್ರಾಂಶ ಇರುವಾಗಲೂ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ಕ್ಯೂ ನಿಲ್ಲುವವರ ಸಂಖ್ಯೆ ಕಡಿಮೆಯಾಗಿರಲಿಲ್ಲ. ಈಗಲೂ ಕಡಿಮೆಯಾಗಿಲ್ಲ. ಕೇಳಿದರೆ ಉತ್ತರ ಮೊದಲೇ ಸಿದ್ಧ- ಸರ್ವರ್ ಸ್ಲೋ. ಒಂದು ವೇಳೆ ನೀವು ಕಾನೂನು, ನಿಯಮಗಳನ್ನು ತಿಳಿದಿದ್ದು ನೇರವಾಗಿ ಸಂಪರ್ಕಿಸಿದರೆ ಈ ಕಚೇರಿಗಳ ಕಂಪ್ಯೂಟರ್ ಪರದೆ ನಿಮ್ಮ ಮುಂದೆ ತೆರೆದುಕೊಳ್ಳುವುದೇ ಇಲ್ಲ. ಎಂದಿನಂತೆ ಮಧ್ಯವರ್ತಿಗಳನ್ನು ಹಿಡಿದು ಹೋದರೆ ಕೆಲಸ ಸಲೀಸು.

ಸರಕಾರದ ಪ್ರಕಾರ ನಿಮ್ಮ ಜಮೀನಿನ ನಕ್ಷೆ, ಹದ್ದುಬಸ್ತು, ಪೋಡಿ ಮತ್ತು ತಾತ್ಕಾಲಿಕ ಪೋಡಿ ಸೇವೆಗಳಿಗಾಗಿ ಮೋಜಿನಿ ವಿ3 ಪೋರ್ಟಲ್ ಬಳಸಿ ಅರ್ಜಿ ಸಲ್ಲಿಸಬಹುದು. ಪೋಡಿ ಸೇವೆ ತ್ವರಿತಗೊಳಿಸಲು ಸರ್ವೆ ಇಲಾಖೆಗೆ ಸರಕಾರವೂ ಸೂಚನೆ ನೀಡಿದೆ. ಆದರೆ ರಾಜ್ಯದ ಅರ್ಧಕ್ಕಿಂತ ಹೆಚ್ಚು ರೈತರ ಜಮೀನುಗಳಿಗೆ ಸರಿಯಾದ ನಕ್ಷೆ ಇಲ್ಲ. ಒಂದೇ ಸರ್ವೆ ನಂಬರ್‌ನಲ್ಲಿ ನೋಂದಣಿಯಾಗಿರುವ, ಹತ್ತಾರು ಜನರ ಜಮೀನುಗಳನ್ನು ದುರಸ್ತಿಗೊಳಿಸಿ ಪ್ರತ್ಯೇಕ ನಕ್ಷೆ ಮತ್ತು ಸರ್ವೆ ನಂಬರ್ ನೀಡಬೇಕಾದರೆ ಇದಕ್ಕೆ ಸಾವಿರಾರು ಸಿಬ್ಬಂದಿಗಳ ಪ್ರತ್ಯೇಕ ವಿಭಾಗವೇ ಬೇಕು. ಸದ್ಯಕ್ಕೆ ಅರ್ಜಿ ಹಾಕಿ ಒತ್ತಡ ಹೇರಿದವರಿಗಷ್ಟೇ ಪೋಡಿ ಭಾಗ್ಯ ಸಿಗುತ್ತಿದೆ.

ದಿಶಾಂಕ್ ಆ್ಯಪ್ ಮೂಲಕ ಜಮೀನಿನ ಸರ್ವೆ ನಂಬರ್ ಮತ್ತು ಭೂಮಿಯ ವಿವರಗಳನ್ನು (ಭೂಮಾಲೀಕರ ಹೆಸರು, ವಿಸ್ತೀರ್ಣ) ಜಿಪಿಎಸ್ ಮೂಲಕ ಪಡೆಯಬಹುದು. ಭೂಮಿ ಖರೀದಿಸುವ ಮುನ್ನ ಆಸ್ತಿಯ ನೈಜತೆಯನ್ನು ಪರಿಶೀಲಿಸುವ ಸದುದ್ದೇಶದಿಂದ ಈ ಆ್ಯಪ್ ರೂಪಿಸಲಾಗಿದೆ. ಆದರೆ ಎಲ್ಲ ರೈತರ ಜಮೀನಿನ ಪೋಡಿ ಕಾರ್ಯ ಪೂರ್ಣಗೊಳ್ಳದ ಹೊರತು ಈ ಆ್ಯಪ್ ಮೂಲಕ ಯಾವುದನ್ನೂ ನಿರ್ಧರಿಸಲು ಸಾಧ್ಯವಿಲ್ಲ. ಈಗ ಈ ಆ್ಯಪ್ ಬಳಸಿದರೆ ಒಂದೇ ಸರ್ವೆ ನಂಬರ್‌ನಡಿ ಬರುವ ಎಲ್ಲ ಭೂ ಹಿಡುವಳಿದಾರರ ಪಟ್ಟಿಯೇ ಬರುತ್ತದೆ.

ಗ್ರಾಮೀಣ ಪ್ರದೇಶದ ಆಸ್ತಿಗಳ (ಮನೆ/ನಿವೇಶನ) ಮಾಲೀಕತ್ವದ ದಾಖಲೆಗಳನ್ನು (ಫಾರಂ-9 ಮತ್ತು ಫಾರಂ-11) ಡಿಜಿಟಲ್ ರೂಪಕ್ಕೆ ತರುವ ಉದ್ದೇಶದಿಂದ ಇದೀಗ ಸರಕಾರ 'ಇ-ಸ್ವತ್ತು-2' ತಂತ್ರಾಂಶ ಅನುಷ್ಠಾನಕ್ಕೆ ತಂದಿದೆ. ಜನರಿಗೆ ಮಾಲೀಕತ್ವ ನೀಡುವುದಕ್ಕಿಂತಲೂ ಅವರ ಆಸ್ತಿಯನ್ನು ತೆರಿಗೆ ವ್ಯಾಪ್ತಿಗೆ ತರುವುದು ಈ ತಂತ್ರಾಂಶದ ಮುಖ್ಯ ಉದ್ದೇಶ. ಗ್ರಾಮೀಣ ಪ್ರದೇಶದಲ್ಲಿ ತಮ್ಮ ಪಾಡಿಗೆ ತಾವು ಮನೆ ಕಟ್ಟಿಕೊಂಡು ವಾಸಿಸುತ್ತಿದ್ದವರಿಗೆ ಈ ತಂತ್ರಾಂಶವೇ ಮುಳುವಾಗುತ್ತಿದೆ.

ಇನ್ನು ಸರಕಾರಿ ಜಮೀನಿನಲ್ಲಿ ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವ ಬಡ ರೈತರಿಗೆ ಭೂ ಒಡೆತನ ನೀಡುವ ಉದ್ದೇಶದಿಂದ ಜಾರಿ ಮಾಡಲಾದ ಬಗರ್ ಹುಕುಂ ಸಕ್ರಮ (ಫಾರಂ 50, 53, 57) ಯೋಜನೆ 10 ವರ್ಷಗಳ ಹಿಂದೆ ಜಾರಿಯಾದರೂ ಈ ಅರ್ಜಿಗಳು ವಿಲೇವಾರಿ ಸಮಿತಿ ಮುಂದಿವೆ. ಗ್ರಾಮೀಣ (94ಇ) ಮತ್ತು ನಗರ (94ಇಇ) ಪ್ರದೇಶಗಳಲ್ಲಿ ಸರಕಾರಿ ಜಮೀನಿನಲ್ಲಿ ಅನಧಿಕೃತವಾಗಿ ಮನೆ ನಿರ್ಮಿಸಿಕೊಂಡವರಿಗೆ ಹಕ್ಕುಪತ್ರ ನೀಡುವ ಯೋಜನೆ ಪೂರ್ತಿಯಾಗಿ ದಿಕ್ಕು ತಪ್ಪಿದೆ. 94 ಇ ಅಡಿ ದಾಖಲಾದ ಎಲ್ಲ ಅರ್ಜಿಗಳನ್ನು ಇತ್ಯರ್ಥಗೊಳಿಸಬೇಕಾದರೆ ಇನ್ನೊಂದು ಕರ್ನಾಟಕವೇ ಸೃಷ್ಟಿಯಾಗಬೇಕು. ಭೂ ಪರಿವರ್ತನೆ ಸರಳೀಕರಣ ಯೋಜನೆ, ಸ್ವಾಮಿತ್ವ ಯೋಜನೆ ಇತ್ಯಾದಿ ಹಲವು ಯೋಜನೆಗಳು ಸದುದ್ದೇಶದಿಂದಲೇ ಜಾರಿಗೆ ಬಂದರೂ ಅಂತಿಮವಾಗಿ ಇವು ಗ್ರಾಮೀಣ ಜನರ ಬದುಕನ್ನು ಹಸನಾಗಿಸುವ ಬದಲು ಅಸಹನೀಯಗೊಳಿಸುತ್ತಿವೆ.

ಸರಕಾರದ ವಿವಿಧ ಇಲಾಖೆಗಳ ಸಾವಿರಕ್ಕೂ ಹೆಚ್ಚು ಸೇವೆಗಳನ್ನು 'ಸಕಾಲ' ವ್ಯಾಪ್ತಿಯಡಿ ತರಲಾಗಿದೆ. ಇದರ ಪ್ರಕಾರ 30 ದಿನಗಳೊಳಗೆ ಅಧಿಕಾರಿಗಳು ಯಾವುದೇ ಅರ್ಜಿಯನ್ನು ಇತ್ಯರ್ಥ ಮಾಡಬೇಕು. ಅರ್ಜಿ ತಿರಸ್ಕೃತವಾದರೆ ಸಕಾರಣಗಳನ್ನಿತ್ತು ಹಿಂಬರಹ ನೀಡಬೇಕು. ಆದರೆ ಅಧಿಕಾರಿಗಳು ಮತ್ತು ಜನರು ಈ ಕಾಯಿದೆಯ ಅಸ್ತಿತ್ವವನ್ನೇ ಮರೆತಿದ್ದಾರೆ. ಬಹುತೇಕ ಸಂದರ್ಭಗಳಲ್ಲಿ ಸರಕಾರಿ ಕಚೇರಿಗಳಲ್ಲಿ ಜನರು ನೀಡಿದ ಅರ್ಜಿಗೆ ಸ್ವೀಕೃತಿ ಪತ್ರವನ್ನೇ ನೀಡುವುದಿಲ್ಲ. ಸ್ವೀಕೃತಿ ಪತ್ರ ಇಲ್ಲದ ಹೊರತು ಅರ್ಜಿಯನ್ನು ನೀಡಿರುವುದಕ್ಕೆ ಯಾವುದೇ ದಾಖಲೆ ನೀಡಲು ಸಾಧ್ಯವಾಗುವುದಿಲ್ಲ.

ಸರ್ವರ್ ಸ್ಲೋ ಒಂದೇ ಅಲ್ಲ. ಸೇವೆ ನೀಡುವುದಕ್ಕಿಂತ ಸೇವೆ ನೀಡದಿರಲು ಅಧಿಕಾರಿಗಳ ಬಳಿ ನೂರಾರು ಕಾರಣಗಳಿರುತ್ತವೆ. ಜನರ ಜುಟ್ಟು ಹಿಡಿಯಲು ಸಾಕಷ್ಟು ನಿಯಮ, ಕಾನೂನುಗಳಿವೆ. ನೀವು ಭಾರತದ ಹೆಮ್ಮೆಯ ಪ್ರಜೆಯಾದರೂ, ಈ ಕಾನೂನುಗಳು ಕ್ಷಣ ಮಾತ್ರದಲ್ಲಿ ನಿಮ್ಮನ್ನು ತಪ್ಪಿತಸ್ಥನ ಸ್ಥಾನದಲ್ಲಿ ನಿಲ್ಲಿಸಬಹುದು. ನೀವು ಕಷ್ಟಪಟ್ಟು ನಿವೇಶನ ಖರೀದಿಸಿ, ಮನೆ ಕಟ್ಟಲು ಹೊರಡುತ್ತೀರಿ ಎಂದುಕೊಳ್ಳಿ. ಸ್ಥಳೀಯ ಪ್ರಾಧಿಕಾರದಿಂದ ಕಟ್ಟಡ ನಕ್ಷೆ ಪಡೆಯಬೇಕಾದರೆ ನಿಮ್ಮ ಇಂಜಿನಿಯರ್ ನೀಡಿದ ನಕ್ಷೆ ಸಾಕಾಗುವುದಿಲ್ಲ. ನಮಗೆ ಬೇಕಿರುವ ನಕ್ಷೆಯೇ ಬೇರೆ ಎನ್ನುವ ಅಧಿಕಾರಿಗಳು, 'ಇಂಥವರನ್ನು ಸಂಪರ್ಕಿಸಿ' ಎನ್ನುತ್ತಾರೆ. ಅವರು ನೀವು ಕಟ್ಟುವ ಮನೆ ಅಂತಸ್ತಿಗೆ ಸರಿಯಾಗಿ ಯಾವುದೇ 'ಉಲ್ಲಂಘನೆ' ಇಲ್ಲದ ರೆಡಿಮೇಡ್ ನಕ್ಷೆಯೊಂದನ್ನು ನೀಡುತ್ತಾರೆ. ಮನೆ ನಿಮ್ಮ ಇಂಜಿನಿಯರ್ ನೀಡಿದ ಪ್ಲ್ಯಾನ್‌ನಂತೆ ಪೂರ್ಣಗೊಳ್ಳುತ್ತದೆ. ಇದೀಗ ವಿದ್ಯುಚ್ಛಕ್ತಿ ಮತ್ತು ನೀರಿನ ಸಂಪರ್ಕ ಪಡೆಯಬೇಕಾದರೆ ಕಟ್ಟಡ ಮುಕ್ತಾಯ ಮತ್ತು ವಾಸಯೋಗ್ಯ ಪ್ರಮಾಣ ಪತ್ರ ನೀಡುವುದು ಕಡ್ಡಾಯ. ಸ್ಥಳೀಯ ಪ್ರಾಧಿಕಾರಕ್ಕೆ ಸಿಆರ್ ಮತ್ತು ಒಸಿ ಪ್ರಮಾಣ ಪತ್ರ ಕೋರಿ ಅರ್ಜಿ ಸಲ್ಲಿಸಿದಾಗ ನೀವು ಅಡಕತ್ತರಿಯಲ್ಲಿ ಸಿಲುಕಿರುವುದು ತಿಳಿಯುತ್ತದೆ.

ಮಹಾನಗರಗಳಲ್ಲಿ ದುಬಾರಿ ಹಣ ತೆತ್ತು ಕಟ್ಟಿಸಿದ ಮನೆಗಳನ್ನು ಸ್ಥಳೀಯ ಪ್ರಾಧಿಕಾರದ ನಿಯಮಗಳ ಅನ್ವಯವೇ ಕಟ್ಟಿಸುವುದು ದೂರದ ಮಾತು. ಇಲ್ಲಿ ನಿರ್ಮಾಣವಾದ, ನಿರ್ಮಾಣಗೊಳ್ಳುತ್ತಿರುವ, ನಿರ್ಮಾಣವಾಗಲಿರುವ ಶೇ.99ರಷ್ಟು ಕಟ್ಟಡಗಳನ್ನು ನಿಯಮಗಳನ್ನು ಉಲ್ಲಂಘಿಸಿಯೇ ಕಟ್ಟುವುದು ಅನಿವಾರ್ಯ. ಪ್ರಾಧಿಕಾರದ ಅನುಮತಿ ಪಡೆದ ಮೂಲ ನಕ್ಷೆ ಮತ್ತು ಇಂಜಿನಿಯರ್ ಅಥವಾ ಆರ್ಕಿಟೆಕ್ಟ್ ನೀಡಿದ ನಕ್ಷೆ ಪ್ರಕಾರ ನಿರ್ಮಾಣಗೊಂಡ ಮನೆ ಅಥವಾ ಕಟ್ಟಡದಲ್ಲಿ ವ್ಯತ್ಯಾಸ ಇದ್ದೇ ಇರುತ್ತದೆ. ಅಧಿಕಾರಿಗಳ ಮನವ ಸಂತೈಸದೇ ಹೋದರೆ ನಿಮಗೆ ನೀರು, ಕರೆಂಟು ಯಾವುದೂ ಸಿಗಲಾರದು.

ಇಷ್ಟಾದ ಬಳಿಕವೂ ನಿಮ್ಮ ಮನೆಯನ್ನು 'ಅಕ್ರಮ' ಎಂದು ಪರಿಗಣಿಸಿ ಅಧಿಕಾರಿಗಳು ಕೆಡವಲು ಮುಂದಾಗಬಹುದು. ಅಂದರೆ ಮುಂದೆಂದೂ ನೀವು ಅಧಿಕಾರಿಗಳ ವಿರುದ್ಧ, ನಾಯಕರ ವಿರುದ್ಧ ಧ್ವನಿ ಎತ್ತಬಾರದು ! ಮಾತ್ರವಲ್ಲ ನಿಮ್ಮ ಮೇಲೆ ಕನಿಕರ ತೋರಿ ಅಕ್ರಮ-ಸಕ್ರಮದ ಹೆಸರಿನಲ್ಲಿ ಹೊಸ ಯೋಜನೆಗಳನ್ನು ಜಾರಿಗೊಳಿಸಿದಾಗ ದುಬಾರಿ ದಂಡ ತೆತ್ತು ಸಕ್ರಮಗೊಳಿಸಿಕೊಳ್ಳಲು ಸಿದ್ಧರಿರಬೇಕು. ನಗರ ಪ್ರದೇಶಗಳಿಗೆ ಸೀಮಿತವಾಗಿದ್ದ ಈ ಅಕ್ರಮ -ಸಕ್ರಮ ದಂಧೆಯನ್ನು ಈಗ ಗ್ರಾಮೀಣ ಪ್ರದೇಶಕ್ಕೂ ವಿಸ್ತರಿಸಲಾಗಿದೆ. ಭೂ ಪರಿವರ್ತನೆ ಹೆಸರಿನಲ್ಲಿ ಜಾರಿಗೊಳಿಸಿರುವ ಹೊಸ ಕಾನೂನು, ನೀವು ತಾತ- ಮುತ್ತಾತನ ಕಾಲದಿಂದ ಅನುಭವಿಸಿಕೊಂಡ ಬಂದ ಮನೆಯನ್ನೂ ಅಕ್ರಮ ಎಂದು ಪರಿಗಣಿಸಲು ಸಿದ್ಧವಾಗಿದೆ. ಇದು ಬೇರೆಯೇ ಕಥೆ. ಇನ್ನೊಮ್ಮೆ ಚರ್ಚಿಸೋಣ.

ಅಭಿಮತ

ಶ್ರೀನಿಸುತ, ಮೈಸೂರು

ಅಷ್ಟ ಮಠಗಳಲ್ಲಿ ಕಾಣದ ಒಗ್ಗಟ್ಟು

ರುಕ್ಮಿಣಿ ಕರಾರ್ಚಿತ ಶ್ರೀಕೃಷ್ಣನನ್ನು ಉಡುಪಿಯಲ್ಲಿ ಪ್ರತಿಷ್ಠಾಪಿಸಿ ಸನ್ನಿಧಾನವನ್ನು ತುಂಬಿಸಿ ಶ್ರೀ ಮಧ್ವಾಚಾರ್ಯರು ಬೋಧಿಸಿದ್ದು 'ಐಕ್ಯ'ವನ್ನಲ್ಲ; ಬದಲಿಗೆ, ಜೀವಾತ್ಮ ಮತ್ತು ಪರಮಾತ್ಮ ಎಂದೆಂದೂ ಒಂದಲ್ಲ ಎಂದು ಬೋಧಿಸಿ ಭೇದವನ್ನು ಸಾರಿದರು. ಶ್ರೀಕೃಷ್ಣನ ಪೂಜೆಗೆಂದು ಅಷ್ಟ ಮಠಗಳ ವ್ಯವಸ್ಥೆಯನ್ನು ಏರ್ಪಡಿಸಿದರು.

ಇಂಥ ಉಡುಪಿಯಲ್ಲಿ ಆಯೋಜಿಸಲಾಗಿದ್ದ, ಐತಿಹಾಸಿಕ ಎನ್ನಬಹುದಾದ ಲಕ್ಷಕಂಠ ಗೀತಾಪಠಣ ಸಮಾರಂಭದಲ್ಲಿ ಎಲ್ಲಾ ಎಂಟು ಮಠಾಧಿಪತಿಗಳು ಹಾಜರಿರದೆ ಸಾರ್ವಜನಿಕರ ಎದುರು 'ಭೇದ'ವನ್ನೇ ಮೆರೆದಿದ್ದಾರೆ! ಒಳ ವೈಮನಸ್ಯಗಳು ಏನೇ ಇರಲಿ, 'ಜಗದ್ಗುರು' ಕೃಷ್ಣನಿಗಾಗಿ, ಅವನು ಬೋಧಿಸಿದ ಮತ್ತು ಇಡೀ ಮನುಕುಲಕ್ಕೆ ಎಲ್ಲಾ ಕಾಲಕ್ಕೂ ಅನ್ವಯಿಸುವ ಭಗವದ್ಗೀತೆಗಾಗಿ ಅವರು ಒಗ್ಗೂಡಬೇಕಿತ್ತು. ದೇಶವೇ ಕೊಂಡಾಡುವ 'ಭಾರತ ಭಾಗ್ಯವಿಧಾತ' ಪ್ರಧಾನಿ ನರೇಂದ್ರ ಮೋದಿಯವರ ಸಲುವಾಗಿಯಾದರೂ ಅಂದಿನ ಸಮಾರಂಭದ ವೇಳೆ ಅವರೆಲ್ಲರ ಉಪಸ್ಥಿತಿ ಇರಬೇಕಿತ್ತು. ಇದು ಎಲ್ಲಾ ಕೃಷ್ಣಭಕ್ತರ ಆಗ್ರಹವೂ ಆಗಿತ್ತು. ಅಂದು ಕೃಷ್ಣ ದೇಗುಲದ ಮುಂಭಾಗದ ಚಂದ್ರಶಾಲೆಯಲ್ಲಿ ಪುತ್ತಿಗೆ ಶ್ರೀಗಳೊಂದಿಗೆ ಕಂಡುಬಂದಿದ್ದು ಪೇಜಾವರ ಮಠದ ಶ್ರೀಗಳು, ಶಿರೂರು ಶ್ರೀಗಳು ಮಾತ್ರ. ಅಷ್ಟ ಮಠಗಳಲ್ಲಿ ಸೇರದಿದ್ದರೂ ಸುಬ್ರಹ್ಮಣ್ಯ ಕ್ಷೇತ್ರದ ಶ್ರೀಗಳು ಅಲ್ಲಿ ಕಂಡುಬಂದರು.

ಆಶ್ರಮ ಜ್ಯೇಷ್ಠರಾದ ಶ್ರೀ ಕೃಷ್ಣಾಪುರ, ಪಲಿಮಾರು, ಸೋದೆ, ಅದಮಾರು, ಕಾಣಿಯೂರು ಶ್ರೀಪಾದರ ಅನುಪಸ್ಥಿತಿ ಅಲ್ಲಿ ಎದ್ದುಕಾಣುತ್ತಿತ್ತು. ಉಡುಪಿಯ ರಾಜಾಂಗಣದಲ್ಲಿ ಬೇರೆ ಬೇರೆ ಸಮಾರಂಭಗಳಲ್ಲಿ ಪುತ್ತಿಗೆ ಶ್ರೀಗಳೊಂದಿಗೆ ವೇದಿಕೆ ಹಂಚಿಕೊಳ್ಳುವ ಶ್ರೀ ವಿಶ್ವಪ್ರಿಯ ತೀರ್ಥರೂ ಕಂಡುಬರಲಿಲ್ಲ! ಅದು ಯಾವುದೇ ಸಮಾರಂಭ ಇರಲಿ, ಶ್ರೀ ವಿಶ್ವಪ್ರಿಯ ತೀರ್ಥರು ಮೋದಿ ಅವರ ಕುರಿತು ಪ್ರಸ್ತಾಪಿಸಿ ಅವರಿಂದ ದೇಶಕ್ಕೆ ಸಲ್ಲುತ್ತಿರುವ ಸೇವೆಯನ್ನು ಮನಃಪೂರ್ವಕವಾಗಿ ಶ್ಲಾಘಿಸುತ್ತಾರೆ, ಆಶೀರ್ವದಿಸುತ್ತಾರೆ. ಮೋದಿಯವರ ಸಲುವಾಗಿ ಭಾರತೀಯರು ತಮ್ಮ ಪುಣ್ಯವನ್ನು ಧಾರೆ ಎರೆಯಬೇಕೆಂದು ಹೇಳಿದ್ದವರು ಇವರು. ಅಷ್ಟ ಮಠಗಳ ನಡುವೆ ಏಕಾದಶಿ ಉಪವಾಸ ಆಚರಣೆಯಲ್ಲಿ (ದೃಗ್ಗಣಿತ, ಆರ್ಯಭಟೀಯ) ಭೇದ, ಹಣೆಗೆ ಹಚ್ಚುವ ಅಕ್ಷತೆ-ಅಂಗಾರ ಯಾವ ಜಾಗದಲ್ಲಿರಬೇಕು ಎಂಬುವ ವಿಷಯದಲ್ಲಿ ಭೇದ ಮಾತ್ರವೇ ಇದೆಯೆಂದು ಜನಸಾಮಾನ್ಯರು ತಿಳಿದಿದ್ದರು. ಎರಡು ವರ್ಷಗಳಿಗೊಮ್ಮೆ ನಡೆಯುವ ಪರ್ಯಾಯ ಸಮಾರಂಭದಲ್ಲಿ ಎಲ್ಲಾ ಎಂಟು ಶ್ರೀಗಳನ್ನು ಒಟ್ಟೊಟ್ಟಿಗೆ ಒಂದೇ ವೇದಿಕೆಯಲ್ಲಿ ನೋಡಲು ದುಸ್ತರವಾಗಿದೆ. ದೇಶದ ಜನಪ್ರಿಯ ಪ್ರಧಾನಿ ಮಠದ ಬಾಗಿಲ ಬಳಿ ಬಂದಾಗ ಎದುರುಗೊಳ್ಳಬೇಕಾದ ಯಜಮಾನರೇ ಉಡುಪಿಯಿಂದಲೇ ಅದೃಶ್ಯರಾಗಿ ಹೋದಂತಿದೆ. ಯತಿಗಳಿಗೆ ಸಂಚಾರ ನಿರ್ಬಂಧ ಹೇರುವ ಚಾತುರ್ಮಾಸ್ಯದ ಹೊತ್ತೂ ಇದಾಗಿರಲಿಲ್ಲ, ಹಾಗಿದ್ದರೂ ಅವರುಗಳು ಕಾಣದಿದ್ದುದು ಯಾವ ಕಾರಣಕ್ಕೆ? ಎಲ್ಲಾ ಪೀಠಾಧಿಪತಿಗಳು ಇದ್ದಿದ್ದರೆ ಸಮಾಜಕ್ಕೆ ಒಳ್ಳೆಯ ಸಂದೇಶ ರವಾನೆಯಾಗುತ್ತಿತ್ತು, ಅಲ್ಲವೇ?

(ಲೇಖಕರು ಹವ್ಯಾಸಿ ಬರಹಗಾರರು)

ಹೊಸ ಕಾರ್ಮಿಕ ಸಂಹಿತೆ ವರವೋ, ಶಾಪವೋ?

'ಒಂದು ರಾಷ್ಟ್ರ, ಒಂದು ವೇತನ' ಎಂಬ ಪರಿಕಲ್ಪನೆಯಂತೆ ಕಾಣುವ ಈ ನೂತನ ಕಾರ್ಮಿಕ ಸಂಹಿತೆಯಲ್ಲಿ ಮೇಲ್ನೋಟಕ್ಕೆ ಕಾರ್ಮಿಕರ ಹಿತರಕ್ಷಣೆ ಎದ್ದುಕಾಣುತ್ತಿದ್ದರೂ, ಆಳವಾಗಿ ವಿಶ್ಲೇಷಿಸಿದಾಗ ಅದರಲ್ಲಿ ಅಹಿತವೇ ಹೆಚ್ಚು ಎನ್ನುವುದು ಕಾರ್ಮಿಕ ಸಂಘಟನೆಗಳ ಅಭಿಪ್ರಾಯ. 'ಕಾರ್ಮಿಕರ ಮೂಗಿಗೆ ತುಪ್ಪ ಸವರಲಾಗಿದೆ' ಎಂಬುದು ಅವುಗಳ ಆಕ್ರೋಶ.

ಯಕ್ಷಪ್ರಶ್ನೆ
ರಮಾನಂದ ಶರ್ಮಾ
vveditoped@gmail.com

ವಸಾಹತುಶಾಹಿಗಳಿಂದ ರೂಪಿತವಾಗಿ 1930ರಿಂದ ಜಾರಿಯಲ್ಲಿದ್ದ ಕಾರ್ಮಿಕ ಕಾನೂನುಗಳನ್ನು ಕ್ರೋಡೀಕರಿಸಿ, ಈ ನಿಟ್ಟಿನಲ್ಲಿ ಇದ್ದ 29 ಕಾನೂನುಗಳನ್ನು ಪರಿಷ್ಕರಿಸಿರುವ ಕೇಂದ್ರ ಸರಕಾರವು, ಅವುಗಳ ಸಂಖ್ಯೆಯನ್ನು 4ಕ್ಕೆ ಇಳಿಸಿ, ಹೊಸ ಕಾರ್ಮಿಕ ಸಂಹಿತೆಗಳ ಜಾರಿಗೆ ಸಂಬಂಧಿಸಿದಂತೆ ನವೆಂಬರ್ 21ರಂದು ಅಧಿಸೂಚನೆ ಹೊರಡಿಸಿದೆ.

ಕೈಗಾರಿಕಾ ವ್ಯವಹಾರಗಳ ಸಂಹಿತೆ (2019), ಸಾಮಾಜಿಕ ಭದ್ರತಾ ಸಂಹಿತೆ (2020), ಉದ್ಯೋಗ ಸಂಹಿತೆ (2020), ಆರೋಗ್ಯ ಮತ್ತು ಕೆಲಸಗಳ ಸ್ಥಿತಿಗತಿಗಳ ಸಂಹಿತೆ (2020) ಇವು ಸಂಸತ್ತಿನಲ್ಲಿ ಐದು ವರ್ಷಗಳ ಹಿಂದೆಯೇ ಅಂಗೀಕಾರವನ್ನು ಪಡೆದಿದ್ದು, 2025ರ ನವೆಂಬರ್ 21ರಿಂದ ಕಾನೂನುಗಳಾಗಿವೆ. ಸ್ಥೂಲವಾಗಿ ಹೇಳುವುದಾದರೆ, ಇಂಗ್ಲಿಷ್ ವಸಾಹತುಶಾಹಿ ಕಾನೂನುಗಳನ್ನು ಬಹುತೇಕ ರದ್ದುಪಡಿಸಲಾಗಿದೆ. ಸಮಯಕ್ಕೆ ಸರಿಯಾಗಿ ವೇತನ ನೀಡುವ, ಸಾಮಾಜಿಕ ಭದ್ರತೆ ಒದಗಿಸುವ, ವೇತನ ಮತ್ತು ಇತರ ಸೌಲಭ್ಯಗಳ ವಿಷಯದಲ್ಲಿ ಮಹಿಳೆಯರನ್ನು ಪುರುಷರಿಗೆ ಸಮನಾಗಿ ನೋಡುವ ನಿಟ್ಟಿನಲ್ಲಿ ಈ ಕಾನೂನುಗಳು ಬಹುದೂರ ಸಾಗುತ್ತವೆ ಎಂದು ನಿರೀಕ್ಷಿಸಲಾಗಿದೆ. ಈ ಕಾನೂನುಗಳನ್ನು ಹಾರ್ದಿಕವಾಗಿ ಸ್ವಾಗತಿಸಿರುವ India Inc, 'ಉದ್ಯಮದ ದಶಕಗಳ ಬೇಡಿಕೆಯು ಈಡೇರಿದೆ' ಎಂದು ಸಂತಸಪಟ್ಟಿದೆ.

ಆದರೆ, ಒಬ್ಬರ ಸಂತಸದಲ್ಲಿ ಇನ್ನೊಬ್ಬರ ಸಂಕಷ್ಟ ಇರುತ್ತದೆ ಎನ್ನುವಂತೆ, ಈ ಸಂಹಿತೆಗಳ ವಿರುದ್ಧ ಕಾರ್ಮಿಕ ವಲಯದಲ್ಲಿ ಪ್ರತಿಭಟನೆಯ ದನಿ, ಅಪಸ್ವರಗಳು ಕೇಳಿಬರುತ್ತಿವೆ. ಇವುಗಳ ಪರ ಮತ್ತು ವಿರುದ್ಧವಾಗಿರುವ ಚರ್ಚೆಗಳು ದೇಶಾದ್ಯಂತ ನಡೆಯುತ್ತಿವೆ. ಕಾರ್ಮಿಕ ಸಂಘಟನೆಗಳು ಈಗಾಗಲೇ ನವೆಂಬರ್ 26ರಂದು ಒಂದು ದಿನದ ಪ್ರತಿಭಟನೆ ನಡೆಸಿದ್ದು, ಮುಂದಿನ ದಿನಗಳಲ್ಲಿ ಇದು ಮುಂದುವರಿಯುವ ಎಲ್ಲಾ ಲಕ್ಷಣಗಳು ಕಾಣುತ್ತಿವೆ. ದುಡಿಯುವ ವರ್ಗದ ಮೇಲೆ ಸರಕಾರವು ಯುದ್ಧ ಸಾರಿದೆ ಎಂದು ಅವು ಆರೋಪಿಸಿ ಆಕ್ರೋಶವನ್ನು ವ್ಯಕ್ತಪಡಿಸುತ್ತಿವೆ. ಈ ಸಂಹಿತೆಗಳನ್ನು ರೂಪಿಸುವಾಗ ಸರಕಾರವು ಕಾರ್ಮಿಕ ವರ್ಗವನ್ನು ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ ಮತ್ತು ದೇಶವನ್ನು ಮಾಲೀಕ-ಸೇವಕ ಸಂಬಂಧದ ದಿನಗಳಿಗೆ ಕೊಂಡೊಯ್ಯುತ್ತಿದೆ ಎಂದು ಕಾರ್ಮಿಕ ಸಂಘಟನೆಗಳವರು ದೂರುತ್ತಿದ್ದಾರೆ.

ಕಾರ್ಮಿಕರ ಅಸಂತೋಷಕ್ಕೆ ಕಾರಣಗಳೇನು?

ಈ ಸಂಹಿತೆಯನ್ವಯ ಕಾರ್ಮಿಕರ ಕೆಲಸದ ಅವಧಿಯು ಮೊದಲಿನ 9 ತಾಸಿನಿಂದ 12 ತಾಸುಗಳಿಗೆ ಏರಲಿದೆ. ದಿನದ ಕಾರ್ಯಾವಧಿಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಇನ್ಫೋಸಿಸ್ ಸಂಸ್ಥೆಯ ನಾರಾಯಣ ಮೂರ್ತಿಯವರು ಹಿಂದೊಮ್ಮೆ ವ್ಯಕ್ತಪಡಿಸಿದ್ದ ಅಭಿಪ್ರಾಯವು ಇದರೊಳಗೆ ನುಸುಳಿದಂತಿದೆ ಎನ್ನಲಾಗುತ್ತಿದೆ. ಗುತ್ತಿಗೆ ಆಧಾರಿತ ಉದ್ಯೋಗಿಗಳನ್ನು ಕಾಯಂಗೊಳಿಸುವುದು ಕ್ಲಿಷ್ಟದಾಯಕ. ಉದ್ಯೋಗಿಗಳು ಆಡಳಿತ ವರ್ಗದ ಯಾವುದೇ ಧೋರಣೆ, ನೀತಿ-ನಿಯಮಾವಳಿಯನ್ನು ಪ್ರತಿಭಟಿಸಬೇಕಿದ್ದರೆ ಅವರಿಗೆ ಶೇ.75ರಷ್ಟು ಸಹವರ್ತಿಗಳ ಬೆಂಬಲವಿರಲೇಬೇಕು. ಕಂಪನಿಗಳು ಸರಕಾರದ ಅನುಮತಿಯಿಲ್ಲದೆಯೇ 300 ಉದ್ಯೋಗಿಗಳನ್ನು ಕೆಲಸದಿಂದ ವಜಾಗೊಳಿಸಬಹುದು (ಈ ಮೊದಲು ಇದು 100 ಕಾರ್ಮಿಕರಿಗೆ ಸೀಮಿತವಾಗಿತ್ತು), ಕಾರ್ಖಾನೆಗಳಲ್ಲಿ ಶಿಫ್ಟ್ ಅವಧಿಯನ್ನು ಹೆಚ್ಚಿಸಬಹುದು. ದೇಶದ 60-70 ಉದ್ಯಮಗಳಲ್ಲಿ ಉದ್ಯೋಗಿಗಳ ಸಂಖ್ಯೆ 300ಕ್ಕಿಂತ ಕಡಿಮೆ ಇದ್ದು, ಇದು ಕಾರ್ಮಿಕರಿಗೆ ಮಾರಕವಾಗುತ್ತದೆ ಎಂದು ಕಾರ್ಮಿಕ ಸಂಘಟನೆ 'ಐಟಕ್' ಆಕ್ರೋಶ ವ್ಯಕ್ತಪಡಿಸುತ್ತಿದೆ. ಈ ಸಂಹಿತೆಯ ಪ್ರಕಾರ ಉದ್ಯೋಗಿಗಳಿಗೆ ಗ್ರ್ಯಾಚುಯಿಟಿ, ಪಿಎಫ್ ಕಡ್ಡಾಯವಾಗಿರುವುದರಿಂದ, ಕಾರ್ಮಿಕರ ಕೈಗೆ ಲಭಿಸುವ ವೇತನದಲ್ಲಿ ಕಡಿತವಾಗುತ್ತದೆ ಎಂದು ಆ ಸಂಘಟನೆಯವರು ಆರೋಪಿಸುತ್ತಾರೆ.

ಯಾವುದೇ ಕಾನೂನು, ನೀತಿ-ನಿಯಮಾವಳಿಗಳು ಸಂಬಂಧಪಟ್ಟ ಎಲ್ಲರನ್ನೂ ಸಂತುಷ್ಟಗೊಳಿಸಲು ಸಾಧ್ಯವಿಲ್ಲ. ಕಾರ್ಮಿಕ ಸಂಘಟನೆಗಳು ಸಂಹಿತೆಯಲ್ಲಿನ ನಕಾರಾತ್ಮಕ ಅಂಶಗಳನ್ನು ಪಟ್ಟಿಮಾಡಿ ಎತ್ತಿ ತೋರಿಸುತ್ತಿವೆ. ಕಾರ್ಮಿಕರ ಕಳವಳ, ಆಕ್ರೋಶವನ್ನು ತಳ್ಳಿಹಾಕುವಂತಿಲ್ಲ. ಇದರಲ್ಲಿ ಸತ್ಯವೂ ಇಲ್ಲದಿಲ್ಲ. ಹಾಗೆಯೇ, ಕಾರ್ಮಿಕರ ಒಳಿತು ಮತ್ತು ಕಲ್ಯಾಣಗಳ ಕುರಿತೂ ಹೊಸ ಕಾನೂನಿನಲ್ಲಿ ಒತ್ತು ನೀಡಿರುವುದನ್ನು ಅಲ್ಲಗಳೆಯಲಾಗದು. ಈ ಹೊಸ ಸಂಹಿತೆಯ ಪ್ರಕಾರ, ಕಾಯಂ ನೌಕರರಿಗೆ ಸಮನಾಗಿರುವ ರಜೆ, ವಿಮೆ, ಗ್ರ್ಯಾಚುಯಿಟಿ ಸೌಲಭ್ಯಗಳು ಗುತ್ತಿಗೆ ಆಧಾರಿತ ಉದ್ಯೋಗಿಗಳಿಗೂ ದೊರಕುತ್ತದೆ ಎಂಬುದು ಗಮನಾರ್ಹ ಅಂಶ. ಕಂಪನಿಯೊಂದರಲ್ಲಿ 5 ವರ್ಷದ ಬದಲಿಗೆ ಕೇವಲ ಒಂದು ವರ್ಷ ಕೆಲಸ ಮಾಡಿದರೂ ಅವರು ಗ್ರ್ಯಾಚುಯಿಟಿಗೆ ಅರ್ಹರಾಗುತ್ತಾರೆ. ಕಾಯಂ ನೌಕರರಿಗೆ ದೊರಕುವಷ್ಟು ವೇತನವು, ನಿಗದಿತ ಅವಧಿಗೆ ನೇಮಕವಾದವರಿಗೂ ಲಭ್ಯವಾಗುತ್ತದೆ. 40 ವರ್ಷ ದಾಟಿದವರಿಗೆ ಉಚಿತ ಆರೋಗ್ಯ ತಪಾಸಣೆ, 'ಗಿಗ್' ಕಾರ್ಮಿಕರಿಗೆ ಎಲ್ಲಿ ಬೇಕಾದರೂ ಕೆಲಸಮಾಡಲು ಅನುವಾಗುವಂತೆ 'ಯೂನಿವರ್ಸಲ್ ಅಕೌಂಟ್ ನಂಬರ್' (ಪ್ರಾವಿಡೆಂಟ್ ಫಂಡ್ ಮತ್ತು ಗ್ರ್ಯಾಚುಯಿಟಿಯನ್ನು ಜಮಾ ಮಾಡಲು) ನೀಡುವುದು ಮತ್ತು ಅವರಿಗೆ ಕನಿಷ್ಠ ವೇತನದ ಖಾತ್ರಿ ನೀಡುವುದು ಇಲ್ಲಿ ಕಡ್ಡಾಯವಾಗಿರುತ್ತದೆ. ಈವರೆಗೆ ಕಾಯಂ ನೌಕರರಿಗೆ ಮಾತ್ರ ನೀಡುತ್ತಿದ್ದ ಪಿಎಫ್, ಇಎಸ್‌ಐಸಿ, ವಿಮೆ, ಹೆರಿಗೆ ರಜೆ, ಪಿಂಚಣಿ ಇತ್ಯಾದಿಗಳನ್ನು ಗುತ್ತಿಗೆ ನೌಕರರಿಗೂ ವಿಸ್ತರಿಸಲಾಗುತ್ತದೆ.

ಇನ್ನು, ಕಂಪನಿಗಳ ನೋಂದಣಿ ಮತ್ತು ಪರವಾನಗಿಗೆಂದು ಒಂದೇ ವೇದಿಕೆಯನ್ನು ರಚಿಸಲಾಗಿದ್ದು, ಈ ನಿಟ್ಟಿನಲ್ಲಿ ಬಹುಕಾಲದಿಂದ ಅನುಸರಿಸುತ್ತಿದ್ದ 12 ಪ್ರಕ್ರಿಯೆಗಳಿಗೆ ತಿಲಾಂಜಲಿ ನೀಡಲಾಗಿದೆ. ಕಾರ್ಮಿಕರಿಗೆ ಕನಿಷ್ಠ ವೇತನವನ್ನು ಖಚಿತಪಡಿಸಲು 'ನ್ಯಾಷನಲ್ ಫ್ಲೋರ್ ವೇಜ್' ರಚನೆಯಾಗಿದೆ. ಪತ್ರಕರ್ತರು, ಡಬ್ಬಿಂಗ್ ಕಲಾವಿದರಿಗೂ ಸಾಮಾಜಿಕ ಭದ್ರತಾ ಯೋಜನೆಗಳನ್ನು ವಿಸ್ತರಿಸಲಾಗಿದೆ. ಹಾಗೆಯೇ ಈ ಸಂಹಿತೆಯಲ್ಲಿ, ಬೀಡಿ ಮತ್ತು ಸಿಗರೇಟು ಉದ್ಯಮದಲ್ಲಿನ ಕೆಲಸಗಾರರನ್ನು ವಿಶೇಷವಾಗಿ ನೋಡಿದ್ದು, ಅವರಿಗೆ ದಿನಕ್ಕೆ 8-12 ತಾಸು ಕೆಲಸ ಮತ್ತು ವಾರಕ್ಕೆ ಗರಿಷ್ಠ 48 ತಾಸುಗಳ ಕೆಲಸವನ್ನು ನಿಗದಿಪಡಿಸಲಾಗಿದೆ. ಓವರ್‌ಟೈಮ್ ಕೆಲಸ ಮಾಡಿದವರಿಗೆ ದುಪ್ಪಟ್ಟು ಸಂಬಳ, ವರ್ಷಕ್ಕೆ 30 ದಿನ ಕೆಲಸ ಮಾಡಿದರೂ ಬೋನಸ್ ಮತ್ತು ನಿಗದಿತ ಸಮಯಕ್ಕೆ ಸಂಬಳ ನೀಡಿಕೆಯನ್ನು ಕಡ್ಡಾಯಗೊಳಿಸಲಾಗಿದೆ.

ಈ ಸಂಹಿತೆಯಲ್ಲಿ 'ವೈಟ್ ಕಾಲರ್' ಉದ್ಯೋಗಿಗಳನ್ನು ಗಮನಿಸಿರುವುದು ಇನ್ನೊಂದು ವಿಶೇಷ. ಇಂಥ ಉದ್ಯೋಗಿಗಳಿಗೆ ಪ್ರತಿ ತಿಂಗಳ 7ನೇ ತಾರೀಖಿನೊಳಗೆ ಸಂಬಳ ನೀಡುವುದು, ಪ್ರತಿಯೊಬ್ಬರಿಗೂ ನೇಮಕಾತಿ ಪತ್ರ ನೀಡುವುದು ಕಡ್ಡಾಯ. ಇಂಥ ಉದ್ಯೋಗಿಗಳ ಸಿಟಿಸಿಯಲ್ಲಿ (cost to company) ಮೂಲವೇತನವು ಶೇ.50ರಷ್ಟು ಇರಲೇಬೇಕು ಎಂಬ ನಿಬಂಧನೆ ಹಾಕಲಾಗಿದೆ. ಅಗತ್ಯ ಸುರಕ್ಷತಾ ಕ್ರಮದೊಂದಿಗೆ ಮಹಿಳೆಯರಿಗೆ ರಾತ್ರಿ ಪಾಳಿಯ ಕೆಲಸಕ್ಕೆ

ಅನುಮತಿ, ಮಹಿಳೆಯರಿಗೂ ಪುರುಷರಷ್ಟೇ ಸಮಾನ ವೇತನ, ಕುಂದುಕೊರತೆ ಸಮಿತಿಗಳಲ್ಲಿ ಮಹಿಳೆಯರಿಗೆ ಪ್ರಾತಿನಿಧ್ಯ ಮುಂತಾದ ಅಂಶಗಳಿಗೆ ಒತ್ತುನೀಡಲಾಗಿದೆ. ಈವರೆಗೆ ನಿರ್ಲಕ್ಷಿಸಲ್ಪಟ್ಟಿದ್ದ ಎಂಎಸ್‌ಎಂಇ ಕೆಲಸಗಾರರನ್ನೂ ಈ ಸಂಹಿತೆಯಲ್ಲಿ ಗಣನೆಗೆ ತೆಗೆದುಕೊಂಡಿದ್ದು ಇಲ್ಲಿ ಕಾಣಬರುವ ಇನ್ನೊಂದು ಮಹತ್ವದ ಅಂಶ. ಉದ್ಯೋಗಿಗಳ ಸಂಖ್ಯೆಯ ಆಧಾರದ ಮೇಲೆ ಸಾಮಾಜಿಕ ಭದ್ರತಾ ಸೌಕರ್ಯ ನೀಡುವುದು, ಪ್ರತಿ ಕೆಲಸಗಾರರಿಗೆ ಕನಿಷ್ಠ ವೇತನ, ನೀರು-ಶೌಚಾಲಯ ಸೇರಿದಂತೆ ಮೂಲಭೂತ ಸೌಕರ್ಯವನ್ನು ಕಲ್ಪಿಸುವುದು, ಹೆಚ್ಚಿನ ಅವಧಿಗೆ ಕೆಲಸ ಮಾಡಿದರೆ ಓವರ್‌ಟೈಮ್ ವೇತನ ನೀಡುವುದು ಹಾಗೂ ವೇತನಸಹಿತ ರಜೆ ನೀಡಿಕೆಯನ್ನು ಕಡ್ಡಾಯಗೊಳಿಸಲಾಗಿದೆ.

'ಒಂದು ರಾಷ್ಟ್ರ, ಒಂದು ವೇತನ' ಎಂಬ ಪರಿಕಲ್ಪನೆಯಂತೆ ಕಾಣುವ ಈ ನೂತನ ಕಾರ್ಮಿಕ ಸಂಹಿತೆಯಲ್ಲಿ ಮೇಲ್ನೋಟಕ್ಕೆ ಕಾರ್ಮಿಕರ ಹಿತರಕ್ಷಣೆ ಎದ್ದುಕಾಣುತ್ತಿದ್ದರೂ, ಆಳವಾಗಿ ವಿಶ್ಲೇಷಿಸಿದಾಗ ಅದರಲ್ಲಿ ಅಹಿತವೇ ಹೆಚ್ಚು ಎನ್ನುವುದು ಕಾರ್ಮಿಕ ಸಂಘಟನೆಗಳ ಅಭಿಪ್ರಾಯ. 'ಕಾರ್ಮಿಕರ ಮೂಗಿಗೆ ತುಪ್ಪ ಸವರಲಾಗಿದೆ' ಎಂಬುದು ಅವುಗಳ ಆಕ್ರೋಶ. ಹೀಗಾಗಿ ಇದನ್ನು ಕೂಡಲೇ ವಾಪಸ್ ಪಡೆಯಬೇಕು ಎಂಬ ಕೂಗು ಕಾರ್ಮಿಕ ವರ್ಗದಲ್ಲಿ ಕೇಳುತ್ತಿದೆ. 'ಟೇಕ್ ಹೋಮ್' ವೇತನದಲ್ಲಿ ಕಡಿತ, ಕೆಲಸದ ಡಿಡಿಅವಧಿ ಹೆಚ್ಚಳ, ಶೇ.75ರಷ್ಟು ನೌಕರರ ಬೆಂಬಲವಿಲ್ಲದೆ ಪ್ರತಿಭಟನೆಗೆ ಇಳಿಯಲಾಗದಿರುವಿಕೆ, ಕಂಪನಿಗಳು ಸರಕಾರದ ಅನುಮತಿಯಿಲ್ಲದೆಯೇ 300 ನೌಕರರನ್ನು ವಜಾಗೊಳಿಸಬಹುದು ಎಂಬೆಲ್ಲಾ ಅಂಶಗಳು ಕಾರ್ಮಿಕರನ್ನು ರೊಚ್ಚಿಗೆಬ್ಬಿಸಿವೆ. ಜತೆಗೆ, 'ಮುಷ್ಕರ ನಡೆಸುವ ಮೊದಲು ಕಾರ್ಮಿಕರು 14 ದಿನಗಳ ನೋಟಿಸ್ ನೀಡಬೇಕು' ಎಂಬ ಹೊಸ ನಿಯಮ ಅವರನ್ನು ರೊಚ್ಚಿಗೆಬ್ಬಿಸಿದೆ. ಈ ಮೊದಲು ಸರಕಾರಿ ಸ್ವಾಮ್ಯದ ಕಂಪನಿಗಳಿಗಷ್ಟೇ ಅನ್ವಯವಾಗುತ್ತಿದ್ದ ಇಂಥ ನಿಯಮಾವಳಿಯು ತಮ್ಮ ಹಕ್ಕು ಮತ್ತು ಅಧಿಕಾರವನ್ನು ಕಸಿದುಕೊಂಡಿದೆ ಎಂಬುದು ಕಾರ್ಮಿಕರ ಅಭಿಪ್ರಾಯ. ವಿಚಿತ್ರವೆಂದರೆ, ಶೇ.50ಕ್ಕಿಂತ ಹೆಚ್ಚು ಕಾರ್ಮಿಕರು ಒಂದೇ ದಿನ 'ಕ್ಯಾಷುಯಲ್ ಲೀವ್' ತೆಗೆದುಕೊಂಡರೆ ಅದನ್ನು ಮುಷ್ಕರ ಎಂದು ಪರಿಗಣಿಸಲಾಗುತ್ತದೆ. ಇವು ತಮ್ಮ ಹಕ್ಕು, ಅಧಿಕಾರ ಮತ್ತು ಬಲವನ್ನು ಹತ್ತಿಕ್ಕುವ ಅಂಶಗಳು ಎಂದು ಕಾರ್ಮಿಕರು ಎತ್ತಿ ತೋರಿಸುತ್ತಿದ್ದಾರೆ.

ದೇಶದ ಕಾರ್ಪೊರೇಟ್ ವಲಯ ಮತ್ತು ಬಂಡವಾಳಶಾಹಿಗಳ ಹಿತಾಸಕ್ತಿಯನ್ನು ಕಾಪಾಡಲೆಂದು, ಕಾರ್ಮಿಕ ವರ್ಗದ ಧೀರೋದಾತ್ತ ಹೋರಾಟಗಳ ಮೂಲಕ ರೂಪುಗೊಂಡ 29 ಪ್ರಮುಖ ಕಾರ್ಮಿಕ ಕಾನೂನುಗಳನ್ನು ಸಮಾಧಿ ಮಾಡಿ, ಅದನ್ನು ನಾಲ್ಕು ಸಂಹಿತೆಗಳನ್ನಾಗಿ ಮಾಡಲಾಗಿದೆ; ಇದು ಕಾರ್ಮಿಕ ವರ್ಗವನ್ನು ಪುನಃ ಗುಲಾಮಗಿರಿಯತ್ತ ಕೊಂಡೊಯ್ಯುವ ಪಿತೂರಿ ಎಂದು ಪ್ರಮುಖ ಕಾರ್ಮಿಕ ನಾಯಕರು ಬಣ್ಣಿಸುತ್ತಿದ್ದಾರೆ. ವಿದೇಶಿ ಉದ್ಯಮಗಳ ಸ್ಥಾಪನೆಗಾಗಿ ಕಾನೂನನ್ನು ಬದಲಾಯಿಸಿ, ಕಾರ್ಮಿಕರ ಹಿತವನ್ನು ಬಲಿಗೊಡಲಾಗುತ್ತದೆ ಎಂದೂ ಹೇಳುವ ಕಾರ್ಮಿಕರಿದ್ದಾರೆ. 'ಇದು ಮಾಲೀಕರ ಪರ ಹೆಚ್ಚು ವಾಲಿದೆ, ಕಾರ್ಮಿಕರ ಕೆಲಸದ ಅವಧಿಯನ್ನು ಹೆಚ್ಚಿಸುವ ನಿರ್ಧಾರವನ್ನು ಮಾಲೀಕರಿಗೆ ನೀಡಿರುವುದು ಆತಂಕಕಾರಿ ಬೆಳವಣಿಗೆ' ಎನ್ನುತ್ತಾರೆ ಅವರು.

ಇನ್ನು, ಉದ್ಯಮಿಗಳು ಕೂಡ ಒಂದಷ್ಟು ಅಂಶಗಳ ಬಗ್ಗೆ ಗೊಣಗುತ್ತಿದ್ದಾರೆ. ಕನಿಷ್ಠ ವೇತನದ ನಿಗದಿ, ಶೇ.50ರಷ್ಟು ಮೂಲವೇತನ, ಗ್ರ್ಯಾಚುಯಿಟಿ, ಪ್ರಾವಿಡೆಂಟ್ ಫಂಡ್, ಓವರ್‌ಟೈಮ್ ವೇತನ; ಕಾಯಂ ನೌಕರರು ಮತ್ತು ನಿಗದಿತ ಅವಧಿಗೆ ಕೆಲಸ ಮಾಡುವ ನೌಕರರು ಇಬ್ಬರಿಗೂ ಸಮಾನ ವೇತನ; ಗುತ್ತಿಗೆ ನೌಕರರಿಗೂ ಇಎಸ್‌ಐ, ವಿಮೆ, ಗ್ರ್ಯಾಚುಯಿಟಿ, ಹೆರಿಗೆ ರಜೆ ಮತ್ತು ಪಿಂಚಣಿ ನೀಡುವಿಕೆ; ಬೀಡಿ ಕಾರ್ಮಿಕರಿಗೆ ಅವರು ವರ್ಷಕ್ಕೆ 30 ದಿನ ಕೆಲಸ ಮಾಡಿದರೂ ಬೋನಸ್ ನೀಡುವಿಕೆ; ಎಂಎಸ್‌ಎಂಇ ವಲಯದಲ್ಲಿನ ಕಾರ್ಮಿಕರಿಗೆ ನೀಡಬೇಕಾಗಿ ಬರುವ ಸೌಲಭ್ಯಗಳು- ಈ ಎಲ್ಲ ಅಂಶಗಳು ಉದ್ಯಮಿಗಳ ಅತೃಪ್ತಿ ಮತ್ತು ಅಸಮಾಧಾನಗಳಿಗೆ ಕಾರಣವಾಗಿವೆ.

ಒಟ್ಟಾರೆ ಹೇಳುವುದಾದರೆ, ಚಿಂತಕರ ಮೂಸೆಯಿಂದ ಹೊರಹೊಮ್ಮಿದ ಭಾರಿ ಮಹತ್ವಾಕಾಂಕ್ಷಿ ಉಪಕ್ರಮ ಎಂದು ಬಣ್ಣಿಸಲ್ಪಡುತ್ತಿರುವ ನೂತನ ಕಾರ್ಮಿಕ ಸಂಹಿತೆಯು, ಮಾಲೀಕರು ಮತ್ತು ಕಾರ್ಮಿಕರು ಎರಡೂ ವಲಯಗಳ ನಿರೀಕ್ಷೆಯನ್ನು ಹುಸಿಗೊಳಿಸಿದೆ ಎನ್ನುವ ಅಭಿಪ್ರಾಯದಲ್ಲಿ ತೂಕ ಕಾಣುತ್ತಿದೆ. ಹೀಗಾಗಿ ಮುಂಬರುವ ದಿನಗಳಲ್ಲಿ ಭಾರಿ ಸಂಘರ್ಷ ಹುಟ್ಟಿಕೊಂಡರೆ ಅದರಲ್ಲೇನೂ ಅಚ್ಚರಿಯಿಲ್ಲ.

(ಲೇಖಕರು ಆರ್ಥಿಕ ಮತ್ತು ರಾಜಕೀಯ ವಿಶ್ಲೇಷಕರು)

ಸುದ್ದಿಗಿಷ್ಟು ಒಗ್ಗರಣೆ

ಯಗಟಿ ರಘು ನಾಡಿಗ್
naadigru@gmail.com

- ಪಶ್ಚಿಮ ಬಂಗಾಳದಲ್ಲಿ ಈವರೆಗೆ ನಡೆದ ಮತದಾನ ಪಟ್ಟಿಯ ಪರಿಷ್ಕರಣೆ ವೇಳೆ 21 ಲಕ್ಷಕ್ಕೂ ಅಧಿಕ ಮೃತರ ಹೆಸರು ಇರುವುದು ಪತ್ತೆಯಾಗಿದೆ: ಸುದ್ದಿ
– **''ಇದು Tip of the Iceberg ಕಣ್ರೀ. ಪರಿಷ್ಕರಣೆ ಸಂಪನ್ನಗೊಂಡ ನಂತರ ಈ ಸಂಖ್ಯೆ ಎಷ್ಟಕ್ಕೆ ಏರುತ್ತೆ ನೋಡ್ತಾ ಇರಿ..'' ಎನ್ನುತ್ತಾ 'ಕೇಶವಕೃಪಾ'ಪೋಷಿತರೊಬ್ಬರು ಶಂಕರಪುರಂನ 'Brahmins' Coffee Bar'ನಲ್ಲಿ ಶುಗರ್‌ಲೆಸ್ ಕಾಫಿಯನ್ನು ಮನದಣಿಯೆ ಚಪ್ಪರಿಸಿ ಕುಡಿದರಂತೆ!!**

- ಕೇರಳ ಮೂಲಸೌಕರ್ಯ ಹೂಡಿಕೆ ನಿಧಿ ಮಂಡಳಿಯ ಯೋಜನೆಯಲ್ಲಿ 466 ಕೋಟಿ ರುಪಾಯಿಯಷ್ಟು ಅವ್ಯವಹಾರದ ಆರೋಪ. ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರಿಗೆ ನೋಟಿಸ್ 'ಜಾರಿ' ಮಾಡಿದ 'ಜಾರಿ ನಿರ್ದೇಶನಾಲಯ': ಸುದ್ದಿ
– **ಹೀಗೆ ನೋಟಿಸ್‌ಗಳನ್ನು 'ಜಾರಿ' ಮಾಡುತ್ತಿರುವುದರಿಂದಲೇ ಅದಕ್ಕೆ 'ಜಾರಿ ನಿರ್ದೇಶನಾಲಯ' ಎಂಬ ಹೆಸರು ಬಂದಿದೆಯೇ ಅಥವಾ ಈ ನಾಮಕರಣಕ್ಕೆ ಬೇರೇನಾದರೂ ತಾರ್ಕಿಕ ಆಧಾರವಿದೆಯೇ? ಎಂಬುದು 'ಶಬ್ದಮೂಲ'ವನ್ನು ಕೆದಕುವಲ್ಲಿ ವ್ಯಸ್ತರಾಗಿರುವ ಚಿಗುರು ಪ್ರತಿಭೆಯೊಬ್ಬರ ಜಿಜ್ಞಾಸೆಯಂತೆ!**

- ಸಂಸತ್ತಿನ ಆವರಣಕ್ಕೆ ಬೀದಿನಾಯಿಯನ್ನು ಕರೆತಂದು ಮತ್ತೊಮ್ಮೆ ಸುದ್ದಿಗೆ ಗ್ರಾಸವಾದ ಕಾಂಗ್ರೆಸ್ ಸಂಸದೆ ರೇಣುಕಾ ಚೌಧರಿ: ಸುದ್ದಿ
– **ರೇಣುಕಾ ಚೌಧರಿ ಅವರಿಗೇನೋ ಪ್ರಚಾರ ಸಿಕ್ಕಿತು; ಆದರೆ ತನ್ನ 'ಐಡೆಂಟಿಟಿ' ಹೀಗೆ ಬಟಾಬಯಲಾಗಿದ್ದಕ್ಕೆ ಆ ಬೀದಿನಾಯಿ ಅದಿನ್ನೆಷ್ಟು ಬೇಜಾರು ಮಾಡಿಕೊಂಡು 'ಲೈಟ್‌ಕಂಬ'ಗಳನ್ನು ಹುಡುಕುತ್ತಿದ್ದಿರಬಹುದು?!!**

- ನಮ್ಮಲ್ಲಿ ಯಾವುದೇ ಗೊಂದಲವಿಲ್ಲ. ಸಿಎಂ ಹಾಗೂ ಡಿಸಿಎಂ ಒಟ್ಟಿಗೆ ಎಲ್ಲ ಕಾರ್ಯಗಳಲ್ಲೂ ಭಾಗಿಯಾಗುತ್ತಿದ್ದಾರೆ. ಎಲ್ಲ ಊಹಾಪೋಹಗಳಿಗೆ ಇತಿಶ್ರೀ ಹಾಡಿ ನಾವು ಮುಂದಕ್ಕೆ ಹೋಗುತ್ತಿದ್ದೇವೆ: ಸಚಿವ ದಿನೇಶ್ ಗುಂಡೂರಾವ್
– **ಕಣ್ತಪ್ಪಿನಿಂದಾಗಿ ಈ ನಗೆಹನಿಯು 'ಒಗ್ಗರಣೆ' ವಿಭಾಗದಲ್ಲಿ ಪ್ರಕಟವಾಗಿದ್ದಕ್ಕೆ ವಿಷಾದಿಸುತ್ತೇವೆ!**

- ಮಹಾರಾಷ್ಟ್ರದಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸಂಬಂಧಿಸಿದಂತೆ ಮೈತ್ರಿಕೂಟದ ಪಕ್ಷಗಳ ನಡುವಿನ 'ನೀನಾ-ನಾನಾ' ಸ್ವರೂಪದ ಜಗಳ ತೀವ್ರ. ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರೊಂದಿಗಿನ ಸಂಘರ್ಷವನ್ನು ಒಪ್ಪಿಕೊಂಡ ಉಪಮುಖ್ಯಮಂತ್ರಿ ಏಕನಾಥ್ ಶಿಂಧೆ: ಸುದ್ದಿ
– **ಈ ಥರದ ಸಂಘರ್ಷಗಳು ಅದ್ಯಾಕೆ 'ಅತ್ತೆ-ಸೊಸೆ' ಜಗಳಕ್ಕಿಂತ ತೀವ್ರವಾಗ್ತಿವೆ ಅಂತಲೇ ಗೊತ್ತಾಗ್ತಿಲ್ಲ ಕಣ್ರೀ. ಹಿಂದೆ ರಾಜಸ್ಥಾನದಲ್ಲಿ ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್ ಮತ್ತು ಉಪಮುಖ್ಯಮಂತ್ರಿ ಸಚಿನ್ ಪೈಲಟ್ ನಡುವೆಯೂ ಹೀಗೆ ಕಿತ್ತಾಟ ನಡೆದಿತ್ತು. ಈಗ ಮಹಾರಾಷ್ಟ್ರದಲ್ಲಿ ದೇವೇಂದ್ರ ಫಡ್ನವೀಸ್ ಮತ್ತು ಏಕನಾಥ್ ಶಿಂಧೆ ನಡುವೆ. ಇಷ್ಟು ಸಾಲದೆಂಬಂತೆ ನಮ್ಮಲ್ಲಿ.... ಊಂ.. ಹೋಗ್ಲಿಬಿಡಿ! ನಮಗ್ಯಾಕೆ ಊರ ಉಸಾಬರಿ!!**

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:322

ಸಮಾಚಾರ ಸಣ್ಣದಲ್ಲ

ಇಮ್ರಾನ್ ಜೀವಂತ

ರಾವಲ್ಪಿಂಡಿ: ಪಾಕಿಸ್ತಾನದ ಮಾಜಿ ಪ್ರಧಾನಿ, 'ಪಿಟಿಐ' ಪಕ್ಷದ ಸಂಸ್ಥಾಪಕ ಅಧ್ಯಕ್ಷ, ಖ್ಯಾತ ಕ್ರಿಕೆಟಿಗ ಇಮ್ರಾನ್ ಖಾನ್ ಜೀವಂತ ಇದ್ದಾರೆ ಎಂಬುದನ್ನು ಅವರನ್ನು ಅದಿಯಾಲ ಸೆರೆಮನೆಯಲ್ಲಿ ಮಂಗಳವಾರ ಭೇಟಿ ಮಾಡಿದ ಸಹೋದರಿ ಉಜ್ಮಾ ಖಾನ್ ದೃಢಪಡಿಸಿದ್ದಾರೆ. ಆದರೆ, ನನ್ನ ಸೋದರ ಇಮ್ರಾನ್‌ನನ್ನು ಪೂರ್ಣ ಪ್ರತ್ಯೇಕವಾಗಿರುವ ಸೆಲ್‌ನಲ್ಲಿ ಒಬ್ಬಂಟಿಯಾಗಿ ಇರಿಸಲಾಗಿದೆ. ಜೈಲಿನಲ್ಲಿ ಇಮ್ರಾನ್ ಮೇಲೆ ಮಾನಸಿಕ ಒತ್ತಡ ಹಾಕಿ ಹಿಂಸಿಸಲಾಗುತ್ತಿದೆ. ಇಮ್ರಾನ್ ಜೀವಕ್ಕೇನಾದರೂ ಆದರೆ, ಪೂರ್ಣ ಹೊಣೆ ಸೇನಾಧಿಕಾರಿ ಅಸೀಮ್ ಮುನೀರ್‌ನದೇ ಆಗಿರುತ್ತದೆ ಎಂದು ಉಜ್ಮಾ ಕಣ್ಣೀರು ಹಾಕುತ್ತಾ ಮಾಧ್ಯಮಗಳೆದುರು ಹೇಳಿದ್ದಾರೆ.

ಮುಂಬೈನಲ್ಲಿ ಇಳಿದ ಕುವೈತ್ 'ಇಂಡಿಗೊ'

ಮುಂಬೈ: ಹೈದರಾಬಾದ್‌ನಿಂದ ಕುವೈತ್ ಗೆ ತೆರಳುತ್ತಿದ್ದ ಇಂಡಿಗೊ ವಿಮಾನ ಬಾಂಬ್ ಬೆದರಿಕೆ ಇಮೇಲ್ ಬಂದ ಹಿನ್ನೆಲೆ ಮಂಗಳವಾರ ಮುಂಬೈ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿಳಿದಿದೆ. ರಿಮೋಟ್ ಕಂಟ್ರೋಲ್ ನಿಯಂತ್ರಿತ ಸ್ಫೋಟಕ ಗಳನ್ನು ಬಳಸಿ ವಿಮಾನದ ಮೇಲೆ ದಾಳಿ ನಡೆಸಲು ಯೋಜಿಸಲಾಗಿದೆ ಎಂದು ಕಿಡಿಗೇಡಿಗಳು ರಾಜೀವ್ ಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬೆದರಿಕೆಯ ಇಮೇಲ್ ಕಳುಹಿಸಿದ್ದರು. ಅದಾಗಲೇ ಹಾರಾಟ ಆರಂಭಿಸಿದ್ದ ವಿಮಾನವನ್ನು ಮುಂಬೈನಲ್ಲಿ ಇಳಿಸಲು ಅಧಿಕಾರಿಗಳು ನಿರ್ಧರಿಸಿದರು. ವಿಮಾನ ಮುಂಬೈಯಲ್ಲಿ ಸುರಕ್ಷಿತವಾಗಿ ಇಳಿದಿದೆ. ಬಳಿಕ, ಪರಿಶೀಲನೆ ನಡೆಸಿದಾಗ ಸ್ಫೋಟಕಗಳು ಕಂಡುಬಂದಿಲ್ಲ. ಇಮೇಲ್ ಕಳುಹಿಸಿದವರ ಪತ್ತೆಗೆ ತನಿಖೆ ನಡೆಯುತ್ತಿದೆ ಎಂದು ವಿಮಾನ ನಿಲ್ದಾಣದಲ್ಲಿನ ಪೊಲೀಸರು ತಿಳಿಸಿದ್ದಾರೆ.

ದಿತ್ವಾ: ಚೆನ್ನೈಶಾಲೆಗೆ ರಜೆ

ಚೆನ್ನೈ: ದಿತ್ವಾ ಚಂಡಮಾರುತ ಕರಾವಳಿ ಭಾಗದ ಮೇಲೆ ಪ್ರಭಾವ ಬೀರಿದ್ದರಿಂದ ಚೆನ್ನೈ ಮತ್ತು ನೆರೆಹೊರೆ ಪ್ರದೇಶಗಳಲ್ಲಿ ಮಂಗಳವಾರವೂ ಭಾರೀ ಮಳೆಯಾಗಿದೆ. ಲಂಕಾ ತೀರವನ್ನು ದಾಟಿ ತಮಿಳುನಾಡಿನತ್ತ ಚಲಿಸಲಾರಂಭಿಸಿದ ಬಳಿಕ ದಿತ್ವಾ ವೇಗ ಇಳಿಮುಖವಾಗಿತ್ತು. ತಮಿಳುನಾಡಿನ ಕರಾವಳಿ ಭಾಗಕ್ಕೆ ತಿರುಗಿರುವ ದಿತ್ವಾ ಚಂಡಮಾರುತ ಚೆನ್ನೈಗೆ 30 ಕಿ.ಮೀ.ಗಳಷ್ಟು ಸಮೀಪದಲ್ಲಿದ್ದು, ಅಬ್ಬರಿಸುತ್ತಿದೆ. ಪರಿಣಾಮ ಚೆನ್ನೈ, ಕಾಂಚೀಪುರಂ, ಚೆಂಗಲ್ಪಟ್ಟು ಮತ್ತು ತಿರುವಳ್ಳೂರಿನಲ್ಲೂ ಭಾರೀ ಮಳೆಯಾಗಿದೆ. ದಿತ್ವಾ ಚಂಡಮಾರುತದ ಪ್ರಭಾವದ ಕಾರಣ ಮಂಗಳವಾರವೂ ಹೆಚ್ಚಿನ ಮಳೆಯಾಗುವ ಮುನ್ಸೂಚನೆ ಸಿಕ್ಕಿದ್ದರಿಂದ ಚೆನ್ನೈ, ಕಾಂಚೀಪುರಂ, ಚೆಂಗಲ್ಪಟ್ಟು ಮತ್ತು ತಿರುವಳ್ಳೂರು ಜಿಲ್ಲೆಗಳಲ್ಲಿನ ಶಾಲೆ-ಕಾಲೇಜುಗಳಿಗೆ ಮಂಗಳವಾರ ರಜೆ ಘೋಷಿಸಲಾಗಿತ್ತು. ಮದ್ರಾಸ್ ವಿವಿ ಮಂಗಳವಾರ ನಡೆಯಬೇಕಿದ್ದ ಸೆಮಿಸ್ಟರ್ ಪರೀಕ್ಷೆಗಳನ್ನು ರದ್ದುಗೊಳಿಸಿ, ಮುಂಬರುವ ದಿನಗಳಲ್ಲಿ ನಡೆಸುವುದಾಗಿ ಹೇಳಿದೆ.

ಶಬರಿಮಲೆ ಹುಂಡಿ 15 ದಿನಕ್ಕೆ ₹92 ಕೋ.

ತಿರುವನಂತಪುರಂ: ಕೇರಳ ರಾಜ್ಯದ ಶಬರಿಮಲೆಯಲ್ಲಿನ ಸ್ವಾಮಿ ಅಯ್ಯಪ್ಪ ದೇವರ ವಾರ್ಷಿಕ ಯಾತ್ರೆಯ ಮೊದಲ 15 ದಿನಕ್ಕೇ ಭಕ್ತರಿಂದ ಹುಂಡಿಗೆ 92 ಕೋಟಿ ರು. ಹರಿದುಬಂದಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ ದೇಗುಲಕ್ಕೆ 69 ಕೋಟಿ ರು. ದೇಣಿಗೆ ಬಂದಿತ್ತು. ಈ ಬಾರಿ ಶೇ.33ರಷ್ಟು ಹೆಚ್ಚಳವಾಗಿದೆ ಎಂದು ಶಬರಿಮಲೆ ದೇಗುಲ ಆಡಳಿತ ಮಂಡಳಿ ಮಂಗಳವಾರ ಮಾಹಿತಿ ನೀಡಿದೆ. ಅರವಣ ಮಾರಾಟದಿಂದಲೇ ಈ ಬಾರಿ 47 ಕೋಟಿ ರು. ಸಂಗ್ರಹವಾಗಿದೆ. ಕಳೆದ ಬಾರಿ ಅರವಣ ಮಾರಾಟದಿಂದ 32 ಕೋಟಿ ರು. ಸಂಗ್ರಹವಾಗಿತ್ತು. ಈ ವರ್ಷ ಯಾತ್ರೆ ಆರಂಭವಾದಾಗಿನಿಂದ ನ.30ರವರೆಗೆ 13 ಲಕ್ಷ ಭಕ್ತರು ಶಬರಿಮಲೆಗೆ ಭೇಟಿ ನೀಡಿದ್ದಾರೆ ಎಂದು ಮಂಡಳಿ ಹೇಳಿದೆ.

ಬಿಷ್ಣೋಯ್ ಸಹಚರ ಗ್ಯಾಂಗ್‌ವಾರ್‌ಗೆ ಬಲಿ

ಚಂಡೀಗಢ: ಚಂಡೀಗಢದ ಸೆಕ್ಟರ್ 26ರ ಟಿಂಬರ್ ಮಾರ್ಕೆಟ್ ಬಳಿ ಗ್ಯಾಂಗ್‌ಸ್ಟರ್ ಲಾರೆನ್ಸ್ ಬಿಷ್ಣೋಯ್‌ನ ಸಹಚರ ಇಂದ್ರಪ್ರೀತ್ ಸಿಂಗ್ ಅಲಿಯಾಸ್ ಪರಿರ್‌ನನ್ನು(35) ಗುಂಡಿಕ್ಕಿ ಕೊಲ್ಲಲಾಗಿದೆ. ಗ್ಯಾಂಗ್ ವಾರ್‌ನಲ್ಲಿ ಈ ಕೊಲೆ ನಡೆದಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ. ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ. ಪರಿರ್ ಸೋಮವಾರ ಸಂಜೆ ಎಸ್‌ಯುವಿ ಕಾರಿನಲ್ಲಿ ಖಾಸಗಿ ಕ್ಲಬ್‌ನಿಂದ ಹೊರಟಿದ್ದಾಗ ಜತೆಗಿದ್ದ ವ್ಯಕ್ತಿ ಗುಂಡು ಹಾರಿಸಿದ. ಬಳಿಕ ಕಾರಿನಿಂದ ಇಳಿದು ಮತ್ತೊಮ್ಮೆ ಪರಿರ್ ಮೇಲೆ 10 ಬಾರಿ ಗುಂಡಿನ ಮಳೆಗರೆದು ಪರಾರಿಯಾದ. ವಾಹನದೊಳಗೆ 5 ಖಾಲಿ ಕಾಡತೂಸು ಪತ್ತೆಯಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ. ಘಟನೆ ಬಳಿಕ ಹರಿ ಬಾಕ್ಸರ್ ಅರ್ಜೂ ಬಿಷ್ಣೋಯ್ ಎಂಬ ಫೇಸ್‌ಬುಕ್‌ನಲ್ಲಿ 'ಕೃತ್ಯ ನಡೆಸಿದ್ದು ನಾವೇ, ಪರಿರ್ ಸ್ಥಳೀಯ ಕ್ಲಬ್‌ಗಳಿಂದ ಹಣ ಸುಲಿಗೆ ಮಾಡಿದ್ದ, ನಮ್ಮ ಸಹಚರರ ಮೇಲೆ ದಾಳಿ ಮಾಡಲೆತ್ನಿಸಿದ್ದ' ಎಂಬ ಬರಹ ಪ್ರಕಟವಾಗಿದೆ.

{ **ಶಶಿತರೂರ್** } ಕಾಂಗ್ರೆಸ್ ಸಂಸದ

ಸಂಚಾರ್ ಸಾಥಿ ಮೊಬೈಲ್ ಆಪ್ ಅಳವಡಿಕೆ ಕಡ್ಡಾಯ ವಿಚಾರ ಬಗ್ಗೆ ನನಗೆ ವಿವರ ತಿಳಿದಿಲ್ಲ. ಯಾವುದೇ ಅಪ್ಲಿಕೇಶನ್ ಅಳವಡಿಕೆ ಸ್ವಯಂ ಪ್ರೇರಿತವಾದರೆ ಉಪಯುಕ್ತ. ಅಗತ್ಯವಿದ್ದವರು ಡೌನ್‌ಲೋಡ್ ಮಾಡಿಕೊಳ್ಳುತ್ತಾರೆ. ಪ್ರಜಾಪ್ರಭುತ್ವದಲ್ಲಿ ಯಾವುದನ್ನೇ ಆದರೂ ಕಡ್ಡಾಯಗೊಳಿಸುವುದು ತೊಂದರೆದಾಯಕ. ಸರಕಾರ ಮೊದಲು ಆಪ್ ಬಗ್ಗೆ ಜನರಿಗೆ ಅರ್ಥ ಮಾಡಿಸಬೇಕು.

22 ವರ್ಷಕ್ಕೇ ಕನ್ನಡಿಗನ ದೊಡ್ಡ ಸಾಧನೆ | ಮರೆಗೆ ಸರಿದ ಝುಕರ್‌ಬರ್ಗ್ ದಾಖಲೆ

ಆದರ್ಶ್ ಹಿರೇಮಠ ವಿಶ್ವದ ಅತಿ ಕಿರಿಯ ಶತಕೋಟ್ಯಾಧೀಶ

ಮರ್ಕರ್ ಕಂಪನಿ ಸಿಟಿಒ ಆದರ್ಶ್ ಹಿರೇಮಠ

ಮರ್ಕರ್ ಕಂಪನಿ ಅಧ್ಯಕ್ಷ ಸೂರ್ಯ ಮಿಧಾ, 'ಸಿಇಒ' ಬ್ರೆಂಡನ್ ಫೂಡಿ.

ಕ್ಯಾಲಿಫೋರ್ನಿಯ: ಕೃತಕ ಬುದ್ಧಿಮತ್ತೆಯನ್ನು (ಎ.ಐ) ಆಧರಿಸಿದ ಸೇವೆಗಳನ್ನು ಒದಗಿಸುವ 'ಮರ್ಕರ್' ಹೆಸರಿನ ಕಂಪನಿಯನ್ನು ಅಮೆರಿಕದಲ್ಲಿ ಆರಂಭಿಸಿರುವ(ಕಂಪನಿ ಸಹ-ಸಂಸ್ಥಾಪಕ) ಆದರ್ಶ್ ಹಿರೇಮಠ ವಿಶ್ವದಲ್ಲೇ ಅತಿ ಕಿರಿಯ ವಯಸ್ಸಿನ 'ಸೆಲ್ಫ್ ಮೇಡ್ ಬಿಲಿಯನೇರ್'(ಸ್ವಂತ ಸಾಮರ್ಥ್ಯದ ಶತಕೋಟ್ಯಾಧಿಪತಿ) ಎನಿಸಿಕೊಂಡಿದ್ದಾರೆ.

'ಮರ್ಕರ್' ಕಂಪನಿಯ ಮೂವರು ಸಂಸ್ಥಾಪಕರಲ್ಲಿ 22 ವರ್ಷದ ಹಿರೇಮಠ ಕೂಡಾ ಸೇರಿದ್ದಾರೆ. ಮೂವರು ಸಹ ಸಂಸ್ಥಾಪಕರು ಸಮಾನ ವಯಸ್ಕರೇ ಆಗಿದ್ದರೂ ಆದರ್ಶ್ ಅತಿ ಕಿರಿಯ ಎನಿಸಿಕೊಂಡಿದ್ದಾರೆ. ಮೂವರೂ ಶಾಲಾ ದಿನಗಳಿಂದಲೇ ಗೆಳೆಯರಾಗಿದ್ದಾರೆ. ಸಮಾನ ವಯಸ್ಕ-ಮನಸ್ಕರೂ ಆಗಿರುವ ಆದರ್ಶ್ ಹಿರೇಮಠ ಮತ್ತು ಸೂರ್ಯ ಮಿಧ ಮತ್ತು ಬ್ರೆಂಡಾನ್ ಫೂಡಿ ಈಗ ವಿಶ್ವದ ಅತ್ಯಂತ ಕಿರಿಯ ಸೆಲ್ಫ್‌ಮೇಡ್ ಬಿಲಿಯನೇರ್ ದಾಖಲೆ ಬರೆದಿದ್ದಾರೆ.

ಫೇಸ್‌ಬುಕ್ ಸಂಸ್ಥಾಪಕ ಮಾರ್ಕ್ ಝುಕರ್ಬರ್ಗ್ 2008ರಲ್ಲಿ 23ನೇ ವಯಸ್ಸಿನಲ್ಲಿ ಶತಕೋಟಿ ಡಾಲರ್ ಸಂಪಾದಿಸಿ ಅತ್ಯಂತ ಕಿರಿಯ ಬಿಲಿಯನೇರ್ ಎನಿಸಿಕೊಂಡಿದ್ದರು. ಈವರೆಗೂ ಅದೇ ದಾಖಲೆ ಉಳಿದುಕೊಂಡಿತ್ತು. ಈಗ ಆದರ್ಶ್ ಹಿರೇಮಠ್ ಮತ್ತು ಮರ್ಕರ್ ಸಹ ಸಂಸ್ಥಾಪಕ ಮಿತ್ರರು ಆ ದಾಖಲೆ ಮುರಿದಿದ್ದಾರೆ.

22-23ರ ವಯೋಮಾನದಲ್ಲಿರುವ ಮೂವರೂ ಬಾಲ್ಯ ಸ್ನೇಹಿತರು 'ಯಂಗೆಸ್ಟ್ ಬಿಲಿಯನೇರ್ಸ್' ಪಟ್ಟ ಗಿಟ್ಟಿಸಿಕೊಂಡು ದಾಖಲೆ ಬರೆದಿದ್ದಾರೆ. ಆದರ್ಶ್ ಹಿರೇಮಠ್ ಕರ್ನಾಟಕ ಮೂಲದವರು. ಸೂರ್ಯ ಮಿಧಾ ಭಾರತ ಮೂಲದ ಕುಟುಂಬದವರು. ಫೂಡಿ ಅಮೆರಿಕ ಪ್ರಜೆ. ಕ್ಯಾಲಿಫೋರ್ನಿಯದ ಸಿಲಿಕಾನ್ ವ್ಯಾಲಿಯಲ್ಲಿನ ಪ್ರತಿಷ್ಠಿತ 'ಬೇ ಏರಿಯಾ'ದಲ್ಲಿ ಬೆಳೆದ ಮೂವರು ಗೆಳೆಯರು. ಶಾಲೆಯಲ್ಲಿ ಡಿಬೇಟ್ ಕಾರ್ಯಕ್ರಮದಲ್ಲಿ ಬಹಳ ಆತ್ಮೀಯರಾಗಿದ್ದು, ಸ್ನೇಹವನ್ನು ಉದ್ಯಮ ಸ್ಥಾಪನೆವರೆಗೂ ಮುಂದುವರಿಸಿದ್ದಾರೆ.

ಉದಯೋನ್ಮುಖ ಪ್ರತಿಭೆಗಳನ್ನು ಉತ್ತೇಜಿಸಲು ನೀಡುವ 'ಥಿಯೆಲ್ ಫೆಲೋಶಿಪ್'ಗೆ ಮೂವರು ಸ್ನೇಹಿತರು ಆಯ್ಕೆಯಾದರು. ಈ 'ಲೋಶಿಪ್ ಸಿಕ್ಕ ಬಳಿಕ ಮೂವರೂ ಸ್ನೇಹಿತರು ಕಾಲೇಜು ಓದು ಬಿಟ್ಟು ಫೆಲೋಶಿಪ್ ಹಣದಿಂದ 2023ರಲ್ಲಿ 'ಸ್ಟಾರ್ಟಪ್' ಕಂಪನಿ 'ಮರ್ಕರ್' ಆರಂಭಿಸಿದರು. ಮೊದಲಿಗೆ ಅಮೆರಿಕನ್ ಕಂಪನಿಗಳಿಗೆ ಭಾರತದಿಂದ ಫ್ರೀಲ್ಯಾನ್ಸ್ ಕೋಡರ್‌ಗಳನ್ನು ರೆಫರ್ ಮಾಡುವ ವೇದಿಕೆ ಸೃಷ್ಟಿಸಿದರು. ಭಾರತದಲ್ಲಿನ ಉದ್ಯೋಗಿಗಳು-ಅಮೆರಿಕದ ಕಂಪನಿಗಳ ನಡುವೆ ಕೊಂಡಿಯಾದರು. ಅದಕ್ಕಾಗಿ 'ಎಐ' ಚಾಲಿತ ಅಪ್ಲಿಕೇಶನ್ ಅಭಿವೃದ್ಧಿಪಡಿಸಿದರು. ಬಳಿಕ ಕಾರ್ಯಕ್ಷೇತ್ರ ವಿಸ್ತರಿಸುತ್ತಾ ಡಾಟಾ ಲೇಬಲಿಂಗ್ ಸಿಸ್ಟಂಗಳನ್ನು ಅಭಿವೃದ್ಧಿಪಡಿಸಿದರು.

ಮರ್ಕರ್‌ನಲ್ಲಿ ಸದ್ಯ ಸೂರ್ಯ ಮಿಧಾ 'ಬೋರ್ಡ್ ಛೇರ್ಮನ್' ಆಗಿದ್ದರೆ, ಬ್ರೆಂಡಾನ್ ಫೂಡಿ 'ಸಿಇಒ' ಮತ್ತು ಆದರ್ಶ್ ಹಿರೇಮಠ್ 'ಸಿಟಿಒ' ಆಗಿದ್ದಾರೆ.

ಇಷ್ಟವಿದ್ದವರು ಬಳಸಲಿ, ಇಷ್ಟ ಇಲ್ಲದವರು ಡಿಲಿಟ್ ಮಾಡಲಿ | ದೂರಸಂಪರ್ಕ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಸ್ಪಷ್ಟನುಡಿ

ಸಂಚಾರ್ ಸಾಥಿ ಅಳವಡಿಕೆ ಕಂಪನಿಗೆ ಕಡ್ಡಾಯ, ಬಳಕೆ ಐಚ್ಛಿಕ

ದೆಹಲಿ: ಭಾರತದಲ್ಲಿ ಮಾರಾಟವಾಗುವ ಎಲ್ಲಾ ಹೊಸ ಮೊಬೈಲ್ ಫೋನ್‌ಗಳಲ್ಲಿ ಕೇಂದ್ರ ಸರಕಾರದಿಂದ ಅಭಿವೃದ್ಧಿ ಪಡಿಸಲಾಗಿರುವ 'ಸಂಚಾರ್ ಸಾಥಿ' ಅಪ್ಲಿಕೇಶನ್ ಅನ್ನು ತಯಾರಿಕೆ ವೇಳೆಯೇ ಅಳವಡಿಸುವುದು ಕಡ್ಡಾಯ ಎಂದು ದೂರಸಂಪರ್ಕ ಇಲಾಖೆ ಸ್ಮಾರ್ಟ್‌ಫೋನ್ ತಯಾರಕ ಕಂಪನಿಗಳಿಗೆ ಸೂಚನೆ ನೀಡಿದೆ. ಈ ವಿಚಾರ ವಿವಾದವಾಗಿ ಬದಲಾದ ಹಿನ್ನೆಲೆಯಲ್ಲಿ ಕೇಂದ್ರ ದೂರ ಸಂಪರ್ಕ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಮಂಗಳವಾರ ಸ್ಪಷ್ಟನೆ ನೀಡಿದ್ದಾರೆ.

ಸಂಚಾರ್ ಸಾಥಿ ಆ್ಯಪ್ ಫೋನ್‌ನಲ್ಲಿ ಇರುವುದನ್ನು ಬಯಸದೇ ಇರುವ ಗ್ರಾಹಕರು ಅದನ್ನು ಡಿಲಿಟ್ ಮಾಡಬಹುದಾಗಿದೆ. ಸಂಚಾರ್ ಸಾಥಿ ಅಪ್ಲಿಕೇಷನ್ ಬಳಕೆ ಗ್ರಾಹಕರ ಆಯ್ಕೆಗೆ ಬಿಟ್ಟ ವಿಚಾರ ಎಂದು ಸಚಿವ ಸಿಂಧಿಯಾ ಸ್ಪಷ್ಟಪಡಿಸಿದ್ದಾರೆ.

ಮೊಬೈಲ್ ಫೋನ್ ಕಳವಾದಾಗ ಅಥವಾ ಕಾಣೆಯಾದಾಗ ಅದನ್ನು ಹುಡುಕಲು ಸಂಚಾರ್ ಸಾಥಿ ಅಪ್ಲಿಕೇಶನ್ ಬಹಳವಾಗಿ ನೆರವಾಗುತ್ತದೆ. ಅಲ್ಲದೇ, ದೇಶದಲ್ಲಿ ಹೆಚ್ಚುತ್ತಿರುವ ಸೈಬರ್ ವಂಚನೆಯನ್ನು ತಡೆಯಲೂ ಅವಕಾಶ ಮಾಡಿಕೊಡುತ್ತದೆ. ಸ್ಪಾಮ್ ಕರೆಗಳು, ಸೈಬರ್ ವಂಚಕರ ಕರೆಗಳನ್ನು ಆರಂಭದಲ್ಲಿಯೇ ತಡೆಗಟ್ಟುತ್ತದೆ. ಹಾಗಾಗಿಯೇ ಸರಕಾರ ಪ್ರಯೋಜನಕಾರಿಯಾದ ಈ ಅಪ್ಲಿಕೇಷನ್ ಅನ್ನು ಎಲ್ಲ ಮೊಬೈಲ್ ಬಳಕೆದಾರರಿಗೂ ಪರಿಚಯಿಸಲು ಇಚ್ಛಿಸಿದೆ. ಇದು ಸರಕಾರದ ಕರ್ತವ್ಯವೂ ಆಗಿದೆ. ಹಾಗಾಗಿಯೇ ಮೊಬೈಲ್ ಫೋನ್ ತಯಾರಕ ಕಂಪನಿಗಳಿಗೆ ಸೂಚನೆ ನೀಡಲಾಗಿದೆ ಎಂದು ಟೆಲಿಕಾಂ ಸಚಿವಾಲಯ ತಿಳಿಸಿದೆ.

ಸಂಚಾರ್ ಸಾಥಿ ಆ್ಯಪ್ ಮೊಬೈಲ್ ಫೋನ್‌ನಲ್ಲಿದ್ದರೆ ಮೊಬೈಲ್ ಕಳುವಾದಾಗ ತಕ್ಷಣವೇ ಅದರಲ್ಲಿರುವ ಮಹತ್ವದ ಮಾಹಿತಿಗಳು, ಬ್ಯಾಂಕ್ ಖಾತೆ ವಿವರಗಳು ಸೋರಿಕೆ ಆಗದಂತೆ ತಡೆಯಲು ತಕ್ಷಣವೇ ಮೊಬೈಲ್ ಫೋನನ್ನು ಬ್ಲಾಕ್ ಮಾಡಬಹುದಾಗಿದೆ. ಅಲ್ಲದೇ ಕಳವಾದ ಫೋನ್ ದೇಶದ ಬೇರೆ ಕಡೆ ಬಳಕೆಯಾಗುತ್ತಿದ್ದರೆ ಎಲ್ಲಿ ಫೋನ್ ಸಕ್ರಿಯವಾಗಿದೆ ಎಂಬ ಮಾಹಿತಿ ಕಾನೂನು ಸಂಸ್ಥೆಗಳಿಗೆ ಸುಲಭವಾಗಿ ಲಭಿಸುತ್ತದೆ. ಆ ಮೂಲಕ ಸೈಬರ್ ಅಪರಾಧ ತಡೆಯಬಹುದಾಗಿದೆ, ನಕಲಿ 'ಐಇಎಂಐ' ಸಂಖ್ಯೆ ಬಳಸಿ ನಡೆಸುವ ಕೃತ್ಯವನ್ನು ತಡೆಗಟ್ಟಲೂ ಅನುಕೂಲವಾಗಲಿದೆ. ಹಾಗಾಗಿಯೇ ಕೇಂದ್ರ ಸರಕಾರ ಪ್ರತಿಯೊಂದು ಮೊಬೈಲ್ ಫೋನ್‌ನಲ್ಲಿಯೂ ಈ ಸುರಕ್ಷಣಾ ಆ್ಯಪ್ ಅಳವಡಿಕೆ ಆಗಲಿ ಎಂದು ಬಯಸಿದೆ. ಅದಕ್ಕಾಗಿಯೇ ತಯಾರಿಕಾ ಹಂತದಲ್ಲೇ ಆಪ್ ಇನ್ಸ್ಟಾಲ್ ಮಾಡಲು ಕಡ್ಡಾಯ ಮಾಡಲಾಗಿದೆ ಎಂದು ಸಚಿವಾಲಯದ ಮೂಲಗಳು ತಿಳಿಸಿವೆ.

ಈ ಸಂಬಂಧ ದೂರಸಂಪರ್ಕ ಇಲಾಖೆಯ ಹೊಸ ನಿರ್ದೇಶನಗಳನ್ನು ನೀಡಿದ್ದು, ಅದು ನ.28ರಿಂದ ಜಾರಿಗೊಂಡಿದೆ. ವಿದೇಶಿ ಮೂಲದ ಮೊಬೈಲ್ ಹ್ಯಾಂಡ್‌ಸೆಟ್ ತಯಾರಿಕಾ ಕಂಪನಿಗಳಾದ ಆಪಲ್, ಸ್ಯಾಮ್‌ಸಂಗ್, ಗೂಗಲ್, ವಿವೋ, ಒಪ್ಪೊ ಮತ್ತು ಶಿಯೋಮಿ ಮೊದಲಾದ ಕಂಪನಿಗಳೂ ಭಾರತದಲ್ಲಿ ತಯಾರಿಸುವ ಮೊಬೈಲ್ ಹ್ಯಾಂಡ್‌ಸೆಟ್‌ಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುವುದಕ್ಕೂ ಮೊದಲೇ ಸಂಚಾರ್ ಸಾಥಿ ಆಪ್ ಅಳವಡಿಸಬೇಕಿದೆ. ಎಲ್ಲಾ ಬಗೆಯ ಮೊಬೈಲ್ ಹ್ಯಾಂಡ್‌ಸೆಟ್ ತಯಾರಕರು ಮತ್ತು ಆಮದುದಾರರು ಭಾರತದಲ್ಲಿ ಬಳಕೆಯಾಗುವ ಎಲೆಕ್ಟ್ರಾನಿಕ್ ಸಾಧನಗಳಲ್ಲಿ ಸರಕಾರಿ ಸ್ವಾಮ್ಯದ ಸೈಬರ್ ಭದ್ರತಾ ಅಪ್ಲಿಕೇಶನ್ ಅಳವಡಿಸಲು ಸೂಚಿಸಲಾಗಿದೆ. ಈ ಆದೇಶವನ್ನು ಕಾರ್ಯಗತಗೊಳಿಸಲು ಹ್ಯಾಂಡ್‌ಸೆಟ್ ತಯಾರಿಕಾ ಕಂಪನಿಗಳಿಗೆ 90 ದಿನಗಳು ಅವಕಾಶ ನೀಡಲಾಗಿದೆ. ಆ ಬಳಿಕ ಆದೇಶ ಜಾರಿಗೊಳಿಸಿರುವ ಬಗ್ಗೆ ವರದಿ ಸಲ್ಲಿಸಲು 120 ದಿನಗಳ ಗಡುವು ವಿಧಿಸಲಾಗಿದೆ.

- ಸೈಬರ್ ಅಪರಾಧ ತಡೆಗೆ, ಕಳವಾದ ಫೋನ್ ಶೋಧಕ್ಕೆ ಸಹಕಾರಿ
- ನಿರ್ಣಾಯಕ ಆಪ್: ದೂರಸಂಪರ್ಕ ಸಚಿವಾಲಯ ದೃಢೀಕರಣ
- ಆಪ್ ಅಳವಡಿಕೆ ಕಡ್ಡಾಯ ಸರ್ವಾಧಿಕಾರಿ ನಡೆ: ಕಾಂಗ್ರೆಸ್ ಟೀಕೆ

ಸಂಚಾರ್ ಸಾಥಿ ಆಪ್ ಸಾಧನೆ

- 2025 ಜ.17ಕ್ಕೆ ಮಾರುಕಟ್ಟೆಗೆ ಬಿಡುಗಡೆ
- 6 ತಿಂಗಳಿಗೆಲ್ಲಾ ಡೌನ್‌ಲೋಡ್ 50 ಲಕ್ಷ
- 11 ತಿಂಗಳಿಗೆ ಡೌನ್‌ಲೋಡ್ 1.10 ಕೋಟಿ
- ಕಳವು ಫೋನ್ ದುರ್ಬಳಕೆ ತಡೆ 37.28 ಲಕ್ಷ
- ಕಳವಾಗಿದ್ದ ಫೋನ್‌ಗಳ ಪತ್ತೆ 22.76 ಲಕ್ಷ
- ಅಕ್ರಮ ಫೋನ್ ಸಂಪರ್ಕ ಕಡಿತ 3 ಕೋಟಿ
- ಅಕ್ರಮ ಫೋನ್ ಬ್ಲಾಕ್ ಸಂಖ್ಯೆ 3.19 ಲಕ್ಷ
- ನಕಲಿ ವಾಟ್ಸಾಪ್ ನಿಷ್ಕ್ರಿಯ ಸಂಖ್ಯೆ 17 ಲಕ್ಷ
- ಸಗಟು ಮೆಸೇಜ್ ರವಾನೆ ಫೋನ್ ನಿಷ್ಕ್ರಿಯ 20000

ಸಂಚಾರ್ ಸಾಥಿ ಆಪ್ ಪ್ರಯೋಜನ

ಕೇಂದ್ರ ಸರಕಾರದ ದೂರಸಂಪರ್ಕ ಸಚಿವಾಲಯದಿಂದಲೇ ಅಭಿವೃದ್ಧಿಪಡಿಸಲಾಗಿರುವ ಸಂಚಾರ್ ಸಾಥಿ ಆಪ್ ಮೊಬೈಲ್ ಫೋನ್‌ನಲ್ಲಿ ಅಳವಡಿಸಿಕೊಂಡಿದ್ದರೆ ವಂಚಕ ಕರೆಗಳನ್ನು ತಪ್ಪಿಸಬಹುದಾಗಿದೆ. ವಂಚಕ ಕರೆ, ಎಸ್‌ಎಂಎಸ್, ವಾಟ್ಸಾಪ್, ವಂಚಕ ಲಿಂಕ್‌ಗಳ ಬಗ್ಗೆ ಇಲಾಖೆಗೆ ತಕ್ಷಣವೇ ಸುಲಭವಾಗಿ ದೂರ ನೀಡಬಹುದಾಗಿದೆ. ತಮ್ಮದೇ ಹೆಸರು, ಗುರುತು ಬಳಸಿಕೊಂಡು ಬೇರೆ ಯಾರಾದರೂ 'ಸಿಮ್' ಖರೀದಿಸಿ ಅಕ್ರಮ ನಡೆಸುತ್ತಿದ್ದರೆ ಪತ್ತೆ ಮಾಡಬಹುದಾಗಿದೆ. ಮಾರುಕಟ್ಟೆಯಲ್ಲಿ ಖರೀದಿಸಿದ ಮೊಬೈಲ್ ಫೋನ್ ಹ್ಯಾಂಡ್‌ಸೆಟ್‌ನ (ಐಎಂಇಐ) ಅಸಲಿತನವನ್ನು ಸುಲಭವಾಗಿ ಪರಿಶೀಲಿಸಬಹುದು. ಐಎಂಇಐ ನಕಲಿ ಅಥವಾ ಪರಿವರ್ತನೆ ಮಾಡಿರುವುದಾಗಿದ್ದರೂ ತಿಳಿಯಬಹುದಾಗಿದೆ.

ಹೆಚ್ಚುತ್ತಿರುವ ಸೈಬರ್ ಅಪರಾಧ

ತಂತ್ರಜ್ಞಾನ ಅಭಿವೃದ್ಧಿ ಆದಂತೆಲ್ಲಾ ಸೈಬರ್ ಅಪರಾಧಗಳ ಸಂಖ್ಯೆಯೂ ಹೆಚ್ಚುತ್ತಿದೆ. ಇದು ಸರಕಾರಕ್ಕೂ ತಲೆನೋವಾಗಿದೆ. 'ಇಂಡಿಯನ್ ಕಂಪ್ಯೂಟರ್ ಎಮರ್ಜೆನ್ಸಿ ರೆಸ್ಪಾನ್ಸ್ ಟೀಂ' (ಸಿಇಆರ್‌ಟಿ-ಇನ್) ಪ್ರಕಾರ 2023ರಲ್ಲಿ 15,92,917 ಸೈಬರ್ ಅಪರಾಧ ಪ್ರಕರಣಗಳನ್ನು ವರದಿಯಾಗಿದ್ದವು. 2024ರಲ್ಲಿ ಇದು 20,41,360ಕ್ಕೆ ಏರಿಕೆಯಾಯಿತು.



ಇತ್ತೀಚೆಗೆ ಹೆಚ್ಚು ಹೆಚ್ಚು ಸುದ್ದಿಯಾಗುತ್ತಿರುವ 'ಡಿಜಿಟಲ್ ಅರೆಸ್ಟ್' ಪ್ರಕರಣಗಳ ಸಂಖ್ಯೆಯೂ ಭಾರೀ ಆತಂಕಕ್ಕೆ ಕಾರಣವಾಗಿದೆ. 2024ರಲ್ಲಿ 1,23,672 ಡಿಜಿಟಲ್ ಅರೆಸ್ಟ್ ಪ್ರಕರಣಗಳು ಭಾರತದಲ್ಲಿ ನಡೆದಿವೆ. 2025ರಲ್ಲಿ ಮೊದಲ 2 ತಿಂಗಳಲ್ಲಿಯೇ ಡಿಜಿಟಲ್ ಅರೆಸ್ಟ್ ಪ್ರಕರಣಗಳ ಸಂಖ್ಯೆ 17,718ಕ್ಕೆ ಮುಟ್ಟಿತ್ತು.

ಕಾಂಗ್ರೆಸ್‌ನ ವಿರೋಧ: ಸರಕಾರದ ಸಮರ್ಥನೆ

'ಸಂಚಾರ್ ಸಾಥಿ' ಅಪ್ಲಿಕೇಷನ್ ಮೊಬೈಲ್ ಫೋನ್‌ಗಳಲ್ಲಿ ಅಳವಡಿಸು ವುದನ್ನು ಕಡ್ಡಾಯಗೊಳಿಸಿದ ಕೇಂದ್ರ ಸರಕಾರದ ಕ್ರಮವನ್ನು ಪ್ರತಿಪಕ್ಷವಾದ ಕಾಂಗ್ರೆಸ್ ತೀವ್ರವಾಗಿ ವಿರೋಧಿಸಿದೆ. ಮೊಬೈಲ್‌ಗಳಲ್ಲಿ 'ಸಂಚಾರ್ ಸಾಥಿ' ಆ್ಯಪ್ ಅಳವಡಿಕೆ ಕಡ್ಡಾಯ ಮಾಡಿರುವುದು ಭಾರತವನ್ನು ಸರ್ವಾಧಿ ಕಾರದ ರಾಷ್ಟ್ರವನ್ನಾಗಿಸುವ ಹುನ್ನಾರವಾಗಿದೆ ಎಂದು ಕೇಂದ್ರದ ಎನ್‌ಡಿಎ ಸರಕಾರದ ವಿರುದ್ಧ ವಯನಾಡು ಸಂಸದೆ, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ವಾದ್ರಾ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮೊಬೈಲ್ ಫೋನ್ ಬಳಕೆದಾರರನ್ನು ಸೈಬರ್ ವಂಚನೆ ಜಾಲದಲ್ಲಿ ಸಿಲುಕದಂತೆ ತಡೆಯುವುದಕ್ಕೆ ಮತ್ತು ಮೊಬೈಲ್ ಫೋನ್ ಕಳವಾದರೆ ಅದನ್ನು ಹುಡಕಲು ನೆರವಾಗುವಂತಹ ಅಪ್ಲಿಕೇಷನ್ ಅಳವಡಿಸುವ ಮೂಲಕ ಗ್ರಾಹಕರಿಗೆ ಅನುಕೂಲವಾಗುವಂತೆ ಮಾಡುವುದು ನಮ್ಮ ಕರ್ತವ್ಯ ಎಂದು ಹೇಳಿದ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ, ಸಂಚಾರ ಸಾಥಿ ಅಪ್ಲಿಕೇಶನ್ ಗ್ರಾಹಕರ ಗೌಪ್ಯತೆ ನಿಯಮಗಳನ್ನು ಉಲ್ಲಂಘಿಸುತ್ತದೆ ಎಂಬ ಪ್ರತಿಪಕ್ಷದ ಆರೋಪವನ್ನು ತಿರಸ್ಕರಿಸಿದರು. ಪ್ರತಿಪಕ್ಷಗಳಿಗೆ ಸರಕಾರವನ್ನು ವಿರೋಧಿಸಲು ಯಾವುದೇ ವಿಚಾರ ಇಲ್ಲದಿದ್ದಾಗ, ಜನರೆದುರು ತೆರೆದಿಡಲು ಯಾವುದೇ ಸಮಸ್ಯೆ ಇಲ್ಲದಿದ್ದಾಗ ಅವರಿಗೆ ಸಹಾಯ ಮಾಡಲು ನಮ್ಮಿಂದ ಸಾಧ್ಯವಿಲ್ಲ ಎಂದು ಸಚಿವ ಸಿಂಧಿಯಾ ಅವರು ಪ್ರಿಯಾಂಕಾ ಆರೋಪಗಳಿಗೆ ವ್ಯಂಗ್ಯವಾಗಿ ಪ್ರತಿಕ್ರಿಯಿಸಿದರು.

ಸಂಚಾರ್ ಸಾಥಿ 1.15 ಕೋಟಿ ಡೌನ್‌ಲೋಡ್

ಸೈಬರ್ ಅಪರಾಧ ತಡೆಗೆ ಮತ್ತು ಮೊಬೈಲ್ ಕಳವಾದಾಗ ಶೋಧಕ್ಕೆ ಹಾಗೂ ಮೊಬೈಲ್‌ನಲ್ಲಿರುವ ಬ್ಯಾಂಕ್ ಖಾತೆ ವಿವರ ಮತ್ತಿತರ ಮಹತ್ವದ ಮಾಹಿತಿಗಳು ಸೋರಿಕೆ ಆಗುವುದನ್ನು ತಡೆಯುವ ವಿಚಾರದಲ್ಲಿ 'ಸಂಚಾರ ಸಾಥಿ' ಆ್ಯಪ್ ನಿರ್ಣಾಯಕವಾದ ಭದ್ರತಾ ಸಾಧನವಾಗಿದೆ. ಹಾಗಾಗಿಯೆ ಪ್ರಸ್ತುತ ಮೊಬೈಲ್ ಫೋನ್ ಬಳಕೆ ಮಾಡುತ್ತಿರುವವರಿಂದ ಸಂಚಾರ್ ಸಾಥಿ ಅಪ್ಲಿಕೇಷನ್ ಈವರೆಗೆ 20 ಕೋಟಿಗೂ ಹೆಚ್ಚು ವೀಕ್ಷಣೆ ಪಡೆದಿದೆ. ಅಪ್ಲಿಕೇಶನ್ 1.15 ಕೋಟಿಗೂ ಹೆಚ್ಚು ನೋಂದಣಿಗಳನ್ನು ಪಡೆದಿದೆ. ಈ ಅಂಕಿ ಅಂಶವನ್ನು ಅಧಿಕೃತ ವೆಬ್‌ಪೋರ್ಟಲ್‌ನಲ್ಲಿ ಕಾಣಬಹುದಾಗಿದೆ ಎಂದು ಕೇಂದ್ರ ದೂರ ಸಂಪರ್ಕ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಹೇಳಿದ್ದಾರೆ.
ಗೂಗಲ್ ಪ್ಲೇಸ್ಟೋರ್‌ನಿಂದಲೇ ಸಂಚಾರ್ ಸಾಥಿ ಆಫ್ 1.10 ಕೋಟಿಗೂ ಹೆಚ್ಚು ಬಾರಿ ಡೌನ್‌ಲೋಡ್ ಆಗಿದೆ. ಆಪಲ್ ಸ್ಟೋರ್‌ನಿಂದ 9.50 ಲಕ್ಷಕ್ಕೂ ಹೆಚ್ಚು ಬಾರಿ ಡೌನ್‌ಲೋಡ್ ಆಗಿದೆ. ಕಳವಾಗಿರುವ ಮೊಬೈಲ್ ಫೋನ್‌ಗಳಲ್ಲಿ 22.76 ಲಕ್ಷಕ್ಕೂ ಅಧಿಕ ಮೊಬೆಲ್ ಫೋನ್‌ಗಳನ್ನು ಪತ್ತೆ ಹಚ್ಚಲು ಸಂಚಾರ್ ಸಾಥಿ ಆಪ್ ನೆರವಿನಿಂದಾಗಿ ಸಾಧ್ಯವಾಗಿದೆ. ಇವುಗಳಲ್ಲಿ 7.50 ಲಕ್ಷ ಮೊಬೈಲ್ ಫೋನ್‌ಗಳನ್ನು ಮೂಲ ಮಾಲೀಕರಿಗೆ ಹಿಂತಿರುಗಿಸಲಾಗಿದೆ. ಅಲ್ಲದೇ, 37.28 ಲಕ್ಷ ಮೊಬೈಲ್ ಫೋನ್‌ಗಳನ್ನು ಕಳ್ಳರು ದುರ್ಬಳಕೆ ಮಾಡಿಕೊಳ್ಳಲು ಅವಕಾಶವಾಗದಂತೆ ತಕ್ಷಣವೇ ಬ್ಲಾಕ್ ಮಾಡಲಾಗಿದೆ. ಇದೆಲ್ಲವೂ ಸಂಚಾರ್ ಸಾಥಿ ಆಪ್‌ನಿಂದಾಗಿ ಸಾಧ್ಯವಾಗಿದೆ ಎಂದು ಸಚಿವರು ವಿವರ ನೀಡಿದರು.ಸಂಚಾರ್ ಸಾಥಿ ಅಪ್ಲಿಕೇಷನ್ 2025ರ ಜನವರಿ 17ರಂದು ಮಾರುಕಟ್ಟೆಗೆ ಬಿಡುಗಡೆಯಾಗಿದ್ದು, ನಂತರದ 6 ತಿಂಗಳಿಗೆಲ್ಲಾ 50 ಲಕ್ಷ ಬಾರಿ ಡೌನ್‌ಲೋಡ್ ಆಗಿತ್ತು. ಡಿಸೆಂಬರ್ ವೇಳೆಗೆ ಡೌನ್‌ಲೋಡ್ ಪ್ರಮಾಣ ಹೆಚ್ಚಾಗಿದ್ದು, ಒಟ್ಟು ಸಂಖ್ಯೆ ಕೋಟಿಯನ್ನೂ ದಾಟಿದೆ ಎಂಬ ಅಂಕಿ ಅಂಶ 'ಎ.ಐ' ಮೂಲದ ಜಾಲತಾಣದಲ್ಲಿದೆ.

ರೊಹಿಂಗ್ಯಾ ಪರ ಪಿಐಎಲ್ ಸಲ್ಲಿಸಿದವರಿಗೆ ಸುಪ್ರೀಂ ಪ್ರಶ್ನೆ

ಭಾರತೀಯರ ಹಿತ ಬಲಿಕೊಟ್ಟು ಸೌಲಭ್ಯ ಬಳಕೆಗೆ ನುಸುಳುಕೋರರಿಗೆ ಅವಕಾಶವೇ?

ದೆಹಲಿ: ಭಾರತದೊಳಕ್ಕೆ ಕಳ್ಳಮಾರ್ಗದಲ್ಲಿ ನುಸುಳಿಕೊಂಡು ಬಂದವರಿಗೆ, ಅಕ್ರಮ ವಲಸೆಗಾರರಿಗೆ ದೇಶದ ಸಂಪನ್ಮೂಲಗಳನ್ನು ಬಳಸಿಕೊಳ್ಳಲು ಅವಕಾಶ ಮಾಡಿಕೊಡುವುದು ಅದೆಷ್ಟು ಸರಿ? ನುಸುಳುಕೋರರಿಗಾಗಿ ದೇಶದ ಕಾನೂನನ್ನು ಎಷ್ಟೆಲ್ಲಾ ವಿಸ್ತರಿಸುತ್ತಾ ಹೋಗಬೇಕು ಎಂದು ಸುಪ್ರೀಂ ಕೋರ್ಟ್ ಅರ್ಜಿದಾರರನ್ನೇ ಪ್ರಶ್ನೆ ಮಾಡಿದೆ.

ಈ ಹಿಂದೆ ಪೊಲೀಸರು ಬಂಧಿಸಿದ್ದ ಐವರು ರೋಹಿಂಗ್ಯಾಗಳು ಕಣ್ಮರೆ ಆಗಿದ್ದಾರೆ ಎಂದು ಸಲ್ಲಿಕೆಯಾಗಿದ್ದ ಹೇಬಿಯಸ್ ಕಾರ್ಪಸ್ ಅರ್ಜಿ ವಿಚಾರಣೆ ವೇಳೆ ಮುಖ್ಯನ್ಯಾಯಮೂರ್ತಿ ಸೂರ್ಯ ಕಾಂತ್ ಮತ್ತು ನ್ಯಾ.ಜೋಯ್ ಮಲ್ಯ ಬಾಗ್ಚಿ ಅವರ ದ್ವಿಸದಸ್ಯ ಪೀಠ, ಅರ್ಜಿ ಕಾಲ್ಪನಿಕ ಎನಿಸುತ್ತಿದೆ ಎಂದು ಹೇಳಿತು.

ಈಶಾನ್ಯ, ಪೂರ್ವ ಭಾರತದಲ್ಲಿನ ಗಡಿಭಾಗ ಬಹಳ ಸೂಕ್ಷ್ಮ. ಅದನ್ನು ದುರ್ಬಳಕೆ ಮಾಡಿಕೊಂಡು ದೇಶದೊಳಕ್ಕೆ ನುಸುಳಿಕೊಂಡು ಬರುವವರಿಗಾಗಿ ಭಾರತೀಯರ ಅಗತ್ಯಗಳನ್ನು ಬಲಿಕೊಡಬೇಕೆ? ಅಕ್ರಮ ವಲಸಿಗರಿಗೆ ದೇಶದ ಸಂಪನ್ಮೂಲ ಬಳಸಿಕೊಳ್ಳಲು ಅವಕಾಶ ಕೊಡಬೇಕೇ ಎಂದು ಪೀಠ ಪ್ರಶ್ನಿಸಿದೆ. ದೇಶದಲ್ಲಿ ಅಕ್ರಮ ನುಸುಳುಕೋರರ ವಿಚಾರದಲ್ಲಿ ಏನು ನಡೆಯುತ್ತಿದೆ ಎಂಬ ಅರಿವು ಪೀಠಕ್ಕಿದೆ. ನುಸುಳುಕೊರರು ಇಲ್ಲಿ ಉಚಿತ ಆಹಾರ, ಆಶ್ರಯ, ಮಕ್ಕಳಿಗೆ ಶಿಕ್ಷಣ ಸೌಲಭ್ಯಗಳನ್ನು ದಾರಾಳವಾಗಿ ಬಳಸಿಕೊಳ್ಳುತ್ತಿದ್ದಾರೆ. ದೇಶವಾಸಿಗಳ ಬಡ ಮಕ್ಕಳಿಗೆ ಸಿಗಬೇಕಾದ ಸೌಲಭ್ಯಗಳನ್ನು ನುಸುಳಿ ಬಂದವರು ಕಬಳಿಸುವುದು ಸರಿಯೇ? ಎಂದು ಪ್ರಶ್ನೆಗಳ ಸರಣಿಯನ್ನೇ ಮುಂದಿಟ್ಟಿತು.

ಹೀಗೆ ಅಕ್ರಮವಾಗಿ ಒಳ ನುಸುಳುವರನ್ನು ದೇಶದೊಳಗೆ ಇಟ್ಟುಕೊಳ್ಳುವ ಜವಾಬ್ದಾರಿ ನಮಗಿದೆಯೇ? ಎಂದು ಪ್ರಶ್ನೆ ಮಾಡಿದ ಪೀಠ, ಅರ್ಜಿಯ ಮುಂದಿನ ವಿಚಾರಣೆಯನ್ನು ಡಿ.16ಕ್ಕೆ ನಿಗದಿಪಡಿಸಿತು.

ಎಸ್‌ಜಿ ತಕರಾರು

ಅರ್ಜಿ ಸಲ್ಲಿಸಲು ಅರ್ಹತೆ ಇಲ್ಲದವರು ಹೇಬಿಯಸ್ ಕಾರ್ಪಸ್ ಸಲ್ಲಿಸಿದ್ದಾರೆ. ಅದನ್ನು ಪರಿಗಣಿಸಲು ಸಾಧ್ಯವೇ? ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ತಕರಾರು ಎತ್ತಿದರು. ಬರ್ಮಾ ಮೂಲದ ರೋಹಿಂಗ್ಯಾಗಳು ಬಾಂಗ್ಲಾದಿಂದ ನುಸುಳಿಕೊಂಡು ಬರುತ್ತಿದ್ದಾರೆ. ಅವರಿಗೆ ಸಂಬಂಧವೂ ಇಲ್ಲದ ವ್ಯಕ್ತಿ ಪಿಐಎಲ್ ಹಾಕಿದ್ದಾರೆ ಎಂದು ಮೆಹ್ತಾ ಅಚ್ಚರಿ ವ್ಯಕ್ತಪಡಿಸಿದರು.

ಕರ್ನಾಟಕ ಹೈ ತೀರ್ಪು | ಬೊಮನ್ ಇರಾನಿ-ಕ್ಲಾಸಿಕ್ ಲೆಜೆಂಡ್ಸ್‌ಗೆ ಹರ್ಷ

ಮೂಲ ಕಂಪನಿಗೆ ಮರಳಿದ 'ಯೆಜ್ಡಿ' ಟ್ರೇಡ್‌ಮಾರ್ಕ್

ದೆಹಲಿ: ಹಲವು ದಶಕಗಳ ಹಿಂದೆ ಜನಪ್ರಿಯ ಮೋಟಾರ್ ಬೈಕ್ ಎನಿಸಿಕೊಂಡಿದ್ದ 'ಯೆಜ್ಡಿ' ಟ್ರೇಡ್ ಮಾರ್ಕ್ ವಿವಾದ ಕಡೆಗೂ ಬಗೆಹರಿದಿದೆ. 'ಯೆಜ್ಡಿ' ಟ್ರೇಡ್‌ಮಾರ್ಕ್ ಮರಳಿ ಬೊಮನ್ ಇರಾನಿ ಅವರಿಗೇ ಸೇರಿಕೊಂಡಿದೆ. ಈ ಸಂಬಂಧ ಕರ್ನಾಟಕದ ಹೈಕೋರ್ಟ್ ನ.30ರಂದು ಮಹತ್ವದ ತೀರ್ಪು ನೀಡಿದೆ.

ಈ ತೀರ್ಪಿನಿಂದಾಗಿ 'ಯೆಜ್ಡಿ' ಟ್ರೇಡ್ ಮಾರ್ಕ್ ಮೇಲೆ ಐಡಿಯಲ್ ಜಾವಾ ಕಂಪನಿಗಾಗಲೀ, ಆ ಕಂಪನಿಯ ಲಿಕ್ವಿಡೇಟರ್‌ಗಳಿಗಾಗಲೀ ಯಾವುದೇ ಹಕ್ಕು, ಸ್ವಾಧೀನತೆ ಇರುವುದಿಲ್ಲ. ಹಾಗಾಗಿ, ಇನ್ನು ಮುಂದೆ ಬೊಮನ್ ಇರಾನಿ ಮತ್ತು ಕ್ಲಾಸಿಕ್ ಲೆಜೆಂಡ್ಸ್ 'ಯೆಜ್ಡಿ' ಟ್ರೇಡ್‌ಮಾರ್ಕ್ ಅನ್ನು ಇನ್ನು ಮುಂದೆ ಬಳಸಬಹುದಾಗಿದೆ. ಭವಿಷ್ಯದಲ್ಲಿ 'ಯೆಜ್ಡಿ' ಟ್ರೇಡ್‌ಮಾರ್ಕ್ ಆಧರಿಸಿ ಮೋಟಾರ್ ಬೈಕ್ ತಯಾರಿಕೆಗೆ ಬಂಡವಾಳ ಹೂಡಿಕೆಯನ್ನೂ ಮಾಡಬಹುದಾಗಿದೆ.

'ಯೆಜ್ಡಿ' ಟ್ರೇಡ್ ಮಾರ್ಕ್ ಅನ್ನು ಐಡಿಯಲ್ ಜಾವಾ ಕಂಪನಿ ಬಳಸುತ್ತಿಲ್ಲ, ನವೀಕರಿಸಿಯೂ ಇಲ್ಲ. ಹಾಗೆಯೇ ನಿಷ್ಕ್ರಿಯಗೊಳಿಸಿ ಕೈಬಿಟ್ಟಿದೆ ಎಂಬುದನ್ನೂ ಗಮನಿಸಿದ ಹೈಕೋರ್ಟ್ ಪೀಠ, ಒಂದು ಜನಪ್ರಿಯ ಬ್ರ್ಯಾಂಡ್‌ನೇಮ್ ಅನ್ನು ಹೀಗೆ ನಿಷ್ಕ್ರಿಯಗೊಳಿಸಿ ಕೈಬಿಡಲಾಗದು ಅಥವಾ ಹಾಗೆಯೇ ಸುಮ್ಮನೆ 'ಲಾಕ್' ಮಾಡಿ ಇರಿಸಲಾಗದು ಎಂದು ಅಭಿಪ್ರಾಯಪಟ್ಟಿದೆ. ಒಂದು ಕಾಲದಲ್ಲಿ ಬಲು ಜನಪ್ರಿಯವಾಗಿದ್ದ ಬ್ರ್ಯಾಂಡ್‌ನೇಮ್ ಜನರ ಮನಸ್ಸಿನಿಂದ ಹೀಗೆ ದೂರವಾಗಬಾರದು ಎಂದೂ ಹೇಳಿದೆ.

'ಐಡಿಯಲ್ ಜಾವಾ' ಕಂಪನಿಯು 'ಯೆಜ್ಡಿ' ಟ್ರೇಡ್‌ಮಾರ್ಕ್ ಅನ್ನು ಒಂದು ಹಂತದ ಬಳಿಕ ಬಳಸಲೇ ಇಲ್ಲ, ನವೀಕರಿಸಲೂ ಇಲ್ಲ, ಅದರ ಟ್ರೇಡ್‌ಮಾರ್ಕ್ ಮೇಲೆ ಹಕ್ಕು ಸ್ಥಾಪಿಸಲೂ ಇಲ್ಲ. 'ಐಡಿಯಲ್ ಜಾವಾ' ಕಂಪನಿಯ ಮಾರಾಟವಾದಾಗ ಆ ಮಾರಾಟ ಒಪ್ಪಂದದಲ್ಲಿ 'ಯೆಜ್ಡಿ' ಟ್ರೇಡ್‌ಮಾರ್ಕ್ ವಿಚಾರವೂ ಪ್ರಸ್ತಾಪವಾಗಿಲ್ಲ ಎಂಬುದನ್ನೂ ಪೀಠ ಹೇಳಿದೆ. ಆ ಮೂಲಕ 2022ರಲ್ಲಿ ಏಕಸದಸ್ಯ ಪೀಠ ನೀಡಿದ್ದ ಆದೇಶವನ್ನು ರದ್ದುಗೊಳಿಸಿದೆ. ಹಾಗಾಗಿ 'ಯೆಜ್ಡಿ' ಲೋಗೊ ಮತ್ತು ಟ್ರೇಡ್‌ಮಾರ್ಕ್ ಅದರ ಮೂಲ ಕಂಪನಿಗೇ ಮರಳಿದೆ.

'ಯೆಜ್ಡಿ', 'ಜಾವಾ' 'ರೋಡ್‌ಕಿಂಗ್' ಹೆಸರುಗಳಲ್ಲಿ ಮೈಸೂರಿನ ಯಾದವಗಿರಿ ಪ್ರದೇಶದಲ್ಲಿ ಮೋಟಾರ್ ಬೈಕ್‌ಗಳನ್ನು ತಯಾರಿಸುತ್ತಿದ್ದ ಐಡಿಯಲ್ ಜಾವಾ ಕಂಪನಿ, 1996ರಲ್ಲಿ ಫ್ಯಾಕ್ಟರಿಯನ್ನೇ ಸ್ಥಗಿತಗೊಳಿಸಿತು. ಬಳಿಕ 2001ರಲ್ಲಿ ಕಂಪನಿಯನ್ನೇ ಸಮಾಪ್ತಿಗೊಳಿಸಿತು. ಪರಿಣಾಮವಾಗಿ 'ಯೆಜ್ಡಿ' ಟ್ರೇಡ್‌ಮಾರ್ಕ್ 2007-08ರ ಅವಧಿಯಲ್ಲಿ ಬಳಕೆಯಾಗದೇ ನಿಷ್ಕ್ರಿಯಗೊಂಡಿತು.

'ಪಿಎಂಒ' ಹೆಸರು 'ಸೇವಾ ತೀರ್ಥ' ರಾಜಭವನಗಳಿನ್ನು 'ಲೋಕಭವನ'

ದೆಹಲಿ: 'ಪ್ರಧಾನ ಮಂತ್ರಿಗಳ ಕಚೇರಿ' (ಪಿಎಂಒ) ಹೆಸರನ್ನು 'ಸೇವಾ ತೀರ್ಥ' ಎಂದು ಬದಲಿಸಲಾಗಿದೆ. ಕೇಂದ್ರ ಸಚಿವಾಲಯದ ಹೆಸರು ಸಹ 'ಕರ್ತವ್ಯ ಭವನ' ಎಂದು ಬದಲಾಗಿದೆ. ಈ ಹಿಂದೆ, ದೆಹಲಿಯ ರಾಜಪಥ ವನ್ನು 'ಕರ್ತವ್ಯ ಪಥ' ಎಂದು ಮರುನಾಮಕರಣ ಮಾಡಲಾಗಿತ್ತು. ಈಗ ಪ್ರಧಾನ ಮಂತ್ರಿ ನಿವಾಸ ಇರುವ ರಸ್ತೆಯನ್ನು 'ಲೋಕ ಕಲ್ಯಾಣ ಮಾರ್ಗ' ಎಂದು ಕರೆಯಲಾಗುವುದು. ಇದರ ಜತೆಗೆ, ವಿವಿಧ ರಾಜ್ಯಗಳ ಲ್ಲಿನ 'ರಾಜಭವನ'ಗಳ ಹೆಸರನ್ನೂ 'ಲೋಕ ಭವನ' ಎಂದು ಮರುನಾ ಮಕರಣ ಮಾಡುವುದಾಗಿ ಕೇಂದ್ರ ಸರಕಾರ ಘೋಷಿಸಿದೆ. 8 ರಾಜ್ಯಗಳು ಮತ್ತು ಉತ್ತರಾಖಂಡ, ಪ.ಬಂಗಾಳ ಮತ್ತು ತ.ನಾಡು ಸೇರಿದಂತೆ ಒಂದು ಕೇಂದ್ರಾಡಳಿತ ಪ್ರದೇಶದಲ್ಲಿನ 'ರಾಜಭವನ'ಗಳ ಹೆಸರನ್ನು ಬದಲಾಯಿಸಲಾಗಿದೆ. ಗೃಹ ಸಚಿವಾಲಯದ ನಿರ್ದೇಶನದ ಮೇರೆಗೆ ಈ ಬದಲಾವಣೆ ಮಾಡಲಾಗಿದೆ. ಕಳೆದ ವರ್ಷ ರಾಜ್ಯಪಾಲರ ಸಮ್ಮೇಳನದಲ್ಲಿ 'ರಾಜಭವನ' ಎಂಬ ಹೆಸರು ವಸಾಹತುಶಾಹಿ ಮನಸ್ಥಿತಿ ಬಿಂಬಿಸುತ್ತದೆ ಎಂದು ಚರ್ಚೆಯಾಗಿತ್ತು. ಆಗಲೇ ಗೃಹ ಸಚಿವಾಲಯ ಬದಲಾವಣೆ ಮಾಡುವುದಾಗಿ ಹೇಳಿತ್ತು.

ಚೆನ್ನೈ ಸುರಂಗದಲ್ಲಿ ಕೆಟ್ಟುನಿಂತ ಮೆಟ್ರೊ

ಚೆನ್ನೈ: ಚೆನ್ನೈ ಮಹಾನಗರದಲ್ಲಿನ ವಿಮ್ಕೊ ನಗರ ಡಿಪೋ ಮತ್ತು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಸಂಪರ್ಕಿಸುವ ನೀಲಿ ಮಾರ್ಗದಲ್ಲಿ ಬರುವ ಸುರಂಗದಲ್ಲಿ ಮೆಟ್ರೋ ರೈಲು ಮಂಗಳವಾರ ಬೆಳಗ್ಗೆ ಕೆಟ್ಟ ನಿಂತಿದ್ದರಿಂದ ನೂರಾರು ಪ್ರಯಾಣಿಕರು ಪರದಾಡುವಂತಾಯಿತು. ತಾಂತ್ರಿಕ ದೋಷ ಎದುರಾಗಿದ್ದರಿಂದ ವಿಮ್ಕೊ ನಗರ ಡಿಪೋ ಕಡೆಗೆ ತೆರಳುತ್ತಿದ್ದ ಮೆಟ್ರೋ ರೈಲು ಸುರಂಗ ಮಾರ್ಗದಲ್ಲಿಯೇ ಕೆಟ್ಟು ನಿಂತಿದೆ. ಕೆಲವು ಬೋಗಿಗಳಲ್ಲಿ ಹಠಾತ್ ಕತ್ತಲೆ ಆವರಿಸಿದೆ. ಭೀತರಾದ ಪ್ರಯಾಣಿಕರು ಮೆಟ್ರೊದೊಳಗೇ ಕೂರಲಾರದೇ, ನಿಲ್ಲಲಾರದೇ ಕೆಲ ನಿಮಿಷ ಪರದಾಡಿದ್ದಾರೆ. ನಂತರ ರೈಲು ಬೋಗಿಯಿಂದಿಳಿದು ಹಳಿಗಳ ಮೇಲೆಯೇ ನಡೆದುಕೊಂಡು ಹೋಗಿದ್ದಾರೆ. ಈ ಘಟನೆಯ ವಿಡಿಯೊ ವೈರಲ್ ಆಗಿದೆ. ಸೆಂಟ್ರಲ್ ಮೆಟ್ರೋ ಮತ್ತು ಹೈಕೋರ್ಟ್ ನಿಲ್ದಾಣದ ನಡುವಿನ ಸುರಂಗಮಾರ್ಗದಲ್ಲಿ ಮೆಟ್ರೋ ಬೆಳಗ್ಗೆ ಕೆಟ್ಟು ನಿಂತಿತು. ಬೋಗಿಯೊಳಗೇ ಕತ್ತಲೋ ಕತ್ತಲು, ಕರೆಂಟ್ ಕೂಡಾ ಇರಲಿಲ್ಲ. ಬಹಳ ಭಯವಾಯಿತು ಎಂದು ಕೆಲವು ಪ್ರಯಾಣಿಕರು ಸುದ್ದಿಸಂಸ್ಥೆಗೆ ನಂತರ ಪ್ರತಿಕ್ರಿಯಿಸಿದ್ದಾರೆ. ವಿದ್ಯುತ್ ಅಥವಾ ತಾಂತ್ರಿಕ ಸಮಸ್ಯೆಯಿಂದ ಅಡಚಣೆ ಉಂಟಾಗಿರಬಹುದು. ಈಗ ಮೆಟ್ರೊ ಸುರಂಗ ಮಾರ್ಗ ಸೇವೆ ಸಹಜ ಸ್ಥಿತಿಗೆ ಮರಳಿದೆ ಎಂದು ಚೆನ್ನೈ ಮೆಟ್ರೊ ರೈಲು ಮಂಗಳವಾರ ಸಂಜೆ ವೇಳೆಗೆ ಪ್ರಕಟಿಸಿದೆ.

ಕೋಟಿಯ ನಂ.ಪ್ಲೇಟ್ ಕೇಳೋರಿಲ್ಲ

ಚಂಡೀಗಢ: ದುಬಾರಿ ಬೆಲೆಗೆ ಬಿಕರಿಯಾಗಿ ಇಡೀ ದೇಶವೇ ಹುಬ್ಬೇರಿಸುವಂತೆ ಮಾಡಿದ್ದ ಹರಿಯಾಣ ರಾಜ್ಯದ ವಾಹನ ನೋಂದಣಿ ಸಂಖ್ಯೆ ಈಗ ಮತ್ತೆ ಹರಾಜಿಗೆ ಬಂದಿದೆ! ಕಾರುಗಳಿಗೆ ನೀಡಲಾಗುವ 'ಎಚ್‌ಬಿ8 ಬಿಬಿ8888' ವಾಹನ ನೋಂದಣಿ ಸಂಖ್ಯೆ ಕಳೆದ ವಾರ ನಡೆದ ಹರಾಜಿನಲ್ಲಿ 1.17 ಕೋಟಿ ರು.ಗೆ ಮಾರಾಟವಾಗಿ ಅಚ್ಚರಿಗೆ ಕಾರಣವಾಗಿತ್ತು. ಈ ಸಂಖ್ಯೆಗಾಗಿ ಭಾರೀ ಪೈಪೋಟಿ ಎದುರಾಗಿತ್ತು. 45 ಅರ್ಜಿಗಳು ಸಲ್ಲಿಕೆಯಾಗಿದ್ದವು. ಸಂಖ್ಯೆಗೆ ಮೂಲ ಬಿಡ್ಡಿಂಗ್ ಬೆಲೆ 50 ಸಾವಿರ ರು. ನಿಗದಿಪಡಿಸಲಾಗಿತ್ತು. ಸಂಜೆ 5ರ ವೇಳೆಗೆ 1.17 ಕೋಟಿ ರು.ನಲ್ಲಿ ಬಿಡ್ಡಿಂಗ್ ಕೊನೆಗೊಂಡಿತು. ವಾಹನ ಸಂಚಾರ ಸೇವೆಯ 'ರೊಮುಲಸ್ ಸಲ್ಯೂಷನ್ಸ್ ಪ್ರೈ.ಲಿ.' ಕಂಪನಿ ನಿರ್ದೇಶಕ ಸುಧೀರ್ ಕುಮಾರ್ ಹರಾಜಿನಲ್ಲಿ ವಿಶೇಷ ಸಂಖ್ಯೆ ತಮ್ಮದಾಗಿಸಿಕೊಂಡಿದ್ದರು. ಆದರೆ ಸುಧೀರ್ 2 ದಿನ ಕಳೆದರೂ ಹಣ ಪಾವತಿಸದ ಕಾರಣ ಮೊದಲಿನ ಹರಾಜು ರದ್ದುಗೊಳಿಸಿದ ಹರಿಯಾಣ ಸಾರಿಗೆ ಇಲಾಖೆ ಈಗ ಮರು ಹರಾಜಿಗೆ ಅಧಿಸೂಚನೆ ಹೊರಡಿಸಿದೆ. ನಂಬರ್ ಪ್ಲೇಟ್‌ಗೆ ಇಷ್ಟೊಂದು ದೊಡ್ಡ ಮೊತ್ತ ಪಾವತಿಸುವುದನ್ನು ಸುಧೀರ್ ಕುಟುಂಬ ವಿರೋಧಿಸಿತ್ತು. ಹಾಗಾಗಿಯೇ ಸುಧೀರ್ ಹಣ ಪಾವತಿಸಿಲ್ಲ ಎನ್ನಲಾಗಿದೆ.



ಸಮಾಚಾರ ಸಣ್ಣದಲ್ಲ

ಎಚ್‌ಐವಿ ಕುರಿತು ವಿಶೇಷ ಉಪನ್ಯಾಸ

ಬೆಂಗಳೂರು: ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ಸಮಾಜ ಕಾರ್ಯ ವಿಭಾಗದ ವತಿಯಿಂದ ಎಚ್‌ಐವಿ ಮತ್ತು ಏಡ್ಸ್ ಕುರಿತು ವಿಶೇಷ ಉಪನ್ಯಾಸವನ್ನು ಆಯೋಜಿಸಲಾಗಿತ್ತು. ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿದ ಮಾಗಡಿ ಸರಕಾರಿ ಜನರಲ್ ಆಸ್ಪತ್ರೆಯ ಐಸಿಟಿಸಿ ಕೌನ್ಸೆಲರ್ ವರುಣ್ ಕುಮಾರ್ ಅವರು ಎಚ್‌ಐವಿ ಪ್ರಗತಿಯ ಹಂತಗಳು, ಎಚ್‌ಐವಿ ಮತ್ತು ಏಡ್ಸ್ ನಡುವಿನ ವ್ಯತ್ಯಾಸ ಮತ್ತು ಪ್ರಸರಣದ ನಾಲ್ಕು ಪ್ರಮುಖ ಮಾರ್ಗಗಳು, ಸಂರಕ್ಷಿತ ಲೈಂಗಿಕ ಅಭ್ಯಾಸಗಳು, ನಿಯಮಿತ ಪರೀಕ್ಷೆ ಮತ್ತು ಸುರಕ್ಷಿತ ಆರೋಗ್ಯ ನಡವಳಿಕೆಗಳು ಸೇರಿದಂತೆ ತಡೆಗಟ್ಟುವ ಕ್ರಮಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಿದರು. ಎಚ್‌ಐವಿ ಲೈಂಗಿಕವಾಗಿ ಹರಡುವುದನ್ನು ತಡೆಗಟ್ಟುವ ಕುರಿತು ಜಾಗೃತಿ ವಿಡಿಯೊ ಪ್ರದರ್ಶನ ಮಾಡಲಾಯಿತು.

ಬಿಹಾರ ಅಸೆಂಬ್ಲಿಗೆ ಪ್ರೇಮ್ ಸ್ಪೀಕರ್

ಪಟ್ನಾ: ಗಯಾ ಕ್ಷೇತ್ರದ ಬಿಜೆಪಿಯ ಹಿರಿಯ ಶಾಸಕ ಪ್ರೇಮ್ ಕುಮಾರ್ ಅವರು ಬಿಹಾರ ವಿಧಾನ ಸಭೆಯ ಸ್ಪೀಕರ್ ಆಗಿ ಸರ್ವಾನುಮತದಿಂದ ಆಯ್ಕೆಯಾಗಿದ್ದಾರೆ. ಸ್ಪೀಕರ್ ಆಗಿ ಆಯ್ಕೆಯಾದ ಅವರನ್ನು ಮುಖ್ಯಮಂತ್ರಿ ನಿತೀಶ್ ಕುಮಾರ್ ಮತ್ತು ವಿಪಕ್ಷ ತೇಜಸ್ವಿ ಯಾದವ್ ಅವರು ಸಂಪ್ರದಾಯದಂತೆ ಸ್ಪೀಕರ್ ಕುರ್ಚಿಗೆ ಕರೆದುಕೊಂಡು ಬಂದರು. ಈ ವೇಳೆ ಮಾತನಾಡಿದ ತೇಜಸ್ವಿ, 'ನೀವು ಬುದ್ಧನ ಭೂಮಿಯಿಂದ ಬಂದಿದ್ದೀರಿ. ವಿರೋಧ ಪಕ್ಷದೊಂದಿಗೆ ನ್ಯಾಯಯುತವಾಗಿ ವರ್ತಿಸುತ್ತೀರಿ ಮತ್ತು ವಿಪಕ್ಷಗಳ ಮಾತನ್ನು ತಾಳ್ಮೆಯಿಂದ ಆಲಿಸುವಿರಿ ಎಂದು ಆಶಿಸುತ್ತೇವೆ' ಎಂದು ಹೇಳಿದರು. ಪ್ರೇಮ್ ಕುಮಾರ್ ಅವರು ಒಂಬತ್ತು ಬಾರಿ ಗಯಾ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾಗಿದ್ದಾರೆ. 1990ರಲ್ಲಿ ಮೊದಲ ಬಾರಿಗೆ ಶಾಸಕನಾಗಿ ಆಯ್ಕೆಯಾಗಿದ್ದ ಅವರು, ಅಂದಿನಿಂದ ಯಾವುದೇ ಚುನಾವಣೆಗಳಲ್ಲಿ ಸೋತಿಲ್ಲ. 'ಸರ್ವಾನುಮತದ ಆಯ್ಕೆಯಿಂದ ಸಂತೋಷವಾಗಿದೆ. ಸರಕಾರ ಮತ್ತು ವಿಪಕ್ಷಗಳ ನಡುವೆ ಸೇತುವೆಯಾಗಿ ಕಾರ್ಯನಿರ್ವಹಿಸಲು ಮತ್ತು ನಿಯಮಗಳ ಪ್ರಕಾರ ಕಲಾಪಗಳನ್ನು ನಡೆಸುತ್ತೇನೆ, ಭವಿಷ್ಯದ ಪೀಳಿಗೆಗೆ ಮಾದರಿಯಾಗುವೆ' ಎಂದು ಪ್ರೇಮ್ ಕುಮಾರ್ ಹೇಳಿದರು.

ರಷೀದ್ ಅಲಿ ಕಸ್ಟಡಿ ಏಳು ದಿನ ವಿಸ್ತರಣೆ

ದೆಹಲಿ: ಕೆಂಪುಕೋಟೆ ಸಮೀಪ ಸಂಭವಿಸಿದ ಕಾರು ಸ್ಫೋಟದ ಆರೋಪಿಗಳಲ್ಲಿ ಒಬ್ಬನಾದ ರಷೀದ್ ಅಲಿಯನ್ನು ದೆಹಲಿಯ ಪಟಿಯಾಲ ನ್ಯಾಯಾಲಯದ ಮುಂದೆ ಮಂಗಳವಾರ ಹಾಜರುಪಡಿಸಲಾಯಿತು. ನ.26ರಂದು ಅಲಿಯನ್ನು ನ್ಯಾಯಾಲಯವು ಒಂದು ವಾರ ಎನ್‌ಐಎ ವಶಕ್ಕೆ ಒಪ್ಪಿಸಿತ್ತು. ಮಂಗಳವಾರಕ್ಕೆ ಈ ಅವಧಿ ಮುಕ್ತಾಯ ಗೊಂಡಿತ್ತು. ಹೆಚ್ಚಿನ ವಿಚಾರಣೆಗೆ ಮತ್ತೆ ವಶಕ್ಕೆ ನೀಡುವಂತೆ ಅಧಿಕಾರಿಗಳು ಮಾಡಿದ ಮನವಿ ಯನ್ನು ಪರಿಗಣಿಸಿದ ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶ ಅಂಜು ಬಜಾಜ್ ಚಂದ್ರಾ, ಮತ್ತೆ ಒಂದು ವಾರ ಅವಧಿ ವಿಸ್ತರಿಸಿದರು. ಕೆಂಪುಕೋಟೆ ಸಮೀಪ ಸ್ಫೋಟಗೊಂಡ ಕಾರು ರಷೀದ್ ಅಲಿಯ ಹೆಸರಿನಲ್ಲಿತ್ತು, ಆ ಪ್ರಕರಣಕ್ಕೆ ಸಂಬಂಧಿಸಿದಂತೆ ಇದುವರೆಗೂ ಎನ್‌ಐಎ 7 ಮಂದಿಯನ್ನು ಬಂಧಿಸಿದೆ.

ಭಾರತಕ್ಕೆ ಧನ್ಯವಾದ ತಿಳಿಸಿದ ಶ್ರೀಲಂಕಾ

ಕೊಲೊಂಬೊ: ದ್ವಿತಾ ಚಂಡಮಾರುತಕ್ಕೆ ಭಾರತವು ನೆರೆಯ ಶ್ರೀಲಂಕಾಕ್ಕೆ ಆಪರೇಷನ್ ಸಾಗರ್ ಬಂಧುವನ್ನು ಪ್ರಾರಂಭಿಸುವ ಮೂಲಕ ನೆರವು ನೀಡಿದೆ. ನಾಪತ್ತೆಯಾದವರ ಹುಡುಕಾಟ, ರಕ್ಷಣಾ ಕಾರ್ಯ ಮತ್ತು ಪರಿಹಾರ ಸಹಾಯವನ್ನು ಒದಗಿಸಲು ರಾಷ್ಟ್ರೀಯ ವಿಪತ್ತು ಪ್ರತಿಕ್ರಿಯೆ ಪಡೆ ಮತ್ತು ವಾಯುಪಡೆಯ ಸೈನಿಕರನ್ನು ನಿಯೋಜಿಸುವ ಮೂಲಕ ಸಹಾಯ ಮಾಡಿದೆ. ಅದಕ್ಕಾಗಿ ಲಂಕಾದ ಜನರು ಭಾರತದ ಸಹಾಯಕ್ಕೆ ಕೃತಜ್ಞತೆ ವ್ಯಕ್ತಪಡಿಸಿದ್ದಾರೆ. ಸಾಮಾಜಿಕ ಮಾಧ್ಯಮಗಳಲ್ಲಿ ಪೋಸ್ಟ್ ಮಾಡಿರುವ ಅವರು ಭಾರತ ಮತ್ತು ಇಲ್ಲಿನ ಸೈನಿಕರ ಸಕಾಲದ ಬೆಂಬಲಕ್ಕೆ ಧನ್ಯವಾದ ಸಲ್ಲಿಸಿದ್ದಾರೆ.

{ ರಾಹುಲ್ ಗಾಂಧಿ } ವಿಪಕ್ಷ ನಾಯಕ

ಪ್ರಜಾಪ್ರಭುತ್ವದಲ್ಲಿ ಮತದಾನದ ಹಕ್ಕಿಗಿಂತ ದೊಡ್ಡ ವಿಷಯ ಯಾವುದಿರಲು ಸಾಧ್ಯ? ಮತದಾನ ಪ್ರತಿಯೊಬ್ಬ ನಾಗರಿಕರ ಹಕ್ಕು. ದೇಶದ ಬಡ ಮತ್ತು ದುರ್ಬಲ ಸಮುದಾಯದ ಜನರ ಹಕ್ಕನ್ನು ಕಸಿಯಲು ಎಸ್‌ಐಆರ್ ಅನ್ನು ಅಸ್ತ್ರವಾಗಿ ಬಳಸಲಾಗುತ್ತಿದೆ, ಆ ಮೂಲಕ ಚುನಾವಣೆಗಳನ್ನು ಏಕಪಕ್ಷೀಯವನ್ನಾಗಿ ಮಾಡಲಾಗುತ್ತಿದೆ.



ಹನುಮ ಜಯಂತಿಯಂದೇ ಸಿಎಂ ಸಿದ್ದರಾಮಯ್ಯ ಕೋಳಿ ಸಾರು ಸೇವನೆ: ಆರ್.ಅಶೋಕ

ರಿಯಾಲಿಟಿ ಶೋ ಆದ ಸರಕಾರ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕಾಂಗ್ರೆಸ್ ಸರಕಾರ ರೈತರ ಸಮಸ್ಯೆ ಬಗೆಹರಿಸಿಲ್ಲ. ರಸ್ತೆ ಗುಂಡಿಗಳನ್ನು ದುರಸ್ತಿ ಮಾಡಿಲ್ಲ, ಆದರೆ ಸಿಎಂ ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ತಮ್ಮ ನಡುವಿನ ಸಮಸ್ಯೆ ಬಗೆಹರಿಸಲು ಉಪಾಹಾರ ಸಭೆ ಮಾಡಿದ್ದಾರೆ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಹನುಮ ಜಯಂತಿಯ ದಿನದಂದು ಎಲ್ಲೆಡೆ ಸಂಭ್ರಮದ ಆಚರಣೆ ನಡೆಯುತ್ತಿದ್ದರೆ, ಸದಾಶಿವ ನಗರದಲ್ಲಿ ಸಿಎಂ ಸಿದ್ದರಾಮಯ್ಯ ನಾಟಿಕೋಳಿ ಸಾರು ಸವಿದಿದ್ದಾರೆ. ಈ ಹಿಂದೆ ಅವರು ಮಾಂಸ ಸೇವಿಸಿ ಧರ್ಮಸ್ಥಳಕ್ಕೆ ಭೇಟಿ ನೀಡಿದ್ದರು. ಕೆಲವು ದಿನದ ಹಿಂದೆ ಸಿದ್ದರಾಮಯ್ಯ ಮನೆಯಲ್ಲಿ ಉಪಾಹಾರ ನಡೆದಿದ್ದರೆ, ಈಗ ಡಿ.ಕೆ.ಶಿವಕುಮಾರ್ ಮನೆಯಲ್ಲಿ ನಡೆದಿದೆ. ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ವೇಣು ಗೋಪಾಲ್ ಈ ಪ್ರಹಸನವನ್ನು ನಿರ್ದೇಶನ ಮಾಡಿದ್ದಾರೆ. ಸಿದ್ದರಾಮಯ್ಯನವರ ಈ ನಡೆಯಿಂದ ಎಲ್ಲ ಹನುಮ ಭಕ್ತರ ಮನಸ್ಸಿಗೆ ನೋವಾಗಿದೆ ಎಂದರು.

ನಾನು ಅಧಿಕಾರವನ್ನು ಒದ್ದು ಕಿತ್ತುಕೊಳ್ಳುತ್ತೇನೆಂದು ಡಿ.ಕೆ.ಶಿವಕುಮಾರ್ ಹೇಳಿದ್ದರು. ಆದರೆ ಈಗ ಅವರು ಉಪಾಹಾರ ಸವಿದಿದ್ದಾರೆ. ಈ ನಡುವೆ ಡಾ.ಜಿ. ಪರಮೇಶ್ವರ್ ಬಹಳ ನೋವಿನಿಂದ ಮಾತಾಡಿದ್ದಾರೆ. ರಾಜ್ಯದಲ್ಲಿ ಕಳೆದ 10 ತಿಂಗಳಲ್ಲಿ 580 ಕ್ಕೂ ಅಧಿಕ ಜನರು ರಸ್ತೆಗುಂಡಿಯಿಂದ ಸತ್ತಿದ್ದಾರೆ. ತಿಂಡಿ ತಿನ್ನುವ ಸಮಯವನ್ನು ರಸ್ತೆಗುಂಡಿ ಮುಚ್ಚಿಸಲು ವಿನಿಯೋಗಿಸಿದ್ದರೆ ಅಮಾಯಕ ಜೀವಗಳು ಉಳಿಯುತ್ತಿತ್ತು. ರೈತರ ಕಬ್ಬಿನ ದರದ ಸಮಸ್ಯೆ ಬಗೆಹರಿದಿಲ್ಲ, ಮೆಕ್ಕೆಜೋಳ ಖರೀದಿ ಕೇಂದ್ರದ ಸಮಸ್ಯೆ ಬಗೆಹರಿದಿಲ್ಲ, ಈ ಬಗ್ಗೆ ಯಾವುದೇ ಉಪಾಹಾರ ಸಭೆ ನಡೆಸಿಲ್ಲ, ಇವರಿಬ್ಬರ ನಡುವಿನ ಸಮಸ್ಯೆ ಬಗೆಹರಿಸಲು ಉಪಾಹಾರ ಸಭೆ ನಡೆಸಬೇಕಿತ್ತೇ? ಅಂಗನವಾಡಿ ಕಾರ್ಯಕರ್ತರು, ರೈತರು, ಉದ್ಯಮಿಗಳು, ದಲಿತರ ವಿಶ್ವಾಸವನ್ನು ಸರಕಾರ ಕಳೆದುಕೊಂಡಿದೆ ಎಂದರು.

ವೈಲ್ಡ್ ಕಾರ್ಡ್ ಎಂಟ್ರಿ

ಬಿಗ್‌ಬಾಸ್‌ನಲ್ಲಿ ವೈಲ್ಡ್ ಕಾರ್ಡ್‌ನಂತೆ ಸತೀಶ್ ಜಾರಕಿಹೊಳಿ ಹಾಗೂ ಡಾ.ಜಿ.ಪರಮೇಶ್ವರ್ ದಲಿತ ಬ್ರ್ಯಾಂಡ್‌ನಡಿ ಸಿಎಂ ಆಗಲು ಕಾಯುತ್ತಿದ್ದಾರೆ. ಇಡೀ ಸರಕಾರದ ರಿಯಾಲಿಟಿ ಶೋನಂತೆ ಆಗಿದೆ. ಈ ರೀತಿ ಸಭೆ ನಡೆಸುವ ಬದಲು, ತುಂಗಭದ್ರಾ ಜಲಾಶಯದ ಗೇಟ್‌ಗಳನ್ನು ದುರಸ್ತಿ ಮಾಡಿಸಲು 12 ಕೋಟಿ ರು. ಬಿಲ್ ಪಾವತಿಸಿದ್ದರೆ ರೈತರಿಗೆ ನೀರಾವರಿ ಲಭ್ಯವಾಗುತ್ತಿತ್ತು. ಈ ಬಗ್ಗೆ ರೈತರ ಪರವಾಗಿ ಅಧಿವೇಶನದ ಸಮಯದಲ್ಲಿ ಹೋರಾಟ ಮಾಡಲಾಗುವುದು ಎಂದು ಆರ್.ಅಶೋಕ ಹೇಳಿದರು.

> **ಉತ್ತರ ಕರ್ನಾಟಕದ ಅಭಿವೃದ್ಧಿಗೆ ಮಾತ್ರ ಅಲ್ಲ, ಯಾವುದೇ ಅಭಿವೃದ್ಧಿಗೆ ಸರಕಾರದ ಬಳಿ ಹಣವಿಲ್ಲ. ಸಿಎಂ ಸಿದ್ದರಾಮಯ್ಯ ಕಳೆದ ಬೆಳಗಾವಿ ಅಧಿವೇಶನದಲ್ಲಿ ಕೊಟ್ಟ ಮಾತನ್ನು ಈಡೇರಿಸಲಾಗಿದೆಯೇ ಎಂದು ನಾವು ಪ್ರಶ್ನೆ ಮಾಡುತ್ತೇವೆ. ಧರ್ಮಸ್ಥಳದಲ್ಲಿ ಬುರುಡೆ ತಂದವನಿಗೆ ಬಿರಿಯಾನಿ ಕೊಟ್ಟಿದ್ದೇ ಕಾಂಗ್ರೆಸ್ ಸರಕಾರ. ಆದರೆ ಅದನ್ನು ಸಾಬೀತುಪಡಿಸಲು ಇಂದಿಗೂ ಸಾಧ್ಯವಾಗಿಲ್ಲ.**
> – ಆರ್.ಅಶೋಕ ಪ್ರತಿಪಕ್ಷ ನಾಯಕ

ರಾಜ್ಯಾದ್ಯಂತ ವ್ಯಾಪಕವಾಗಿ ಮೆಕ್ಕೆಜೋಳ ಖರೀದಿ ಕೇಂದ್ರ ತೆರೆಯಲು ಬಿಜೆಪಿ ಒತ್ತಾಯ

ರಾಜ್ಯದಲ್ಲಿರುವ ಸಮಸ್ಯೆಗಳಿಗೆ ಉಪಾಹಾರವೇ ಪರಿಹಾರವೇ?

ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ವಿಧಾನಪರಿಷತ್ ವಿಪಕ್ಷದ ಮುಖ್ಯ ಸಚೇತಕ ಎನ್.ರವಿಕುಮಾರ್ ಮಾತನಾಡಿದರು.

ಬೆಂಗಳೂರು: ನಾಟಿಕೋಳಿ ಮಾಡುತ್ತೀರಾ? ಕುರಿ ಕೊಯಿಸುತ್ತೀರಾ? ಅಥವಾ ಇಡ್ಲಿ ವಡಾ, ಸಾಂಬಾರ್ ಅಥವಾ ಉಪ್ಪಿಟ್ಟಿನ ಸಿಂಪಲ್ ಉಪಾಹಾರಕ್ಕೆ ಮುಗಿಸುತ್ತೀರಾ? ಕರ್ನಾಟಕದ ಸಮಸ್ಯೆ ಉಪಾಹಾರದಲ್ಲಿ ಮುಗಿಯುತ್ತದೆ ಎಂದು ಕಾಂಗ್ರೆಸ್ ಹೈಕಮಾಂಡ್ ಭಾವಿಸಿದೆ ಎಂದು ವಿಧಾನಪರಿಷತ್ ವಿಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್ ಟೀಕಿಸಿದ್ದಾರೆ.

ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮಾಧ್ಯಮಗಳಲ್ಲಿ ನಾಟಿಕೋಳಿ ಬಗ್ಗೆ ಚರ್ಚೆ ನಡೆಯುತ್ತಿದೆ. ಕರ್ನಾಟಕದಲ್ಲಿ ಎಲ್ಲ ಸಮಸ್ಯೆ ಪರಿಹಾರ ಆಗುವುದಾದರೆ ನಾಟಿಕೋಳಿಯಲ್ಲಿ ಪರಿಹಾರ ಇದೆ, ಉಪಾಹಾರಕ್ಕೆ ಕರೆಯಿರಿ ಎಂದು ಹೈಕಮಾಂಡ್ ಸೂಚನೆ ಕೊಟ್ಟಿದೆಯಂತೆ ಎಂದರು.

ರಾಜ್ಯದಲ್ಲಿ ರೈತರ ಸಮಸ್ಯೆ, ರಸ್ತೆ ಹೊಂಡದ ಸಮಸ್ಯೆ ಸೇರಿ ಅನೇಕ ಸಮಸ್ಯೆಗಳಿವೆ. ರೈತರ ಹೋರಾಟ, ಶಿಕ್ಷಕರ- ಅತಿಥಿ ಉಪನ್ಯಾಸಕರ ಹೋರಾಟ ನಡೆಯುತ್ತಿದೆ. ಸರಣಿ ದರೋಡೆಗಳು ನಡೆಯುತ್ತಿವೆ. ಕಾನೂನು-ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟು ಹೋಗಿದೆ. ಇವುಗಳ ಚರ್ಚೆ ಸರಕಾರದಲ್ಲಿ ನಡೆಯುತ್ತಿಲ್ಲ. ಕೇಂದ್ರ ಸರಕಾರ ರೈತರ ಬೆಳೆಗಳಿಗೆ ಬೆಂಬಲ ಬೆಲೆ ಪ್ರಕಟಿಸಿ ಅನೇಕ ತಿಂಗಳಾಗಿದೆ. ಒಂದು ಕ್ವಿಂಟಲ್ ಮೆಕ್ಕೆಜೋಳಕ್ಕೆ 2,400 ರು. ಘೋಷಿಸಿದ್ದರೂ ಖರೀದಿ ಕೇಂದ್ರಗಳನ್ನು ರಾಜ್ಯ ಸರಕಾರ ತೆರೆದಿಲ್ಲ. ರೈತರು ಮೆಕ್ಕೆಜೋಳವನ್ನು 1,600 -1,700 ರುಪಾಯಿಗೆ ಮಾರಾಟ ಮಾಡುತ್ತಿದ್ದಾರೆ. ಲಕ್ಷಾಂತರ ಕ್ವಿಂಟಲ್ ಮೆಕ್ಕೆಜೋಳ ಬೆಳೆ ಬಂದಿದ್ದು, ರೈತರು ಅಸಮಾಧಾನದಿಂದ ಇದ್ದಾರೆ ಎಂದರು.

> **ರಾಜ್ಯಾದ್ಯಂತ ವ್ಯಾಪಕವಾಗಿ ಖರೀದಿ ಕೇಂದ್ರಗಳನ್ನು ತೆರೆಯಬೇಕು. ಹೆಸರು- ಒಂದು ಕ್ವಿಂಟಲ್‌ಗೆ 8 ಸಾವಿರ ರು. ಪ್ರಕಟಿಸಿದ್ದರೂ ಖರೀದಿ ಕೇಂದ್ರವನ್ನು ಈ ಸರಕಾರ ತೆರೆದಿಲ್ಲ. ಉದ್ದು- ಸುಮಾರು 7,400 ರು. ಘೋಷಿಸಿದ್ದರೂ ಖರೀದಿ ಕೇಂದ್ರ ತೆರೆಯುತ್ತಿಲ್ಲ . ಬಿಜೆಪಿ ರೈತರ ಪರವಾಗಿ ಹೋರಾಟಗಳನ್ನು ಹಮ್ಮಿಕೊಳ್ಳುತ್ತಿದೆ.**
> – ಎನ್.ರವಿಕುಮಾರ್ ವಿಪಕ್ಷದ ಮುಖ್ಯ ಸಚೇತಕ

2 ಸಾವಿರಕ್ಕೂ ಹೆಚ್ಚು ರೈತರ ಆತ್ಮಹತ್ಯೆ

2 ಸಾವಿರಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ರೈತರು ಸಂಕಷ್ಟದ ಸಂಕೋಲೆಯಲ್ಲಿ ಸಿಲುಕಿದ್ದಾರೆ. ಹತ್ತಿ ಸಾಕಷ್ಟು ಹಾಳಾಗಿದೆ. ಕೆಲವು ಕಡೆ ಹತ್ತಿ ಲಭ್ಯವಿದ್ದರೂ ಸರಕಾರ ಖರೀದಿ ಕೇಂದ್ರ ತೆರೆದಿಲ್ಲ. ರಾಯಚೂರು, ಬಳ್ಳಾರಿ, ಗದಗ, ಹುಬ್ಬಳ್ಳಿ, ಧಾರವಾಡ, ದಾವಣಗೆರೆ, ಚಿತ್ರದುರ್ಗದ ಕೆಲವು ಪ್ರದೇಶಗಳಲ್ಲಿ ಹತ್ತಿ ಇದ್ದರೂ ಸರಕಾರ ಖರೀದಿ ಕೇಂದ್ರಗಳನ್ನು ತೆರೆದಿಲ್ಲ. ಹತ್ತಿ ಖರೀದಿ ಕೇಂದ್ರಗಳನ್ನು ಕೂಡಲೇ ತೆರೆಯಬೇಕಿದೆ ಎಂದು ಎನ್.ರವಿಕುಮಾರ್ ಒತ್ತಾಯಿಸಿದರು.

ಆಪರೇಷನ್ 2.0ಗೆ ಸಿದ್ಧ

ಪುಣೆ: ಆಪರೇಷನ್ ಸಿಂದೂರ್ ಕಾರ್ಯಾಚರಣೆ ಇನ್ನೂ ಮುಂದುವರಿಯಲಿದ್ದು, ಸಶಸ್ತ್ರ ಪಡೆಗಳ ನಡುವೆ ಕಾರ್ಯವಿಧಾನದ ಮಾಹಿತಿ ಹಂಚಿಕೆ ಸೇರಿದಂತೆ ಉನ್ನತ ಮಟ್ಟದ ಸಮನ್ವಯತೆಯ ಅಗತ್ಯವಿದೆ ಎಂದು ನೌಕಾಪಡೆಯ ಮುಖ್ಯಸ್ಥ ಅಡ್ಮಿರಲ್ ದಿನೇಶ್ ಕೆ. ತ್ರಿಪಾಠಿ ಹೇಳಿದ್ದಾರೆ. ವಾರ್ಷಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆಪರೇಷನ್ ಸಿಂದೂರ್ ಇನ್ನೂ ನಡೆಯುತ್ತಿದೆ, ಅದು ಮುಗಿದಿಲ್ಲ. ಕಾರ್ಯಾಚರಣೆಗೆ ಸಂಬಂಧಿಸಿದಂತೆ ಎಲ್ಲಾ ರೀತಿಯಲ್ಲಿ ಸಜ್ಜಾಗಿದ್ದೇವೆ ಎಂದಿದ್ದಾರೆ. ಮೂರು ಪಡೆಗಳ ನಡುವೆ ವಾಯು ರಕ್ಷಣೆಯನ್ನು ಸಂಯೋಜಿಸಲಾಗಿದೆ. ಅದನ್ನು ಆಪರೇಷನ್ ಸಿಂದೂರ್ ಸಮಯದಲ್ಲಿಯೂ ಮಾಡಲಾಗಿತ್ತು. ಶತ್ರುರಾಷ್ಟ್ರದಿಂದ ಯಾವುದೇ ದಾಳಿ ಎದುರಾದರೂ ಅದನ್ನು ಸಮರ್ಥ ರೀತಿಯಲ್ಲಿ ಎದುರಿಸಲು ನೌಕಾಪಡೆಯು ಸಂಪೂರ್ಣವಾಗಿ ಸಜ್ಜಾಗಿದೆ ಎಂದರು. ಆಪರೇಷನ್ ಸಿಂದೂರ್ ಕಾರ್ಯಾಚರಣೆ ವೇಳೆಯಲ್ಲಿ ಬಹಳ ಕಡಿಮೆ ಅವಧಿಯಲ್ಲಿ 30ಕ್ಕೂ ಹೆಚ್ಚು ಹಡಗುಗಳು ಮತ್ತು ಜಲಾಂತರ್ಗಾಮಿ ನೌಕೆಗಳನ್ನು ಅಭೂತಪೂರ್ವವಾಗಿ ಸಜ್ಜುಗೊಳಿಸಲಾಗಿತ್ತು. ಮಕ್ರಾನ್ ಕರಾವಳಿಯಲ್ಲಿ ನಮ್ಮ ಮುಂಚೂಣಿಯ ಹಡಗುಗಳು, ಐಎನ್‌ಎಸ್ ಜಲಂತರ್ಗಾಮಿ ನೌಕೆ ಯುದ್ಧಕ್ಕೆ ಸಜ್ಜಾಗಿದ್ದವು ಎಂದು ಅವರು ತಿಳಿಸಿದರು. ಬಲಿಷ್ಠ ಭಾರತೀಯ ನೌಕಾಪಡೆಯನ್ನು ಕಂಡು ಭಯಭೀತಿಗೊಂಡಿದ್ದ ಪಾಕಿಸ್ತಾನ ನೌಕಾಪಡೆಯು ತನ್ನ ಕರಾವಳಿ ಪ್ರದೇಶ ಬಿಟ್ಟು ಬೇರೆ ಕಡೆಗೆ ಕದಲಿರಲಿಲ್ಲ ಎಂದು ತ್ರಿಪಾಠಿ ಮಾಹಿತಿ ನೀಡಿದರು.

ವಿಜಯ್ ರೋಡ್ ಶೋಗೆ ಪೊಲೀಸ್ ಅನುಮತಿ ರದ್ದು

ಚೆನ್ನೈ: ಕಾಲಿವುಡ್ ನಟ, ರಾಜಕಾರಣಿ ದಳಪತಿ ವಿಜಯ್‌ಗೆ ಭಾರಿ ಹಿನ್ನಡೆಯಾಗಿದ್ದು, ತಮಿಳಗ ವೆಟ್ರಿ ಕಳಗಂ ಪಕ್ಷ ಆಯೋಜಿಸಿದ್ದ ಪುದುಚೆರಿ ರೋಡ್ ಶೋ ರದ್ದಾಗಿದೆ. ಡಿಸೆಂಬರ್ 5ರಂದು ಪಕ್ಷ ಆಯೋಜಿಸಲು ಉದ್ದೇಶಿಸಿದ್ದ ರ‍್ಯಾಲಿಗೆ ಪುದುಚೇರಿ ಪೊಲೀಸರು ಅನುಮತಿ ನೀಡಿಲ್ಲ, ಆ ಮೂಲಕ ವಿಜಯ್‌ಗೆ ಭಾರಿ ಮುಖಭಂಗವಾಗಿದೆ.

ರೋಡ್ ಶೋ ಬದಲಾಗಿ ಮೈದಾನದಲ್ಲಿ ಸಾರ್ವಜನಿಕ ಸಭೆ ನಡೆಸುವಂತೆ ಪೊಲೀಸರು ಸಲಹೆ ನೀಡಿದ್ದಾರೆ. ಸೆಪ್ಟೆಂಬರ್ 27ರಂದು ತಮಿಳುನಾಡಿನ ಕರೂರಿನಲ್ಲಿ ತಮಿಳಗ ವೆಟ್ರಿ ಕಳಗಂ ಆಯೋಜಿಸಿದ್ದ ಚುನಾವಣಾ ರ‍್ಯಾಲಿಯಲ್ಲಿ ಕಾಲ್ತುಳಿತ ಸಂಭವಿಸಿ ಸುಮಾರು 41 ಮಂದಿ ಅಸುನೀಗಿದ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ರೋಡ್ ಶೋಗೆ ಅನುಮತಿ ಸಿಕ್ಕಿಲ್ಲ ಎನ್ನಲಾಗಿದೆ. ಈಗಾಗಲೇ ಪಕ್ಷದ ಹಿರಿಯ ನಾಯಕರಾದ ಆನಂದ್ ಮತ್ತು ಆಧವ್ ಅರ್ಜುನ್ ರೋಡ್ ಶೋಗೆ ಸಿದ್ಧತೆ ನಡೆಸಿದ್ದು, ಅದರ ಬೆನ್ನಲ್ಲೇ ಈ ಬೆಳವಣಿಗೆಯಾಗಿದೆ. ಕರೂರು ಕಾಲ್ತುಳಿದ ಬಳಿಕ ಸಾಕಷ್ಟು ಹಿನ್ನಡೆ ಅನುಭವಿಸಿದ್ದ ವಿಜಯ್ ಅವರ ರಾಜಕೀಯ ಚಟುವಟಿಕೆಯನ್ನು ಮತ್ತೆ ಕೇಂದ್ರಾಡಳಿತ ಪ್ರದೇಶದಲ್ಲಿ ಭರ್ಜರಿಯಾಗಿ ಆರಂಭಿಸುವ ಉದ್ದೇಶ ಹೊಂದಿದ್ದ ಪಕ್ಷಕ್ಕೆ ಇದು ಬಲವಾದ ಹೊಡೆತ ನೀಡಿದೆ ಎಂದೇ ವಿಶ್ಲೇಷಿಸಲಾಗುತ್ತಿದೆ. ಈ ಕುರಿತು ಮಾತನಾಡಿದ ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಸಾಕಷ್ಟು ಪರಿಶೀಲನೆ, ಸಮಾಲೋಚನೆ ಬಳಿಕ ಈ ನಿರ್ಧಾರಕ್ಕೆ ಬರಲಾಗಿದೆ ಎಂದಿದ್ದಾರೆ.

ಹನುಮಾನ್ ಜಯಂತಿ ಹಿನ್ನೆಲೆ ಬೆಂಗಳೂರು ನಗರದ ಪಂಚಮುಖಿ ಆಂಜನೇಯ ದೇವಾಲಯ, ಮಹಾಲಕ್ಷ್ಮೀ ಲೇಔಟ್‌ನ ವೀರಾಂಜನೇಯ ಸೇರಿದಂತೆ ವಿವಿಧ ಆಂಜನೇಯ ದೇವಾಲಯಗಳಲ್ಲಿ ವಿಶೇಷ ಪೂಜೆ ಪುನಸ್ಕಾರಗಳು ನಡೆದಿದ್ದು ಭಕ್ತರ ಸಮೂಹ ಕಂಡು ಬಂದಿತು. ಫೋಟೋ: ಸುಧಾಕರ್ ದೇವರಾಜ್

ಹನುಮಾನ್ ಜಯಂತಿ ಹಿನ್ನೆಲೆ ಹನುಮನ ವೇಶ ಧರಿಸಿ ನರ್ತಿಸಿದ ಕಲಾವಿದರು.

ಜೀವಿತ ಉಳಿತಾಯದ 3.4 ಕೋಟಿ ರು. ಏಮ್ಸ್‌ಗೆ ನೀಡಿದ ಶತಾಯುಷಿ ವೈದ್ಯೆ

ಡಿ.5ರಂದು ಡಾ.ಲಕ್ಷ್ಮಿಬಾಯಿ ಅವರ 100ನೇ ಜನ್ಮದಿನ

ಭುವನೇಶ್ವರ್: ಜೀವಮಾನ ಪೂರ್ತಿ ದುಡಿದು ಉಳಿಸಿದ 3.40 ಕೋಟಿ ರು.ಗಳಷ್ಟು ದೊಡ್ಡ ಮೊತ್ತವನ್ನು ಒಡಿಶಾ ರಾಜ್ಯದ ಶತಾಯುಷಿ ವೈದ್ಯೆಯೊಬ್ಬರು ಭುವನೇಶ್ವರದಲ್ಲಿರುವ 'ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆ'(ಏಮ್ಸ್) ಆಸ್ಪತ್ರೆಗೆ ದಾನವಾಗಿ ನೀಡಿ ಕೃತಾರ್ಥಭಾವ ಅನುಭವಿಸಿದ್ದಾರೆ.

ಜೀವನದ ಸಂಧ್ಯಾಕಾಲದಲ್ಲಿರುವ ವೈದ್ಯೆ ಡಾ. ಲಕ್ಷ್ಮಿಬಾಯಿ ಅವರಿಗೆ ತಮಗಾಗಿ ಸ್ವಲ್ಪ ಹಣವನ್ನೂ ಇಟ್ಟುಕೊಳ್ಳಲು ಮನಸ್ಸಾಗಿಲ್ಲ.

ಜೀವಮಾನವಿಡೀ ರೋಗಿಗಳ ಸೇವೆ ಮಾಡಿ, ಬಂದ ಸಂಬಳದಿಂದ ಉಳಿತಾಯ ಮಾಡಿದ್ದ 3.4 ಕೋಟಿ ರು.ಗಳನ್ನು ದಾನ ಮಾಡುವ ಮೂಲಕ ಡಿ.5ರಂದು 100ನೇ ವರ್ಷದ ಜನ್ಮದಿನ ಆಚರಣೆಯನ್ನು ಅರ್ಥಪೂರ್ಣವಾಗಿಸಿಕೊಳ್ಳಲು ಇಚ್ಛಿಸಿದ್ದಾರೆ.

7 ದಶಕಗಳ ಹಿಂದೆ ವೈದ್ಯರಾಗಿ ಪ್ರಮಾಣವಚನ ಸ್ವೀಕಾರ ಮಾಡುವ ವೇಳೆ, 'ಜನರಿಗೆ ಉತ್ತಮ ಆರೋಗ್ಯ ಸೇವೆ ನೀಡುತ್ತೇನೆ' ಎಂದು ಪ್ರಮಾಣ ಮಾಡಿದ್ದ ಡಾ.ಕೆ.ಲಕ್ಷ್ಮೀಬಾಯಿ ಅದಕ್ಕೆ ತಕ್ಕಂತೆಯೇ ಸೇವಾವಧಿ ಪೂರ್ಣಗೊಳಿಸಿದ್ದರು. ಈಗ ಜೀವಮಾನದ ಉಳಿತಾಯದ ಹಣವನ್ನೆಲ್ಲಾ ಈ ರೀತಿ ದಾನ ಮಾಡಿದ್ದಾರೆ. ಆದರೆ ಅವರು ಎಲ್ಲಿಯೂ ಹೇಳಿಕೊಂಡಿಲ್ಲ. ಆದರೆ, 3.40 ಕೋಟಿ ರು. ಮೊತ್ತವನ್ನು ಮಹಿಳಾ ಕ್ಯಾನ್ಸರ್ ರೋಗಿಗಳ ಉತ್ತಮ ಚಿಕಿತ್ಸೆಗಾಗಿ ಬಳಸಿಕೊಳ್ಳಬೇಕು ಎನ್ನುವುದಷ್ಟೇ ಅವರ ಕೋರಿಕೆಯಾಗಿದೆ.

ಭುವನೇಶ್ವರದ ಏಮ್ಸ್ ಆಸ್ಪತ್ರೆ ಮುಖ್ಯಸ್ಥರಿಗೆ ದಾನಪತ್ರ ಬರೆದು ಸಹಿ ಹಾಕಿರುವ ಡಾ. ಲಕ್ಷ್ಮಿಬಾಯಿ ಅವರ ಸರಳವಾದ ಪತ್ರಕ್ಕೆ, ವೈದ್ಯಕೀಯ ಆಸ್ಪತ್ರೆ ಹಾಗೂ ಕಾಲೇಜು ಒಪ್ಪಿಗೆ ನೀಡಿರುವ ಹಸ್ತಾಂತರಿಸಿರುವ ಪತ್ರವೇ ಈಗ ಡಾ. ಲಕ್ಷ್ಮೀಬಾಯಿ ಅವರ 100ನೇ ಜನ್ಮದಿನಕ್ಕೆ ಮುಖ್ಯ ಉಡುಗೊರೆಯಾಗಿದೆ.

ತಮ್ಮ ದಾನದ ನಿರ್ಧಾರವನ್ನು ಗುಟ್ಟಾಗಿಯೇ ಇಡಲು ಬಯಸಿದ್ದ ಡಾ.ಲಕ್ಷ್ಮಿಬಾಯಿ, ಡಿ.5ರ ಜನ್ಮದಿನ ವೇಳೆ ಏಮ್ಸ್‌ನಲ್ಲಿ ಚಿಕಿತ್ಸೆ ಪಡೆಯುತ್ತಿರುವ ಗೈನಾಕಾಲಜಿ ಹಾಗೂ ಆಂಕಾಲಜಿ(ಕ್ಯಾನ್ಸರ್) ರೋಗಿಗಳಿಗೆ ಉಡುಗೊರೆಯಾಗಿ ನೀಡಲು ಬಯಸಿದ್ದರು. ಆದರೆ, ಅವರ ಈ ಕೊಡುಗೆಯ ವಿಚಾರ ವೈದ್ಯಕೀಯ ಸಿಬ್ಬಂದಿಗಳ ನಡುವೆ ಒಬ್ಬರಿಂದೊಬ್ಬರಿಗೆ ಹರಡಿತು. ಕಡೆಗೆ ಆಕೆ ಬರೆದಿದ್ದ ಪತ್ರವೂ ಜಾಲತಾಣದಲ್ಲಿ ವೈರಲ್ ಆಯಿತು.

ಒಡಿಶಾ ರಾಜ್ಯದಲ್ಲಿ ಮೊದಲ ಸ್ತ್ರೀರೋಗ ತಜ್ಞರುಗಳಲ್ಲಿ ಒಬ್ಬರಾಗಿದ್ದ ಡಾ.ಕೆ.ಲಕ್ಷ್ಮೀಬಾಯಿ, ನನ್ನ ನಿರ್ಗಮದ ನಂತರವೂ, ನನ್ನ ಉಳಿತಾಯದ ಹಣದಿಂದ ರೋಗಿಗಳ ಶುಶ್ರೂಷೆ ಮುಂದುವರಿಯುತ್ತದೆ ಎಂಬುದೇ ಖುಷಿಯ ವಿಚಾರ ಎಂದಿದ್ದಾರೆ.

ತುಮಕೂರು ವಿವಿಗೆ ಶಿವಕುಮಾರ ಸ್ವಾಮೀಜಿ ಹೆಸರಿಡಲು ಮನವಿ

ಬೆಂಗಳೂರು: ತುಮಕೂರು ವಿಶ್ವವಿದ್ಯಾಲಯಕ್ಕೆ ಸಿದ್ಧಗಂಗೆಯ ಡಾ.ಶಿವಕುಮಾರ ಮಹಾಸ್ವಾಮಿಗಳ ಹೆಸರಿಡಲು ವಿವಿ ಸಿಂಡಿಕೇಟ್ ಸದಸ್ಯ ಬಸವರಾಜ ಕನ್ನಾಳೆ ಮನವಿ ಮಾಡಿದ್ದಾರೆ.

ಈ ಕುರಿತು ರಾಜ್ಯಪಾಲರಾದ ಥಾವರ ಚಂದ್ ಗೆಹ್ಲೋತ್ ಅವರಿಗೆ ಮನವಿ ಪತ್ರವನ್ನು ಕುಲಪತಿಗಳ ಮೂಲಕ ಸಲ್ಲಿಸಿರುವ ಅವರು, ಕರ್ನಾಟಕ ರಾಜ್ಯದ ವಿವಿಗಳಿಗೆ ಮಹಾತ್ಮರುಗಳ ಹೆಸರಿಡುವ ಪದ್ಧತಿ ರೂಢಿಯಲ್ಲಿದ್ದು, ಅದರಂತೆ ಸರಕಾರವು ಆಗಾಗ ಸುತ್ತೋಲೆ, ಅಧಿಸೂಚನೆ ಹೊರಡಿಸುತ್ತ ಬಂದಿರುತ್ತದೆ. ಇತ್ತೀಚೆಗೆ ರಾಯಚೂರು ವಿವಿಗೆ ಆದಿಕವಿ ಶ್ರೀಮಹರ್ಷಿ ವಾಲ್ಮೀಕಿ ವಿವಿ ಹಾಗೂ ಬೆಂಗಳೂರು ನಗರ ವಿವಿಗೆ ಡಾ. ಮನಮೋಹನ್ ಸಿಂಗ್ ವಿವಿ ಎಂದು ಮರುನಾಮಕರಣ ಮಾಡುವ ಸಂದರ್ಭದಲ್ಲಿ ಸದನದಲ್ಲಿ ತುಮಕೂರು ಗ್ರಾಮೀಣ ವಿಧಾನಸಭಾ ಕ್ಷೇತ್ರದ ಶಾಸಕ ಸುರೇಶಗೌಡರವರು ಡಾ.ಶಿವಕುಮಾರ ಸ್ವಾಮಿ ಹೆಸರಿಸುವಂತೆ ಶಿಫಾರಸ್ಸು ಮಾಡಿದ್ದರು.

ತುಮಕೂರು ಜಿಲ್ಲೆಯು ಪ್ರಮುಖ ಶೈಕ್ಷಣಿಕ ಹಾಗೂ ಧಾರ್ಮಿಕ ಕೇಂದ್ರವಾಗಿದಕ್ಕೆ ಕಾರಣವಾದ ಸಂಸ್ಥೆಗಳ ಸಿಂಹಪಾಲು ಡಾ. ಶಿವಕುಮಾರ ಸ್ವಾಮಿಗಳ ನೇತೃತ್ವ ಹಾಗೂ ಸಿದ್ದಗಂಗಾ ಮಠದ್ದಾಗಿದೆ. ತ್ರಿವಿಧ ದಾಸೋಹಿ ಸಮ್ಯೈಕ್ಯ ಭಾವವನ್ನು ಹೊಂದಿ ಜಾತಿ, ಕುಲ,ಧರ್ಮ ಎಲ್ಲವನ್ನೂ ಮೀರಿ ಶಿಕ್ಷಣ ರಂಗದಲ್ಲಿ ಅಪಾರ ಕೊಡುಗೆಯನ್ನು ನೀಡಿದ್ದಾರೆ. ಶತಾಯುಷಿಗಳಾಗಿದ್ದ ಡಾ. ಶಿವಕುಮಾರಸ್ವಾಮಿಗಳ ಹೆಸರನ್ನು ತುಮಕೂರು ವಿಶ್ವವಿದ್ಯಾಲಯಕ್ಕೆ ಇಡುವುದು ಅತ್ಯಂತ ಸೂಕ್ತ ಎಂದು ಮನವಿಯಲ್ಲಿ ವಿವರಿಸಿದ್ದಾರೆ.

ನಿಯೋಗದ ಸದಸ್ಯರಿಗೆ ಧ್ವನಿ ಸ್ಪಂದನ ಯೋಜನೆಯ ಕುರಿತು ಅಕ್ರಂ ಪಾಷ ಮಾಹಿತಿ

ಕೆಎಸ್‌ಆರ್‌ಟಿಸಿಗೆ ಜರ್ಮನಿ ನಿಯೋಗ ಭೇಟಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಭಾರತದ ಪ್ರವಾಸದ ಅಂಗವಾಗಿ ಜರ್ಮನಿ ಸರಕಾರದ ಫೆಡರಲ್ ಸಚಿವಾಲಯ ಇಕನಾಮಿಕ್ ಕೋಆಪರೇಷನ್ ಆ್ಯಂಡ್ ಡೆವಲಪ್‌ಮೆಂಟ್‌ನ ಉನ್ನತ ನಿಯೋಗವು ಕೆಎಸ್‌ಆರ್‌ಟಿಸಿಯ ಕೇಂದ್ರ ಕಚೇರಿಗೆ ಭೇಟಿ ನೀಡಿತು.

ಈ ವೇಳೆ ನಿಯೋಗದ ಸದಸ್ಯರು ದೃಷ್ಟಿ ದೋಷ ಹೊಂದಿದ ಪ್ರಯಾಣಿಕರ ಸಾರ್ವಜನಿಕ ಸಾರಿಗೆಯ ಬಳಕೆಯನ್ನು ಹೆಚ್ಚಿಸುವ ಉದ್ದೇಶದಿಂದ ವಿನ್ಯಾಸಗೊಳಿಸಲಾದ ಸಹಾಯಕ ಧ್ವನಿ-ನೇವಿಗೇಶನ್ ಪರಿಹಾರ ಧ್ವನಿ ಸ್ಪಂದನ-ಆನ್ ಬೋರ್ಡ್ ಬಗ್ಗೆ ಖುದ್ದು ಮಾಹಿತಿ ಪಡೆದರು. ನಿಗಮದ ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷ, ಅವರು ಧ್ವನಿ ಸ್ಪಂದನ ಯೋಜನೆ ಕುರಿತು ವಿವರವಾಗಿ ಮಾಹಿತಿ ನೀಡಿ, ಈ ಯೋಜನೆಗೆ ಭಾರತ ಸರಕಾರದಿಂದ ದೊರೆತ ಪ್ರಶಸ್ತಿ ತೋರಿಸಿದರು.

ಈ ನಿಯೋಗದಲ್ಲಿ ಬಿಎಂಝೆಡ್‌ನ ಮಹಾ ನಿರ್ದೇಶಕಿ ಮಿಸ್. ಕ್ರಿಸ್ಟೀನ್ ಟೋಟ್‌ಝ್ಕಿ , ಮಿಸ್. ಬಾರ್ಬರಾ ಶಾಫರ್ ಮತ್ತು ಕ್ರಿಸ್ಟೋಫ್ ವಾನ್ ಸ್ಟೆಕೋವ್ ಇದ್ದರು. ರೈಸ್ಡ್ ಲೈನ್ಸ್ ಫೌಂಡೇಶನ್ ಅಭಿವೃದ್ಧಿಪಡಿಸಿದ ಮತ್ತು ಜಿಐಝೆಡ್‌ನ ಗ್ರೀನ್ ಅರ್ಬನ್ ಮೊಬಿಲಿಟಿ ಇನೋವೇಶನ್ ಮುಂದಾಳತ್ವದಲ್ಲಿ ವಿಸ್ತರಿಸಲ್ಪಟ್ಟ ಆನ್‌ಬೋರ್ಡ್ ವ್ಯವಸ್ಥೆಯ ಜಾರಿಗೆ ಸಂಬಂಧಿಸಿದ ಮಾಹಿತಿಯನ್ನು ಅವರಿಗೆ ನೀಡಲಾಯಿತು.

ಕೆಎಸ್‌ಆರ್‌ಟಿಸಿ ಕೇಂದ್ರ ಕಚೇರಿಗೆ ಭೇಟಿ ನೀಡಿದ ಜರ್ಮನಿ ಸರಕಾರದ ನಿಯೋಗಕ್ಕೆ ಕೆಎಸ್‌ಆರ್‌ಟಿಸಿ ಎಂ.ಡಿ.ಅಕ್ರಂ ಪಾಷ ಹಲವು ಉಪಕ್ರಮಗಳ ಕುರಿತು ಮಾಹಿತಿ ನೀಡಿದರು.

ಈ ವೇಳೆ ಬಿಎಂಝೆಡ್ ನಿಯೋಗವು ಮೈಸೂರು ನಗರ ಬಸ್‌ಗಳಲ್ಲಿ ಕಾರ್ಯಾಚರಣೆಯಲ್ಲಿ ಇರುವ ಸಾಧನವನ್ನು ನೇರವಾಗಿ ಅನುಭವಿಸಿ, ಒಳಗೊಂಡಿರುವ ಎಲ್ಲ ವರ್ಗಗಳಿಗೂ ಅನುಕೂಲವಾಗುವ ಸಂಚಾರ ವ್ಯವಸ್ಥೆ ನಿರ್ಮಾಣದ ನಿಗಮದ ಬದ್ಧತೆಯನ್ನು ಮೆಚ್ಚಿದರು. ಬಳಕೆದಾರ ಕೇಂದ್ರೀಕೃತ, ನವೀನ ಹಾಗೂ ಸುಲಭ ಪ್ರವೇಶದ ಮೊಬಿಲಿಟಿ ಸಂಚಾರ ಪರಿಹಾರಗಳನ್ನು ಅಳವಡಿಸುವಲ್ಲಿ ನಿಗಮವು ತೋರಿದ ನಾಯಕತ್ವವನ್ನು ಪ್ರಶಂಸಿಸಿ, ಮೈಸೂರು ನಗರ ಸಾರಿಗೆಯ ಈ ವ್ಯವಸ್ಥೆಯನ್ನು ಮುಂದುವರಿಸಿರುವುದಕ್ಕಾಗಿ ಅಭಿನಂದಿಸಿದರು. ಈ ವೇಳೆ ಜರ್ಮನ್ ರಾಯಭಾರ ಕಚೇರಿ ದೆಹಲಿಯ ಗೋಟ್‌ಫ್ರೈಡ್ ವಾನ್ ಗೆಮಿಂಗನ್, ಪಾಮೆಲಾ ಬೈಜಲ್, ಜೋಗಾನ್ಸ್ ಶ್ನೈಡರ್, ಶೀನಂಪುರಿ, ಜಾಸ್ಮಿನ್ ಕೌರ್ ಹಾಗೂ ಜಿಐಝಡ್ ದೇಶ ನಿರ್ದೇಶಕಿ ಜುಲಿ ರೆವಿಯರ್ ಇದ್ದರು.

2023ರಿಂದಲೇ ವೆಬ್‌ಸೈಟ್ ರೂಪದಲ್ಲಿ ಬಳಕೆಯಲ್ಲಿದ್ದ ಕೇಂದ್ರ ಸರಕಾರದ ಸಂಚಾರ್ ಸಾಥಿ ಆ್ಯಪ್ ಇನ್ನು ಮುಂದೆ ನಮ್ಮ ಮೊಬೈಲ್‌ಗಳಲ್ಲೂ ಆ್ಯಪ್ ರೂಪದಲ್ಲಿ ಇರಲಿದೆ. ಹೊಸ ಮೊಬೈಲ್‌ಗಳಲ್ಲಿ ಕೊಳ್ಳುವಾಗಲೇ ಅದಿರಲಿದೆ. ಹಳೆಯ ಮೊಬೈಲ್ ಆದರೆ ಕಂಪನಿಗಳೇ ಸಾಫ್ಟ್‌ವೇರ್ ಅಪ್ಡೇಟ್ ಕೊಟ್ಟು ಸೇರಿಸಲಿವೆ. ಸೈಬರ್ ಅಪರಾಧಗಳನ್ನು ತಡೆಯುವುದು ಇದರ ಉದ್ದೇಶ. ಇದು ಪರ-ವಿರೋಧ ಚರ್ಚೆಗೂ ಕಾರಣವಾಗಿದೆ. ಈ ಹಿನ್ನೆಲೆಯಲ್ಲಿ ಸಾಥಿಯ ಪರಿಚಯ ಇಲ್ಲಿದೆ.

ಸಂಚಾರ್ ಸಾಥಿ ಇನ್ನು ಮೊಬೈಲ್ ಸಾಥಿ

ಸೈಬರ್ ಅಪರಾಧ ತಡೆಯಲು ಕೇಂದ್ರದ ಆ್ಯಪ್ | ಲಾಭಗಳೇನು? ಪರ-ವಿರೋಧ ಚರ್ಚೆಗಳೇನು?

‘ಮೊಬೈಲ್ ತಯಾರಿಸುವಾಗಲೇ ಸಂಚಾರ್ ಸಾಥಿ ಅಳವಡಿಕೆ’

ಹೊಸದಾಗಿ ತಯಾರಿಸುವ ಎಲ್ಲಾ ಮೊಬೈಲ್‌ಗಳಲ್ಲಿ ಸರ್ಕಾರಿ ಒಡೆತನದ ಸೈಬರ್ ಭದ್ರತಾ ಆ್ಯಪ್ ಸಂಚಾರ್ ಸಾಥಿಯನ್ನು ಅಳವಡಿಸಿರಬೇಕು. ಅರ್ಥಾತ್ ಗ್ರಾಹಕರಿಗೆ ತಲುಪುವಾಗಲೇ ಅವು ಮೊಬೈಲ್‌ನಲ್ಲಿರಬೇಕು, ಇದು ಕಡ್ಡಾಯ ಎಂದು ಕೇಂದ್ರ ಸರಕಾರ ಹೇಳಿದೆ. ಆ್ಯಪಲ್, ಸ್ಯಾಮ್ಸಂಗ್, ವಿವೋ ಹಾಗೂ ಒಪ್ಪೋ ಸಹಿತ ಪ್ರಮುಖ ಸ್ಮಾರ್ಟ್‌ಫೋನ್ ತಯಾರಕರಿಗೆ ಕೇಂದ್ರ ದೂರಸಂಪರ್ಕ ಸಚಿವಾಲಯ ನಿರ್ದೇಶನ ನೀಡಿದೆ. ಈಗಾಗಲೇ ಬಳಕೆಯಲ್ಲಿರುವ ಮೊಬೈಲ್‌ಗಳಿಗೆ ಸಾಫ್ಟ್‌ವೇರ್ ಅಪ್ಡೇಟ್ ಮೂಲಕ ಈ ಆ್ಯಪ್ ಲಭ್ಯವಾಗುವಂತೆ ಮಾಡಬೇಕು ಎಂದು ಸೂಚನೆ ನೀಡಿದೆ.

ಏನಿದು ಸಂಚಾರ್ ಸಾಥಿ ಆ್ಯಪ್?

2023ರಲ್ಲಿ ಪರಿಚಯಿಸಿದ ಸಂಚಾರ್ ಸಾಥಿ ವೆಬ್‌ಸೈಟ್‌ನ ಮುಂದುವರಿದ ಆವೃತ್ತಿಯೇ ಈ ಹೊಸ ಆ್ಯಪ್. ಈ ವರ್ಷದ ಜನವರಿಯಲ್ಲಿ ದೂರಸಂಪರ್ಕ ಇಲಾಖೆಯು ಆಂಡ್ರಾಯ್ಡ್ ಹಾಗೂ ಐಒಎಸ್ ಬಳಕೆದಾರರಿಗೆ ಈ ಆ್ಯಪ್ ಅನ್ನು ಬಿಡುಗಡೆ ಮಾಡಿತ್ತು. ಈ ಆ್ಯಪ್ ಅಳವಡಿಸಿದ ಬಳಿಕ ಮೊಬೈಲ್ ಕಳೆದು ಹೋದರೆ ಅಥವಾ ಕಳ್ಳತನವಾದರೆ ಬಳಕೆದಾರರು ಯಾವುದೇ ನೆಟ್ವರ್ಕ್ ಇದ್ದರೂ ಮೊಬೈಲ್ ಅನ್ನು ಬ್ಲಾಕ್ ಮಾಡಬಹುದು. ಬ್ಲಾಕ್ ಆದ ಬಳಿಕ ದೇಶದ ಯಾವುದೇ ಭಾಗದಲ್ಲಿ ಮೊಬೈಲ್ ಬಳಕೆಯಾದರೂ, ಕಾನೂನು ಜಾರಿ ಸಂಸ್ಥೆಗಳಿಗೆ ತಿಳಿಯಲಿದೆ.

ಈ ಆ್ಯಪ್‌ನಲ್ಲಿ ‘ಚಕಾಸು’ (ವಂಚನೆ ಎಂದು ಬಳಕೆದಾರರಿಗೆ ತಿಳಿದು ಬಂದರೆ ರಿಪೋರ್ಟ್ ಮಾಡುವ ವ್ಯವಸ್ಥೆ) ಸೌಲಭ್ಯವಿದ್ದು ವಂಚನೆ ಕರೆ, ಸಂದೇಶ ಹಾಗೂ ವಾಟ್ಸ್‌ಆ್ಯಪ್ ಸಂದೇಶಗಳನ್ನು ಬ್ಲಾಕ್ ಮಾಡಬಹುದು. ಜೊತೆಗೆ ನಿಮ್ಮ ಹೆಸರಿನಲ್ಲಿ ನೋಂದಣಿಯಾಗಿರುವ ಸಂಖ್ಯೆಗಳನ್ನೂ ಇದರಲ್ಲಿ ಪರಿಶೀಲನೆ ಮಾಡಬಹುದು.

ಲಾಭಗಳೇನು?

1. ಎಲ್ಲಾ ಪ್ರಮುಖ ಸ್ಮಾರ್ಟ್‌ಫೋನ್ ಬ್ರ್ಯಾಂಡ್‌ಗಳಲ್ಲಿ ಈ ಆ್ಯಪ್ ಅಳವಡಿಕೆಯಾದರೆ ಹಲವು ಲಾಭಗಳು: ಕೇಂದ್ರದ ಉದ್ದೇಶ
2. ಇದು ಅಳವಡಿಕೆಯಾದರೆ ಮೊಬೈಲ್ ಕಳೆದುಹೋದರೂ ಪತ್ತೆ ಸಾಧ್ಯ. ಎಸ್‌ಎಂಎಸ್, ವಾಟ್ಸಾಪ್ ಬ್ಲಾಕ್ ಮಾಡಬಹುದು
3. ಸೈಬರ್ ಅಪರಾಧ, ನಕಲಿ ಐಇಎಂಐ ಸಂಖ್ಯೆ ಬಳಸಿ ನಿಮ್ಮ ಮೊಬೈಲ್ ಮೂಲಕ ಹಗರಣ ಮಾಡುವುದನ್ನು ತಡೆಯಬಹುದು
4. ಈಗಾಗಲೇ ಬಳಕೆಯಲ್ಲಿರುವ ಆ್ಯಪ್‌ನಿಂದ 37 ಲಕ್ಷಕ್ಕೂ ಅಧಿಕ ಕಳ್ಳತನ ಪತ್ತೆ, ಕಳೆದುಹೋದ ಮೊಬೈಲ್ ಹುಡುಕಲು ನೆರವು
5. ಯಾರದ್ದೋ ಹೆಸರಲ್ಲಿ ಸಿಮ್‌ಗಳ ನಕಲಿ ನೋಂದಣಿ, ನಿಮ್ಮ ಹೆಸರಲ್ಲಿ ಬೇರೆ ಯಾವುದೋ ಸಂಖ್ಯೆ ಬಳಕೆ ತಡೆಯಬಹುದು
6. ಇದುವರೆಗೆ 3 ಕೋಟಿಗೂ ಅಧಿಕ ನಕಲಿ ನೋಂದಣಿಯನ್ನು ರದ್ದು ಮಾಡಲು ಸಹಾಯ: ಕೇಂದ್ರದ ಮೂಲಗಳ ಮಾಹಿತಿ



ಅನಧಿಕೃತ ನೋಂದಣಿ ಬಗ್ಗೆ ವರದಿ ಮಾಡಬಹುದು. ಇದರಲ್ಲಿ ನೋ ಯುವರ್ ಮೊಬೈಲ್ (ಕೆವೈಎಂ) ಎನ್ನುವ ಆಯ್ಕೆ ಇದ್ದು, ಬಳಕೆದಾರರು ತಮ್ಮ ಸ್ಮಾರ್ಟ್ ಫೋನ್‌ಗಳ ಅಧಿಕೃತತೆಯನ್ನು ಪರಿಶೀಲಿಸಬಹುದು.

ಪೂರ್ವಸ್ಥಾಪಿತ ಆ್ಯಪ್ ಅಂದರೆ?

ಅಪ್ಲಿಕೇಶನ್‌ಗಳನ್ನು ಬಳಕೆದಾರರು ಆ್ಯಂಡ್ರಾಯ್ಡ್ ಅಥವಾ ಆ್ಯಪಲ್ ಪ್ಲೇ ಸ್ಟೋರ್‌ನಿಂದ ಡೌನ್‌ಲೋಡ್ ಮಾಡಬಹುದು. ಆದರೆ ಪ್ರೀಲೋಡೆಡ್ (ಪೂರ್ವಸ್ಥಾಪಿತ) ಅಪ್ಲಿಕೇಶನ್‌ಗಳು ಫೋನಿನ ಜೊತೆಗೆ ಬರುತ್ತವೆ. ಅವನ್ನು ಪ್ರತ್ಯೇಕವಾಗಿ ಡೌನ್‌ಲೋಡ್ ಮಾಡುವ ಅಗತ್ಯವಿಲ್ಲ. ಐಫೋನ್ ಅಥವಾ ಆಂಡ್ರಾಯ್ಡ್ ಫೋನ್ ಖರೀದಿಸುವಾಗ ಆ್ಯಪಲ್ ಕಂಪನಿ ಅಥವಾ ಗೂಗಲ್ ಕಂಪನಿಯ ಕೆಲವು ಅಪ್ಲಿಕೇಶನ್‌ಗಳು ಪೂರ್ವಸ್ಥಾಪಿತವಾಗಿ ಬರುತ್ತವೆ. ಇದರ ಜೊತೆ ಫೋನ್ ತಯಾರಕ ಕಂಪನಿಯ ಕೆಲ ಅಪ್ಲಿಕೇಶನ್‌ಗಳು ಇರುತ್ತವೆ. ಈ ಅಪ್ಲಿಕೇಶನ್‌ಗಳನ್ನು ಯಾವುದೇ ಕಾರಣಕ್ಕೂ ಅನ್ ಇನ್‌ಸ್ಟಾಲ್ ಮಾಡಲು ಸಾಧ್ಯವಾಗುವುದಿಲ್ಲ.

90 ದಿನಗಳ ಕಾಲಾವಕಾಶ

ನ.28ರಂದು ಕೇಂದ್ರ ಸರಕಾರ ಮೊಬೈಲ್ ಕಂಪನಿಗಳಿಗೆ ಆದೇಶ ನೀಡಿದ್ದು, ಇನ್ನು 90 ದಿನಗಳಲ್ಲಿ ಹೊಸತಾಗಿ ತಯಾರಾದ ಮೊಬೈಲ್‌ಗಳು, ಈಗಾಗಲೇ ಇರುವ ಮೊಬೈಲ್‌ಗಳಲ್ಲಿ ಅಳವಡಿಕೆಯಾಗಬೇಕು ಎಂದು ಸೂಚಿಸಿದೆ. ಅಷ್ಟೇ ಅಲ್ಲ ಬಳಕೆದಾರರು ಈ ಆ್ಯಪ್ ಅನ್ನು ತಮ್ಮ ಫೋನ್‌ನಿಂದ ತೆಗೆದುಹಾಕಲು ಸಾಧ್ಯವಾಗದಂತೆ ನಿರ್ಬಂಧ ವಿಧಿಸಲಾಗಿದೆ ಎಂದು ಕೆಲವು ಮೂಲಗಳು ಹೇಳಿವೆ. ಇದು ಗ್ರಾಹಕರ ಆತಂಕಕ್ಕೆ ಕಾರಣವಾಗಿದೆ. ಇದಕ್ಕೆ ವರದಿಯನ್ನು ಸಲ್ಲಿಸಲು ಮೊಬೈಲ್ ಕಂಪನಿಗಳಿಗೆ ಒಟ್ಟು 120 ದಿನಗಳ ಸಮಯ ನೀಡಲಾಗಿದೆ.

ಕಾಡಿಗೆ ಆನೆಗಳ ಹಿಂಡು ಓಡಿಸಲು ಅರಣ್ಯ ಇಲಾಖೆಗೆ ಆಗ್ರಹ

40 ಕಾಡಾನೆ ಕಂಡ ಗ್ರಾಮಸ್ಥರಲ್ಲಿ ಆತಂಕ

ಚಾಮರಾಜನಗರ: ಕರ್ನಾಟಕ-ತಮಿಳುನಾಡು ಗಡಿ ಪ್ರದೇಶವಾದ ಅರಳವಾಡಿಯಲ್ಲಿ 40ಕ್ಕೂ ಹೆಚ್ಚು ಕಾಡಾನೆಗಳು ಪ್ರತ್ಯಕ್ಷಗೊಂಡಿದ್ದು, ಸ್ಥಳೀಯರಲ್ಲಿ ಆತಂಕ ಮೂಡಿಸಿದೆ. ಒಂಟಿ ಸಲಗಗಳನ್ನು ಕಾಡಿಗೆ ದಾಟಿಸಲು ಅರಣ್ಯ ಇಲಾಖೆಗೆ ಮನವಿ ಮಾಡಿದ್ದಾರೆ.

ಕಳೆದ 5-6 ದಿನಗಳಿಂದ ಗಡಿಗ್ರಾಮದ ಜಮೀನುಗಳಲ್ಲಿ 8 ರಿಂದ 10 ಆನೆಗಳು ಓಡಾಡುತ್ತಿದ್ದವು. ಆದರೆ, ದಿಢೀರ್ 40ಕ್ಕೂ ಅಧಿಕ ಆನೆ ಪ್ರತ್ಯಕ್ಷಗೊಂಡಿದ್ದು, ಬೆಳೆಹಾನಿ ಮಾಡುವ ಆತಂಕದಲ್ಲಿ ರೈತರಿದ್ದಾರೆ.

ಚಾಮರಾಜನಗರ ತಾಲೂಕಿನ ಬಿಸಲವಾಡಿ ಹಾಗೂ ಗಡಿ ಹಂಚಿಕೊಂಡಿರುವ ಅರಳವಾಡಿ ಗ್ರಾಮದ ವ್ಯಾಪ್ತಿಯ ಜಮೀನುಗಳಲ್ಲಿ ಕಾಡಾನೆಗಳ ಹಿಂಡು ಕಾಣಿಸಿಕೊಂಡಿವೆ. ಈ ಭಾಗದ ರೈತರು ಜಮೀನುಗಳಲ್ಲಿ ಬೆಳೆದ ಫಸಲನ್ನು ತುಳಿದು ನಾಶಪಡಿಸಿವೆ. ಕಾಡಾನೆಗಳ ಹಿಂಡನ್ನು ಕಂಡು ರೈತರು ಆತಂಕಗೊಂಡಿದ್ದು ಜಮೀನುಗಳಿಗೆ ತೆರಳಲು ಹಿಂದೇಟು ಹಾಕುತ್ತಿದ್ದಾರೆ. ಜಮೀನುಗಳಲ್ಲಿ ಓಡಾಡುತ್ತಿರುವ ಕಾಡಾನೆಗಳ ಹಿಂಡಿನ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ವಿಷಯ ತಿಳಿದು ಅರಣ್ಯ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಸ್ಥಳಕ್ಕೆ ತೆರಳಿದ್ದು ಆನೆಗಳನ್ನು ಕಾಡಿನತ್ತ ಓಡಿಸಲು ಕ್ರಮವಹಿಸಿದ್ದಾರೆ.

> ತಮಿಳುನಾಡಿನ ಕೊಂಗಳ್ಳಿ ಗ್ರಾಮಕ್ಕೆ ಒಂಟಿ ಸಲಗವೊಂದು ಮಂಗಳವಾರ ಬೆಳ್ಳಂ ಬೆಳಗ್ಗೆ ನುಗ್ಗಿದೆ. ಈ ವೇಳೆ ಗ್ರಾಮಸ್ಥರೆಲ್ಲ ಆತಂದಿಂದ ಓಡಿ ಹೋದರು. ಗಾಂಭೀರ್ಯದಿಂದ ಗ್ರಾಮದ ಬೀದಿಗಳಲ್ಲಿ ಆನೆ ಓಡಾಡಿತು. ನಂತರ ಜನರ ಚೀರಾಟಕ್ಕೆ ಹೆದರಿ ಕಾಡಿನತ್ತ ತೆರಳಿತು.
> **- ಮಲ್ಲಿಕಾರ್ಜುನ ಪ್ರಸಾದ್, ಅರ್ಚಕ**

ಬೆಳಗಾವಿಯ ಹೊಸ ವಂಟಮೂರಿ ಗ್ರಾಮದಲ್ಲಿ ಘಟನೆ

ತಳ್ಳುಗಾಡಿಯಲ್ಲಿ ಎಟಿಎಂ ಇಟ್ಟುಕೊಂಡು ಪರಾರಿ

ಬೆಳಗಾವಿ: ತಳ್ಳು ಗಾಡಿ ತಂದು ಎಟಿಎಂ ಹೊತ್ತುಕೊಂಡು ಕಳ್ಳತನ ಮಾಡಿ ಪರಾರಿಯಾಗಿರುವ ಘಟನೆ ಬೆಳಗಾವಿ ತಾಲೂಕು ಹೊಸ ವಂಟಮೂರಿ ಗ್ರಾಮದಲ್ಲಿ ತಡವಾಗಿ ಬೆಳಕಿಗೆ ಬಂದಿದ್ದು, ಸಿಸಿ ಕ್ಯಾಮರಾದಲ್ಲಿ ದೃಶ್ಯ ಸೆರೆಯಾಗಿದೆ.

ರಾಷ್ಟ್ರೀಯ ಹೆದ್ದಾರಿ 48ಕ್ಕೆ ಹೊಂದಿಕೊಂಡಿರುವ ಇಂಡಿಯಾ ಎಂಟಿಎಂ ಅನ್ನು ಮೂರು ಜನ ಖದೀಮರಿಂದ ಕನ್ನ ಹಾಕಿ ಎಟಿಎಂನಲ್ಲಿರುವ ಸೆನ್ಸಾರ್ ಗೆ ಶಬ್ದ ಬರದಂತೆ ಬ್ಲ್ಯಾಕ್ ಸ್ಪ್ರೇ ಮಾಡಿ ಕಳ್ಳತನ ಮಾಡಿ ಮಷಿನ್ ಹೊರ ತೆಗೆದು ತಳ್ಳುವ ಗಾಡಿಯಲ್ಲಿಟ್ಟುಕೊಂಡು ಎರಡುನೂರು ಮೀಟರ್ ತಳ್ಳಿಕೊಂಡು ಹೋಗಿ ತಮ್ಮ ವಾಹನದಲ್ಲಿಟ್ಟುಕೊಂಡು ಪರಾರಿಯಾಗಿದ್ದಾರೆ.

ಸಂಶಯ ಬರದಂತೆ ಎಟಿಎಂ ಬಳಿ ತಳ್ಳುಗಾಡಿ ತಂದಿಟ್ಟಿದ್ದ ಖದೀಮರ ಕೈ ಚಳಕ ಸಿಸಿಟಿವಿ ಕ್ಯಾಮರಾದಲ್ಲಿ ಸೆರೆಯಾಗಿದೆ. ಖದೀಮರು ಐಡಿಯಾ ಕಂಡು ದಂಗಾಗಿರುವ ಪೊಲೀಸರು. ಒಂದು ಲಕ್ಷಕ್ಕೂ ಅಧಿಕ ಹಣ ಎಟಿಎಂನಲ್ಲಿತ್ತು. ಸ್ಥಳಕ್ಕೆ ಕಾಕತಿ ಠಾಣೆ ಪೊಲೀಸರು ಭೇಟಿ ಪರಿಶೀಲನೆ ನಡೆಸಿದ್ದು, ಕಾಕತಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದ ಘಟನೆ ನಡೆದಿದೆ.

ಬ್ಯಾಂಕ್ ಸಿಬ್ಬಂದಿಗಳ ನಿರ್ಲಕ್ಷ್ಯ: ಬೊರಸೆ:

ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಆರಂಭವಾಗಿರುವ ಹೊಸ ವಂಟಮೂರಿಯಲ್ಲಿದ್ದ ಇಂಡಿಯನ್ ಎಟಿಎಂನ ಕಳ್ಳತನ ಮಾಡಿದ ಘಟನೆ ನಡೆದಿದೆ ಎಂದು ನಗರ ಪೊಲೀಸ್ ಆಯುಕ್ತ ಭೂಷಣ್ ಬೊರಸೆ ಹೇಳಿದರು.

ಸುವರ್ಣ ವಿಧಾನಸೌಧದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹೊಸ ವಂಟಮೂರಿ ಗ್ರಾಮದಲ್ಲಿ ಇಂಡಿಯನ್ ಬ್ಯಾಂಕ್ ಎಟಿಎಂಗೆ ಸುರಕ್ಷತೆ ಇರಲಿಲ್ಲ. ಅಲ್ಲಿ ಒಂದು ಲಕ್ಷ ರು. ಹಣವನ್ನು ಎಟಿಎಂ ಅಳವಡಿಕೆ ಮಾಡಿದ್ದರು. ಕಳ್ಳರು ತಳ್ಳುಗಾಡಿಯ ಮೂಲಕ ಕಳ್ಳತನ ಮಾಡಲು ಯತ್ನಿಸಿದ್ದರು ಎಂದರು. ಎಟಿಎಂನಲ್ಲಿ ಯಾವುದೇ ಹಣ ಕಳ್ಳತನವಾಗಿಲ್ಲ. ಬ್ಯಾಂಕ್ ಸಿಬ್ಬಂದಿಗಳ ನಿರ್ಲಕ್ಷ್ಯ ಇದರಲ್ಲಿದೆ. ಇಲ್ಲಿ ಎಟಿಎಂ ಅಳವಡಿಸುವ ಅವಶ್ಯಕತೆ ಇರಲಿಲ್ಲ. ಸ್ಥಳೀಯರೇ ಕಳ್ಳತನ ಮಾಡಿರುವ ಶಂಕೆ ಇದೆ. ಈ ಕುರಿತು ಬ್ಯಾಂಕ್ ಸಿಬ್ಬಂದಿಗಳ ವಿಚಾರಣೆಯನ್ನು ಮಾಡಲಾಗುವುದು ಎಂದರು.

ಸಮಾಚಾರ ಸಣ್ಣದಲ್ಲ

ಸಿಎಂಗೆ ಅಭಿನಂದನಾ ಕಾರ್ಯಕ್ರಮ ನಾಳೆ

ಬೆಂಗಳೂರು: ರಾಜ್ಯ ಸರಕಾರಿ ಮಹಿಳಾ ನೌಕರರಿಗೆ ಋತುಚಕ್ರ ರಜೆ ಘೋಷಿಸಿರುವ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಸೇರಿದಂತೆ ಸಂಪುಟ ಸಚಿವರಿಗೆ ಅಭಿನಂದನಾ ಸಮಾರಂಭ ಹಮ್ಮಿಕೊಳ್ಳಲಾಗಿದೆ. ಅಖಿಲ ಕರ್ನಾಟಕ ರಾಜ್ಯ ಸರಕಾರಿ ಮಹಿಳಾ ನೌಕರರ ಸಂಘ ಅಧ್ಯಕ್ಷೆ ರೋಶನಿಗೌಡ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮಹಿಳಾ ನೌಕರರಿಗೆ ಋತುಚಕ್ರ ರಜೆ ಘೋಷಣೆ ಮಾಡುವಲ್ಲಿ ಸಂಘದ ಹೋರಾಟದಲ್ಲಿ ಮುಖ್ಯಮಂತ್ರಿ ಹಾಗೂ ಕಾರ್ಮಿಕ ಸಚಿವರಾದ ಸಂತೋಷ್ ಲಾಡ್ ರವರು ಉತ್ತಮ ಸಹಕಾರ ನೀಡಿದ್ದಾರೆ. ಇದಕ್ಕಾಗಿ ಸಚಿವರಿಗೆ ಅಭಿನಂದನಾ ಕಾರ್ಯಕ್ರಮ ಡಿಸೆಂಬರ್ 4ರಂದು ಬ್ಯಾಂಕ್ವೆಟ್ ಹಾಲ್ ನಲ್ಲಿ ಬೆಳಗ್ಗೆ 10ಗಂಟೆಗೆ ಆಯೋಜಿಸಲಾಗಿದೆ ಎಂದರು.

ಬ್ರೇಕ್‌ಫಾಸ್ಟ್ ಮೀಟಿಂಗ್ ಬರೀ ಟೀಸರ್

ಬೆಂಗಳೂರು: ಸಿಎಂ ಮತ್ತು ಡಿಸಿಎಂ ನಡುವಿನ ಬ್ರೇಕ್ ಫಾಸ್ಟ್ ಮೀಟಿಂಗ್ ಬರೀ ಟೀಸರ್, ಸಿನಿಮಾ ಇನ್ನೂ ಬಾಕಿ ಇದೆ. ಕೆಲವೇ ದಿನಗಳಲ್ಲಿ ಚಿತ್ರ ಬಿಡುಗಡೆಯಾಗಲಿದೆ ಎಂದು ಸಂಸದ ಬಸವರಾಜ ಬೊಮ್ಮಾಯಿ ವ್ಯಂಗ್ಯವಾಡಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, ಕೆಲವೇ ದಿನದಲ್ಲಿ ಕಾಂಗ್ರೆಸ್ ಪರಿಸ್ಥಿತಿ ಏನು ಎನ್ನುವುದು ಹೊರಬೀಳಲಿದೆ. ಇವರಿಬ್ಬರೂ ಒಬ್ಬರಿಗೊಬ್ಬರು ಬ್ರೇಕ್ ಫಾಸ್ಟ್ ಮಾಡುತ್ತ ಕಾಲಹರಣ ಮಾಡುತ್ತಿದ್ದರೆ ರಾಜ್ಯದ ಜನರ ಶ್ರೇಯೋಭಿವೃದ್ಧಿ ಯಾರು ಮಾಡುತ್ತಾರೆ ಎನ್ನುವುದು ನಮ್ಮ ಕಾಳಜಿ. ಒಬ್ಬರು ಕುರ್ಚಿಯನ್ನು ಕಸಿಯಲು ಪ್ರಯತ್ನಿಸುತ್ತಿದ್ದಾರೆ. ಇನ್ನೊಬ್ಬರು ಅದನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಕರ್ನಾಟಕದ ನಾಟಕ ನಿಲ್ಲಬೇಕು ಎನ್ನುವುದು ರಾಜ್ಯದ ಜನರ ಇಚ್ಛೆಯಾಗಿದೆ ಎಂದರು. ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದು ಎರಡೂವರೆ ವರ್ಷವಾಯಿತು. ಕಾಂಗ್ರೆಸ್ ಹೈಕಮಾಂಡ್ ರಾಜ್ಯದ ಗೊಂದಲ ನಿವಾರಿಸುವಲ್ಲಿ ವಿಫಲವಾಗಿದೆ. ಅವರ ಹೈಕಮಾಂಡ್ ಯಾರು? ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರೇ ತಮ್ಮ ಮೇಲೆ ಹೈಕಮಾಂಡ್ ಇದೆ ಎಂದು ಹೇಳಿದ ಮೇಲೆ ಹೈಕಮಾಂಡ್ ಗೆ ಏನು ಅರ್ಥ ಇದೆ. ಇದು ಒಂದು ಕುಟುಂಬದ ವಿಷಯ ಆಗಿದೆ ಎಂದರು.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ರಾಜ್ಯದಲ್ಲಿ ಮುಂದಿನ 5 ದಿನಗಳ ಕಾಲ ಮಳೆ ಸಾಧ್ಯತೆ

ಬೆಂಗಳೂರು: ರಾಜ್ಯದಲ್ಲಿ ಚಳಿಯ ನಡುವೆ ಮುಂದಿನ 5 ದಿನಗಳ ಕಾಲ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ದಕ್ಷಿಣ ಒಳನಾಡು ಮತ್ತು ಕರಾವಳಿ ಭಾಗದ ಕೆಲವೆಡೆ ಇಂದು ಸಾಧಾರಣ ಮಳೆಯಾಗುವ ನಿರೀಕ್ಷೆ ಇದ್ದು, ಉತ್ತರ ಒಳನಾಡು ಭಾಗದಲ್ಲಿ ಒಣ ಹವೆ ಮುಂದುವರಿಯಲಿದೆ. ಬೆಂಗಳೂರಲ್ಲಿ ಮೋಡಕವಿದ ವಾತಾವರಣ ಅಥವಾ ಸಣ್ಣ ಪ್ರಮಾಣದಲ್ಲಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ದಕ್ಷಿಣ ಒಳನಾಡಿನ ಚಿಕ್ಕಮಗಳೂರು, ಹಾಸನ, ಕೊಡಗು, ಮೈಸೂರು, ಮಂಡ್ಯ, ಚಾಮರಾಜನಗರ, ರಾಮನಗರ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ತುಮಕೂರು, ಚಿಕ್ಕಬಳ್ಳಾಪುರ ಮತ್ತು ಕೋಲಾರದಲ್ಲಿ ಸಾಧಾರಣ ಮಳೆಯಾಗುವ ನಿರೀಕ್ಷೆ ಇದೆ. ಉಳಿದಂತೆ ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ ಜಿಲ್ಲೆಗಳಲ್ಲಿ ಒಣ ಹವೆ ಇರಲಿದೆ. ಉತ್ತರ ಒಳನಾಡು ಭಾಗದ ಬೆಳಗಾವಿ, ಬೀದರ್, ವಿಜಯಪುರ, ಬಾಗಲಕೋಟೆ, ಹಾವೇರಿ, ಗದಗ, ಧಾರವಾಡ, ಕಲಬುರಗಿ, ಕೊಪ್ಪಳ, ಬಳ್ಳಾರಿ, ರಾಯಚೂರು, ಯಾದಗಿರಿ ಮತ್ತು ವಿಜಯನಗರದಲ್ಲಿಯೂ ಒಣ ಹವೆಯ ವಾತಾವರಣವನ್ನು ಅಂದಾಜಿಸಲಾಗಿದೆ.

ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ ಮತ್ತು ಉಡುಪಿಯಲ್ಲಿ ಸಾಧಾರಣ ಮಳೆಯ ನಿರೀಕ್ಷೆ ಇದ್ದು, ಉತ್ತರ ಕನ್ನಡ ಜಿಲ್ಲೆಯಲ್ಲಿ ಒಣ ಹವೆ ಕಂಡುಬರಲಿದೆ. ಬೆಂಗಳೂರು ನಗರದಲ್ಲಿಯೂ ಸಾಧಾರಣ ಮಳೆ ಅಥವಾ ಮೋಡ ಕವಿದ ವಾತಾವರಣ ಕಂಡುಬರುವ ಸಾಧ್ಯತೆ ಇದೆ. ನಗರದ ಗರಿಷ್ಠ ಉಷ್ಣಾಂಶ 23 ಡಿಗ್ರಿ ಸೆಲ್ಸಿಯಸ್ ಮತ್ತು ಕನಿಷ್ಠ ಉಷ್ಣಾಂಶ 19 ಡಿಗ್ರಿ ಸೆಲ್ಸಿಯಸ್ ಇರಲಿದೆ. ಗಾಳಿಯ ವೇಗ ಗಂಟೆಗೆ 6-13 ಕಿ.ಮೀ. ಇರಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಅಪಾರ್ಟ್‌ಮೆಂಟ್ ನಿರ್ವಹಣೆಗೆ ಕಾಯ್ದೆ

ಬೆಂಗಳೂರು: ಅಪಾರ್ಟ್‌ಮೆಂಟ್ ಮಾಲೀಕತ್ವ ಮತ್ತು ನಿರ್ವಹಣೆಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ಸಿದ್ಧಪಡಿಸಲಾಗಿರುವ ಕರ್ನಾಟಕ ಅಪಾರ್ಟ್‌ಮೆಂಟ್ ಮಾಲೀಕತ್ವ ಮತ್ತು ನಿರ್ವಹಣಾ ಕಾಯ್ದೆಯನ್ನು ಬೆಳಗಾವಿ ಅಧಿವೇಶನದಲ್ಲಿ ಮಂಡಿಸಿ, ಕಾನೂನನ್ನು ತಕ್ಷಣವೇ ಜಾರಿಗೆ ತರಬೇಕು ಎಂದು ಬೆಂಗಳೂರು ಅಪಾರ್ಟ್‌ಮೆಂಟ್ ಫೆಡರೇಷನ್ ಅಧ್ಯಕ್ಷ ಸತೀಶ್ ಮಲ್ಯ ಅಗ್ರಹಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಪಾರ್ಟ್‌ಮೆಂಟ್ ಮಾಲೀಕರಿಗೆ ಸಮಗ್ರ ಕಾನೂನು ಚೌಕಟ್ಟನ್ನು ಜಾರಿಗೊಳಿಸಲು ಹಲವು ವರ್ಷಗಳ ಬೇಡಿಕೆಯಾಗಿದೆ. ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ಪಕ್ಷಗಳು ಇದನ್ನು ಪ್ರಣಾಳಿಕೆಯ ಬದ್ಧತೆಯಲ್ಲಿ ಸೇರಿಸಿದ್ರು ಕೂಡಾ ಜಾರಿಗೆಯಾಗಿಲ್ಲ. ದೀರ್ಘಕಾಲದಿಂದ ಬಾಕಿ ಇರುವ ಕರ್ನಾಟಕ ಅಪಾರ್ಟ್‌ಮೆಂಟ್ ಮಾಲಿಕತ್ವ ಕಾಯ್ದೆ 1972 ಅನ್ನು ನವೀಕರಿಸಿ ಕೆಎಓಎಂಎ ಅನ್ನು ಜಾರಿಗೆ ತರಬೇಕೆಂದು ಒತ್ತಾಯಿಸಿದರು. ಬೆಂಗಳೂರು ಅಪಾರ್ಟ್‌ಮೆಂಟ್ ಫೆಡರೇಷನ್ ಪ್ರಧಾನ ಕಾರ್ಯದರ್ಶಿ ಕೆ.ಅರುಣ್ ಕುಮಾರ ಮಾತನಾಡಿ, ಹೊಸ ಕಾನೂನನ್ನು ರಚಿಸಲಾಗುತ್ತಿದ್ದು, ಆಧುನಿಕ ಅಪಾರ್ಟ್‌ಮೆಂಟ್‌ಗಳ ಅಗತ್ಯಗಳನ್ನು ಪರಿಹರಿಸಲು ಈ ಹೊಸ ಕಾನೂನನ್ನು ಕೂಡಲೇ ಡಿ.8 ರಂದು ನಡೆಯುವ ಬೆಳಗಾವಿ ಅಧಿವೇಶನದಲ್ಲಿ ಮಂಡಿಸಬೇಕು ಎಂದರು. ಸತೀಶ್ ಮಲ್ಯ, ಕಾರ್ಯದರ್ಶಿ ಕೆ.ಅರುಣ್ ಕುಮಾರ, ಖಜಾಂಜಿ ಕಿರಣ ಹೆಬ್ಬಾರ್ ಸೇರಿದಂತೆ ಹಲವರಿದ್ದರು.

ಸಿದ್ಧತೆ ಪರಿಶೀಲಿಸಿದ ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್

ಸುಗಮವಾಗಿ ಅಧಿವೇಶನ ನಡೆಸಲು ತಯಾರಿ

ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್, ಬೆಳಗಾವಿ ನಗರ ಪೊಲೀಸ್ ಕಮಿಷನರ್ ಭೂಷಣ ಬೊರಸೆ, ಜಿಪಂ ಸಿಇಒ ರಾಹುಲ್ ಶಿಂಧೆ, ಎಸ್‌ಪಿ ಡಾ.ಭೀಮಾಶಂಕರ ಗುಳೇದ ಮತ್ತಿತರರು ಸುವರ್ಣ ವಿಧಾನಸೌಧಕ್ಕೆ ಮಂಗಳವಾರ ಭೇಟಿ ನೀಡಿ, ಅಧಿವೇಶನದ ಸಿದ್ಧತೆ ಪರಿಶಿಲಿಸಿದರು.

ಬೆಳಗಾವಿ: ಈ ಬಾರಿ ಸುಗಮವಾಗಿ ವಿಧಾನಮಂಡಲ ಚಳಿಗಾಲದ ಅಧಿವೇಶನ ನಡೆಸಲು ಜಿಲ್ಲಾಡಳಿತದ ವತಿಯಿಂದ ಎಲ್ಲ ರೀತಿಯ ತಯಾರಿ ಮಾಡಿಕೊಂಡಿದ್ದೇವೆ ಎಂದು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಹೇಳಿದರು.

ಇಲ್ಲಿನ ಸುವರ್ಣ ವಿಧಾನಸೌಧಕ್ಕೆ ಮಂಗಳವಾರ ಭೇಟಿ ನೀಡಿ, ಅಧಿವೇಶನದ ಸಿದ್ಧತೆ ಪರಿಶಿಲಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿ, ಕಳೆದ ವರ್ಷ ಉತ್ತಮವಾಗಿ ಅಧಿವೇಶನ ನಡೆದಿತ್ತು. ಈ ಬಾರಿಯೂ ಯಾವುದೇ ಸಮಸ್ಯೆಯಾಗದು. ವಿವಿಧ ಇಲಾಖೆಗಳ ಮುಖ್ಯಸ್ಥರ ಜತೆ ಚರ್ಚಿಸಿ ಅಗತ್ಯ ಕ್ರಮ ವಹಿಸಿದ್ದೇವೆ. ಅಧಿವೇಶನ ಹಿನ್ನೆಲೆಯಲ್ಲಿ ವಸತಿಗಾಗಿ 3 ಸಾವಿರ ಕೊಠಡಿ ಕಾಯ್ದಿರಿಸಿದ್ದೇವೆ. 700 ವಾಹನ ಬಳಸಿಕೊಳ್ಳಲಿದ್ದೇವೆ. ಲೋಕೋಪಯೋಗಿ ಇಲಾಖೆಯಿಂದ ಬೃಹತ್ ಆಕಾರದ ರಾಷ್ಟ್ರಧ್ವಜ ಪ್ರದರ್ಶಿಸಲಿದ್ದೇವೆ ಎಂದು ಹೇಳಿದರು.

ಲೋಕೋಪಯೋಗಿ ಇಲಾಖೆ ₹4.5 ಕೋಟಿ ವೆಚ್ಚದಲ್ಲಿ ಸೌಧದ ಆವರಣದಲ್ಲಿ ನಿರ್ಮಿಸಿದ ಪಾರ್ಕ್ ಅನ್ನು ಇದೇ ಅಧಿವೇಶನದಲ್ಲಿ ಉದ್ಘಾಟಿಸಲಿದ್ದೇವೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕಾರ್ಯಕ್ರಮದಲ್ಲಿ ಭಾಗವಹಿಸುವರು. ವಿವಿಧ ರೀತಿಯ ಕಾರಂಜಿ ಒಳಗೊಂಡ ಪಾರ್ಕ್‌ಗೆ ಜನರು ಭೇಟಿ ನೀಡಿ ನಿರಾಳರಾಗಬಹುದು ಎಂದು ತಿಳಿಸಿದರು.

ಪ್ರತಿಭಟನೆ ತಗ್ಗುವ ನಿರೀಕ್ಷೆ

ಅಧಿವೇಶನ ವೇಳೆ ಪ್ರತಿಭಟನೆ ನಡೆಸುವವರಿಗಾಗಿ ಎರಡು ಕಡೆ ವ್ಯವಸ್ಥೆ ಮಾಡಿದ್ದೇವೆ. ಮೆಕ್ಕೆಜೋಳ, ಕಬ್ಬು ಬೆಳೆಯುವವರ ಸಮಸ್ಯೆಗೆ ಪರಿಹಾರ ಸಿಕ್ಕಿದೆ. ವಿವಿಧ ಸಂಘ-ಸಂಸ್ಥೆಗಳ ಜತೆಗೆ ನಗರ ಪೊಲೀಸ್ ಆಯುಕ್ತರು ಸಭೆ ಮಾಡುತ್ತಿದ್ದಾರೆ. ಹಾಗಾಗಿ ಈ ಬಾರಿ ಪ್ರತಿಭಟನೆಗಳ ಸಂಖ್ಯೆ ತಗ್ಗುವ ನಿರೀಕ್ಷೆ ಇದೆ ಎಂದು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಹೇಳಿದರು. ಪ್ರತಿಭಟನೆಗೆ ನಮ್ಮ ಆಕ್ಷೇಪವಿಲ್ಲ. ಆದರೆ, ಯಾರೂ ಪ್ರತಿಭಟನೆ ನಡೆಸುವ ಮುನ್ನ, ಜಿಲ್ಲಾಧಿಕಾರಿ ಕಚೇರಿ ಮತ್ತು ನಗರ ಪೊಲೀಸ್ ಕಮಿಷನರ್ ಕಚೇರಿಗೆ ತಿಳಿಸಬೇಕು ಎಂದು ಹೇಳಿದರು.

> ಅಧಿವೇಶನಕ್ಕೆ ಪರ್ಯಾಯವಾಗಿ ಮಹಾಮೇಳಾವ್ ನಡೆಸಲು ಮಹಾರಾಷ್ಟ್ರ ಏಕೀಕರಣ ಸಮಿತಿಗೆ(ಎಂಇಎಸ್) ಯಾವುದೇ ಕಾರಣಕ್ಕೂ ಅನುಮತಿ ಕೊಡುವುದಿಲ್ಲ. ಒಂದು ವೇಳೆ ಮಹಾಮೇಳಾವ್ ಮಾಡಿದರೆ ಅವರ ವಿರುದ್ಧ ಕಾನೂನು ಕ್ರಮ ಜರುಗಿಸುತ್ತೇವೆ.
> **- ಮೊಹಮ್ಮದ್ ರೋಷನ್ ಬೆಳಗಾವಿ ಜಿಲ್ಲಾಧಿಕಾರಿ**

ಮಧುಗಿರಿ, ತಿಪಟೂರು ಪ್ರತ್ಯೇಕ ಜಿಲ್ಲೆ ಘೋಷಣೆಗೆ ಸಾರ್ವಜನಿಕರ ಆಗ್ರಹ

ತುಮಕೂರು ಇಬ್ಭಾಗ ಮಾಡಲು ಪಟ್ಟು

ರಂಗನಾಥ ಕೆ.ಹೊನ್ನಮರಡಿ

ತುಮಕೂರು: ಕಲ್ಪವೃಕ್ಷ ಸೀಮೆಯ ಹತ್ತು ತಾಲೂಕುಗಳನ್ನು ಹೊಂದಿರುವ ಬೃಹತ್ತಾದ ತುಮಕೂರು ಜಿಲ್ಲೆಯನ್ನು ಆಡಳಿತಾತ್ಮಕ ಅನುಕೂಲಕ್ಕಾಗಿ ಇಬ್ಭಾಗ ಮಾಡಿ ಎರಡು ಜಿಲ್ಲೆಯಾಗಿಸಬೇಕು ಎನ್ನುವುದು ಹಳೇ ಬೇಡಿಕೆ. ಆದರೆ ಯಾವ ತಾಲೂಕು ಕೇಂದ್ರವನ್ನು ಹೊಸ ಜಿಲ್ಲಾ ಕೇಂದ್ರವಾಗಿಸಬೇಕು ಎಂಬ ಗೊಂದಲ ಮಾತ್ರ ಬಗೆಹರಿದಿಲ್ಲ. ಸದ್ಯಕ್ಕೆ ಈಗ ಮಧುಗಿರಿ ಮತ್ತು ತಿಪಟೂರು ಪ್ರತ್ಯೇಕ ಜಿಲ್ಲೆಯನ್ನಾಗಿ ಮಾಡಲು ಹಲವು ವರ್ಷಗಳಿಂದ ಸಾರ್ವಜನಿಕರು ಒತ್ತಾಯ ಮಾಡುತ್ತಿದ್ದಾರೆ. ಮಧುಗಿರಿ, ತಿಪಟೂರನ್ನು ಜಿಲ್ಲೆಯನ್ನಾಗಿ ಮಾಡುವ ಸಂಬಂಧ ಬಹಳಷ್ಟು ಚರ್ಚೆ ನಡೆಯುತ್ತಿದ್ದು, ಇದಕ್ಕಾಗಿ ಜನತೆ, ಜನಪ್ರತಿನಿಧಿಗಳು ಧ್ವನಿಗೂಡಿಸಿರುವುದು ಮತ್ತಷ್ಟು ಶಕ್ತಿ ತುಂಬಿದೆ. ಶಿರಾ ಕೂಡ ವಾಣಿಜ್ಯ ಕೇಂದ್ರವಾಗಿ ಅಭಿವೃದ್ಧಿಯಾಗುತ್ತಿದ್ದು ಜಿಲ್ಲೆಯನ್ನಾಗಿ ಮಾಡಬೇಕೆಂಬ ಕೂಗು ಎದ್ದಿದೆ.

ಮಧುಗಿರಿ ಜಿಲ್ಲೆಗೆ ಒತ್ತಾಯ: ಪಾವಗಡದ ತಿರುಮಣಿಯಿಂದ ತುಮಕೂರು ಜಿಲ್ಲಾಕೇಂದ್ರಕ್ಕೆ 150 ಕಿಮೀ ದೂರವಿದ್ದು, ಸಾರ್ವಜನಿಕರು ಕೆಲಸ ಕಾರ್ಯಗಳಿಗೆ ಅಲೆದಾಡುವುದು ದೊಡ್ಡ ಸಮಸ್ಯೆಯಾಗುತ್ತಿದೆ. ಮಧುಗಿರಿ ಜಿಲ್ಲೆಯಾದರೆ ಮಧುಗಿರಿ, ಪಾವಗಡ, ಶಿರಾ, ಕೊರಟಗೆರೆ ತಾಲೂಕುಗಳನ್ನು ಸೇರ್ಪಡೆ ಮಾಡಲಾಗುವುದು.

ತಿಪಟೂರು ಜಿಲ್ಲೆಗೆ ಆಗ್ರಹ: ತುಮಕೂರು ಜಿಲ್ಲೆಯನ್ನು ವಿಭಾಗಿಸಿ ಪ್ರತ್ಯೇಕವಾಗಿ ತಿಪಟೂರನ್ನು ಜಿಲ್ಲಾ ಕೇಂದ್ರವನ್ನಾಗಿ ಮಾಡಲು ಬಲವಾದ ಕೂಗು ಎದ್ದಿದೆ. ಹಲವು ವರ್ಷಗಳಿಂದ ನಡೆಯುತ್ತಿರುವ ಹೋರಾಟದಲ್ಲಿ ಸಾರ್ವಜನಿಕರೊಂದಿಗೆ, ಮಠಮಾನ್ಯಗಳು, ಪಕ್ಷಾತೀತವಾಗಿ ಜನಪ್ರತಿನಿಧಿಗಳು ಬೆಂಬಲ ವ್ಯಕ್ತಪಡಿಸಿರುವುದು ಮತ್ತಷ್ಟು ಪುಷ್ಟಿ ನೀಡಿದೆ. ತಿಪಟೂರು, ಚಿಕ್ಕನಾಯಕನಹಳ್ಳಿ, ತುರುವೇಕೆರೆ ತಾಲೂಕುಗಳನ್ನು ಸೇರ್ಪಡೆಗೊಳಿಸಿ ಜಿಲ್ಲೆಯನ್ನಾಗಿ ಮಾಡಿದರೆ ಅಭಿವೃದ್ಧಿ ಸಾಧ್ಯವಾಗುತ್ತದೆ. ಬಹಳ ವರ್ಷಗಳ ಬೇಡಿಕೆಯಾದಂತಹ ತಿಪಟೂರು ಜಿಲ್ಲಾ ಕೇಂದ್ರವನ್ನು ಮಾಡಲು ಹಲವು ಬಾರಿ ಸರಕಾರಕ್ಕೆ ಮನವಿಯನ್ನು ಮಾಡಲಾಗಿದೆ.

ತಿಪಟೂರು ಜಿಲ್ಲಾ ಕೇಂದ್ರವಾಗುವುದರಿಂದ ಸರಕಾರಕ್ಕೆ ಯಾವುದೇ ರೀತಿಯ ಅಧಿಕ ಖರ್ಚು ಆಗುವುದಿಲ್ಲ. ಈಗಾಗಲೇ ಮಿನಿ ವಿಧಾನಸೌಧ, ನಗರಸಭೆ ಕಟ್ಟಡ, ಆರ್‌ಟಿಒ ಕಚೇರಿಯೊಂದಿಗೆ ಜಿಲ್ಲೆಯಾಗಲು ಅವಶ್ಯಕವಿರುವಂತಹ ಕಾರ್ಯಗಳನ್ನು ಕೈಗೊಳ್ಳಲಾಗಿದೆ. ತಿಪಟೂರಿನ ಗಡಿ ಭಾಗದಿಂದ ತುಮಕೂರು ಜಿಲ್ಲಾ ಕೇಂದ್ರಕ್ಕೆ ತೆರಳಲು ನೂರಕ್ಕೂ ಅಧಿಕ ಕಿ.ಮೀ. ಕ್ರಮಿಸಬೇಕಾಗಿದೆ. ಆದ್ದರಿಂದ ತಿಪಟೂರನ್ನು ಜಿಲ್ಲೆ ಮಾಡುವಂತೆ ಸಿಎಂಗೆ ತಾಲೂಕಿನ ಜನತೆ ಒತ್ತಾಯ ಮಾಡಿದ್ದಾರೆ.

ತಿಪಟೂರು ಜಿಲ್ಲೆಗೆ 3 ತಾಲೂಕು
- ತಿಪಟೂರು-26 ಗ್ರಾಪಂ
- ಚಿಕ್ಕನಾಯಕನ ಹಳ್ಳಿ-27 ಗ್ರಾಪಂ
- ತುರುವೇಕೆರೆ-27 ಗ್ರಾಪಂ



ಮಧುಗಿರಿ ಜಿಲ್ಲೆಗೆ 4 ತಾಲೂಕು
- ಮಧುಗಿರಿ-39 ಗ್ರಾಪಂ
- ಪಾವಗಡ-34 ಗ್ರಾಪಂ
- ಶಿರಾ-42 ಗ್ರಾಪಂ
- ಕೊರಟಗೆರೆ-24 ಗ್ರಾಪಂ

ಹುಳಿಯಾರು ತಾಲೂಕು ಘೋಷಿಸಿ

ಜಿಲ್ಲೆಯ ಅತಿದೊಡ್ಡ ಗ್ರಾಪಂ ಆಗಿದ್ದ ಹುಳಿಯಾರನ್ನು ಪುರಸಭೆಯನ್ನಾಗಿ ಪರಿವರ್ತಿಸಲಾಗಿದೆ. ಹಲವು ವರ್ಷ ಗಳಿಂದ ಹುಳಿಯಾರನ್ನು ತಾಲೂಕ ನ್ನಾಗಿ ಮಾಡುವಂತೆ ಆಗ್ರಹ ಮಾಡ ಲಾಗಿದೆ. ಜನಪ್ರತಿನಿಧಿಗಳು ಆಶ್ವಾಸನೆ ಕೊಟ್ಟು ಮೌನ ವಹಿಸುತ್ತಿದ್ದಾರೆ. ಹು ಳಿಯಾರು ತಾಲೂಕಾಗಿ ಮೇಲ್ದರ್ಜೆ ಗೇರಿದರೆ ತಿಪಟೂರು ಜಿಲ್ಲಾ ಕೇಂದ್ರಕ್ಕೆ ಸೇರಿಕೊಳ್ಳುತ್ತದೆ ಎಂಬ ಮಹಾದಾಸೆ ಜನತೆಯದಾಗಿದೆ.

> 10 ತಾಲೂಕುಗಳನ್ನು ಹೊಂದಿರುವ ತುಮಕೂರನ್ನು ವಿಭಾಗಿಸಿ ತಿಪಟೂರು ಕೇಂದ್ರವನ್ನು ಪ್ರತ್ಯೇಕ ಜಿಲ್ಲೆಯನ್ನಾಗಿ ಮಾಡಿ ಅಭಿವೃದ್ಧಿಗೆ ಸಹಕರಿಸಬೇಕು. ತಿಪಟೂರು ಜಿಲ್ಲೆಯಾಗುವ ಎಲ್ಲಾ ಲಕ್ಷಣ ಹೊಂದಿದೆ.
> **- ಷಡಕ್ಷರಿ, ಶಾಸಕ, ತಿಪಟೂರು**

> ನನ್ನ ಆಡಳಿತದ ಅವಧಿ ಯಲ್ಲಿ ಮಧುಗಿರಿಯನ್ನು ಜಿಲ್ಲೆಯನ್ನಾಗಿ ಮಾಡಲು ಬೇಕಾದ ಎಲ್ಲಾ ರೀತಿಯ ಮೂಲ ಭೂತ ಸವಲತ್ತುಗಳನ್ನು ಕಲ್ಪಿಸಲಾ ಗಿದೆ. ಐತಿಹಾಸಿಕ ಹಿನ್ನೆಲೆ ಇರುವ ಮಧುಗಿರಿಯನ್ನು ಜಿಲ್ಲೆಯನ್ನಾಗಿ ಮಾಡುವುದರಲ್ಲಿ ಯಾವುದೇ ಅನುಮಾನವಿಲ್ಲ.
> **-ಕೆ.ಎನ್.ರಾಜಣ್ಣ, ಮಾಜಿ ಸಚಿವ**

ವಿಶ್ವವಾಣಿ @vishwavaninews
ಆರಾಮ
ಅನುದಿನವೂ ವಿರಾಮಕ್ಕೆ ಒಂದು ನೆಪ
ಬೆಂಗಳೂರು 03-12-2025 ಬುಧವಾರ

ಮೃತ್ಯುಂಜಯನಾಗಿಬಿಟ್ಟನೇ ಈ ನರಮಾನವ?

ಹಿಂದಿರುಗಿ ನೋಡಿದಾಗ
ಡಾ. ನಾ.ಸೋಮೇಶ್ವರ
naasomeswara@gmail.com

ಸಸ್ಯಗಳು ಸೂರ್ಯನ ಬೆಳಕಿನಲ್ಲಿ ಗ್ಲೂಕೋಸ್ ರೂಪದ ಆಹಾರವನ್ನು ಉತ್ಪಾದಿಸುತ್ತವೆ. ಅವನ್ನು ನಾವು ತಿನ್ನುತ್ತೇವೆ. ಸಸ್ಯಗಳಲ್ಲಿರುವ ಗ್ಲೂಕೋಸ್ ನಮ್ಮ ದೇಹವನ್ನು ಸೇರುತ್ತದೆ. ನಾವು ಉಸಿರಾಡುವಾಗ ನಮ್ಮ ಶ್ವಾಸಕೋಶಗಳನ್ನು ಪ್ರವೇಶಿಸುವ ಆಕ್ಸಿಜನ್, ಹಿಮೋಗ್ಲಾಬಿನ್ ನೆರವಿನಿಂದ ನಮ್ಮ ಶರೀರದ ಪ್ರತಿಯೊಂದು ಜೀವಕೋಶವನ್ನು ತಲುಪುತ್ತದೆ. ಇನ್ಸುಲಿನ್, ಜೀವಕೋಶದ 'ಬಾಗಿಲನ್ನು' ತೆರೆದು ಗ್ಲೂಕೋಸ್ ಪ್ರವೇಶಕ್ಕೆ ಅನುಮತಿಯನ್ನು ಕೊಡುತ್ತದೆ. ಜೀವಕೋಶವೆಂಬ ಒಲೆಯಲ್ಲಿ ಆಕ್ಸಿಜನ್, ಗ್ಲೂಕೋಸ್ ಎಂಬ ಇಂಧನಕ್ಕೆ ಕಿಡಿಯನ್ನು ಹೊತ್ತಿಸಿ ಭಸ್ಮ ಮಾಡುತ್ತದೆ. ಆಗ ಶಕ್ತಿಯು ಉತ್ಪಾದನೆಯಾಗುತ್ತದೆ. ಈ ಶಕ್ತಿಯ ನೆರವಿನಿಂದ ಶರೀರಕ್ಕೆ ಉಪಯುಕ್ತ ಕೆಲಸಗಳನ್ನು ಮಾಡಬಹುದು. ಇದುವೇ ಚಯ ಅಥವಾ ಅನಬಾಲಿಸಂ. ಅನಗತ್ಯ ರಚನೆಗಳನ್ನು ನಿವಾರಿಸಿ ವಿಲೇವಾರಿ ಮಾಡಬಹುದು. ಇದುವೇ ಅಪಚಯ ಅಥವ ಕೆಟಬಾಲಿಸಂ. ಎರಡನ್ನೂ ಸಮಷ್ಟಿಯಾಗಿ ಚಯಾಪಚಯ ಅಥವ ಮೆಟಬಾಲಿಸಂ ಎನ್ನಬಹುದು. ಈ ಚಯಾಪಚಯ ಕ್ರಿಯೆಯಲ್ಲಿ ಶಾಖವು ಉತ್ಪಾದನೆಯಾಗಿ ಶರೀರವನ್ನು ಬೆಚ್ಚಗೆ ಇಡುತ್ತದೆ. ಇದುವೇ ಶರೀರದ ಉಷ್ಣತೆ. ಸಹಜ ಉಷ್ಣತೆಯು 37 ಡಿಗ್ರಿ ಸೆಲ್ಸಿಯಸ್‌ನಷ್ಟಿರುತ್ತದೆ. 35 ಡಿಗ್ರಿ ಸೆಲ್ಸಿಯಸ್ ಅನ್ನು ಇಳಿತಾಪವೆಂದು, 38.3 ಡಿಗ್ರಿ ಸೆಲ್ಸಿಯಸ್ ಉಷ್ಣತೆಯನ್ನು ಏರುತಾಪ ಎಂದು ಕರೆಯುವುದು ವಾಡಿಕೆ.

● **ಹೃದಯದಲ್ಲಿ ರಂಧ್ರ:** ಕೆಲವು ಶಿಶುಗಳು ಹುಟ್ಟುವಾಗಲೇ ಅವುಗಳ ಹೃದಯದ ನಡುತಡಿಕೆಯಲ್ಲಿ ಒಂದು ರಂಧ್ರವಿರುತ್ತದೆ. ಹಾಗಾಗಿ ಆಕ್ಸಿಜನ್‌ಭರಿತ ರಕ್ತ ಹಾಗೂ ಆಕ್ಸಿಜನ್ ಕೊರತೆಯ ರಕ್ತಗಳೆರಡೂ ಮಿಶ್ರವಾಗಿ, ಶಿಶುವಿಗೆ ಅಗತ್ಯವಾದ ಆಕ್ಸಿಜನ್ ದೊರೆಯದೆ ಬಳಲುವ ಸಾಧ್ಯತೆಯಿರುತ್ತದೆ. ಈ ರಂಧ್ರವನ್ನು ಹೇಗೆ ಮುಚ್ಚಬಹುದು ಎಂಬ ಪರಿಕಲ್ಪನೆಯು ವಿಜ್ಞಾನಿಗಳಿಗಿದೆ. ಆದರೆ ಒಂದು ಸಮಸ್ಯೆ. ಹೃದಯವು ಮಿಡಿಯುವಾಗ, ರಕ್ತ ಪ್ರವಾಹವು ಹರಿಯುವಾಗ, ಆ ರಂಧ್ರವನ್ನು ಮುಚ್ಚುವ ಪ್ರಯತ್ನವನ್ನು ನಡೆಸುವುದು ಅತ್ಯಂತ ಅಪಾಯಕಾರಿ. ರಕ್ತನಾಳಕ್ಕೆ ಇಕ್ಕಳ ಹಾಕಿ, ತಾತ್ಕಾಲಿಕವಾಗಿ ರಕ್ತಪ್ರವಾಹವನ್ನು ನಿಲ್ಲಿಸಿ, ರಂಧ್ರವನ್ನು ದುರಸ್ತಿ ಮಾಡಬಹುದು. ಆದರೆ ಮಿದುಳಿನ ನರಕೋಶಗಳು 4 ನಿಮಿಷಗಳು ಮಾತ್ರ ಆಕ್ಸಿಜನ್ ಇಲ್ಲದೇ ಬದುಕಬಲ್ಲವು. 6 ನಿಮಿಷಗಳಾಗುತ್ತಿರುವಂತೆಯೇ ಅವು ಶಾಶ್ವತವಾಗಿ ಸಾಯುತ್ತವೆ. ಹಾಗಾಗಿ ವಿಜ್ಞಾನಿಗಳು ಹೃದಯವನ್ನು ಸ್ಥಗಿತಗೊಳಿಸುವ ದಾರಿಕಾಣದೆ ಕಂಗಾಲಾಗಿದ್ದರು.

● **ನೆಲ-ಅಳಿಲು:** ದಂಶಕಗಳು (ರೋಡೆಂಟ್ಸ್) ಎಂಬ ಪ್ರಾಣಿಗಳಿವೆ. ಇಲಿ, ಅಳಿಲು, ಮೊಲ, ಮುಳ್ಳುಹಂದಿ, ಗಿನಿಪಿಗ್, ಬೀವರ್, ಹ್ಯಾಮ್‌ಸ್ಟರ್ ಮುಂತಾದ ಪ್ರಾಣಿಗಳಿವೆ. ಇದೇ ವರ್ಗಕ್ಕೆ ಸೇರಿದ ಹಾಗೂ ಅಮೆರಿಕ ಮತ್ತು ಕೆನಡಗಳಲ್ಲಿ ವಿಶೇಷವಾಗಿ ವಾಸಿಸುವ ಗ್ರೌಂಡ್‌ಹಾಗ್ (ಮಾರ್ಮೋಟ ಮೊನಾಕ್ಸ್) ಎಂಬ ಜೀವಿಯಿದೆ. ಹಾಗ್ ಎಂದರೆ ಹಂದಿಯಲ್ಲ. ಸ್ವಲ್ಪ ದೊಡ್ಡ ಅಳಿಲು. ಹಾಗಾಗಿ ಇದನ್ನು ನೆಲಅಳಿಲು ಎಂದು ಕರೆಯಬಹುದು. ಇವು ಚಳಿಗಾಲದಲ್ಲಿ ಶಿಶಿರ ನಿದ್ರೆಯನ್ನು (ಹೈಬರ್ನೇಶನ್) ಮಾಡುತ್ತವೆ. ಆಗ ಅವುಗಳ ದೇಹದ ಉಷ್ಣತೆಯು 2 ಡಿಗ್ರಿ ಸೆಲ್ಸಿಯಸ್ ನಷ್ಟು ಇಳಿಯುತ್ತದೆ. ಹೃದಯವು ಒಂದು ನಿಮಿಷಕ್ಕೆ 4-10 ಸಲ ಮಾತ್ರ ಮಿಡಿಯುತ್ತದೆ. ಪ್ರತಿ 6 ನಿಮಿಷಗಳಿಗೆ ಒಂದು ಸಲ ಮಾತ್ರ ಉಸಿರಾಡುತ್ತದೆ. ಶಿಶಿರನಿದ್ರೆಯು ಮುಗಿಯುವ ವೇಳೆಗೆ (3-5 ತಿಂಗಳು) ಅದರ ಶರೀರದಲ್ಲಿ ಸಂಗ್ರಹವಾಗಿರುವ ಕೊಬ್ಬು ಅರ್ಧಕ್ಕೆ ಅರ್ಧ ಇಳಿದಿರುತ್ತದೆ.

ಡಾ. ವಿಲ್‌ಫ್ರೆಡ್ ಬೀಜ್‌ಲೋ ಎಂಬ ಕೆನಡಿಯನ್ ಶಸ್ತ್ರವೈದ್ಯನು ಟೊರಾಂಟೊ ವಿಶ್ವವಿದ್ಯಾಲಯದಲ್ಲಿ ಕೆಲಸವನ್ನು ಮಾಡುತ್ತಿದ್ದ. ಅವನಿಗೆ ಈ ನೆಲಅಳಿಲುಗಳ ಶಿಶಿರನಿದ್ರೆಯು ಮಹಾಚೋದ್ಯವೆನಿಸಿತು. 2 ಡಿಗ್ರಿ ಸೆಲ್ಸಿಯಸ್ ಉಷ್ಣತೆ, ನಿಮಿಷಕ್ಕೆ 4-10 ಸಲ ಹೃದಯ ಮಿಡಿತ ಹಾಗೂ ಆರು ನಿಮಿಷಗಳಿಗೆ ಒಂದು ಸಲ ಉಸಿರಾಟ! ಹೀಗೆ 3-5 ತಿಂಗಳು ಕಳೆದು ವಸಂತಋತು ಆಗಮಿಸುತ್ತಿರುವಂತೆಯೇ ಎಚ್ಚೆತ್ತುಕೊಂಡು, ನೂರಕ್ಕೆ ನೂರರಷ್ಟು ಚಟುವಟಿಕೆಯಿಂದ ತನ್ನ ಬದುಕನ್ನು

ಮರು ಆರಂಭಿಸುತ್ತದೆಯಲ್ಲ!... ಇದು ಹೇಗೆ ಸಾಧ್ಯ? ಬೀಜ್‌ಲೋ ತರ್ಕಿಸಿದ. ನೆಲಅಳಿಲಿನ ದೇಹದ ಉಷ್ಣತೆಯು ಶೂನ್ಯಕ್ಕೆ ಹತ್ತಿರ ಬಂದಿದೆ ಎಂದರೆ, ಅದರ ಚಯಾಪಚಯವೂ ಅಷ್ಟೇ ಕಡಿಮೆಯಾಗಬೇಕು. ಚಯಾಪಚಯವು ಕಡಿಮೆಯಾದಷ್ಟು ಉಷ್ಣತೆಯು ಕಡಿಮೆಯಾಗುತ್ತದೆ. ಒಂದು ಬಾಟಲಿ ಹಾಲನ್ನು ಮೇಜಿನ ಮೇಲಿಟ್ಟರೆ, ಅದು ಕೆಲವು ಗಂಟೆಗಳಲ್ಲಿ ಒಡೆದುಹೋಗುತ್ತದೆ. ಅದೇ ಬಾಟಲಿ ಹಾಲನ್ನು ಫ್ರಿಜ್‌ನಲ್ಲಿಟ್ಟರೆ ದಿನಗಟ್ಟಲೆ ರಕ್ಷಿಸಬಹುದು. ಅಂದರೆ ಶೀತಲತೆಯು ಚಯಾಪಚಯ ವೇಗವನ್ನು ಕಡಿಮೆಮಾಡುತ್ತದೆ. ಹಾಗಿದ್ದ ಮೇಲೆ, ಓರ್ವ ವ್ಯಕ್ತಿಯ ದೇಹವನ್ನು ಶೀತಲಗೊಳಿಸೋಣ; ಶರೀರದ ಉಷ್ಣತೆಯು ಕಡಿಮೆಯಾದರೆ, ಆ ವ್ಯಕ್ತಿಯ ಮಿದುಳು 'ಶಿಶಿರನಿದ್ರೆ'ಗೆ ಹೋಗುತ್ತದೆ. ಅವುಗಳಿಗೆ ಹೆಚ್ಚು ಆಕ್ಸಿಜನ್ ಬೇಕಾಗುವುದಿಲ್ಲ. ಹಾಗಾಗಿ ಹೃದಯವನ್ನು 4 ನಿಮಿಷಗಳಿಗಿಂತಲೂ ಹೆಚ್ಚುಕಾಲ ಸ್ಥಗಿತಗೊಳಿಸಬಹುದು. ಹೃದಯದಲ್ಲಿರುವ ರಂಧ್ರಕ್ಕೆ ತೇಪೆ ಹಾಕಬಹುದು. ಮತ್ತೆ ದೇಹದ ಉಷ್ಣತೆಯನ್ನು ನಿಧಾನವಾಗಿ ಹೆಚ್ಚಿಸಿದಾಗ, ಮಿದುಳು ಸಹ ಯಾವುದೇ ಹಾನಿಯಿಲ್ಲದೆ ಚೇತರಿಸಿಕೊಳ್ಳುತ್ತದೆ ಎಂದು ಲೆಕ್ಕಾಚಾರ ಹಾಕಿದ.

1940ರ ದಶಕ. ನಾಯಿಗಳ ಮೇಲೆ ಅವನು ಪ್ರಯೋಗವನ್ನು ಆರಂಭಿಸಿದ. ನಾಯಿಯ ಶರೀರದ ಉಷ್ಣತೆಯನ್ನು 20 ಡಿಗ್ರಿ ಸೆಲ್ಸಿಯಸ್‌ಗೆ ಇಳಿಸಿದ. ದೇಹದ ಉಷ್ಣತೆಯು ಶೇ.85ರಷ್ಟು ಇಳಿಯಿತು. ಅವನು ನಾಯಿಯ ಹೃದಯದ ರಕ್ತನಾಳಗಳಿಗೆ ಇಕ್ಕಳ ಹಾಕಿ ರಕ್ತಪ್ರವಾಹವನ್ನು ನಿಲ್ಲಿಸಿದ. ಹೃದಯದ ಮೇಲೆ ಅಗತ್ಯ ಶಸ್ತ್ರಪ್ರಯೋಗವನ್ನು ಮಾಡಿದ. ನಂತರ ಇಕ್ಕಳವನ್ನು ತೆಗೆದು ಮತ್ತೆ ರಕ್ತಪ್ರವಾಹವನ್ನು ಆರಂಭಿಸಿದ. ನಾಯಿಯ ಒಡಲಿನ ಉಷ್ಣತೆಯನ್ನು ಕ್ರಮೇಣ ಹೆಚ್ಚಿಸಿದ. ಯುರೇಕಾ!.... ಎಂದು ಮನದಲ್ಲಿಯೇ ಕೂಗಿದ ಬೀಜ್‌ಲೋ. ನಾಯಿ ಸಂಪೂರ್ಣ ಎಚ್ಚರಗೊಂಡಿತು. ಅದು ಆರೋಗ್ಯಕರವಾಗಿತ್ತು.

● **ಜಾಕ್ವೆಲಿನ್ ಜಾನ್ಸನ್:** ಬೀಜ್‌ಲೋ ಚಿಕಿತ್ಸಾ ಇಳಿತಾಪಮಾನ (ಥೆರಾಪ್ಯೂಟಿಕ್ ಹೈಪೋಥರ್ಮಿಯ) ಎನ್ನುವ ಹೊಸ ವಿಜ್ಞಾನ ಶಾಖೆಯು ಆರಂಭವಾಗಲು ಕಾರಣವಾದ. ಆದರೆ ಈ ತಂತ್ರಜ್ಞಾನದ ಲಾಭವನ್ನು ಪಡೆದು ಮೊದಲ ಬಾರಿಗೆ ಅದನ್ನು ಮನುಷ್ಯರ ಮೇಲೆ ಯಶಸ್ವಿಯಾಗಿ ಪ್ರಯೋಗಿಸಿದ ಕೀರ್ತಿ ಮಿನಿಸೋಟ ವಿಶ್ವವಿದ್ಯಾಲಯದ ಡಾ.ಎಫ್. ಜಾನ್ ಲೆವಿಸ್ ಮತ್ತು ಡಾ. ಮನ್ಸೂರ್ ತೌಫಿಕ್ ಅವರಿಗೆ ದೊರೆಯಿತು.

ಸೆಪ್ಟೆಂಬರ್ 2, 1952. ಐದು ವರ್ಷದ ಹುಡುಗಿ ಜಾಕ್ವೆಲಿನ್ ಜಾನ್ಸನ್. ಆಕೆಯ ಹೃದಯದ ನಡುತಡಿಕೆಯಲ್ಲಿ ಒಂದು ರಂಧ್ರವಿತ್ತು. ಎಡ ಹೃತ್ಕರ್ಣ ಮತ್ತು ಬಲಹೃತ್ಕರ್ಣಗಳ ನಡುವೆ ಇದ್ದ ರಂಧ್ರವನ್ನು ಏಟ್ರಿಯಲ್ ಸೆಪ್ಟಲ್ ಡಿಫೆಕ್ಟ್ ಎನ್ನುತ್ತಾರೆ. ಆ ಮಗುವಿನ ನಡುತಡಿಕೆಯಲ್ಲಿದ್ದ ರಂಧ್ರದ ಮೂಲಕ ಆಕ್ಸಿಜನ್‌ಭರಿತ ಹಾಗೂ ಕೊರತೆಯಿರುವ ರಕ್ತವು ಪರಸ್ಪರ ಬೆರೆತು, ಆಕೆಯ ಬದುಕಿಗೇ ಸಂಚಕಾರವನ್ನು ತಂದಿತ್ತು. ಈ ಸ್ಥಿತಿಯಲ್ಲಿ ಆಕೆಯು ಹೆಚ್ಚುಕಾಲ ಬದುಕುವ ಸಾಧ್ಯತೆಯಿರಲಿಲ್ಲ. ಆ ಮಗುವನ್ನು ಶಸ್ತ್ರಚಿಕಿತ್ಸಾ ಕೊಠಡಿಗೆ ಕರೆತಂದರು. ಈ ಹಿಂದೆ, ಯಾರೂ ಕೈಯಾರ ಹೃದಯವನ್ನು ನಿಲ್ಲಿಸಿ, ಭೇದಿಸಿ, ಒಳಗಿರುವ ರಂಧ್ರವನ್ನು ಮುಚ್ಚುವ ಸಾಹಸವನ್ನೇ ಮಾಡಿರಲಿಲ್ಲ.

ಜಾಕ್ವೆಲಿನ್ ಜಾನ್ಸನ್ನಳ ದೇಹವನ್ನು ಶೈತ್ಯೀಕರಿಸುವ ತಂತ್ರಜ್ಞಾನ ಆಗ ದೊರೆಯುತ್ತಿರಲಿಲ್ಲ. ನಾವು ಊಹಿಸಿಕೊಳ್ಳದಂಥ ಅತ್ಯಂತ ಕಚ್ಚಾ ವಿಧಾನವನ್ನು ವೈದ್ಯರು ಬಳಸಿದರು. ಜಾಕ್ವೆಲಿನ್ನಳ ಪುಟ್ಟ ದೇಹವನ್ನು ರಬ್ಬರ್ ಕಂಬಳಿಯಲ್ಲಿ ಸುತ್ತಿದ್ದರು. ಇಡೀ ದೇಹವನ್ನು ಮಂಜು ನೀರಿನ ತೊಟ್ಟಿಯಲ್ಲಿ ಮುಳುಗಿಸಿದರು. ಆಕೆಯ ದೇಹದ ಉಷ್ಣತೆಯು ನಿಧಾನವಾಗಿ ಇಳಿಯಲಾರಂಭಿಸಿತು. ಉಷ್ಣತೆಯು ಈಗ 27 ಡಿಗ್ರಿ ಸೆಲ್ಸಿಯಸ್‌ಗೆ ಮುಟ್ಟಿತು. ಹೃದಯ ಮಿಡಿತವು ನಿಧಾನವಾಗಿ ಕಡಿಮೆಯಾಗಲಾರಂಬಿಸಿತು. ಡಾ. ಲೆವಿಸ್ ಜಾಕ್ವೆಲಿನ್ನಳ ಹೃದಯದ ಧಮನಿಗಳಿಗೆ ಇಕ್ಕಳವನ್ನು ಹಾಕಿದರು. ಹೃದಯದೊಳಗೆ ರಕ್ತಪ್ರವೇಶವು ನಿಂತಿತು. 5 ನಿಮಿಷ 30 ಸೆಕೆಂಡುಗಳ ಒಳಗೆ ರಂಧ್ರಕ್ಕೆ ತೇಪೆ ಹಾಕುವ ಕೆಲಸವನ್ನು ಪೂರ್ಣಗೊಳಿಸಿದರು. ಈ ಅವಧಿಯಲ್ಲಿ ಆಕೆಯ ಹೃದಯವು ಸ್ಥಗಿತವಾಯಿತು. ವೈದ್ಯಕೀಯ ಪರಿಭಾಷೆಯಲ್ಲಿ ಹೇಳಬೇಕಾದರೆ, ಆಕೆಯು 'ಕ್ಲಿನಿಕಲಿ ಡೆಡ್!'. ಹೃದಯದ ಭಿತ್ತಿಯನ್ನು ಹೊಲಿದರು. ಇಕ್ಕಳವನ್ನು ಸಾವಕಾಶವಾಗಿ ತೆರೆದರು. ಬಿಸಿರಕ್ತವು ರಕ್ತನಾಳದ ಮೂಲಕ ಹೃದಯದ ಒಳಗೆ ಹರಿಯಲಾರಂಭಿಸಿತು. ತೊಟ್ಟಿಯಲ್ಲಿದ್ದ ತಣ್ಣೀರನ್ನು ಕ್ರಮವಾಗಿ ಹೊರದೆಗೆದು ಬಿಸಿನೀರನ್ನು ತುಂಬಲಾರಂಭಿಸಿದರು. ಜಾಕ್ವೆಲಿನ್ನಳ ದೇಹವು ಸಹಜ ಉಷ್ಣತೆಗೆ ಬಂದಿತು. ಹೃದಯವು ತನಗೆ ತಾನೇ ಮಿಡಿಯಲಾರಂಭಿಸಿತು. ರಂಧ್ರ ಮುಚ್ಚಿದ್ದರಿಂದ ಜಾಕ್ವೆಲಿನ್ನಳ ಬದುಕಿನಲ್ಲಿ ಮೊದಲ ಬಾರಿಗೆ ಪರಿಪೂರ್ಣ ಆಕ್ಸಿಜನ್‌ಭರಿತ ರಕ್ತವು ದೇಹದಲ್ಲಿ ಹರಿಯಲಾರಂಭಿಸಿತು. ಜಾಕ್ವೆಲಿನ್ ಜಾನ್ಸನ್ ಬದುಕಿದಳು. ಹೀಗೆ ಜಗತ್ತಿನ ಮೊತ್ತ ಮೊದಲ ತೆರೆದ ಹೃದಯ ಶಸ್ತ್ರಚಿಕಿತ್ಸೆಯು ಯಶಸ್ವಿಯಾಯಿತು.

● **ಹೃದಯ-ಶ್ವಾಸಕೋಶ ಯಂತ್ರ:** ಹೃದ್ರೋಗಿಗಳನ್ನು ಮಂಜುನೀರಿನ ತೊಟ್ಟಿಯಲ್ಲಿ ಮುಳುಗಿಸಿ, ಸಾವಿಗೆ 10-15 ನಿಮಿಷಗಳ ಮೋದವನ್ನು ಮಾಡಿ ಅಸಂಖ್ಯ ಶಸ್ತ್ರಚಿಕಿತ್ಸೆಗಳು ನಡೆದವು. ಆದರೆ 10-15 ನಿಮಿಷಗಳಲ್ಲಿ ಮಾತ್ರ ಮಾಡಬಹುದಾದಂಥ ಸರಳ ಹೃದ್ರೋಗ ಚಿಕಿತ್ಸೆಗಳನ್ನು ಮಾತ್ರ ಮಾಡಬಹುದಾಗಿತ್ತು. ಸಂಕೀರ್ಣ ಹೃದಯ ಶಸ್ತ್ರಚಿಕಿತ್ಸೆಗಳಿನ್ನೂ ಕನಸಾಗಿದ್ದವು. ಆಗ ಜಾನ್ ಗಿಬ್ಬನ್ ಎಂಬಾತ ಹೃದಯ-ಶ್ವಾಸಕೋಶಗಳ ಯಂತ್ರವನ್ನು ರೂಪಿಸಿದ.



ಈ ಯಂತ್ರವು ಹೃದಯದ ಬದಲು ತಾನು ರಕ್ತವನ್ನು ಪಂಪ್ ಮಾಡುತ್ತಿತ್ತು. ಇದರಿಂದ ಹಲವು ಗಂಟೆಗಳ ಕಾಲ ನಡೆಯುವ ಸಂಕೀರ್ಣ ಹೃದಯ ಶಸ್ತ್ರಚಿಕಿತ್ಸೆಗಳು ಸಾಧ್ಯವಾದವು. ಆದರೆ ರಕ್ತವನ್ನು ಮಾತ್ರ ಶೀತಲೀಕರಿಸಲೇಬೇಕಾಗಿತ್ತು. ಯಂತ್ರವೇ ಶೀತಲ ರಕ್ತವನ್ನು ಪೂರೈಸುವುದರ ಕಾರಣ, ಮಿದುಳು ಗಂಟೆಗಟ್ಟಲೆ ಶಿಶಿರನಿದ್ರೆಯನ್ನು ಮಾಡುತ್ತಿತ್ತು.

● **ಮೃತ್ಯುಂಜಯ:** ಅಪರೂಪಕ್ಕೆ ಹೃದಯದ ಮಹಾಧಮನಿಯು ಛಿದ್ರವಾಗಬಹುದು. ತಕ್ಷಣವೇ ಅದನ್ನು ಸರಿಪಡಿಸದಿದ್ದರೆ ನೋಡನೋಡುತ್ತಿರುವಂತೆಯೇ ಸಾವು ಸಂಭವಿಸುತ್ತದೆ. ಇಂಥ ಕ್ಲಿಷ್ಟ ಶಸ್ತ್ರಚಿಕಿತ್ಸೆಗಳನ್ನು ನಡೆಸಲು ಒಂದೆರಡು ಗಂಟೆ ಸಾಕಾಗಲಾರದು. ಹೆಚ್ಚಿನ ಸಮಯ ಬೇಕಾಗುತ್ತದೆ. ಹಾಗಾಗಿ ವೈದ್ಯರು ಅತೀವ ಇಳಿತಾಪ ಪರಿಚಲನಾ ಸ್ಥಗಿತ (ಡೀಪ್ ಹೈಪೋಥರ್ಮಿಕ್ ಸರ್ಕ್ಯುಲೇಟರಿ ಅರೆಸ್ಟ್) ಎಂಬ ತಂತ್ರವನ್ನು ರೂಪಿಸಿದರು. ವೈದ್ಯರು ರೋಗಿಯ ದೇಹವನ್ನು 18-20 ಡಿಗ್ರಿಸೆಲ್ಸಿಯಸ್‌ನಷ್ಟು ತಂಪುಗೊಳಿಸುತ್ತಾರೆ. ಈ ಉಷ್ಣತೆಯಲ್ಲಿ ಹಾರ್ಟ್-ಲಂಗ್ ಯಂತ್ರವನ್ನೂ ಸ್ಥಗಿತಗೊಳಿಸುತ್ತಾರೆ. ಹೀಗೆ ಗರಿಷ್ಠ 45 ನಿಮಿಷಗಳ ಕಾಲ ಮುಂದುವರಿಸಬಹುದು. ಈ ಅವಧಿಯಲ್ಲಿ ಹೃದಯವು ಮಿಡಿಯುವುದಿಲ್ಲ. ಮಿದುಳು ಜಾಗೃತವಾಗಿರುವುದಿಲ್ಲ. ದೇಹದಲ್ಲಿ ಯಾವುದೇ ರೀತಿಯ ರಕ್ತಪರಿಚಲನೆಯಿರುವುದಿಲ್ಲ. ಇಡೀ ದೇಹವು ತೂಗುಬಿದ್ದ ಚಿತ್ರದಂತೆ (ಸಸ್ಪೆಂಡೆಡ್ ಆನಿಮೇಶನ್) ಸ್ಥಗಿತವಾಗಿರುತ್ತದೆ. ಅಂದರೆ 45 ನಿಮಿಷಗಳ ಕಾಲ ಈ ವ್ಯಕ್ತಿಯು ಸತ್ತಿದ್ದಾನೆ ಎಂದು ಸಾವಿಗೆ ನಂಬಿಕೆಯನ್ನು ಹುಟ್ಟಿಸಿ ಮತ್ತೆ ಜೀವವನ್ನು ತುಂಬುವ ಆಧುನಿಕ ಮೃತ್ಯುಂಜನ ಪಾತ್ರವನ್ನು ಸಮರ್ಥವಾಗಿ ನಿಭಾಯಿಸುತ್ತಿದ್ದಾರೆ.

● **ಅನ್ನ ಬಾಗೆನ್‌ಹೋಮ್:** ವೈದ್ಯಕೀಯ ಇತಿಹಾಸದಲ್ಲಿ ಚಿಕಿತ್ಸಾ ಇಳಿತಾಪದ ಒಳನೋಟವನ್ನು ನೀಡುವಂಥ ಒಂದು ಅದ್ಭುತ ಘಟನೆಯು ನಡೆಯಿತು. 1999. ಸ್ವೀಡಿಷ್ ರೇಡಿಯಾಲಜಿಸ್ಟ್ ಅನ್ನ ಬಾಗೆನ್‌ಹೋಮ್, ನಾರ್ವೆ ದೇಶದಲ್ಲಿ ಹಿಮಗಟ್ಟಿದ ನದಿಯ ಮೇಲೆ ಸ್ಕೇಟಿಂಗ್ ಮಾಡಹೊರಟಳು. ಹೆಪ್ಪುಗಟ್ಟಿದ ನದಿಯಲ್ಲಿ ಬಿದ್ದುಬಿಟ್ಟಳು. 20 ಸೆಂ.ಮೀ. ದಪ್ಪದ ಮಂಜಿನ ಪದರ. 40 ನಿಮಿಷಗಳ ಕಾಲ ಸಿಕ್ಕಿಹಾಕಿಕೊಂಡಳು. ಅಲ್ಲೊಂದು ಗಾಳಿಯ ಬುಗ್ಗೆಯಿತ್ತು, ಹೇಗೋ ಉಸಿರಾಡುತ್ತಿದ್ದಳು. 40 ನಿಮಿಷಗಳ ನಂತರ ಉಸಿರಾಡುವುದನ್ನು ನಿಲ್ಲಿಸಿದಳು. ತಪ್ಪಿಸಿಕೊಳ್ಳುವ ಪ್ರಯತ್ನವನ್ನು ಬಿಟ್ಟಳು. ಆಕೆಯ ನೆರವಿಗೆ ಸಹಾಯಕರು ಬರುವ ವೇಳೆಗೆ 80 ನಿಮಿಷಗಳು ಕಳೆದಿದ್ದವು. ಆಕೆ ಆಸ್ಪತ್ರೆಗೆ ಬಂದಾಗ ದೇಹದ ಉಷ್ಣತೆಯು ಬರೀ 13.7 ಡಿಗ್ರಿ ಸೆಲ್ಸಿಯಸ್ ಆಗಿತ್ತು. ನಾಡಿ ಸಿಗುತ್ತಿರಲಿಲ್ಲ. ಉಸಿರಾಡುತ್ತಲೂ ಇರಲಿಲ್ಲ. ಅಲ್ಲಿನ ತುರ್ತು ವೈದ್ಯಕೀಯ ವಿಭಾಗದ ಡಾ. ಮ್ಯಾಡ್ಸ್ ಗಿಲ್ಬರ್ಟ್, ಇಳಿತಾಪದಲ್ಲಿ ಯಾರೂ ಸಾಯುವುದಿಲ್ಲ; ಸಹಜ ಉಷ್ಣತೆಗೆ ಬಂದಕೂಡಲೇ ಅವರು ಸಾಯುವುದು ಎನ್ನುವುದನ್ನು ತಿಳಿದಿದ್ದ. ಆಕೆಯ ಮಿದುಳು ಮಂಜುನೀರಿನ ಸಂಪರ್ಕಕ್ಕೆ ಬರುತ್ತಿದ್ದ ಹಾಗೆಯೇ 'ಶಿಶಿರನಿದ್ರೆ'ಗೆ ಹೊರಟುಹೋಗಿತ್ತು. ಹೃದಯವೂ ಸ್ಥಗಿತವಾಗಿತ್ತು. ದೇಹವನ್ನು ಹೃದಯ-ಶ್ವಾಸಕೋಶ ಯಂತ್ರಕ್ಕೆ ಒಪ್ಪಿಸಿದರು. ಆಕೆಯ ದೇಹದ ಉಷ್ಣತೆಯನ್ನು ನಿಧಾನವಾಗಿ ಹೆಚ್ಚಿಸಿದರು. ಆಕೆಗೆ ಎಚ್ಚರವಾದಾಗ ಕುತ್ತಿಗೆಯ ಕೆಳಗಿನ ಭಾಗವು ಸ್ಥಗಿತವಾಗಿತ್ತು. ಚಿಕಿತ್ಸೆಯನ್ನು ಮುಂದುವರಿಸಿದರು. ಹೃದಯವು ಕೆಲಸವನ್ನು ಮಾಡಲಾರಂಭಿಸಿತು. ಹೀಗೆ ಮಿದುಳು 80 ನಿಮಿಷಗಳ ಕಾಲ 'ಮೃತವಾಗಿದ್ದು' ನಂತರ ಜಾಗೃತವಾಯಿತೆಂದರೆ, ಅದು ಪವಾಡವಲ್ಲದೆ ಮತ್ತೇನು?

● **ಐಸಿಯು:** ಚಿಕಿತ್ಸಾ ಇಳಿತಾಪವು ಇಂದು ತುರ್ತುವೈದ್ಯಕೀಯ ವಿಭಾಗಗಳಿಗಿಂತ ತೀವ್ರ ನಿಗಾ ಘಟಕದಲ್ಲಿ ಹೆಚ್ಚು ಉಪಯುಕ್ತವಾಗುತ್ತಿದೆ. ರಸ್ತೆಯಲ್ಲಿ ಹೃದಯಾಘಾತವು ಆಯಿತು, ಹೃದಯವು ಸ್ಥಗಿತವಾಗಿದೆ (ಕಾರ್ಡಿಯಾಕ್ ಅರೆಸ್ಟ್). ಯಾರೋ ಪುಣ್ಯಾತ್ಮರು ಸಿಪಿಆರ್ ನೀಡಿ ಸ್ಥಗಿತವಾಗಿದ್ದ ಹೃದಯಕ್ಕೆ ಮರುಚೈತನ್ಯ ತುಂಬಿದ್ದರು. ಅದುವರೆಗೂ ಆಕ್ಸಿಜನ್ ಇಲ್ಲದೇ ನರಳುತ್ತಿದ್ದ ಮಿದುಳಿಗೆ, ಈಗ ಒಮ್ಮೆಲೆ ಆಕ್ಸಿಜನ್ ಪ್ರವಾಹೋಪಾದಿಯಲ್ಲಿ ಹರಿದಾಗ ಮಿದುಳು ಊದಿಕೊಳ್ಳುತ್ತದೆ. ಹಾಗಾಗಿ ವೈದ್ಯರು ಐಸಿಯುವಿನಲ್ಲಿ ರೋಗಿಯನ್ನು ಗುರಿ ನಿರ್ದೇಶಿತ ಉಷ್ಣ ನಿಭಾವಣೆಯಲ್ಲಿ (ಟಾರ್ಗೆಟೆಡ್ ಟೆಂಪರೇಚರ್ ಮ್ಯಾನೇಜ್ಮೆಂಟ್) ದೇಹದ ಉಷ್ಣತೆಯನ್ನು 33-37 ಡಿಗ್ರಿ ಸೆಲ್ಸಿಯಸ್ ನಡುವೆ ಇರುವಂತೆ 24 ಗಂಟೆಗಳವರೆಗೆ ನೋಡಿಕೊಳ್ಳುತ್ತಾರೆ. ಆಗ ಮಿದುಳು ಸಹಜವಾಗಿ ಚೇತರಿಸಿಕೊಳ್ಳುತ್ತದೆ.

ಕೆಲವು ಸಲ, ನವಜಾತ ಶಿಶುಗಳು ಹುಟ್ಟುವಾಗಲೇ ಆಕ್ಸಿಜನ್ ಕೊರತೆಯ ಮಿದುಳುಬೇನೆ (ಹೈಪಾಕ್ಸಿಕ್-ಇಸ್ಕಿಮಿಕ್ ಎನ್ಸೆಫಲೋಪತಿ) ಎಂಬ ಮಾರಕ ಸ್ಥಿತಿಗೆ ತಲುಪಬಹುದು. ಆಗ ನವಜಾತ ಶಿಶುವನ್ನು, ವಿಶೇಷವಾಗಿ ತಂಪುಗೊಳಿಸಿದ 'ಚಾಪೆ'ಗಳ ಮೇಲೆ 72 ಗಂಟೆಗಳ ಕಾಲ ಇರಿಸುತ್ತಾರೆ. ಇದುವೇ 'ಇಳಿತಾಪ ಚಿಕಿತ್ಸೆ' (ಕೂಲಿಂಗ್ ಕ್ಯೂರ್).

ವ್ಯಕ್ತಿತ್ವವೇ ಮಾನವ ಶಕ್ತಿ

● ಹಂಚೆಟ್ಟಿರ ಫ್ಯಾನ್ಸಿ ಮುತ್ತಣ್ಣ, ಕುಶಾಲನಗರ



ಈ ಭೂಮಿಯಲ್ಲಿ ಎಲ್ಲರಿಗೂ ತಿಳಿದಿರುವಂತೆ ಉಸಿರಾಡುವ ಅದೆಷ್ಟೋ ಜೀವಿಗಳಲ್ಲಿ ಮಾನವ ಜನ್ಮ ಅತಿ ಶ್ರೇಷ್ಠ. ಮಾನವ ಜೀವಿಯಾಗಿ ಹುಟ್ಟಿದರಷ್ಟೇ ಸಾಕೇ? ಈ ಸಮಾಜದಲ್ಲಿ ಒಬ್ಬ ಗೌರವಾನ್ವಿತ ವ್ಯಕ್ತಿಯಾಗಿ ಗುರುತಿಸಿಕೊಳ್ಳುವುದು ಅತಿಮುಖ್ಯ. ಆ ರೀತಿ ರೂಪುಗೊಳ್ಳಬೇಕಾದಲ್ಲಿ ಮುಖ್ಯವಾಗಿ ಬೆಳೆಸಿಕೊಳ್ಳಬೇಕಾದಂಥದ್ದು ವ್ಯಕ್ತಿತ್ವ. ಅದಕ್ಕಾಗಿ ಪ್ರತಿಯೊಬ್ಬ ವ್ಯಕ್ತಿ ಪ್ರಜ್ಞಾಪೂರ್ವಕವಾಗಿ ಶ್ರಮಿಸಲೇಬೇಕು. ಯಾವುದೇ ಒಬ್ಬ ವ್ಯಕ್ತಿ ಒಂದೊಳ್ಳೆ ವ್ಯಕ್ತಿತ್ವವನ್ನು ತನ್ನ ಬದುಕಿನಲ್ಲಿ ಅಳವಡಿಸಿಕೊಂಡಲ್ಲಿ ಆ ಧೀಮಂತ ವ್ಯಕ್ತಿ ಉಳಿದವರೆಲ್ಲರ ನಡುವೆ ಪ್ರತ್ಯೇಕವಾಗಿ ಗುರುತಿಸಲ್ಪಡುತ್ತಾರೆ. ಒಬ್ಬ ಮಾದರಿ ವ್ಯಕ್ತಿಯಾಗುತ್ತಾನೆ. ಬದುಕಿನಲ್ಲಿ ಸಂಪಾದನೆ ಒಂದಿದ್ದರೆ ಸಾಕೇ? ಹಣವೊಂದೇ ಬದುಕಿಗೆ ಮುಖ್ಯವೇ? ಅಷ್ಟೈಶ್ವರ್ಯ ಇದ್ದು ಒಂದೊಳ್ಳೆ 'ಗುಣ', 'ವ್ಯಕ್ತಿತ್ವ' ಇಲ್ಲದೆ ಹೋದಲ್ಲಿ ಏನಿದ್ದರೇನು ಪ್ರಯೋಜನ? ಒಂದೊಳ್ಳೆ ವ್ಯಕ್ತಿತ್ವ ಇರುವ ಯಾರೇ ಆದರೂ ಆ ರೀತಿಯ ವ್ಯಕ್ತಿಯ ಸ್ನೇಹ ಬೆಳೆಸಲು, ಪರಿಚಯಿಸಿಕೊಳ್ಳಲು ಹಾತೊರೆಯುತ್ತಾರೆ. ಅಲ್ಲದೆ 'ನಾರಿನೊಟ್ಟಿಗೆ ಹೂವೂ ದೇವರ ಪಾದ ಸೇರಿತು' ಎನ್ನುವಂತೆ ಧೀಮಂತ ವ್ಯಕ್ತಿತ್ವ ಇರುವ ವ್ಯಕ್ತಿಯೊಂದಿಗಿನ ಒಡನಾಟ ನಮ್ಮಲ್ಲಿರುವ ಕೆಲವೊಂದು ನ್ಯೂನತೆಯನ್ನ ಬದಲಿಸಿಕೊಳ್ಳಲು ಸಹಕಾರಿಯಾಗುತ್ತದೆ.

ವ್ಯಕ್ತಿತ್ವ ಎಂದರೇನು? ವ್ಯಕ್ತಿತ್ವ ಎನ್ನುವುದು ಒಬ್ಬ ವ್ಯಕ್ತಿಯ ಸಂಪೂರ್ಣ ನಡತೆ, ವಿಶೇಷ ಗುಣ-ಸ್ವಭಾವಗಳಿಗೆ ಅನ್ವಯವಾಗುತ್ತದೆ. ನಡೆ-ನುಡಿ, ಬುದ್ಧಿ ಶಕ್ತಿ ಆ ವ್ಯಕ್ತಿಯ ಬಾಹ್ಯ ಲಕ್ಷಣಗಳು, ವಿಶಿಷ್ಟ ಗುಣ ಸ್ವಭಾವಗಳು, ಉಳಿದವರಿಂದ ಪ್ರತ್ಯೇಕವಾಗಿ ಗುರುತಿಸಿಕೊಳ್ಳುವಂತೆ ಮಾಡುತ್ತವೆ. ಕ್ರಿಯಾಶೀಲವಾಗಿ ತನ್ನ ಸುತ್ತಮುತ್ತಲಿನ ಪರಿಸರ, ಸಮಾಜದ ಆಗುಹೋಗುಗಳ ಬಗ್ಗೆ ತಿಳಿವಳಿಕೆಯನ್ನು ಪಡೆದಂಥ ಒಬ್ಬ ವ್ಯಕ್ತಿ ಭಾವನಾತ್ಮಕವಾಗಿ ಅನುಭವಗಳ ಸಾಮರಸ್ಯ ಹೊಂದಿ ತನ್ನ ವ್ಯಕ್ತಿತ್ವವನ್ನು ಪ್ರತಿಯೊಂದು ಚಿಂತನೆ, ವರ್ತನೆಯ ಮೂಲಕ ಹೊರಹಾಕುತ್ತಾನೆ. ಉದಾಹರಣೆಗೆ, ನಿಮಗೆಲ್ಲಾ ಗೊತ್ತಿರುವ ಹಾಗೆ, ಸಾಧನೆ ಮಾಡಿದಂಥ ಜನರನ್ನು ಗುರುತಿಸಿ ನಮ್ಮ ನಿಮ್ಮೆಲ್ಲರ ಮೆಚ್ಚಿನ 'ವಿಶ್ವವಾಣಿ' ಪತ್ರಿಕೆಯು ಅವರಿಗೆ 'ಗ್ಲೋಬಲ್ ಅಚೀವರ್ಸ್ ಅವಾರ್ಡ್' ಅನ್ನು ಕೊಡುತ್ತಾ ಬರುತ್ತಿದೆ. ಆ ಕಾರ್ಯಕ್ರಮಗಳು ಹೊರದೇಶದಲ್ಲಿ ನಡೆಯುವುದು ಮತ್ತೊಂದು ಹೆಗ್ಗಳಿಕೆಯ ವಿಚಾರ. ಅಂಥ ಕಾರ್ಯಕ್ರಮಗಳಲ್ಲಿ ನಾನು ಭಾಗವಹಿಸಿ ಕಂಡುಕೊಂಡ ಅಂಶ ಏನೆಂದರೆ ಆ ಕಾರ್ಯಕ್ರಮಕ್ಕೆ ಬರುವಂಥ ಅತಿಥಿಗಳು ಆಯಾಯಾ ದೇಶದ ರಾಜಕಾರಣಿಗಳು, ರಾಜರುಗಳು, ಹೆಸರಾಂತ ನಟ ನಟಿಯರು ಆಗಿರಬಹುದು, ಉನ್ನತ ಹುದ್ದೆಯಲ್ಲಿರುವವರು, ಉದ್ಯಮಿಗಳು, ಪತ್ರಕರ್ತರು ಆಗಿರಬಹುದು. ಅವರಾರೂ ತಂತಮ್ಮ ಹಣ, ಅಂತಸ್ತು ಮತ್ತು ಹುದ್ದೆಗಳಿಂದ ಆಕರ್ಷಿಸಲಿಲ್ಲ; ಅಲ್ಲಿ ನಮ್ಮೆಲ್ಲರನ್ನ ಆಕರ್ಷಿಸಿದ್ದು ಮತ್ತು ಗಮನ ಸೆಳೆದದ್ದು ಅವರ ಮೇರು ವ್ಯಕ್ತಿತ್ವ ಮಾತ್ರ.

ಒಂದೊಳ್ಳೆ ವ್ಯಕ್ತಿತ್ವವನ್ನು: ಅಳವಡಿಸಿಕೊಳ್ಳಬೇಕಾದಲ್ಲಿ ಪ್ರತಿಯೊಬ್ಬನೂ ಪ್ರಜ್ಞಾಪೂರ್ವಕವಾಗಿ ಶ್ರಮಿಸಲೇಬೇಕು. ಒಳ್ಳೆಯ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುವುದು ಸುಲಭವಂತೂ ಅಲ್ಲ. ಬದುಕಿನಲ್ಲಿ ನಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಬೇಕಾದ್ದು ನಾವೇ ಎನ್ನುವ ಅಂಶವನ್ನು ಮನದಟ್ಟು ಮಾಡಿಕೊಂಡು, ಪ್ರತಿಯೊಂದು ಹೊಣೆಯನ್ನು ಹೊರಲು ಶಕ್ತರಾಗಿರಬೇಕಾದದ್ದು ಅತಿ ಮುಖ್ಯ. ಅಲ್ಲದೆ, ನಮ್ಮ ಧೋರಣೆ ಹೇಗಿರುತ್ತದೆ, ನಾವು ಇತರರನ್ನು ಹೇಗೆ ಕಾಣುತ್ತೇವೆ ಎನ್ನುವುದನ್ನು ವಿಮರ್ಶೆ ಮಾಡಿಕೊಳ್ಳುತ್ತಿರಬೇಕಾದದ್ದು ಅತಿ ಮುಖ್ಯ. ನಮ್ಮ ಸಾಮರ್ಥ್ಯದ ಬಗ್ಗೆ ಹೆಮ್ಮೆಯಿಂದ ಬೀಗದೆ, ದೌರ್ಬಲ್ಯಗಳ ಬಗ್ಗೆ ಚಿಂತೆ ಮಾಡದೆ, ನಮ್ಮನ್ನೇ ತೀಕ್ಷ್ಣವಾಗಿ ಆತ್ಮ ವಿಮರ್ಶೆಗೆ ಒಳಪಡಿಸಿಕೊಳ್ಳುವುದು ಮನಸ್ಸಿಗೆ ನೋವಿನ ಅನುಭವ ನೀಡಿದರೂ, ಮುಂದೆ ನಾವು ನಡೆಸುವ ಉತ್ತಮ ಜೀವನಕ್ಕೆ, ನಮ್ಮ ಒಂದೊಳ್ಳೆಯ ವ್ಯಕ್ತಿತ್ವಕ್ಕೆ ಅದುವೇ ಒಂದು ಶಕ್ತಿಯಾಗುತ್ತದೆ. ಆತ್ಮವಿಶ್ವಾಸ, ಶಿಸ್ತು, ಕಾರ್ಯಶಕ್ತಿ, ಸ್ವಾವಲಂಬನೆ, ಶ್ರದ್ಧೆ, ಆತ್ಮಗೌರವ, ವಿನಯ ಇವೆಲ್ಲವೂ ನಮ್ಮ ವ್ಯಕ್ತಿತ್ವದ ಮುಖ್ಯ ಅಂಶಗಳಾಗುತ್ತವೆ. ನಮ್ಮ ಜೀವನ ಪಾರದರ್ಶಕವಾಗಿದ್ದು, ನೇರವಂತಿಕೆ, ಪ್ರಾಮಾಣಿಕತೆ ಇದ್ದಲ್ಲಿ ಯಾವುದಕ್ಕೂ ತಲೆ ಬಗ್ಗಿಸಬೇಕಾಗಿಲ್ಲ, ಭಯಪಡುವಂತೆಯೂ ಇಲ್ಲ. ಪ್ರತಿಯೊಬ್ಬ ವ್ಯಕ್ತಿ ಇವೆಲ್ಲವನ್ನೂ ನಿಷ್ಠೆಯಿಂದ ಪಾಲಿಸಿಕೊಂಡು ಬಂದಲ್ಲಿ, ಸಮಾಜದಲ್ಲಿ ಒಂದೊಳ್ಳೆ ವ್ಯಕ್ತಿತ್ವದವರಾಗಿ ರೂಪುಗೊಳ್ಳುವುದರಲ್ಲಿ ಯಾವುದೇ ಅನುಮಾನವಿಲ್ಲ.

ಭಕ್ತಿಭಾವ ಇಲ್ಲದ ನಾಮಸ್ಮರಣೆ ಗಿಳಿಪಾಠದಂತೆ...

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು
Vishwavani TV Special
ಯೂಟ್ಯೂಬ್ ಚಾನೆಲ್‌ನಲ್ಲಿ

ಅನೇಕ ಜಾತಿಯ ಹೂವು-ಹಣ್ಣುಗಳಿಂದ ತುಂಬಿದ ಮರಗಳು, ಮಂತ್ರಗಳ ಉಚ್ಚಾರದಿಂದ ಜೀವಂತವಾಗಿದ್ದ ಒಂದು ದಟ್ಟ ಅರಣ್ಯದಲ್ಲಿ ಹಸಿರೆಲೆ ಬಣ್ಣದ, ಅಪರಿಮಿತ ಕಲಿಕಾಶಕ್ತಿಯ ಗಿಳಿಯೊಂದು ವಾಸಿಸುತ್ತಿತ್ತು. ಅದು ಸಾಮಾನ್ಯ ಗಿಳಿಯಲ್ಲ, ಸನ್ಯಾಸಿಗಳು ಜಪಿಸುವ 'ರಾಮ ರಾಮ, ಕೃಷ್ಣ ಕೃಷ್ಣ' ಎಂಬ ಮಂತ್ರಗಳನ್ನು ಕೇಳಿ ಬೆಳೆದಿತ್ತು. ಆ ಗಿಳಿ ಈ ಪವಿತ್ರ ನಾಮಗಳನ್ನು ಪುನರಾವರ್ತನೆ ಮಾಡುತ್ತಿದ್ದರೂ, ಅದರ ಜಪವು ಮಕ್ಕಳ ಬಾಯಿಪಾಠದಂತೆ ಭಾವವಿಲ್ಲದೆ ಕೇಳಿಸುತ್ತಿತ್ತು.

ಅದೇ ಅರಣ್ಯದ ಒಂದು ಸುಂದರ ಆಶ್ರಮದಲ್ಲಿ ದಯಾಳುವಾದ ಒಬ್ಬ ಗುರು ವಾಸಿಸುತ್ತಿದ್ದರು. ಆ ಆಶ್ರಮದಲ್ಲಿ ಒಂದು ತುಳಸೀ ಗಿಡ, ಜೀರ್ಣವಾದ ಜಪಮಾಲೆ ಮತ್ತು ಭಗವಂತನ ಮೇಲೆ ಅಪಾರ ಪ್ರೀತಿ ತುಂಬಿದ ಗುರುಗಳ ಹೃದಯ ಮಾತ್ರ ಇದ್ದದ್ದು. ಒಂದು ದಿನ ಆ ಗಿಳಿ 'ಕೃಷ್ಣ ಕೃಷ್ಣ' ಎಂದು ಸುಂದರವಾಗಿ, ಆದರೆ ಯಾಂತ್ರಿಕವಾಗಿ ಜಪಿಸುವುದನ್ನು ಆಶ್ರಮದಲ್ಲಿ ವಿರಮಿಸುತ್ತಿದ್ದ ಗುರುಗಳು ಗಮನಿಸಿ, 'ಈ ಗಿಳಿಯು ಭಗವಂತನ ನಾಮ ಜಪಿಸುತ್ತಿದೆ, ಆದರೆ ಅದರ ಅರ್ಥವನ್ನು ಅರಿಯದೆ ಯಾಂತ್ರಿಕವಾಗಿ ಕಿರುಚುತಿದೆ. ಅಕಸ್ಮಾತ್ ಈ ಗಿಣಿ ಈಗಲೇ ಸತ್ತರೂ, ಈ ಜಪದಿಂದ ಅದಕ್ಕಾಗುವ ಉಪಯೋಗವೇನು?' ಎಂದು ಚಿಂತನೆ ನಡೆಸಿದರು. ಅವರು ಗಿಳಿಗೆ ಸಹಾಯ ಮಾಡಲು ತೀರ್ಮಾನಿಸಿದರು.

ಗುರುಗಳು ಪ್ರತಿದಿನ ಗಿಳಿಯ ಬಳಿಗೆ ಹೋಗಿ ಮೃದುವಾಗಿ ಮಾತನಾಡಲು ಪ್ರಾರಂಭಿಸಿದರು- ''ಸಖೀ, 'ಕೃಷ್ಣ' ಎಂದು ನೀನು ಹೇಳುವಾಗ, ಆ ಹೆಸರು ಯಾರದ್ದು ಎಂದು ತಿಳಿದಿದೆಯಾ? ಅವರು ವೃಂದಾವನದ ನೀಲವರ್ಣದ ಗೋಪಾಲರು, ರಾಧೆಯ ಪ್ರಿಯರು, ಸಕಲ ಜಗತ್ತಿನ ನಾಥರು. ನೀನು ಉಚ್ಚರಿಸುವ ನಾಮದ ಸ್ವರೂಪವೇ ಅವರು''. ಗುರುಗಳು ಹೀಗೆ ಪ್ರತಿದಿನ ಮಾತನಾಡುತ್ತಿದ್ದಂತೆ, ಒಂದು ಅದ್ಭುತ ಬದಲಾವಣೆ ಸಂಭವಿಸಿತು. ಗಿಳಿಯು ಯಾಂತ್ರಿಕವಾಗಿ ಕಿರುಚುವುದನ್ನು ನಿಲ್ಲಿಸಿತು. ಅದರ ಸ್ವರ ಮೃದುವಾಯಿತು. ಅದು ಕೇಳಲು ಆರಂಭಿಸಿತು. ಅದರ ಧ್ವನಿಯಲ್ಲಿ ಭಾವನೆಗಳು ಮೂಡಲಾರಂಭಿಸಿದವು. ಒಂದು ದಿನ ಗಿಳಿಯು 'ಕೃಷ್ಣ' ಎಂದು ಜಪಿಸಿದಾಗ ಅದರ ಧ್ವನಿ ಭಾವದಿಂದ ನಡುಗಿತು. ಆಗ ಗುರುಗಳ ಮೊಗದಲ್ಲಿ ಮಂದಹಾಸ ಮೂಡಿ, ''ಈಗ ನೀನು ಬಾಯಿಯಿಂದಲ್ಲ, ಹೃದಯದಿಂದ ಜಪಿಸುತ್ತಿರುವೆ'' ಎಂದು ಪ್ರೀತಿಯಿಂದ ಗಿಳಿಗೆ ಹೇಳಿದರು.

ದಿನಗಳು ಕಳೆದಂತೆ ಗಿಳಿಯು ಭಗವಂತನ ನಾಮಸ್ಮರಣೆಯನ್ನು ಭಕ್ತಿಯಿಂದ ಮಾಡತೊಡಗಿತು, ಅಕ್ಷರ ಮಟ್ಟಿಗೆ ಪ್ರೀತಿಯನ್ನು ಬೆಳೆಸಿಕೊಂಡಿತು. ಅದು ಕಣ್ಣು ಮುಚ್ಚಿ, ಕೃಷ್ಣನ ಸುಂದರ ನೀಲವರ್ಣದ ಸ್ವರೂಪವನ್ನು ನೆನೆಯುತ್ತಾ ಅವನ ನಾಮವನ್ನು ಜಪಿಸುತ್ತಿತ್ತು.

ಭಗವಂತನನ್ನು ಮನಸ್ಸಿನಲ್ಲಿ ನೆನೆಯುತ್ತಾ ಭಕ್ತಿಯಿಂದ ಒಂದೇ ಒಂದು ಶುದ್ಧ-ನಾಮ ಉಚ್ಚಾರಣೆ ಮಾಡಿದರೂ ಅದು ಜೀವಿಗೆ ಮೋಕ್ಷ ನೀಡುತ್ತದೆ ಎಂದು ಹೇಳುತ್ತಾರೆ. ಏಕೆಂದರೆ ನಾವು ಉಚ್ಚರಿಸುವುದು ಬರೀ ಶಬ್ದವಲ್ಲ, ಶಬ್ದದ ಹಿಂದೆ ಇರುವ ಭಾವ. ಆದ್ದರಿಂದಲೇ ನಾವು ದೇವರ ಮುಂದೆ ಮಂತ್ರಗಳನ್ನು ಪಠಿಸುವಾಗ, ಅಷ್ಟೋತ್ತರಗಳನ್ನು ಹೇಳಿಕೊಳ್ಳುವಾಗ ಕೇವಲ ಪುನರಾವರ್ತನೆ ಸಾಕಾಗುವುದಿಲ್ಲ. ಯಾಂತ್ರಿಕ ಜಪ ಆರಂಭವೇ ಆಗಬಹುದು, ಆದರೆ ಅದು ನಿಧಾನವಾಗಿ ನಾಮಸ್ಮರಣೆಗೆ ಭಾವಪೂರ್ಣ ಸೇವೆಯಾಗಿ ಅರ್ಪಣೆಯಾಗಬೇಕು. ''ನಾಮ ಚಿಂತಾಮಣಿಃ ಕೃಷ್ಣಶ್ಚೈತನ್ಯರಸವಿಗ್ರಹಃ। ಪೂರ್ಣಃ ಶುದ್ಧೋ ನಿತ್ಯಮುಕ್ತೋ ನ ಭಿನ್ನತ್ವಾನ್ನಾಮಮಿನೋಃ॥'' ಅಂದರೆ, ಕೃಷ್ಣನ ಪವಿತ್ರ ನಾಮವೆಂದರೆ ಚಿಂತಾಮಣಿಯಂತೆ, ಚೈತನ್ಯಮಯ, ರಸಸ್ವರೂಪಿ.

ಅದು ಪರಿಪೂರ್ಣ, ಶುದ್ಧ, ನಿತ್ಯಮುಕ್ತ ಮತ್ತು ಕೃಷ್ಣ ನಾಮ ಮತ್ತು ನಾಮಿ (ಪಠಿಸುವವನು) ಭಿನ್ನರಲ್ಲ ಎಂದರ್ಥ. ಪದ್ಮಪುರಾಣದಲ್ಲಿ ಇರುವ ಈ ಶ್ಲೋಕವು, ನಾವು ಭಗವಂತನ ನಾಮಸ್ಮರಣೆಯನ್ನು ಯಾವ ರೀತಿ ಮಾಡಬೇಕು ಎನ್ನುವ ಸೂಕ್ಷ್ಮವನ್ನು ಅರುಹುತ್ತದೆ. ನಾಮವನ್ನು ಕೇವಲ ಜಪಿಸುವುದಲ್ಲ, ಅನುಭವಿಸಬೇಕು, ಆರಾಧಿಸಬೇಕು. ಆಗ ಆ ನಾಮವೇ ನಮ್ಮನ್ನು ಪರಂಧಾಮದ ಕಡೆ ಕರೆದೊಯ್ಯುತ್ತದೆ. ಇಂಥ ಸಾರ್ಥಕ ನಾಮಸ್ಮರಣೆ ನಮ್ಮದಾಗಲಿ...

ಪದಬಂಧ
● ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ
3. ನೂಲುವ ರಾಟೆ (3)
5. ಬೆಲೆಯೊಂದಿಗೆ ಬಂದಿರುವ ಹೊಟ್ಟೆ (3)
7. ಅವನಿಂದ ಸಿಕ್ಕಿದ ತಾವರೆ (4)
8. ಸುದ್ದಿ ಅಥವಾ ವರ್ತಮಾನ (4)
10. ವನದಲ್ಲಿ ಕುಳಿತೇ ಬರೆದಿರುವ ಪದ್ಯ (3)
12. ವಿರಳವಾಗಿ ಬಂದಿರುವ ಹೋಮ (3)
14. ಅಸ್ತವ್ಯಸ್ತವಾಗಿ ಬಂದಿರುವ ಭಲ್ಲೂಕ (3)
16. ಮನ್ಮಥ ಸತಿಯೊಂದಿಗೆ ಬಂದಿರುವ ಪತಿವ್ರತೆ (3)
18. ಇನ್ನೊಂದು ರತ್ನದೊಂದಿಗೆ ಬಂದಿರುವ ಸೂರ್ಯ (4)
19. ಸರಸ-ಸಲ್ಲಾಪ ಅಥವಾ ಪ್ರೀತಿಯಿಂದ ಆಡಿದ ನುಡಿ (4)
21. ಅತಿಯಾಗಿದೆ ಆತುರ (3)
23. ಕಾರು ಕೊಳ್ಳುವಾಗ ಮಾಡಿಕೊಂಡ ಒಪ್ಪಂದ (3)

ಮೇಲಿಂದ ಕೆಳಕ್ಕೆ
1. ಹಕ್ಕಿಗಳನ್ನಿಡುವ ಗೂಡು (3)
2. ತಲೆಗೇರಿದೆ ಸೊಕ್ಕು (2)
4. ಬಿರುಸಾದುದು ಎಂದರ್ಥ (3)
5. ಉದಯ ಕಾಲದಲ್ಲಿ ಎದ್ದು ಕುಡಿದ ನೀರು (3)
6. ಸ್ವಾದ ತಿಳಿಯಲು ಬೇಕಾದ ನಾಲಗೆ (3)
7. ಉಪಾಯ ಬಲ್ಲವನಿಗೆ ಇರದು ತೊಂದರೆ (3)
9. ಮನೆಯ ಮುಂದಿನ ಜಗಲಿ (3)
11. ಮದುವೆಯ ಗಂಡಿನ ನಡುವೆ ಸಿಲುಕಿತೇ ವರ್ಷ (3)
13. ಅಂತಿಂಥ ಜನವಲ್ಲ, ಸೇವಕ (3)
15. ನೀರಿನ ಹನಿ ತಲೆಕೆಳಗಾಗಿದೆ (3)
16. ಕಬ್ಬಿಣದ ಕಡಲೆಯಷ್ಟು ಕಷ್ಟವೆನಿಸುವ ಪತ್ಯ ವಿಷಯ (3)
17. ಹಣೆಗಿಟ್ಟುಕೊಳ್ಳುವ ಬೊಟ್ಟು (3)
18. ಪ್ರತಿದಿನ ನೆನಪಿಟ್ಟುಕೊಳ್ಳಬೇಕಾದ ತಾರೀಖು (3)
20. ಇವನೊಬ್ಬ ಮಂತ್ರಗಾರ (3)
22. ಎದೆ ಮತ್ತು ಹೊಟ್ಟೆಯಲ್ಲಿನ ಅಂಗಗಳನ್ನು ಬೇರ್ಪಡಿಸುವ ಪದರ (2)

ಸರಿಯುತ್ತರಗಳು
[illegible]

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ಜ್ಯೂ.ಮಹಿಳಾ ಹಾಕಿ: ಭಾರತ ಶುಭಾರಂಭ

ಸ್ಯಾಂಟಿಯಾಗೊ (ಚಿಲಿ): ಹಿನಾ ಬಾನೊ ಮತ್ತು ಕನಿಕಾ ಸಿವಾಚ್ ಅವರ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಭಾರತ ತಂಡವು ಎಫ್‌ಐಎಚ್ ಜೂನಿಯರ್ ಮಹಿಳೆಯರ ಹಾಕಿ ವಿಶ್ವಕಪ್‌ನಲ್ಲಿ 13-0ನಿಂದ ನಮೀಬಿಯಾ ತಂಡವನ್ನು ಮಣಿಸಿ ತನ್ನ ಅಭಿಯಾನ ಆರಂಭಿಸಿತು. ಭಾರತದ ಹೀನಾ (35, 35, 45ನೇ ನಿಮಿಷ) ಮತ್ತು ಕನಿಕಾ (12, 30, 45ನೇ ನಿಮಿಷ) ಸಾಕ್ಷಿ ರಾಣಾ (10ನೇ, 23ನೇ ನಿಮಿಷ) ತಲಾ ಎರಡು ಗೋಲು ದಾಖಲಿಸಿದರು. ಬಿನಿಮಾ ಧನ್, ಸೋನಮ್, ಸಾಕ್ಷಿ ಶುತಾ, ಇಶಿಕಾ, ಮತ್ತು ಮನೀಷಾ ತಲಾ ಒಂದೊಂದು ಬಾರಿ ಚೆಂಡನ್ನು ಗುರಿ ಸೇರಿಸಿದರು. ಆರಂಭದಲ್ಲೇ ಆಕ್ರಮಣಕಾರಿ ಆಟಕ್ಕಿಳಿದ ಭಾರತದ ವನಿತೆಯರು ಮೊದಲ ಕ್ವಾರ್ಟರ್‌ನಲ್ಲೇ 4-0 ಮುನ್ನಡೆಯೊಂದಿಗೆ ಉತ್ತಮ ಆರಂಭ ಪಡೆದರು. ಮಧ್ಯಂತರದ ವೇಳೆಗೆ ಮುನ್ನಡೆಯನ್ನು 7-0 ಹೆಚ್ಚಿಸಿದ ಭಾರತ ಉತ್ತರಾರ್ಧದಲ್ಲೂ ಪಾರಮ್ಯ ಮೆರೆಯಿತು. ಮೂರನೇ ಕ್ವಾರ್ಟರ್‌ನಲ್ಲಿ ಭಾರತದ ಪರ ಮತ್ತೆ ಐದು ಗೋಲುಗಳು ದಾಖಲಾದವು. ಕೊನೆಯ ಕ್ವಾರ್ಟರ್ ನಲ್ಲಿ ಉಭಯ ತಂಡಗಳ ಆಟಗಾರ್ತಿಯರು ರಕ್ಷಣಾತ್ಮಕ ಆಟಕ್ಕೆ ಒತ್ತು ನೀಡಿದರು. ಕೊನೆಯ ನಿಮಿಷದಲ್ಲಿ ಮನೀಷಾ ಪೆನಾಲ್ಟಿ ಕಾರ್ನರ್ ಅವಕಾಶ ದಲ್ಲಿ ಗೋಲು ದಾಖಲಿಸಿ, ಭಾರತದ ಗೆಲುವಿನ ಅಂತರವನ್ನು ಹೆಚ್ಚಿಸಿದರು.

ಫಿಫಾ ಫುಟ್ಬಾಲ್ ಫೈನಲ್ಸ್ ಡ್ರಾ ವೇಳೆ ಟ್ರಂಪ್ ಭಾಗಿ

ವಾಷಿಂಗ್ಟನ್: ಈ ವಾರದ ಕೊನೆಯಲ್ಲಿ ವಾಷಿಂಗ್ಟನ್‌ನಲ್ಲಿ ನಡೆಯಲಿರುವ ಫಿಫಾ ವಿಶ್ವಕಪ್ ಫುಟ್ಬಾಲ್ ಫೈನಲ್‌ಗಾಗಿ ನಡೆಯುವ ಡ್ರಾದಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್

ಭಾಗವಹಿಸಲಿದ್ದಾರೆ ಎಂದು ಶ್ವೇತಭವನ ಮಂಗಳವಾರ ದೃಢಪಡಿಸಿದೆ. ಕೆನಡಾ ಮತ್ತು ಮೆಕ್ಸಿಕೋ ಜತೆಗೆ ಅಮೆರಿಕವು 2026ರ ಪಂದ್ಯಾವಳಿಯನ್ನು ಜಂಟಿ ಯಾಗಿ ಆಯೋಜಿಸಲಿದೆ. ಕೆನಡಿ ಸೆಂಟರ್‌ನಲ್ಲಿ ಶುಕ್ರವಾರ ನಡೆಯುವ ಫಿಫಾ ವಿಶ್ವಕಪ್ ಫೈನಲ್ ಡ್ರಾದಲ್ಲಿ ಭಾಗವಹಿ ಸಲಿದ್ದಾರೆ ಅಮೆರಿಕ ಅಧ್ಯಕ್ಷರು ಭಾಗವಹಿಸಲಿದ್ದಾರೆ ಎಂದು ಶ್ವೇತಭವನದ ಪತ್ರಿಕಾ ಕಾರ್ಯದರ್ಶಿ ಕರೋಲಿನ್ ಲೀವಿಟ್ ಸುದ್ದಿಗಾರರಿಗೆ ತಿಳಿಸಿದರು. ಮುಂದಿನ ವರ್ಷ ನಡೆಯಲಿರುವ ಅಮೆರಿಕದ 250ನೇ ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ ವಿಶ್ವಕಪ್ ಅನ್ನು ಟ್ರಂಪ್ ಕೇಂದ್ರಬಿಂದುವನ್ನಾಗಿ ಮಾಡಿಕೊಂಡಿದ್ದಾರೆ.

ಇಂದು ಟೀಮ್ ಇಂಡಿಯಾ-ದ.ಆಫ್ರಿಕಾ 2ನೇ ಏಕದಿನ

ಬ್ಯಾಟರ್‌ಗಳಿಗೆ ಸವಾಲಾಗಲಿರುವ ಬೌಲಿಂಗ್‌ಸ್ನೇಹಿ ಪಿಚ್

ಭಾರತದ ಚಿತ್ತ ಸರಣಿ ಗೆಲುವಿನತ್ತ

ರಾಯ್ಪುರ: ವಿರಾಟ್ ಕೊಹ್ಲಿ, ರೋಹಿತ್ ಶರ್ಮ ಮತ್ತು ನಾಯಕ ಕೆಎಲ್ ರಾಹುಲ್ ಅವರ ಭರ್ಜರಿ ಬ್ಯಾಟಿಂಗ್ ಬಲದಿಂದ ಏಕದಿನ ಸರಣಿಯ ಮೊದಲ ಪಂದ್ಯ ಗೆದ್ದು ಉತ್ಸಾಹದಲ್ಲಿರುವ ಭಾರತ ತಂಡವು, ಬುಧವಾರ ಎರಡನೇ ಪಂದ್ಯಕ್ಕೆ ಸಿದ್ಧವಾಗಿದೆ. ಈ ಪಂದ್ಯವನ್ನು ಗೆದ್ದು ಇನ್ನೊಂದು ಪಂದ್ಯ ಬಾಕಿ ಇರುವಂತೆಯೇ ಸರಣಿ ವಶಪಡಿಸಿಕೊಳ್ಳುವತ್ತ ಭಾರತವು ಚಿತ್ತ ನೆಟ್ಟಿದೆ, ಅತ್ತ ಹರಿಣ ಪಡೆಯು ಪಂದ್ಯ ಗೆದ್ದು ಸರಣಿ ಸಮಬಲಗೊಳಿಸುವ ವಿಶ್ವಾಸದೊಂದಿಗೆ ಮೈದಾನಕ್ಕಿಳಿಯಲಿದೆ.

ಇದು ರಾಯ್ಪುರದಲ್ಲಿ ನಡೆಯುತ್ತಿರುವ ಎರಡನೇ ಏಕದಿನ ಪಂದ್ಯವಾಗಿದೆ. ಇಲ್ಲಿನ ಶಹೀದ್ ವೀರನಾರಾಯಣ ಸಿಂಗ್ ಕ್ರಿಕೆಟ್ ಮೈದಾನದಲ್ಲಿ ದೊಡ್ಡ ಮೊತ್ತದ ರನ್ ಕಲೆ ಹಾಕುವುದು ಅಸಾಧ್ಯ. ಪಿಚ್ ಬೌಲಿಂಗ್ ಸ್ನೇಹಿಯಾಗಿದ್ದು, ವೇಗದ ಬೌಲರ್‌ಗಳು ಹೆಚ್ಚಿನ ಸ್ವಿಂಗ್ ಪಡೆಯಬಹುದು.

ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮ ಉತ್ತಮ ಫಾರ್ಮ್ ಕಂಡುಕೊಂಡಿರುವುದು ಭಾರತಕ್ಕೆ ಆತ್ಮವಿಶ್ವಾಸವಾದರೂ, ವಾಷಿಂಗ್ಟನ್ ಸುಂದರ್, ಋತುರಾಜ್ ಗಾಯಕ್ವಾಡ್ ಮತ್ತು ಯಶಸ್ವಿ ಜೈಸ್ವಾಲ್ ಜವಾಬ್ದಾರಿಯುತ ಬ್ಯಾಟಿಂಗ್ ನಡೆಸುವ ಮೂಲಕ ತಮ್ಮ ಆಯ್ಕೆಯನ್ನು ಸಮರ್ಥಿಸಿಕೊಳ್ಳಬೇಕಿದೆ. ಭಾರತ ಆಡುವ ಹನ್ನೊಂದರ ಬಳಗದಲ್ಲಿ ಬದಲಾವಣೆ ಮಾಡುವ ಸಾಧ್ಯತೆ ಕಡಿಮೆ. ಬೌಲಿಂಗ್ ವಿಭಾಗದಲ್ಲಿ ಕನ್ನಡಿಗ ಪ್ರಸಿದ್ ಕೃಷ್ಣ ಹೆಚ್ಚಿನ ವಿಕೆಟ್ ಬೇಟೆಯಾಡಬೇಕಿದೆ, ಜಡೇಜಾ ಸ್ಪಿನ್ ಜಾದು ಮಾಡಬೇಕಿದೆ.

ಬವುಮಾ ತಂಡ ಸೇರುವ ಸಾಧ್ಯತೆ: ಕಳೆದ ಪಂದ್ಯದಿಂದ ಹೊರಗುಳಿದಿದ್ದ ದ.ಆಫ್ರಿಕಾ ನಾಯಕ ಟೆಂಬಾ ಬವುಮಾ ಈ ಪಂದ್ಯದಲ್ಲಿ ಆಡುವ ಜತೆಗೆ, ನಾಯತ್ವ ವಹಿಸಿಕೊಳ್ಳುವ ಸಾಧ್ಯತೆ ಅಧಿಕವಾಗಿದೆ. ಅವರ ಆಗಮನದಿಂದ ತಂಡದ ಬ್ಯಾಟಿಂಗ್ ಬಲಿಷ್ಠಗೊಳ್ಳಲಿದೆ, ಜತೆಗೆ ಪ್ರೆನೆಲನ್ ಸುಬ್ರಾಯೆನ್ ಬದಲು ಕೇಶವ್ ಮಹಾರಾಜ್ ಅವಕಾಶ ಪಡೆಯುವ ಸಾಧ್ಯತೆ ಇದೆ. ಕಳೆದ ಪಂದ್ಯದಲ್ಲಿ ಶೂನ್ಯ ಸುತ್ತಿದ್ದ ಎಡಗೈ ಬ್ಯಾಟರ್ ಕ್ವಿಂಟನ್ ಡಿ ಕಾಕ್ ಮತ್ತು ರಿಯಾನ್ ರಿಕೆಲ್ಟನ್ ಈ ಪಂದ್ಯದಲ್ಲಿ ನಿರೀಕ್ಷಿತ ಬ್ಯಾಟಿಂಗ್ ನಡೆಸುವ ವಿಶ್ವಾಸದಲ್ಲಿದ್ದಾರೆ. ಕೆಳ ಕ್ರಮಾಂಕದಲ್ಲಿ ಕಾರ್ಬಿನ್ ಬಾಷ್, ಮಾರ್ಕೊ ಜಾನ್ಸನ್ ಅಸಾಮಾನ್ಯ ಬ್ಯಾಟಿಂಗ್ ಮೂಲಕ ಈಗಾಗಲೇ ತಮ್ಮ ಸಾಮರ್ಥ್ಯವನ್ನು ತೋರಿಸಿದ್ದಾರೆ. ಒಟ್ಟಾರೆ ದ.ಆಫ್ರಿಕಾ ತಂಡ ಕಳೆದ ಪಂದ್ಯದ ತಪ್ಪುಗಳನ್ನು ತಿದ್ದಿಕೊಂಡು ಕಣಕ್ಕಿಳಿಯುವ ಆತ್ಮವಿಶ್ವಾಸದಲ್ಲಿದೆ.

ಒಟ್ಟಾರೆ ಮುಖಾಮುಖಿ: ಉಭಯ ತಂಡಗಳು ಇದುವರೆಗೆ ಏಕದಿನ ಕ್ರಿಕೆಟ್‌ನಲ್ಲಿ ಒಟ್ಟು 95 ಬಾರಿ ಮುಖಾಮುಖಿಯಾಗಿವೆ. ಈ ಪೈಕಿ ಭಾರತ 41 ಪಂದ್ಯಗಳಲ್ಲಿ ಗೆದ್ದಿದ್ದರೆ, ದಕ್ಷಿಣ ಆಫ್ರಿಕಾ 51 ಬಾರಿ ಜಯಗಳಿಸಿದೆ. 3 ಪಂದ್ಯಗಳು ಫಲಿತಾಂಶವಿಲ್ಲದೆ ಕೊನೆಗೊಂಡಿವೆ.

ಭಾರತ ಸಂಭಾವ್ಯ ತಂಡ: ರೋಹಿತ್ ಶರ್ಮಾ, ಯಶಸ್ವಿ ಜೈಸ್ವಾಲ್, ವಿರಾಟ್ ಕೊಹ್ಲಿ, ಋತುರಾಜ್ ಗಾಯಕ್ವಾಡ್, ವಾಷಿಂಗ್ಟನ್ ಸುಂದರ್, ಕೆಎಲ್ ರಾಹುಲ್(ನಾಯಕ ಮತ್ತು ಕೀಪರ್), ರವೀಂದ್ರ ಜಡೇಜಾ, ಹರ್ಷಿತ್ ರಾಣಾ, ಕುಲದೀಪ್ ಯಾದವ್, ಅರ್ಷದೀಪ್ ಸಿಂಗ್, ಪ್ರಸಿದ್ಧ್ ಕೃಷ್ಣ.

ದಕ್ಷಿಣ ಆಫ್ರಿಕಾ ಸಂಭಾವ್ಯ ತಂಡ: ರಿಯಾನ್ ರಿಕೆಲ್ಟನ್, ಕ್ವಿಂಟನ್ ಡಿ ಕಾಕ್(ಕೀಪರ್), ಐಡೆನ್ ಮಾರ್ಕ್ರಾಮ್, ಟೆಂಬ ಬವುಮಾ (ನಾಯಕ), ಟೋನಿ ಡಿ ಝೋರ್ಜಿ, ಡೆವಾಲ್ಡ್ ಬ್ರೆವಿಸ್, ಮಾರ್ಕೊ ಜಾನ್ಸನ್, ಕಾರ್ಬಿನ್ ಬಾಷ್, ಪ್ರೆನೆಲನ್ ಸುಬ್ರಾಯೆನ್, ನಾಂಡ್ರೆ ಬರ್ಗರ್, ಒಟ್ನೀಲ್ ಬಾರ್ಟ್‌ಮ್ಯಾನ್.

ಪಿಚ್ ರಿಪೋರ್ಟ್, ಹವಾಮಾನ ವರದಿ

ಶಹೀದ್ ವೀರನಾರಾಯಣ ಸಿಂಗ್ ಕ್ರಿಕೆಟ್ ಮೈದಾನದಲ್ಲಿ ನಡೆಯುತ್ತಿರುವ ಎರಡನೇ ಏಕದಿನ ಪಂದ್ಯ ಇದಾಗಿದೆ. ಮೊದಲ ಪಂದ್ಯವನ್ನು 2023ರಲ್ಲಿ ಆಡಲಾಗಿತ್ತು. ಎದುರಾಳಿ ನ್ಯೂಜಿಲ್ಯಾಂಡ್ ಆ ಪಂದ್ಯವನ್ನು ಭಾರತ 8 ವಿಕೆಟ್ ಅಂತರದಿಂದ ಗೆದ್ದಿತ್ತು. ಎರಡು ವರ್ಷಗಳ ಬಳಿಕ ಇಲ್ಲಿ ಪಂದ್ಯ ನಡೆಯುತ್ತಿರುವ ಕಾರಣ ಪಿಚ್ ವರ್ತನೆ ಹೇಗಿರಲಿದೆ ಎಂದು ಸ್ಪಷ್ಟವಾಗಿ ಹೇಳುವುದು ಕಷ್ಟಕರ. ಪಂದ್ಯಕ್ಕೆ ಯಾವುದೇ ಮಳೆ ಭೀತಿ ಇಲ್ಲವಾದ ಕಾರಣ ಸಂಪೂರ್ಣ ಪಂದ್ಯ ಸಾಗಲಿದೆ. ಸಂಜೆ ನಾಲ್ಕು ಗಂಟೆ ತನಕ ತಾಪಮಾನ 27 ಡಿಗ್ರಿಯಷ್ಟು ಇರಲಿದೆ ಎಂದು ಹವಾಮಾನ ಇಲಾಖೆ ತನ್ನ ವರದಿಯಲ್ಲಿ ತಿಳಿಸಿದೆ.

ವಿಶ್ವಕಪ್ ಗೆದ್ದ ಮಹಿಳಾ ತಂಡದ ಆಟಗಾರ್ತಿಯರಿಗೆ ಆಫೀಸರ್ ಆನ್ ಸ್ಪೆಷಲ್ ಡ್ಯೂಟಿ ಹುದ್ದೆ

ಸ್ನೇಹ್, ಪ್ರತಿಕಾ, ರೇಣುಕಾಗೆ ರೈಲ್ವೆಯಲ್ಲಿ ಬಡ್ತಿ

ದೆಹಲಿ: ಏಕದಿನ ಮಹಿಳಾ ವಿಶ್ವಪ್ ವಿಜೇತ ಭಾರತ ಮಹಿಳಾ ತಂಡದ ಆಟಗಾರ್ತಿಯರಾದ ಸ್ನೇಹ್ ರಾಣಾ, ರೇಣುಕಾ ಸಿಂಗ್ ಮತ್ತು ಪ್ರತಿಕಾ ರಾವಲ್ ಅವರಿಗೆ ರೈಲ್ವೆ ಸಚಿವಾಲಯವು 'ಆಫೀಸರ್ ಆನ್ ಸ್ಪೆಷಲ್ ಡ್ಯೂಟಿ' (ಕ್ರೀಡೆ) ಹುದ್ದೆಗೆ ಬಡ್ತಿ ನೀಡಿದೆ. ಈ ಮೂವರು ಆಟಗಾರ್ತಿಯರು ಔಟ್ ಆಫ್ ಟರ್ನ್ ಬಡ್ತಿ ಮೂಲಕ ಗ್ರೂಪ್-ಬಿ ಅಧಿಕಾರಿ ಹುದ್ದೆಯನ್ನು ಪಡೆದಿದ್ದಾರೆ. ಅದಕ್ಕೂ ಮೊದಲು ರಾವಲ್ ಅವರು ರೈಲ್ವೆಯಲ್ಲಿ ಹಿರಿಯ ಗುಮಾಸ್ತರಾಗಿ, ರೇಣುಕಾ ಮತ್ತು ರಾಣಾ ಅವರು ಕ್ರಮವಾಗಿ ಉತ್ತರ ರೈಲ್ವೆಯಲ್ಲಿ ಜೂನಿಯರ್ ಗುಮಾಸ್ತ ಮತ್ತು ಟಿಕೆಟ್ ಗುಮಾಸ್ತರಾಗಿದ್ದರು.

7ನೇ ಸಿಪಿಸಿ ಪ್ರಕಾರ ಪೇ ಮ್ಯಾಟ್ರಿಕ್ಸ್‌ನ ಲೆವೆಲ್-8 ಅಡಿಯಲ್ಲಿ ಗ್ರೂಪ್-ಬಿ ಗೆಜೆಟೆಡ್ ಅಧಿಕಾರಿಯ ವೇತನ ಮತ್ತು ಸವಲತ್ತು ಪಡೆಯಲು ಅರ್ಹರಾಗಿದ್ದಾರೆ ಎಂದು ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ. ರೈಲ್ವೆ ಕ್ರೀಡಾ ಪ್ರಚಾರ ಮಂಡಳಿಯ ಈ ಉಪಕ್ರಮವು ಮೂವರು ಮಹಿಳಾ ಕ್ರಿಕೆಟಿಗರಿಗೆ ಆರ್ಥಿಕ ಭದ್ರತೆ ಒದಗಿಸುವುದಲ್ಲದೆ, ಅವರಿಗೆ ಆಡಳಿತಾತ್ಮಕ ಜವಾಬ್ದಾರಿಗಳನ್ನು ವಹಿಸುತ್ತದೆ ಎಂದು ಹೇಳಿದೆ.

ಭಾರತದ ವಿಶ್ವಕಪ್ ವಿಜೇತ ಅಭಿಯಾನದ ಸಮಯದಲ್ಲಿ ಸ್ನೇಹ್ ರಾಣಾ ಆರು ಪಂದ್ಯಗಳನ್ನು ಆಡಿ 45ರ ಸರಾಸರಿಯಲ್ಲಿ 7 ವಿಕೆಟ್‌ಗಳನ್ನು ಪಡೆದಿದ್ದರು. ಪಂದ್ಯಾವಳಿಯಲ್ಲಿ ಪ್ರತೀಕಾ ಭಾರತದ ಪರ ಅತೀ ಹೆಚ್ಚು ರನ್ ಗಳಿಸಿದ ಎರಡನೇ ಆಟಗಾರ್ತಿ ಎನಿಸಿದರು. ಏಳು ಇನ್ನಿಂಗ್ಸ್‌ಗಳಲ್ಲಿ 51 ಸರಾಸರಿಯಲ್ಲಿ 308 ರನ್ ಗಳಿಸಿದ್ದರು. ವೇಗಿ ರೇಣುಕಾ ಆರು ಪಂದ್ಯಗಳಿಂದ ಕೇವಲ ಮೂರು ವಿಕೆಟ್‌ಗಳನ್ನು ಮಾತ್ರ ಪಡೆದಿದ್ದರೂ, ಭಾರತ ಪರ ಹೊಸ ಚೆಂಡಿನಲ್ಲಿ ಉತ್ತಮ ಬೌಲಿಂಗ್ ಸಂಘಟಿಸಿದ್ದರು.

ಮುಸ್ತಾಕ್ ಆಲಿ ಟ್ರೋಫಿ ಕ್ರಿಕೆಟ್: ಪಡಿಕ್ಕಲ್ ಸ್ಫೋಟಕ ಶತಕ

ಕರ್ನಾಟಕಕ್ಕೆ ಬೃಹತ್ ಅಂತರದ ಗೆಲುವು

ಅಹಮದಾಬಾದ್: ಇಲ್ಲಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಕರ್ನಾಟಕ ಹಾಗೂ ತಮಿಳುನಾಡು ತಂಡಗಳ ನಡುವೆ ನಡೆದ ಸೈಯ್ಯದ್ ಮುಸ್ತಾಕ್ ಅಲಿ ಟ್ರೋಫಿಯಲ್ಲಿ ಕರ್ನಾಟಕ ತಂಡವು ದೇವದತ್ತ ಪಡಿಕ್ಕಲ್ ಅವರ ಅಮೋಘ ಶತಕದ ನೆರವಿನಿಂದ 145 ರನ್‌ಗಳ ಬೃಹತ್ ಗೆಲುವು ದಾಖಲಿಸಿದೆ.

ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಕರ್ನಾಟಕ ತಂಡದ ಪರವಾಗಿ ಆರಂಭಿಕರಾದ ಮಯಾಂಕ್ ಅಗರ್ವಾಲ್ (24 ರನ್) ಹಾಗೂ ಬಿ.ಆರ್. ಸಮರ್ಥ್ (53 ರನ್) ಗಳಿಸುವ ಮೂಲಕ 69 ರನ್‌ಗಳ ಉತ್ತಮ ಆರಂಭ ನೀಡಿದರು.

ಮಯಾಂಕ್ ಅಗರ್ವಾಲ್ ಔಟ್ ಆಗುತ್ತಿದ್ದಂತೆ ಕ್ರೀಸ್‌ಗೆ ಬಂದ ದೇವದತ್ತ ಪಡಿಕ್ಕಲ್ ಅವರು, ತಮಿಳುನಾಡು ತಂಡದ ಬೌಲರ್‌ಗಳ ಮೇಲೆ ಸವಾರಿ ಮಾಡಿದರು. ಕೇವಲ 46 ಎಸೆತಗಳಲ್ಲಿ 10 ಬೌಂಡರಿ, 6 ಸಿಕ್ಸರ್ ನೆರವಿನಿಂದ ಅಜೇಯ 102 ರನ್ ಗಳಿಸಿದರು. ಅವರ ಜೊತೆಗೆ ಸ್ಮರಣ್ ರವಿಚಂದ್ರನ್ ಅವರ (ಅಜೇಯ 46) ನೆರವಿನಿಂದ ಕರ್ನಾಟಕ ತಂಡ ನಿಗದಿತ 20 ಓವರ್‌ಗಳಲ್ಲಿ 3 ವಿಕೆಟ್ ಕಳೆದುಕೊಂಡು 245 ರನ್ ಕಲೆ ಹಾಕಿತು. ತಮಿಳುನಾಡು ಪರ ಸೋನು ಯಾದವ್ 2 ವಿಕೆಟ್ ಪಡೆಯುವಲ್ಲಿ ಸಫಲರಾದರು.

246 ರನ್‌ಗಳ ದೊಡ್ಡ ಮೊತ್ತ ಬೆನ್ನಟ್ಟಿದ ತಮಿಳುನಾಡು ತಂಡವು 14.2 ಓವರ್‌ಗಳಲ್ಲಿ ಕೇವಲ 100 ರನ್‌ಗಳಿಗೆ ಆಲೌಟ್ ಆಗುವ ಮೂಲಕ 145 ರನ್‌ಗಳ ಬೃಹತ್ ಅಂತರದ ಸೋಲು ಕಂಡಿತು. ತಂಡದ ಪರ ತುಷಾರ್ ರಹೇಜಾ 29 ರನ್ ಗಳಿಸಿದರೆ, ಕೀಪರ್ ಜಗದೀಸನ್ 21 ರನ್ ಗಳಿಸಿದರು. ಆರಂಭಿಕ ಆಟಗಾರ ಅಮಿತ್ ಸಾತ್ವಿಕ್ 15 ರನ್ ಮತ್ತು ಆರ್.ರಾಜ್‌ಕುಮಾರ್ 16 ರನ್ ಹೊರತುಪಡಿಸಿದರೆ ಉಳಿದ ಯಾವ ಆಟಗಾರರು ಎರಡಂಕಿ ಮೊತ್ತ ತಲುಪುವಲ್ಲಿ ವಿಫಲರಾದರು.

ಬೌಲಿಂಗ್‌ನಲ್ಲಿ ಕರ್ನಾಟಕ ತಂಡದ ಪರ ಶ್ರೇಯಸ್ ಗೋಪಾಲ್ ಮತ್ತು ಪ್ರವೀಣ್ ದುಬೆ ತಲಾ 3 ವಿಕೆಟ್ ಪಡೆದರೆ, ವೈಶಾಕ್ ವಿಜಯಕುಮಾರ್ ಹಾಗೂ ಶುಭಾಂಗ್ ಹೆಗ್ಡೆ ತಲಾ ಎರಡು ವಿಕೆಟ್ ಪಡೆದು ಮಿಂಚಿದರು.

ಸೈಯದ್ ಮುಸ್ತಾಕ್ ಆಲಿ ಕ್ರಿಕೆಟ್ | ವೈಭವ್ ಸೂರ್ಯವಂಶಿ ವ್ಯರ್ಥ ಶತಕ

ಬಿಹಾರ ವಿರುದ್ಧ ಮಹಾರಾಷ್ಟ್ರಕ್ಕೆ ಗೆಲುವು

ಕೋಲ್ಕತ್ತಾ: ಇಲ್ಲಿನ ಈಡನ್ ಗಾರ್ಡನ್ಸ್‌ನಲ್ಲಿ ಮಂಗಳವಾರ ನಡೆದ ದೇಶೀಯ ಪ್ರಮುಖ ಟಿ20 ಟೂರ್ನಿಯಾದ ಸೈಯದ್ ಮುಷ್ತಾಕ್ ಅಲಿ ಟ್ರೋಫಿಯಲ್ಲಿ ಹದಿನಾಲ್ಕು ವರ್ಷದ ವೈಭವ್ ಸೂರ್ಯವಂಶಿ ತಮ್ಮ ಚೊಚ್ಚಲ ಶತಕವನ್ನು ಬಾರಿಸುವ ಮೂಲಕ ಗಮನ ಸೆಳೆದರು. ಆದರೆ ಅವರ ಶತಕದ ಹೊರತಾಗಿಯೂ ಬಿಹಾರ ತಂಡವು ಮಹಾರಾಷ್ಟ್ರ ವಿರುದ್ಧ 3 ವಿಕೆಟ್ ಅಂತರದ ಸೋಲು ಕಂಡಿತು.

ಟಾಸ್ ಸೋತು ಬ್ಯಾಟಿಂಗ್ ಮಾಡಿದ ಬಿಹಾರ, ವೈಭವ್ ಸೂರ್ಯವಂಶಿಯ ಅಜೇಯ ಶತಕದ ನೆರವಿನಿಂದ ನಿಗದಿತ 20 ಓವರ್‌ಗಳಲ್ಲಿ 3 ವಿಕೆಟ್‌ಗೆ 176 ರನ್ ಕಲೆಹಾಕಿತು. ಆ ಗುರಿ ಬೆಂಬತ್ತಿದ ಮಹಾರಾಷ್ಟ್ರ ಐದು ಎಸೆತಗಳು ಬಾಕಿ ಇರುವಂತೆಯೇ 7 ವಿಕೆಟ್‌ಗೆ 182 ರನ್ ಬಾರಿಸಿ ಗೆಲುವು ತನ್ನದಾಗಿಸಿಕೊಂಡಿತು.

ಮಹಾರಾಷ್ಟ್ರದ ನಾಯಕ ಪೃಥ್ವಿ ಶಾ(66) ಅರ್ಧಶತಕ ಬಾರಿಸಿ ತಂಡಕ್ಕೆ ನೆರವಾದರು. ಕೆಳ ಕ್ರಮಾಂಕದಲ್ಲಿ ನೀರಜ್ ಜೋಶಿ(30), ರಂಜಿತ್ ನಿಕಮ್(27) ಮತ್ತು ನಿಕೀಲ್ ನಾಯ್ಕ್(22) ತಂಡವನ್ನು ಗೆಲುವಿನ ದಡ ಸೇರಿಸಿದರು.

ಬಿಹಾರ ತಂಡ ಬೃಹತ್ ಮೊತ್ತ ಪೇರಿಸಿದರೂ ಕಳಪೆ ಬೌಲಿಂಗ್‌ನಿಂದ ಪಂದ್ಯವನ್ನು ಕಳೆದು ಕೊಂಡಿತು.

ಸೂರ್ಯವಂಶಿ ಶತಕ ವ್ಯರ್ಥ: ಮೊದಲು ಬ್ಯಾಟಿಂಗ್ ನಡೆಸಿದ ಬಿಹಾರ ತಂಡದ ಪರ ವೈಭವ್ ಸೂರ್ಯವಂಶಿ ತಮ್ಮ ಎಂದಿನ ಶೈಲಿಯಂತೆ ಬಿರುಸಿನ ಆಟವಾಡಿ ಕೇವಲ 57 ಎಸೆತಗಳಲ್ಲಿ ಶತಕ ಗಳಿಸಿದರು. ಒಟ್ಟು ಏಳು ಸಿಕ್ಸರ್‌ಗಳು ಮತ್ತು ಏಳು ಬೌಂಡರಿಗಳನ್ನು ಸಿಡಿಸಿ ಅಜೇಯ 108 ರನ್ ಚಚ್ಚಿದ್ದರು. ಆದರೆ ಪಂದ್ಯ ಸೋತ ಕಾರಣ ಅವರ ಶತಕ ವ್ಯರ್ಥ ವಾಯಿತು. ಸೂರ್ಯವಂಶಿ ಹೊರತುಪಡಿಸಿ ಆಕಾಶ್ ರಾಜ್ (26) ಮತ್ತು ಆಯುಷ್ ಲೋಹರುಕ 25 ರನ್ (ಅಜೇಯ) ಗಳಿಸಿದರು.

ವಿಟಾಕೀಸ್



ಸೆಟ್ಟೇರಿದ ವೇಷಗಳು

ಪತ್ರಕರ್ತ ರವಿ ಬೆಳಗೆರೆ ಅವರ ವೇಷಗಳು ಎಂಬ ಸಣ್ಣ ಕಥೆಯನ್ನಾಧರಿಸಿ ಅದೇ ಹೆಸರಿನಲ್ಲಿ ಚಿತ್ರ ಸೆಟ್ಟೇರಿದೆ. ಈ ಚಿತ್ರದ ಮುಹೂರ್ತ ಸಮಾರಂಭ ಕೆಂಗೇರಿ ಸಮೀಪದ ಡ್ರಾಮಾ ಸ್ಟೇಜ್ ಸೆಟ್‌ನಲ್ಲಿ ನೆರವೇರಿತು. ಗ್ರೀನ್ ಟ್ರೀ ಸ್ಟುಡಿಯೋಸ್ ಬ್ಯಾನರ್‌ನಲ್ಲಿ ನಿರ್ಮಾಣವಾಗುತ್ತಿರುವ ಈ ಚಿತ್ರಕ್ಕೆ ಕಿಶನ್ ರಾವ್ ದಳವಿ ಚಿತ್ರಕಥೆ, ಬರೆದು ನಿರ್ದೇಶನ ಮಾಡುತ್ತಿದ್ದಾರೆ.

ವೇಷಗಳು ಚಿತ್ರದಲ್ಲಿ ರಂಗಭೂಮಿ ಕಲಾವಿದರ ಜತೆಗೆ ಜೋಗತಿಯ್ಮರ ಜಿವನ ಶೈಲಿಯ ಬಗ್ಗೆಯೂ ಹೇಳಲಾಗುತ್ತಿದ್ದು, ಶ್ರೀನಗರ ಕಿಟ್ಟಿ ಬಸಪ್ಪ ಹಾಗೂ ಬಸಮ್ಮ ಜೋಗತಿಯಾಗಿ ಎರಡು ಗೆಟಪ್‌ಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಅಂಕಿತಾ ಅಮರ್ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ.

ನಾನಿಲ್ಲಿ ಸಿಂಹಣ್ಣ ಎಂಬ ಪವರ್ ಫುಲ್ ಪಾತ್ರ ಮಾಡುತ್ತಿದ್ದೇನೆ. ಅಲ್ಲದೆ ತುಂಬಾ ವರ್ಷದಿಂದ ಕಿಶನ್ ಹೋರಾಟ ನೋಡ್ತಾ ಬಂದಿದ್ದೇನೆ. ಇನ್ನು ಕಿಟ್ಟಿ ಜತೆ ತುಂಬಾ ಟ್ರಾವೆಲ್ ಮಾಡಿದ್ದೇನೆ, ಸಿನಿಮಾದಲ್ಲಿ ನಟಿಸುತ್ತಿರುವುದು ಖುಷಿಕೊಟ್ಟಿದೆ ಎಂದು ಶರತ್ ಲೋಹಿತಾಶ್ವ ಸಂತಸದಿಂದ ನುಡಿದರು.

ನಮ್ಮ ದೈನಂದಿನ ಜೀವದಲ್ಲಿ ಒಂದೊಂದು ವೇಷ ಹಾಕಿಕೊಂಡೇ ಓಡಾಡುತ್ತೇವೆ. ಈ ಸಿನಿಮಾದ ಮೂಲಕ ಒಳಗಿರುವ ಕಾಣದ ವೇಷಗಳನ್ನು ತೋರಿಸುವ ಪ್ರಯತ್ನ ಮಾಡುತ್ತಿದ್ದೇವೆ. ಚಿತ್ರದಲ್ಲಿ ನಾನು ಅಲಮೇಲು ಎಂಬ ಪಾತ್ರ ನಿರ್ವಹಿಸುತ್ತಿದ್ದೇನೆ. ಆಕೆಯ ಆಸೆ, ಕನಸುಗಳು ಏನು ಎಂದು ಈ ಪಾತ್ರ ಬಿಂಬಿಸುತ್ತದೆ ಎಂದು ನಟಿ ಅಂಕಿತಾ ಅವರ್ ಹೇಳಿದರು. ಡ್ರಾಮಾ ಹಿನ್ನೆಲೆಯ ಸಾಗುವ ಚಿತ್ರದಲ್ಲಿ ಹನ್ನೆರಡು ಹಾಡುಗಳಿದ್ದು, ಕವಿರಾಜ್, ನಾಗೇಂದ್ರ ಪ್ರಸಾದ್, ಕಲ್ಯಾಣ್, ವಿ.ಮನೋಹರ್ ಸಾಹಿತ್ಯ ಬರೆಯುತ್ತಿದ್ದಾರೆ. ಕೌಶಿಕ್ ಹರ್ಷ ಸಂಗೀತ ಸಂಯೋಜಿಸುತ್ತಿದ್ದು, ಮದನ್ ಹರಿಣಿ ನೃತ್ಯ ನಿರ್ದೇಶನ, ಅಕ್ಷಯ್.ಪಿ.ರಾವ್ ಸಂಕಲನ ಈ ಚಿತ್ರಕ್ಕಿದೆ.

> **ವೇಷಗಳು ಕಥೆಯನ್ನು ಓದಿದಾಗ ಇದನ್ನು ಸಿನಿಮಾ ಮಾಡಿದರೆ ಚೆನ್ನಾಗಿರತ್ತದೆ ಅನ್ನಿಸಿತು. ಬಹುತೇಕ ರಂಗಸಜ್ಜಿಕೆಯೊಳಗೇ ನಡೆಯುವ, ನಾಟಕದ ಹಿನ್ನೆಲೆಯಲ್ಲಿ ಸಾಗುವ ಪ್ರೇಮಕಥೆಯಿದು. ಚಿತ್ರದಲ್ಲಿ ನಲವತ್ತರಿಂದ ಐವತ್ತು ಭಾಗ ನಾಟಕದ ಎಪಿಸೋಡ್ ಬರುತ್ತದೆ. ಈ ಕಥೆ ಬಳ್ಳಾರಿಯಿಂದ ಆರಂಭವಾಗಿ ಉತ್ತರ ಕರ್ನಾಟಕ, ಬೆಂಗಳೂರು, ಮೈಸೂರು, ಮಧ್ಯಪ್ರದೇಶದವರೆಗೂ ಸಾಗುತ್ತದೆ.**
> -ಕಿಶನ್‌ರಾವ್ ದಳವಿ ನಿರ್ದೇಶಕ

> **ರಂಗಭೂಮಿಯ ಒಳಹರಿವುಗಳು ಹೇಗಿರುತ್ತದೆ. ಅಲೆಮಾರಿಯ ಬದುಕು ಬವಣೆ ಯಾವ ರೀತಿ ಇರುತ್ತದೆ. ಇದನ್ನೆಲ್ಲ ನಮ್ಮ ಚಿತ್ರದಲ್ಲಿ ಹೇಳುತ್ತಿದ್ದೇವೆ. ಇಪ್ಪತ್ತೈದು ವರ್ಷಗಳ ಹಿಂದೆ ಇದ್ದ ರಂಗಭೂಮಿ, ಅದರ ನಡುವೆ ಒಂದು ಪ್ರೇಮಕಥೆಯೂ ಇದೆ. ನಾನು ಬಸಪ್ಪ ಹಾಗೂ ಬಸಮ್ಮ ಹೀಗೆ ಎರಡು ಶೇಡ್‌ಗಳಲ್ಲಿ ಕಾಣಿಸಿಕೊಳ್ಳುತ್ತಿದ್ದೇನೆ.**
> -ಶ್ರೀನಗರ ಕಿಟ್ಟಿ

ಒಂದು ಶಿಕಾರಿಯ ಕಥೆ ಹೇಳಿದ ನಿರ್ದೇಶಕ ಸಚಿನ್ ಶೆಟ್ಟಿ ಈಗ ಸಮುದ್ರ ಮಂಥನಕ್ಕೆ ಸಿದ್ಧವಾಗಿದ್ದಾರೆ. ಸಚಿನ್ ಸಮುದ್ರ ಮಂಥನ ಸಿನಿಮಾವನ್ನು

ಶೂಟಿಂಗ್ ಮುಗಿಸಿದ ಸಮುದ್ರ ಮಂಥನ

ನಿರ್ದೇಶನ ಮಾಡುತ್ತಿದ್ದು, ಈ ಚಿತ್ರದ ಚಿತ್ರೀಕರಣವೂ ಮುಕ್ತಾಯ ವಾಗಿದೆ. ಕುಂದಾಪುರ, ಶಿವಮೊಗ್ಗ ಸುತ್ತಮುತ್ತ ಶೂಟಿಂಗ್ ನಡೆಸಲಾಗಿದೆ. ಕರಾವಳಿ-ಮಲೆನಾಡಿನ ಹಸಿರು ಗದ್ದೆ, ಸಮುದ್ರ ತೀರದಂತಹ ಸುಂದರ ಸ್ಥಳಗಳಲ್ಲದೆ, ದಟ್ಟ ಕಾಡು, ಬೆಟ್ಟ-ಗುಡ್ಡಗಳ ದುರ್ಗಮ ತಾಣಗಳಲ್ಲಿ ಸುಮಾರು ಮೂವತ್ತನಾಲ್ಕು ದಿನಗಳ ಕಾಲ ಚಿತ್ರೀಕರಣ ನಡೆದಿದ್ದು, ಕಣ್ಣಿಗೆ ಹಬ್ಬವೆನಿಸುವ ದೃಶ್ಯಾವಳಿಗಳನ್ನು ಸೆರೆಹಿಡಿಯಲಾಗಿದೆ. ಸಮುದ್ರ ಮಂಥನ ಚಿತ್ರದಲ್ಲಿ ಯಶವಂತ್ ಕುಮಾರ್ ನಾಯಕನಾಗಿ ನಟಿಸಿದ್ದು, ಮಂದಾರಾ ಬಟ್ಟಲಹಳ್ಳಿ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಸ್ಕಂದ ಅಶೋಕ್, ನವೀನ್ ಶೆಟ್ಟಿ, ಶಿವಪ್ರಕಾಶ್ ಪೂಂಜಾ, ರಮೇಶ್ ರೈ, ಗುರುರಾಜ್ ಶೆಟ್ಟಿ, ಶ್ರೀಕಾಂತ್, ರೂಪಾ ಶೆಟ್ಟಿ ಮುಂತಾದವರು ಚಿತ್ರದ ತಾರಾಗಣದಲ್ಲಿದ್ದಾರೆ.

ಸಸ್ಪೆನ್ಸ್ ಥ್ರಿಲ್ಲರ್ ಸ್ಟೋರಿಯ ಜತೆಗೆ ಮನರಂಜನೆಗೂ ಒತ್ತು ನೀಡಲಾಗಿದೆ.

ಕೌಂತೇಯನಾದ ಮನೋರಂಜನ್

ಕ್ರೇಜಿಸ್ಟಾರ್ ರವಿಚಂದ್ರನ್ ಪುತ್ರ ಮನೋರಂಜನ್ ಸಾಹೇಬನಾಗಿ ಚಂದನವನಕ್ಕೆ ಬಂದು ಮಿಂಚಿದರು. ಈಗ ಕೌಂತೇಯನಾಗಿ ಎಂಟ್ರಿಕೊಡಲು ಸಿದ್ಧವಾಗಿದ್ದಾರೆ. ಇತ್ತೀಚೆಗೆ ಕೌಂತೇಯ ಚಿತ್ರದ ಮುಹೂರ್ತ ನೆರವೇರಿತ್ತು. ಈಗ ಸಿನಿಮಾ ಚಿತ್ರೀಕರಣ ಭರದಿಂದ ಸಾಗುತ್ತಿದೆ. ಚಿತ್ರದಲ್ಲಿ ಮರ್ಡರ್ ಮಿಸ್ಟರಿ ಸ್ಟೋರಿ ಇದ್ದು, ಮನೋರಂಜನ್ ಜತೆಗೆ ಅಚ್ಯುತ್ ಕುಮಾರ್ ಕೂಡ ಪ್ರಮುಖ ಪಾತ್ರದಲ್ಲಿ ನಟಿಸುತ್ತಿದ್ದಾರೆ. ವಿಶೇಷ ಎಂದರೆ ಅಚ್ಯುತ್ ಕುಮಾರ್ ಪಾಸಿಟಿವ್ ಕ್ಯಾರೆಕ್ಟರ್‌ನಲ್ಲಿ ಕಾಣಿಸಿಕೊಂಡರೆ, ಮನೋರಂಜನ್ ಇದೇ ಮೊದಲ ಬಾರಿಗೆ ನೆಗೆಟಿವ್ ರೋಲ್‌ನಲ್ಲಿ ಬಣ್ಣಹಚ್ಚಿದ್ದಾರೆ. ಅವರ ಗೆಟಪ್ ಸಹ ಭಿನ್ನವಾಗಿದ್ದು, ಯಾಕಾಗಿ ಅವರು ನೆಗೆಟಿವ್ ಪಾತ್ರ ನಿಭಾಯಿಸುತ್ತಿದ್ದಾರೆ ಎಂಬುದನ್ನು ಚಿತ್ರತಂಡ ರಿವಿಲ್ ಮಾಡಿಲ್ಲ.

ಮನೋರಂಜನ್‌ಗೆ ನಾಯಕಿಯಾಗಿ ಅನನ್ಯಾ, ರಾಜಶೇಖರ್ ನಟಿಸುತ್ತಿದ್ದಾರೆ. ಎಸಿಪಿಯಾಗಿ ಪ್ರಿಯಾಂಕಾ ತಿಮ್ಮೇಶ್ ಕಾಣಿಸಿಕೊಂಡಿದ್ದು, ಇದೇ ಮೊದಲ ಬಾರಿಗೆ ಪ್ರಿಯಾಂಕಾ ಖಾಕಿ ತೊಟ್ಟು ಕಂಗೊಳಿಸುತ್ತಿದ್ದಾರೆ. ಶರಣ್ಯಾ ಶೆಟ್ಟಿ, ಅಚ್ಯುತ್ ಕುಮಾರ್ ಮಗಳ ಪಾತ್ರದಲ್ಲಿ ಅಭಿನಯಿಸುತ್ತಿದ್ದಾರೆ. ಬಿ.ಕೆ.ಚಂದ್ರಹಾಸ ಈ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿದ್ದು, ಮಾಂಕಾಳಿ ಪಿಕ್ಚರ್ಸ್ ಬ್ಯಾನರ್‌ನಲ್ಲಿ ಸುರೇಶ್ ಕುಮಾರ್ ಬಂಡವಾಳ ಹೂಡಿದ್ದಾರೆ.



> **ಕೌಂತೇಯ ಅಂದರೆ ಕುಂತಿಪುತ್ರ ಎಂದರ್ಥ. ಈ ಚಿತ್ರದಲ್ಲಿ ಕೌಂತೇಯ ಯಾರು ಎಂಬುದು ಒಂದೆಡೆಯಾದರೆ, ಮತ್ತೊಂದೆಡೆ ಮರ್ಡರ್ ಮಿಸ್ಟರಿ ಕಥೆಯನ್ನು ಕುತೂಹಲಭರಿತವಾಗಿ ಕಟ್ಟಿಕೊಡಲಾಗುತ್ತಿದೆ. ಇದು ಹೊಸತನದ ಕಥೆಯಾಗಿದ್ದು, ನಿರೂಪಣೆಯಲ್ಲೂ ವಿಭಿನ್ನತೆಯಿದೆ. ಊಹೆಗೂ ನಿಲುಕದಂತೆ ಚಿತ್ರಕಥೆ ಹೆಣೆದಿರುವುದು ಚಿತ್ರದ ಪ್ಲಸ್ ಪಾಯಿಂಟ್.**
> -ಬಿ.ಕೆ.ಚಂದ್ರಹಾಸ ನಿರ್ದೇಶಕ

ಡೆವಿಲ್ ದರ್ಶನಕ್ಕೆ ಕಾತರ

ನಟ ದರ್ಶನ್ ಅಭಿನಯದ ಡೆವಿಲ್ ಮುಂದಿನ ವಾರ ಅದ್ದೂರಿಯಾಗಿ ತೆರೆಗೆ ಬರಲಿದೆ. ಡೆವಿಲ್ ದರ್ಶನಕ್ಕೆ ಪ್ರೇಕ್ಷಕರು ಕಾತರರಾಗಿದ್ದಾರೆ. ಡೆವಿಲ್ ಅದ್ದೂರಿಯಾಗಿ ಅಬ್ಬರಿಸಲು ಸಿದ್ಧವಾಗಿದ್ದು, ಇದೇ 11 ರಂದು ವಿಶ್ವಾದ್ಯಂತ ಅದ್ದೂರಿಯಾಗಿ ಬಿಡುಗಡೆಯಾಗಲಿದೆ. ಈ ಸಿನಿಮಾದಲ್ಲಿ ದರ್ಶನ್ ಹೊಸ ಅವತಾರದಲ್ಲಿ ಮಿಂಚಿದ್ದು ಹಲವು ಶೇಡ್ ಗಳಲ್ಲಿ ಕಾಣಿಸಿಕೊಂಡಿದ್ದಾರೆ. ಈಗಾಗಲೇ ಡೆವಿಲ್ ಟೀಸರ್ ಹಾಗೂ ಹಾಡುಗಳ ಮೂಲಕ ಕುತೂಹಲ ಮೂಡಿಸಿದೆ.

2018ರಲ್ಲಿ ಆರಂಭವಾದ ಕಥೆಯಿದೆ. ದರ್ಶನ್ ಅವರು ಕಥೆ ಕೇಳಿ ನಟಿಸಲು ಒಪ್ಪಿದರು, ಅಷ್ಟರಲ್ಲಿ ಕರೋನಾ ಕಾಡಿತು. ಬಳಿಕ ಒಂದಷ್ಟು ಸಮಸ್ಯೆಗಳಿಂದ ಸಿನಿಮಾದ ಚಿತ್ರೀಕರಣ ಮುಂದಕ್ಕೆ ಹೋಯಿತು. ಕಾಟೇರ ಸಿನಿಮಾ ಮುಗಿಸಿದ ಬಳಿಕ ಡೆವಿಲ್ ಸಿನಿಮಾದಲ್ಲಿ ನಟಿಸುವುದಾಗಿ ದರ್ಶನ್ ಹೇಳಿದರು. ಅಂತು ಸಿನಿಮಾ ಸೆಟ್ಟೇರಿತು. ಆ ನಡುವೆ ದರ್ಶನ್ ಜೈಲು ಸೇರಿದರು. ಅವರು ಹೊರ ಬಂದ ಬಳಿಕ ಚಿತ್ರೀಕರಣ ಮುಗಿಸಿದೆವು. ಅಂದುಕೊಂಡಂತೆ ಸಿನಿಮಾದ ಮೂಡಿಬಂದಿದೆ ಎಂಬ ಖುಷಿ ಇದೆ. ಆದರೆ ದರ್ಶನ್ ಅವರು ನಮ್ಮ ಚಿತ್ರತಂಡದೊಂದಿಗಿಲ್ಲ ಎನ್ನುವ ನೋವು ಇದೆ ಎಂದು ನಿರ್ದೇಶಕ ಪ್ರಕಾಶ್ ವೀರ್ ಹೇಳಿದರು.

ನಾನು ಕಾಟೇರ ಚಿತ್ರದಲ್ಲಿಯೂ ದರ್ಶನ್ ಅವರ ಜತೆಗೆ ನಟಿಸಿದ್ದೆ. ಈಗ ಮತ್ತೆ ಅವರೊಂದಿಗೆ ನಟಿಸುವ ಅವಕಾಶ ಸಿಕ್ಕಿದೆ. ಒಳ್ಳೆಯ ಪಾತ್ರದಲ್ಲಿ ಅಭಿನಯಿಸಿದ ಖುಷಿ ಇದೆ ಎಂದು ಅಚ್ಯುತ್ ಕುಮಾರ್ ಸಂತಸದಿಂದ ನುಡಿದರು.

ದರ್ಶನ್ ಅವರ ಜತೆಗೆ ನಟಿಸುತ್ತಿರುವ ಎರಡನೇ ಸಿನಿಮಾವಿದು, ನನ್ನ ಪಾತ್ರ ಏನಿರಬಹುದು ಎಂಬ ಕುತೂಹಲ ಎಲ್ಲರಲ್ಲಿಯೂ ಇದೆ. ನನ್ನದು ಈ ಚಿತ್ರದಲ್ಲಿ ಪವರ್ ಫುಲ್ ಪಾತ್ರವಾಗಿದೆ ಎಂದು ನಟಿ ಶರ್ಮಿಳಾ ಮಾಂಡ್ರೆ ತಿಳಿಸಿದರು.

ಡೆವಿಲ್ ಸಿನಿಮಾದಲ್ಲಿ ನನ್ನ ಪಾತ್ರ ಚಿಕ್ಕದಾದರೂ ತುಂಬಾ ಚೊಕ್ಕದಾಗಿದೆ. ಜಗ್ಗುದಾದದ ಬಳಿಕ ದರ್ಶನ್ ಅವರ ಜತೆಗೆ ನಟಿಸಿರಲಿಲ್ಲ. ಅವರ ಜತೆಗೆ ನಟಿಸಲು ಕಾಯುತ್ತಿದ್ದೆ. ಡೆವಿಲ್‌ನಲ್ಲಿ ಅದಕ್ಕೆ ಅವಕಾಶ ಸಿಕ್ಕಿದೆ. ಈ ಸಿನಿಮಾದಲ್ಲಿ ದರ್ಶನ್ ಅದ್ಭುತವಾಗಿ ಕಾಣಿಸುತ್ತಾರೆ ಎಂದು ಶೋಭರಾಜ್ ಹೇಳಿದರು.

ದರ್ಶನ್ ಅವರ ಸಿನಿಮಾಗಳಲ್ಲಿ ಕನ್ನಡದವರಿಗೆ ಅವಕಾಶ ಇರುತ್ತದೆ. ಅಂತೆಯೇ ನನಗೂ ಸಿಕ್ಕಿದೆ. ಸಿನಿಮಾದಲ್ಲಿ ನಟಿಸಿದ್ದು ಖುಷಿಕೊಟ್ಟಿದೆ ಎಂದು ರಚನಾ ರೈ ಸಂತಸ ಹಂಚಿಕೊಂಡರು.

> **ಡೆವಿಲ್ ಟೈಟಲ್ ನಮ್ಮ ಕಥೆಗೆ ಸೂಕ್ತವಾಗಿತ್ತು, ಹಾಗಾಗಿಯೇ ಈ ಶೀರ್ಷಿಕೆ ಆಯ್ದುಕೊಂಡೆವು. ಈ ಟೈಟಲ್ ಕೂಡ ಬೇರೆಯವರಲ್ಲಿ ಇತ್ತು. ಅವರನ್ನು ಮನವಿ ಮಾಡಿ ತೆಗೆದುಕೊಂಡೆವು. ದರ್ಶನ್ ಅವರು ನಮ್ಮ ಚಿತ್ರಕ್ಕೆ ಆನೆ ಬಲವಿದ್ದಂತೆ, ಅವರು ಈ ಸಿನಿಮಾದಲ್ಲಿ ಅದ್ಭುತವಾಗಿ ನಟಿಸಿದ್ದು ಹಲವು ಶೇಡ್ಸ್‌ನಲ್ಲಿ ಮಿಂಚಿದ್ದಾರೆ.**
> -ಪ್ರಕಾಶ್ ವೀರ್ ನಿರ್ದೇಶಕ